ಮಂಗಳೂರು
ಸೋಮವಾರ, 15 ಜೂನ್ 2026
ಸಂಪುಟ 48, ಸಂಚಿಕೆ 88 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಎನ್‌ಡಿಎಗೆ ಟಿಎಂಸಿ ಬಣ ಬೆಂಬಲ | ೦೨
ಕೊಲ್ಲೂರಿಗೆ ಅನಂತ್ ಅಂಬಾನಿ ಭೇಟಿ | ೦೪
ಮಹಿಳಾ ವಿಶ್ವಕಪ್: ಪಾಕಿಸ್ತಾನ ಸದೆಬಡಿದ ಭಾರತ | ೧೧

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ತಿಥಿ: ಅಮಾವಾಸ್ಯೆ ಉಪರಿ ಪಾಡ್ಯ, ನಕ್ಷತ್ರ: ಮೃಗಶಿರ

ದಿನದ ಮಾತು

ಸುಗಂಧಿತ ಹೂಗಳನ್ನು ಹೊಂದಿರುವ ಒಂದು ಮರ ಇಡೀ ಕಾಡಿಗೆ ಕಂಪನ್ನು ಹರಡುತ್ತದೆ. ಗುಣವಂತನಾದ ಪುತ್ರನು ಇಡೀ ವಂಶಕ್ಕೆ ಕೀರ್ತಿಯನ್ನು ಹರಡುತ್ತಾನೆ.

▲ ಚಾಣಕ್ಯ ನೀತಿ

ಮುರಿಯಲಾಗದ ನೆಹರೂ ಮಹಾನ್ ದಾಖಲೆಗಳು!

ನೇರ ನೋಟ

• ದು.ಗು.ಲಕ್ಷ್ಮಣ

• ಪುಟ ೬

ಕಿರುಸುದ್ದಿ

ಒಮಾನ್: ಎಲ್ಲಾ 14 ಭಾರತೀಯ ಸಿಬ್ಬಂದಿ ರಕ್ಷಣೆ

• ಪುಟ ೨

ಕೇರಳದಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಇಂದಿನಿಂದ

• ಪುಟ ೨

ಭಾರತ ಈಗ ಕೇವಲ ಗ್ರಾಹಕನಲ್ಲ, ವಿಶ್ವಕ್ಕೆ ಪರಿಹಾರ ಹೇಳುವ ರಾಷ್ಟ್ರ
ಫ್ರಾನ್ಸ್‌ನಲ್ಲಿ ಭಾರತ್ ಇನ್ನೋವೇಟ್ಸ್ ಉದ್ಘಾಟಿಸಿ ಮೋದಿ ಮಾತು

ಜಾಗತಿಕ ಕೊಡುಗೆದಾರ

• **ನೈಸ್(ಫ್ರಾನ್ಸ್):** ಭಾರತವು ಇನ್ನು ಕೇವಲ ಜಾಗತಿಕ ಪರಿಹಾರಗಳ ಗ್ರಾಹಕನಾಗಿಯಷ್ಟೇ ಉಳಿಯದು, ಬದಲಿಗೆ ಅವುಗಳಿಗೆ ಮಹತ್ವದ ಕೊಡುಗೆ ನೀಡುವ ದೇಶವಾಗಿದೆ ಎಂಬುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ. ಈ ಮೂಲಕ ನಾವೀನ್ಯತೆ–ಆವಿಷ್ಕಾರ, ತಂತ್ರಜ್ಞಾನದ ಮೂಲಕ ವಿಶ್ವಕ್ಕೆ ಸುಸ್ಥಿರ ಭವಿಷ್ಯವೊಂದನ್ನು ಕಲ್ಪಿಸುವ ಭಾರತದ ದೃಷ್ಟಿಕೋನವನ್ನು ಮೋದಿ ವಿಶ್ವದ ಮುಂದಿಟ್ಟಿದ್ದಾರೆ.

ತಮ್ಮ ಫ್ರಾನ್ಸ್ ಭೇಟಿ ಸಂದರ್ಭದಲ್ಲಿ, ಈ ಮೆಡಿಟರೇನಿಯನ್ ಫ್ರೆಂಚ್ ನಗರದಲ್ಲಿ ಫ್ರಾನ್ಸ್ ಅಧ್ಯಕ್ಷ ಇಮಾನ್ಯುವೆಲ್ ಮ್ಯಾಕ್ರಾನ್ ಉಪಸ್ಥಿತಿಯಲ್ಲಿ ಮಹತ್ವದ 'ಭಾರತ್ ಇನ್ನೋವೇಟ್ಸ್' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮೋದಿ, ಭಾರತ್ ಇನ್ನೋವೇಟ್ಸ್ ಭಾರತ, ಫ್ರಾನ್ಸ್ ಮತ್ತು ಇತರ ಕೆಲವು ದೇಶಗಳ ಉನ್ನತ ಮಟ್ಟದ ಇನ್ನೋವೇಶನ್ ಸ್ಟಾರ್ಟ್‌ಅಪ್‌ಗಳನ್ನು ಜೊತೆಗೂಡಿಸುತ್ತಿರುವುದು ಮಹತ್ವದ್ದಾಗಿದೆ ಎಂದರು.

ಭಾರತ್ ಇನ್ನೋವೇಟ್ಸ್, ಜಾಗತಿಕ ಇನ್ನೋವೇಶನ್‌ನ ಮುಂದಿನ ಚಾಪ್ಟರಿನ ಸಹಸೃಷ್ಟಿಗಾಗಿ ವಿಶ್ವಕ್ಕೆ ನೀಡಿದ ಆಹ್ವಾನವಾಗಿದೆ ಎಂದು ಬಣ್ಣಿಸಿದರು. ➡ಪುಟ ೪

ಸುಧಾರಣಾ ಎಕ್ಸ್‌ಪ್ರೆಸ್ ನಿಲ್ಲದು

ಕೇವಲ ಒಂದು ದಶಕದ ಹಿಂದೆ ಭಾರತ ತಂತ್ರಜ್ಞಾನ ಪಡೆಯುವ ದೇಶವಾಗಿದ್ದರೆ ಇಂದು ಭಾರತವು ತಂತ್ರಜ್ಞಾನ ಒದಗಿಸುವ ದೇಶವಾಗಿ ಮೂಡಿಬರುತ್ತಿರುವುದನ್ನು ಜಗತ್ತು ವೀಕ್ಷಿಸುತ್ತಿದೆ. ಭಾರತದ ಆವಿಷ್ಕಾರ ವಿಶ್ವದ ಸುಸ್ಥಿರ ಭವಿಷ್ಯಕ್ಕಾಗಿ ಇರುವಂಥದ್ದು. ಭಾರತದ ಯುವ ಅನ್ವೇಷಕರು ಕಂಡುಕೊಂಡಿರುವ ಪರಿಹಾರಗಳು ಇಡಿ ವಿಶ್ವದ ಮನುಕುಲಕ್ಕೇ ಲಾಭ ತಂದುಕೊಡಲಿದೆ ಎಂದು ಮೋದಿ ಹೇಳಿದರು. ➡ಪುಟ ೪



ಭಾರತ ನಾವೀನ್ಯತಾ ದೇಶ: ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್

ಫ್ರಾನ್ಸ್‌ನ ಅಧ್ಯಕ್ಷ ಮ್ಯಾಕ್ರಾನ್ ಮಾತನಾಡಿ, ಫ್ರಾನ್ಸ್ ಮೇಕ್ ಇನ್ ಇಂಡಿಯಾ ಉಪಕ್ರಮವನ್ನು ಗೌರವಿಸುತ್ತದೆ. ಭಾರತದ ವೈವಿಧ್ಯಮಯ ಕ್ಷೇತ್ರಗಳಲ್ಲಿ ಫ್ರಾನ್ಸ್ ಭಾಗವಾಗಿರುತ್ತದೆ. ಭಾರತ ಒಂದು ನಾವೀನ್ಯತಾ ದೇಶವಾಗಿದ್ದು, ಎಐ ಮತ್ತು ಹವಾಮಾನ ಬದಲಾವಣೆಯಂತಹ ಕ್ಷೇತ್ರಗಳಲ್ಲಿ ಭಾರತ–ಫ್ರಾನ್ಸ್‌ನದ್ದು 'ನಿಜವಾದ ಪಾಲುದಾರಿಕೆ'ಯಾಗಿದೆ. ಈ ದ್ವಿಪಕ್ಷೀಯ ಸಹಕಾರವು ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳು ಸೇರಿದಂತಹ ನಾಗರಿಕ ಪರಮಾಣು ಇಂಧನ ಕ್ಷೇತ್ರಕ್ಕೂ ವಿಸ್ತರಿಸುವ ಆಶಯವಿದೆ ಎಂದರು.

- ಭಾರತ್ ಇನ್ನೋವೇಟ್ಸ್ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಭಾಷಣ
- ಭಾರತವು ಈಗ ಜಾಗತಿಕ ಪರಿಹಾರಗಳ ಗ್ರಾಹಕ ರಾಷ್ಟ್ರವಲ್ಲ, ಪರಿಹಾರಗಳನ್ನು ನೀಡುವ ದೇಶ
- ಆವಿಷ್ಕಾರ ಮತ್ತು ಒಳಗೊಳ್ಳುವಿಕೆ ಪರಸ್ಪರ ಪೂರಕ
- ವಿಶ್ವಾಸಾರ್ಹ, ಸಮಗ್ರ ಮತ್ತು ಮಾನವಕೇಂದ್ರಿತ ತಂತ್ರಜ್ಞಾನಗಳತ್ತ ಮುಖ ಮಾಡುತ್ತಿರುವ ವಿಶ್ವ
- ಮಾನವತೆಗೆ ತಂತ್ರಜ್ಞಾನ ಎಂಬುದಕ್ಕೆ ಭಾರತದ ಆದ್ಯತೆ
- ಹೈಟೆಕ್, ಅಣುಶಕ್ತಿ, ರಕ್ಷಣಾ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ ಸುಧಾರಣೆ ಮುಂದುವರಿಕೆ
- ಭಾರತದಲ್ಲಿ ಸ್ಟಾರ್ಟ್‌ಅಪ್‌ಗಳ ಸಂಖ್ಯೆ ಹಲವು ಪಟ್ಟು ಹೆಚ್ಚಳ ವಿಶ್ವಾಸ
- ಭವಿಷ್ಯ ರೂಪಿಸಲಿವೆ ಎಐ, ಕ್ವಾಂಟಂ ಕಂಪ್ಯೂಟಿಂಗ್, ಜೈವಿಕ ತಂತ್ರಜ್ಞಾನ ಮತ್ತು ಬಾಹ್ಯಾಕಾಶ ತಂತ್ರಜ್ಞಾನ

ಕರ್ನಾಟಕಕ್ಕೆ ಯುಪಿಎ ಅವಧಿಗಿಂತ 5 ಪಟ್ಟು ಹೆಚ್ಚು ಹಣ: ವಿತ್ತ ಸಚಿವೆ ನಿರ್ಮಲಾ ಮಾಹಿತಿ

ರಾಜ್ಯಕ್ಕೆ ಕೇಂದ್ರದಿಂದ ₹4 ಲಕ್ಷ ಕೋಟಿ ಹಂಚಿಕೆ



• **ಬೆಂಗಳೂರು:** ಕರ್ನಾಟಕವು ಕೇಂದ್ರದ ಅನುದಾನ ಹಂಚಿಕೆಯಿಂದ ವಂಚಿತವಾಗಿದೆ ಎಂಬ ಕಾಂಗ್ರೆಸ್ ಆರೋಪವನ್ನು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ನಿರಾಕರಿಸಿದ್ದು, ಯುಪಿಎ ಅವಧಿಯಲ್ಲಿ ಹಂಚಿಕೆಯಾಗಿದ್ದಕ್ಕಿಂತ ಐದು ಪಟ್ಟು ಹೆಚ್ಚು ಕೇಂದ್ರ ತೆರಿಗೆ ಹಂಚಿಕೆಯನ್ನು ಕರ್ನಾಟಕ ಪಡೆದಿದೆ. ರಾಜ್ಯವು 4 ಲಕ್ಷ ಕೋಟಿ ರೂ. ತೆರಿಗೆ ಹಂಚಿಕೆ ಪಡೆದುಕೊಂಡಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರವು 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಜಯನಗರದಲ್ಲಿ ಭಾನುವಾರ ಏರ್ಪಡಿಸಿದ ವಿಕಸಿತ ಭಾರತ ಸಂಕಲ್ಪ ಸಮಾವೇಶ ಉದ್ಘಾಟಿಸಿದ ಅವರು, ಕೇಂದ್ರ ಸರ್ಕಾರ ಯಾವುದೇ ಅನುದಾನ ನೀಡುತ್ತಿಲ್ಲ ಎಂದು ಕರ್ನಾಟಕ ಸರ್ಕಾರ ನಿರಂತರವಾಗಿ ಹೇಳಿಕೊಂಡು ಬರುತ್ತಿದೆ. ಆದರೆ, ಯುಪಿಎ ಸರ್ಕಾರದ 10 ವರ್ಷಗಳ ಅವಧಿಯಲ್ಲಿ ರಾಜ್ಯಕ್ಕೆ ಸಿಗುತ್ತಿದ್ದ ಅನುದಾನಕ್ಕಿಂತ ಕೇವಲ ಒಂದು ವರ್ಷದಲ್ಲೇ ಕರ್ನಾಟಕಕ್ಕೆ ಶೇ.76ರಷ್ಟು ಹೆಚ್ಚು ಅನುದಾನ ಕರ್ನಾಟಕಕ್ಕೆ ದೊರೆಯುತ್ತಿದೆ ಎಂದರು. ➡ಪುಟ ೪

> ರಾಜ್ಯಗಳಿಗೆ ಬಡ್ಡಿರಹಿತ ಸಾಲ ನೀಡುತ್ತಿದ್ದೇವೆ. 18 ಸಾವಿರ ಕೋಟಿ ರೂ. ಗಿಂತಲೂ ಅಧಿಕ ಹಣವನ್ನು ಹಣಕಾಸು ಆಯೋಗದ ಶಿಫಾರಸು ಇಲ್ಲದಿದ್ದರೂ ರಾಜ್ಯಗಳಿಗೆ ನೀಡಿದ್ದೇವೆ. ಅದು ಕರ್ನಾಟಕಕ್ಕೂ ಸಿಕ್ಕಿದೆ.
>
> ■ ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ

ಕೊಪ್ಪಳ–ಗದಗ ಹಸಿರು ಇಂಧನ ಕೇಂದ್ರ

• ಪುಟ ೪

ಇರಾನ್ ಒಪ್ಪಂದಕ್ಕೆ ಸಹಿ: ರಾಷ್ಟ್ರಗಳ ಭಿನ್ನ ನಿಲುವು

• **ಇಸ್ಲಾಮಾಬಾದ್:** ಇರಾನ್ ಯುದ್ಧವನ್ನು ಕೊನೆಗೊಳಿಸುವ ಒಪ್ಪಂದಕ್ಕೆ ಭಾನುವಾರ ಸಹಿ ಹಾಕಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಸಂಧಾನಕಾರ ಪಾಕಿಸ್ತಾನ ಘೋಷಿಸಿವೆ. ಆದರೆ, ಈ ಪ್ರಕ್ರಿಯೆಗೆ ಹೆಚ್ಚಿನ ಸಮಯ ಬೇಕಾಗಬಹುದು ಎಂದು ಇರಾನ್ ಸೂಚಿಸಿದೆ. ಮುಂದಿನ 24 ಗಂಟೆಗಳ ಒಳಗೆ ಇಲೆಕ್ಟ್ರಾನಿಕ್ ಸಹಿಗಳ ಮೂಲಕ ಒಪ್ಪಂದ ವಾಗುವ ನಿರೀಕ್ಷೆಯಿದೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ತಿಳಿಸಿದ್ದಾರೆ. ಪಾಕಿಸ್ತಾನದ ವಿದೇಶಾಂಗ ಸಚಿವಾಲಯ ಭಾನುವಾರಕ್ಕೆ ಸಮಾರಂಭವನ್ನು ನಿಗದಿಪಡಿಸಿದೆ. ಒಪ್ಪಂದಕ್ಕೆ ಸಹಿ ಹಾಕಲಾಗುವುದು ಮತ್ತು ನಂತರ ಹಾರ್ಮುಜ್ ಜಲಸಂಧಿಯನ್ನು ತಕ್ಷಣವೇ ತೆರೆಯಲಾಗುವುದು ಎಂದು ಟ್ರಂಪ್ ಪ್ರತಿಪಾದಿಸಿದ್ದಾರೆ. ➡ಪುಟ ೪

24 ಗಂಟೆಯಲ್ಲಿ ಎಲೆಕ್ಟ್ರಾನಿಕ್ ಸಹಿ ಮೂಲಕ ಒಪ್ಪಂದ ನಿರೀಕ್ಷೆ



ಜು.4–9: ಖಮೇನಿ ಅಂತ್ಯಕ್ರಿಯೆ ಪ್ರಕ್ರಿಯೆ

ಇದರ ನಡುವೆ, ಯುದ್ಧದ ಆರಂಭದಲ್ಲಿ ಹತರಾದ ಮಾಜಿ ಸರ್ವೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅಂತ್ಯಕ್ರಿಯೆಯ ವಿಧಿ–ವಿಧಾನಗಳು ಜುಲೈ 4ರಿಂದ 9ರವರೆಗೆ ನಡೆಯಲಿವೆ ಎಂದು ಇರಾನ್ ಘೋಷಿಸಿದೆ.

ಕೇರಳದ ಚಿಂತಕರು, ಗಣ್ಯರ ಸಭೆಯಲ್ಲಿ ಅಭಿಮತ

ಸಮಾಜ ಸಂಘಟನೆ ಗುರಿ: ಭಾಗವತ್



• **ತ್ರಿಶೂರು:** ಭಾರತದ ಪುನರುತ್ಥಾನಕ್ಕಾಗಿ ಸಮಾಜ ಸಂಘಟನೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೂಲ ಗುರಿಯಾಗಿದೆ. ಭಾರತದ ಪುನರುತ್ಥಾನಕ್ಕೆ ಏನೆಲ್ಲ ಆಗಬೇಕಿದೆಯೋ ಅದೆಲ್ಲದಕ್ಕೂ ಕೊಡುಗೆ ನೀಡಿ ಅದನ್ನು ಪೂರ್ಣಗೊಳಿಸುವುದೇ ಸಂಘದ ಉದ್ದೇಶ ಎಂದು ಸಂಘದ ಸರಸಂಘಚಾಲಕ್ ಡಾ.ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಶತಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಇಲ್ಲಿ ಸೇರಿದ್ದ ಕೇರಳದ ಚಿಂತಕರು ಮತ್ತು ಗಣ್ಯರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ಸಂಘ ಎಂದೂ ರಾಜಕೀಯ ಅಧಿಕಾರ ಅಥವಾ ಜನಪ್ರಿಯತೆಗಾಗಿ ಸ್ಥಾಪನೆಯಾಗಿದ್ದಲ್ಲ. ಹಾಗೆಯೇ ಯಾವುದೇ ಸಮುದಾಯ ಅಥವಾ ಗುಂಪುಗಳನ್ನು ವಿರೋಧಿಸಲೂ ಆರಂಭವಾಗಿದ್ದಲ್ಲ. ಬದಲಿಗೆ ಇದು ವಿಶಾಲವಾದ ರಾಷ್ಟ್ರೀಯ ಉದ್ದೇಶವೊಂದನ್ನು ಪೂರ್ಣಗೊಳಿಸುವುದಕ್ಕಾಗಿ ಮತ್ತು ಭಾರತದ ಪುನರುತ್ಥಾನ ಮತ್ತು ಕಲ್ಯಾಣಕ್ಕಾಗಿ ಅಗತ್ಯವಿರುವ ಪ್ರತಿಯೊಂದಕ್ಕೂ ಕೊಡುಗೆ ನೀಡುವ ಉದ್ದೇಶದೊಂದಿಗೆ ಆರಂಭವಾಗಿದೆ ಎಂದರು.

ಸಂಘಟಿತ–ಅನುಶಾಸನ ಬದ್ಧ ಸಮಾಜದಿಂದಲೇ ಸಂಪನ್ನ ಭಾರತ: ಭಾರತವು ಪದೇಪದೆ ವಿದೇಶಿ ಶಕ್ತಿಗಳ ಕಪಿಮುಷ್ಟಿಗೆ ಸಿಲುಕುತ್ತಿರುವುದೇಕೆ? ನಮ್ಮ ದೌರ್ಬಲ್ಯಗಳೇನು? ➡ಪುಟ ೪

ಗೃಹಲಕ್ಷ್ಮಿ, ಗೃಹಜ್ಯೋತಿ ನಿಲ್ಲಲ್ಲ: ಡಿಕೆಶಿ



• **ಬೆಂಗಳೂರು:** ಗೃಹಲಕ್ಷ್ಮಿ ಮತ್ತು ಗೃಹ ಜ್ಯೋತಿ ಯೋಜನೆ ಗಳ ಪರಿಷ್ಕರಣೆ ಕುರಿತಂತೆ ಮರು ಅರ್ಜಿ ಸಲ್ಲಿಸುವ ಕುರಿತಂತೆ ಸಾರ್ವಜನಿಕರಲ್ಲಿ ಉಂಟಾಗಿರುವ ಗೊಂದಲಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಿದ್ದು, ಕಾಂಗ್ರೆಸ್ ಸರ್ಕಾರದ ಹೆಮ್ಮೆಯ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ ಮತ್ತು ಗೃಹ ಜ್ಯೋತಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಹೇಳಿದ್ದಾರೆ. ➡ಪುಟ ೪

ನಾನು, ಡಿಕೆಶಿ ಒರಿಜಿನಲ್ ಜೋಡೆತ್ತು: ಡಾ.ಪರಮೇಶ್ವರ್

• ಪುಟ ೫

3ನೇ ಸಿಎಂ ಬಂದರೂ ಅಚ್ಚರಿ ಇಲ್ಲ: ಬಿವೈವಿ

• ಪುಟ ೫

ಕೈದಿಗಳಿಂದ ವಾರ್ಡನ್‌ಗೆ ಹಲ್ಲೆ

• ಪುಟ ೫

ಭಾರತ ಜತೆ ತಂತ್ರಜ್ಞಾನ ಬಂಧ: ಮ್ಯಾಕ್ರಾನ್

ತಾಂತ್ರಿಕ ಪ್ರಗತಿಯಲ್ಲಿ ಭಾರತ ಮಹಾನ್ ಶಕ್ತಿ



ಫ್ರಾನ್ಸ್‌ನ ನೈಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭಾರತೀಯ ಅನಿವಾಸಿಗಳು ಆತ್ಮೀಯವಾಗಿ ಬರಮಾಡಿಕೊಂಡರು.

ಪ್ಯಾರಿಸ್: ಜಾಗತಿಕ ತಾಂತ್ರಿಕ ಪ್ರಗತಿಯಲ್ಲಿ ಭಾರತವನ್ನು ಪ್ರಮುಖ ಶಕ್ತಿ ಎಂದು ಶ್ಲಾಘಿಸಿದ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್, ಉಭಯ ದೇಶಗಳ ನಡುವಿನ ಸಹಕಾರದ ಸಂಬಂಧವನ್ನು ಬಲಪಡಿಸುವ ಬದ್ಧತೆಯನ್ನು ಪುನರುಚ್ಚರಿಸಿದರು.

ಪ್ರಧಾನಿ ನರೇಂದ್ರ ಮೋದಿಯೊಂದಿಗೆ ನೈಸ್‌ನಲ್ಲಿ ನಡೆದ ಭಾರತ್ ಇನ್ನೋವೇಟ್ಸ್ 2026 ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಮ್ಯಾಕ್ರಾನ್, ಭಾರತದ ಸಂಶೋಧನಾ ಸಾಮರ್ಥ್ಯ ಅಪಾರ ಇಂಜಿನಿಯರಿಂಗ್ ಪ್ರತಿಭೆಯನ್ನು ಶ್ಲಾಘಿಸಿದರು. ಭಾರತ ವಾರ್ಷಿಕವಾಗಿ 10 ಲಕ್ಷಕ್ಕೂ ಹೆಚ್ಚು ಇಂಜಿನಿಯರ್‌ಗಳನ್ನು ಉತ್ಪಾದಿಸುತ್ತದೆ, ಇದು ಯುರೋಪ್ ಮತ್ತು ಯುನೈಟೆಡ್ ಸ್ಟೇಟ್ಸ್‌ನ ಒಟ್ಟು ಉತ್ಪಾದನೆಗೆ ಸಮಾನ ಎಂದು ಅವರು ಉಲ್ಲೇಖಿಸಿದರು. ಜಾಗತಿಕ ಪಾಲುದಾರರ ಮುಂದಿರುವ ಪ್ರಮುಖ ಪ್ರಶ್ನೆ ಭಾರತ ಆವಿಷ್ಕಾರ ಮಾಡುತ್ತದೆಯೇ ಎಂದಲ್ಲ, ಬದಲಿಗೆ ಯಾರು ಭಾರತದೊಂದಿಗೆ ಆವಿಷ್ಕಾರ ಮಾಡುತ್ತಾರೆ ಎಂದು ಅವರು ಬಣ್ಣಿಸಿದರು.

ಜೂನ್ 14ರಿಂದ 16ರವರೆಗೆ ನಡೆಯಲಿರುವ ಮೂರು ದಿನಗಳ ಈ ಸಮ್ಮೇಳನದ ಮೊದಲ ಅಂತಾರಾಷ್ಟ್ರೀಯ ಆವೃತ್ತಿಯನ್ನು ಫ್ರಾನ್ಸ್ ಆಯೋಜಿಸುತ್ತಿದೆ. ಮೋದಿ ಮತ್ತು ಮ್ಯಾಕ್ರಾನ್ ಜಂಟಿಯಾಗಿ ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಇದು ಉಭಯ ದೇಶಗಳ ಸ್ಟಾರ್ಟ್‌ಅಪ್‌ಗಳು, ಹೂಡಿಕೆದಾರರು, ನೀತಿ ನಿರೂಪಕರು ಮತ್ತು ಶೈಕ್ಷಣಿಕ ಸಂಸ್ಥೆಗಳನ್ನು ಒಟ್ಟುಗೂಡಿಸುತ್ತದೆ. ಇದೇ ವೇಳೆ, ಭಾರತದ ದೀರ್ಘಾವಧಿಯ ಚುನಾಯಿತ ಪ್ರಧಾನ ಮಂತ್ರಿಯಾಗಿ ದಾಖಲೆ ಬರೆದ ಮೋದಿಯವರನ್ನು ಅಭಿನಂದಿಸಿದರು.

ದ್ವಿಪಕ್ಷೀಯ ಸಹಕಾರ: ದ್ವಿಪಕ್ಷೀಯ ಸಹಕಾರ ಪ್ರಮುಖವಾಗಿ ಕೃತಕ ಬುದ್ಧಿಮತ್ತೆಯ(ಎಐ) ಮೇಲೆ ಕೇಂದ್ರೀಕೃತವಾಗಿದ್ದು, ಎರಡೂ ದೇಶಗಳು ಮುಕ್ತ, ಬಹುಭಾಷಾ ಮತ್ತು ಸಹಯೋಗದ ಮಾದರಿಯನ್ನು ಬೆಂಬಲಿಸುತ್ತವೆ. ಸುಧಾರಿತ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳಿಗೆ ಪ್ರವೇಶವನ್ನು ನಿರ್ಬಂಧಿಸುವ ಜಾಗತಿಕ ಪ್ರವೃತ್ತಿಯ ವಿರುದ್ಧ ಮ್ಯಾಕ್ರಾನ್ ಎಚ್ಚರಿಸಿದರು. ಜತೆಗೆ, ಇಂಧನ ಸ್ವಾವಲಂಬನೆಯನ್ನು ಖಚಿತಪಡಿಸಿಕೊಳ್ಳಲು ಅಂತಾರಾಷ್ಟ್ರೀಯ ಸೌರ ಒಕ್ಕೂಟ ಮತ್ತು ಪರಮಾಣು ಇಂಧನ ವಲಯಗಳ ಮೂಲಕ ಪಾಲುದಾರಿಕೆಗಳನ್ನು ಯೋಜಿಸಲಾಗಿದೆ.

ಎನ್‌ಡಿಎಗೆ ಟಿಎಂಸಿ ಬಣ ಬೆಂಬಲ

ಹೊಸದಿಲ್ಲಿ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಬಂಡಾಯ ಸಂಸದರ ಸಂಖ್ಯೆ 22ಕ್ಕೇರಿದ್ದು, ನ್ಯಾಷಲಿಸ್ಟ್ ಸಿಟಿಜೆನ್ಸ್ ಪಾರ್ಟಿಯಲ್ಲಿ ವಿಲೀನವಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಬೆಂಬಲಿಸುವುದಾಗಿ ಭಾನುವಾರ ಘೋಷಿಸಿದ್ದಾರೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿಯಾಗಿ, ಸಂಸತ್‌ನಲ್ಲಿ ಪ್ರತ್ಯೇಕ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಮನವಿ ಸಲ್ಲಿಸಿದ್ದಾರೆ.

ಸ್ಪೀಕರ್ ಓಂ ಬಿರ್ಲಾ ಭೇಟಿ ಬಳಿಕ ಮಾತನಾಡಿದ ಬಂಡಾಯ ಸಂಸದೆ ಕಾಕೋಲಿ ಘೋಷ್ ದಸ್ತಿದಾರ್, ಮೂರನೇ ಎರಡು ಭಾಗದಷ್ಟು ಟಿಎಂಸಿ ಸಂಸದರನ್ನು ಲೋಕಸಭೆಯಲ್ಲಿ ಪ್ರತ್ಯೇಕ ಗುಂಪನ್ನಾಗಿ ಗುರುತಿಸಬೇಕು. ನಮಗೆ ಪ್ರತ್ಯೇಕ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಮನವಿ ಮಾಡಿದ್ದೇವೆ. ನಾವು ನ್ಯಾಷನಲಿಸ್ಟ್ ಸಿಟಿಜೆನ್ಸ್ ಪಾರ್ಟಿಯಲ್ಲಿ ವಿಲೀನರಾಗಲಿದ್ದು, ಎನ್‌ಡಿಎಗೆ ಬೆಂಬಲ ನೀಡಲಿದ್ದೇವೆ ಎಂದರು.ಹಿರಿಯ ಟಿಎಂಸಿ ನಾಯಕ ಮತ್ತು ಸಂಸದ ಸುದೀಪ್ ಬಂಡೋಪಾಧ್ಯಾಯ ತಮ್ಮ ಬಂಡಾಯ ಸಂಸದರ ಗುಂಪು ಪ್ರಾದೇಶಿಕ ಪಕ್ಷವೊಂದರಲ್ಲಿ ವಿಲೀನವಾಗಿರುವುದಾಗಿ ಹೇಳಿದ್ದಾರೆ. ಯಾವುದು ನಿಜವಾದ ಟಿಎಂಸಿ ಎಂಬುದನ್ನು ನ್ಯಾಯಾಲಯದಲ್ಲಿ ತೀರ್ಮಾನ ಆಗಲಿದೆ, ಎರಡು ಹೂವುಗಳ ಪಕ್ಷದ ಚುನಾವಣಾ ಚಿಹ್ನೆಯನ್ನೂ ಕಾನೂನಾತ್ಮಕ ಹೋರಾಟದ ಮೂಲಕ ಪಡೆಯುವುದಾಗಿ ಸುದೀಪ್ ತಿಳಿಸಿದ್ದಾರೆ.

ಗುರುತಿಸಬೇಡಿ: ಇತ್ತ ಟಿಎಂಸಿ ನಾಯಕರಾದ ಕೀರ್ತಿ ಆಜಾದ್, ಸಾಗರಿಕಾ ಘೋಷ್ ಅವರು ಸ್ಪೀಕರ್ ಬಿರ್ಲಾ ಭೇಟಿಯಾಗಿ, ಬಂಡಾಯ ಸಂಸದರನ್ನು ಗುರುತಿಸದಂತೆ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಬರೆದ ಪತ್ರವನ್ನು ಸಲ್ಲಿಸಿದ್ದಾರೆ.



ಬ್ರಿಟಿಷ್ ಕಾಲದ ಸಮವಸ್ತ್ರ ಪದ್ಧತಿಗೆ ತಿಲಾಂಜಲಿ ಬಂಡಿ ಜಾಕೆಟ್ ಹಾಗೂ ಹೊಸ ನಿಯಮಗಳ ಜಾರಿ

ಭಾರತ ಸೇನೆಯಲ್ಲಿ ನೂತನ ವಸ್ತ್ರ ಪದ್ಧತಿ

ಭಾರತೀಯ ಸೇನೆ ತನ್ನ ಸಮವಸ್ತ್ರ ನಿಯಮಗಳಲ್ಲಿ ಭಾರಿ ಬದಲಾವಣೆಗಳನ್ನು ತಂದಿದ್ದು, ಬ್ರಿಟಿಷರ ಕಾಲದ ಸಂಪ್ರದಾಯಗಳ ಬದಲಿಗೆ ದೇಶದ ರಾಷ್ಟ್ರೀಯ ಗುರುತನ್ನು ಬಿಂಬಿಸುವ ಹೊಸ ವಸ್ತ್ರ ಪದ್ಧತಿಗಳನ್ನು ಜಾರಿಗೆ ತಂದಿದೆ. ಈ ಪರಿಷ್ಕೃ ತ ನಿಯಮಗಳು ಸೇನೆಯ ಎಲ್ಲಾ ಶ್ರೇಣಿಗಳಿಗೂ ಅನ್ವಯವಾಗಲಿದ್ದು, ಮಿಲಿಟರಿ ಪರಂಪರೆಯನ್ನು ಭಾರತೀಯ ಮೌಲ್ಯಗಳಿಗೆ ಅನುಗುಣವಾಗಿ ಬದಲಿಸುವ ಉದ್ದೇಶ ಹೊಂದಿವೆ.



ಬಂಡಿ ಜಾಕೆಟ್ ಅಧಿಕೃತ ಸೇರ್ಪಡೆ

ಅಧಿಕಾರಿಗಳ ಅಧಿಕೃತ ಉಡುಪಿನ ಭಾಗವಾಗಿ ಮುಚ್ಚಿದ ಕತ್ತಿನ ಬಂಡಿ ಜಾಕೆಟ್(ನೆಹರು ಜಾಕೆಟ್) ಅನ್ನು ಅಧಿಕೃತವಾಗಿ ಸೇರಿಸಿರುವುದು ಒಂದು ಪ್ರಮುಖ ಬದಲಾವಣೆ. ಮಿಲಿಟರಿ ಕಾರ್ಯಕ್ರಮಗಳಿಗೆ ಸಂಪೂರ್ಣ ಭಾರತೀಯ ಶೈಲಿಯ ಸ್ಪರ್ಶ ನೀಡಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಈ ಜಾಕೆಟ್ ಸರಳ ಹಾಗೂ ಸಭ್ಯ ಬಣ್ಣದ್ದಾಗಿದ್ದು, ಅದಕ್ಕೆ ಹೊಂದುವ ಪ್ಯಾಂಟ್ ಮತ್ತು ಮುಚ್ಚಿದ ಶೂಗಳೊಂದಿಗೆ ಧರಿಸಬೇಕು ಎಂದು ಕೈಪಿಡಿಯಲ್ಲಿ ತಿಳಿಸಲಾಗಿದೆ. ಇದನ್ನು ಅಧಿಕಾರಿಗಳು ಬಂದ್ ಗಲಾ, ಲೌಂಜ್ ಸೂಟ್ ಅಥವಾ ಟೈ ಧರಿಸುವ ಶರ್ಟ್-ಪ್ಯಾಂಟ್ ಜೊತೆಗೆ ಆಯ್ಕೆಯಾಗಿ ಬಳಸಬಹುದು.

ಹೊಸ ಕೈಪಿಡಿ, ಹೊಸ ಹಾದಿ

ಎಂಟು ವರ್ಷಗಳ ನಂತರ ಬಿಡುಗಡೆಯಾಗಿರುವ ಆರ್ಮಿ ಯುನಿಫಾರ್ಮ್ಸ್-2026 ಎಂಬ 174 ಪುಟಗಳ ಹೊಸ ಕೈಪಿಡಿ, ಕಳೆದ ಸುಮಾರು ಒಂದು ದಶಕದಲ್ಲೇ ಮಿಲಿಟರಿ ಉಡುಪಿನ ಶೈಲಿಯಲ್ಲಿ ಮಾಡಲಾದ ಅತ್ಯಂತ ಪ್ರಮುಖ ಬದಲಾವಣೆಗಳಲ್ಲಿ ಒಂದಾಗಿದೆ. ಸೇನೆಯ ಪ್ರಮುಖ ಸಂಪ್ರದಾಯಗಳು ಮತ್ತು ಕಾರ್ಯಾಚರಣೆಯ ಅಗತ್ಯಗಳನ್ನು ಉಳಿಸಿಕೊಂಡೇ, ವಸಾಹತುಶಾಹಿ ಕಾಲದ ಉಳಿಕೆಗಳನ್ನು ತೆಗೆದುಹಾಕಲು ಈ ಬದಲಾವಣೆಗಳನ್ನು ರೂಪಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಡ್ಜಟಂಟ್ ಜನರಲ್ ಲೆಫ್ಟಿನೆಂಟ್ ಜನರಲ್ ವಿಪಿಎಸ್ ಕೌಶಿಕ್ ಈ ಕೈಪಿಡಿಯ ಮುನ್ನುಡಿಯಲ್ಲಿ, ವಸಾಹತುಶಾಹಿ ಕಾಲದ ಆಚರಣೆಗಳು, ಅಲಂಕಾರಗಳು ಮತ್ತು ಪದಕೋಶಗಳನ್ನು ಹಂತಹಂತವಾಗಿ ತೆಗೆದುಹಾಕುವ ಮೂಲಕ ಸೇನೆಯ ಸಮವಸ್ತ್ರ ನಿಯಮಾವಳಿಗಳನ್ನು ಸಮಕಾಲೀನ ಭಾರತೀಯ ಮೌಲ್ಯಗಳಿಗೆ ಅನುಗುಣವಾಗಿಸಲು ಇಟ್ಟಿರುವ ಒಂದು ಚಿಂತನಾಶೀಲ ಹೆಜ್ಜೆ ಇದಾಗಿದೆ ಎಂದು ಹೊಸ ಆವೃತ್ತಿಯನ್ನು ವಿವರಿಸಿದ್ದಾರೆ. ಈ ಬದಲಾವಣೆಗಳು ದೇಶದ ಭಾವನೆಗಳನ್ನು ಮತ್ತು ವಿಕಸನಗೊಳ್ಳುತ್ತಿರುವ ಸಾರ್ವಭೌಮ ಗುರುತನ್ನು ಪ್ರತಿಬಿಂಬಿಸುತ್ತವೆ ಎಂದೂ ಕೈಪಿಡಿಯಲ್ಲಿ ತಿಳಿಸಲಾಗಿದೆ.

ಬ್ರಿಟಿಷ್ ಸಂಕೇತಗಳಿಗೆ ಎಳ್ಳು-ನೀರು

ವಸಾಹತುಶಾಹಿ ಕಾಲದ ಸಂಕೇತಗಳನ್ನು ದೂರವಿಡುವ ಭಾಗವಾಗಿ ಮಿಲಿಟರಿ ಪದಕೋಶದಿಂದ ರಾಯಲ್ ಎಂಬ ಪದದ ಬಳಕೆಯನ್ನು ಸಂಪೂರ್ಣವಾಗಿ ಕೈಬಿಡಲಾಗಿದೆ. ಇನ್ನು ಮುಂದೆ ಪರೇಡ್‌ಗಳ ಪರಿಶೀಲನೆ ನಡೆಸುವ ಅಧಿಕಾರಿಗಳು ಕತ್ತಿ (ಸ್ವೋರ್ಡ್) ಹಿಡಿಯುವ ಅಗತ್ಯವಿರುವುದಿಲ್ಲ. ಇದರೊಂದಿಗೆ, ರಾಜ್ಯಮಟ್ಟದ ಕಾರ್ಯಕ್ರಮಗಳು ಮತ್ತು ಅಧಿಕೃತ ಮಿಲಿಟರಿ ಔತಣಕೂಟಗಳಲ್ಲಿ ಧರಿಸುವ ಮೆಸ್ ಡ್ರೆಸ್ ಸಂಖ್ಯೆ 5 ಮತ್ತು 6ರ ಸಮವಸ್ತ್ರಗಳಿಂದ ಪೌಚ್ ಬೆಲ್ಟ್‌ಗಳನ್ನು ತೆಗೆದುಹಾಕಲಾಗಿದೆ. ಆದರೆ, ನಿರ್ದಿಷ್ಟ ರೆಜಿಮೆಂಟ್‌ಗಳ ಆಚರಣೆಗಳಲ್ಲಿ ಇವುಗಳನ್ನು ಬಳಸಲು ವಿನಾಯಿತಿ ನೀಡಲಾಗಿದೆ.



ಚಳಿಗಾಲದ ಹೊಸ ಸಮವಸ್ತ್ರ

ಎಲ್ಲಾ ಶ್ರೇಣಿಯ ಸಿಬ್ಬಂದಿಗೆ ಡ್ರೆಸ್ 3ಬಿ ಎಂಬ ಚಳಿಗಾಲದ ಹೊಸ ಸಮವಸ್ತ್ರವನ್ನು ಪರಿಚಯಿಸಲಾಗಿದೆ. ಇದು ಅಂಗೋಲಾ ಶರ್ಟ್, ಬ್ಯಾಟಲ್ ಜಾಕೆಟ್ ಮತ್ತು ಬೆರೆಟ್ ಟೋಪಿಯನ್ನು ಒಳಗೊಂಡಿರುತ್ತದೆ. ಈ ನಿಯಮ ಎಲ್ಲಾ ವಿಭಾಗಗಳಲ್ಲಿ ಸಮಾನತೆ ತರಲು ಸಹಕಾರಿಯಾಗಲಿದೆ.

ಮಹಿಳಾ ಅಧಿಕಾರಿಗಳ ಉಡುಪಿನ ಮಾರ್ಗಸೂಚಿ

ಮಹಿಳಾ ಅಧಿಕಾರಿಗಳು ಸಭ್ಯ ಬಣ್ಣದ ಸೀರೆ ಅಥವಾ ಕುರ್ತಾ-ಸಲ್ವಾರ್ ಜತೆಗೆ ದುಪಟ್ಟಾ ಮತ್ತು ನೇರವಾದ ಪ್ಯಾಂಟ್‌ಗಳನ್ನು ಧರಿಸಲು ಅವಕಾಶವಿದೆ. ಆದರೆ ಸ್ಲೀವ್‌ಲೆಸ್ ಕುರ್ತಾಗಳು, ಪಲಾಜೊ ಮತ್ತು ಸಿಗರೇಟ್ ಪ್ಯಾಂಟ್‌ಗಳನ್ನು ನಿಷೇಧಿಸಲಾಗಿದೆ. ಸಮವಸ್ತ್ರದಲ್ಲಿರುವಾಗ ಲಿಪ್‌ಸ್ಟಿಕ್, ನೈಲ್ ಪಾಲಿಷ್, ಬಿಂದಿ ಮತ್ತು ಮೂಗುತಿ ಧರಿಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಟೋಪಿಯ ಕೆಳಗೆ ಕಾಣಿಸದ ರೀತಿಯಲ್ಲಿ ಸಣ್ಣದಾಗಿ ಸಿಂಧೂರ ಇಡಲು ಅವಕಾಶ ನೀಡಲಾಗಿದೆ.

ಕಟ್ಟುನಿಟ್ಟಿನ ಅಂದಚೆಂದದ ನಿಯಮಗಳು

ಸೇನಾ ಸಿಬ್ಬಂದಿಯ ಶಿಸ್ತು ಕಾಯ್ದುಕೊಳ್ಳಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಲಾಗಿದೆ. ಹಚ್ಚೆ(ಟ್ಯಾಟೂ) ಮತ್ತು ಬಾಡಿ ಪಿಯರ್ಸಿಂಗ್ ಅನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಧಾರ್ಮಿಕ ಕಾರ್ಯಕ್ರಮದ ದಿನದಂದು ಧರಿಸುವ ಪವಿತ್ರ ದಾರಕ್ಕೆ ಮಾತ್ರ ವಿನಾಯಿತಿ ಇದ್ದು, ಸಮವಸ್ತ್ರದಲ್ಲಿರುವಾಗ ಯಾವುದೇ ಬಳೆ ಅಥವಾ ಕಡಗಗಳನ್ನು ಧರಿಸುವಂತಿಲ್ಲ. ಸಿಖ್ ಸಿಬ್ಬಂದಿಗೆ ಇರುವ ನಿರ್ದಿಷ್ಟ ವಿನಾಯಿತಿಗಳನ್ನು ಹೊರತುಪಡಿಸಿ, ಧಾರ್ಮಿಕ ಲಾಂಛನಗಳಿಗೆ ಅನುಮತಿಯಿಲ್ಲ. ಮೀಸೆಗಳ ಗರಿಷ್ಠ ಉದ್ದವನ್ನು 12 ಸೆಂಟಿಮೀಟರ್‌ಗಳಿಗೆ ಸೀಮಿತಗೊಳಿಸಲಾಗಿದೆ. ಸಮವಸ್ತ್ರದಲ್ಲಿರುವಾಗ ಆಫ್ಟರ್ ಶೇವ್ ಲೋಷನ್ ಬಳಸಬಹುದು, ಆದರೆ ಡಿಯೋಡರೆಂಟ್ ಮತ್ತು ಪರ್ಫ್ಯೂಮ್ ಬಳಕೆಯನ್ನು ನಿಷೇಧಿಸಲಾಗಿದೆ.

ರಾಷ್ಟ್ರೀಯ ನೀತಿಗೆ ಪೂರಕ



ಪ್ರಧಾನಿ ನರೇಂದ್ರ ಮೋದಿ, ಇತ್ತೀಚಿನ ವರ್ಷಗಳಲ್ಲಿ ಸಶಸ್ತ್ರ ಪಡೆಗಳು ಬ್ರಿಟಿಷ್ ಕಾಲದ ಪದ್ಧತಿಗಳಿಂದ ಹೊರಬಂದು ಭಾರತೀಯ ಸಂಪ್ರದಾಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ನೀಡಿದ್ದ ಕರೆಗೆ ಅನುಗುಣವಾಗಿ ಈ ಬದಲಾವಣೆಗಳನ್ನು ತರಲಾಗಿದೆ. ಮಿಲಿಟರಿ ಸಿದ್ಧಾಂತ ಮತ್ತು ಆಚರಣೆಗಳನ್ನು ಭಾರತೀಯಕರಣಗೊಳಿಸುವ ಸರ್ಕಾರದ ವಿಶಾಲ ಯೋಜನೆಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಪ್ರಮುಖ ಪರಿಷ್ಕರಣೆಗಳು

- ಬಂಡಿ ಜಾಕೆಟ್‌ಗಳನ್ನು ಧರಿಸಲು ಅಧಿಕೃತ ಅನುಮತಿ
- ಪರೇಡ್ ವೇಳೆ ಅಧಿಕಾರಿಗಳು ಕತ್ತಿ ಹಿಡಿಯುವ ಅಗತ್ಯವಿಲ್ಲ
- ಮೆಸ್ ಸಮವಸ್ತ್ರಗಳಿಂದ ಪೌಚ್ ಬೆಲ್ಟ್‌ಗಳಿಗೆ ಕೊಕ್
- ಚಳಿಗಾಲದ ಹೊಸ ಡ್ರೆಸ್ 3ಬಿ ಪರಿಚಯ
- ಮೀಸೆಯ ಗರಿಷ್ಠ ಉದ್ದ 12 ಸೆಂಟಿಮೀಟರ್‌ಗೆ ಸೀಮಿತ

ಕಿರುಸುದ್ದಿ

ಬಂಗೀ ಜಂಪ್: ಸುರಕ್ಷತಾ ಹಗ್ಗ ಕಟ್ಟದ ಸಿಬ್ಬಂದಿ, ಸಾವು

ಸಾವೊ ಪೌಲೋ(ಬ್ರೆಜಿಲ್): ಬಂಗೀ ಜಂಪ್ ವೇಳೆ ಸುರಕ್ಷತಾ ಹಗ್ಗ ಕಟ್ಟದೇ 130 ಅಡಿ ಎತ್ತರದಿಂದ ಸಿಬ್ಬಂದಿ ಎಸೆದಿದ್ದರಿಂದ 21ರ ಯುವತಿ ಮಾರಿಯಾ ಎಡುರ್ಡ ರಾಡ್ರಿಗ್ಸ್ ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿದ್ದಾರೆ. ಲಿಮೇರಾ ಎಂಬಲ್ಲಿ ಬಂಗೀ ಜಂಪ್ ವೇಳೆ ಸಿಬ್ಬಂದಿ ಸುರಕ್ಷತಾ ಹಗ್ಗವನ್ನೇ ಮರೆತು ಬೇಜವಾಬ್ದಾರಿ ಮೆರೆದಿದ್ದು, ಮಾರಿಯಾರನ್ನು ಸ್ಕೆಲೆಟಾನ್ ಸೇತುವೆಯ ಮೇಲಿಂದ ಕೆಳಕ್ಕೆ ಎಸೆದಿದ್ದಾರೆ. ಸುರಕ್ಷತಾ ಹಗ್ಗವಿಲ್ಲದ ಕಾರಣ ಯುವತಿ ಸಾವಿಗೀಡಾಗಿದ್ದಾರೆ. ಇತರ ಸಿಬ್ಬಂದಿ ವಿಡಿಯೋ ಮಾಡಿದ್ದು, ಯುವತಿಯನ್ನು ಸೇತುವೆಯಿಂದ ಎಸೆದ ಬಳಿಕ ಆಕೆಯ ಹಗ್ಗ ಎಂದು ಕಿರುಚಿದ್ದಾರೆ. ಆದರೆ ಅಷ್ಟಾಗಲೇ ಎಲ್ಲವೂ ಮುಗಿದಿತ್ತು. ಈ ದೃಶ್ಯ ವೈರಲ್ ಆಗಿದ್ದು, ವಿಶ್ವದೆಲ್ಲೆಡೆ ಜನರನ್ನು ಆತಂಕಕ್ಕೀಡು ಮಾಡಿದೆ. ಖಾಸಗಿ ಕಂಪನಿಯೊಂದು ಚಟುವಟಿಕೆಯನ್ನು ಆಯೋಜಿಸಿದ್ದು, ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿ 6 ಮಂದಿಯನ್ನು ಬಂಧಿಸಿದ್ದಾರೆ. ದುರಂತ ಸ್ಥಳದಲ್ಲಿದ್ದ ಮಾರಿಯಾ ವಿವಾಹವಾಗಲಿರುವ ಯುವಕ ಆಘಾತದಿಂದ ತೀವ್ರ ಅಸ್ವಸ್ಥರಾಗಿದ್ದಾರೆ.

ವಿಶ್ವದ 2ನೇ ದೊಡ್ಡ ರಷ್ಯಾ ತೈಲ ಖರೀದಿದಾರ ಭಾರತ

ಹೊಸದಿಲ್ಲಿ: ಭಾರತೀಯ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಭಾರೀ ಮೌಲ್ಯದ ಹೈಡ್ರೋಕಾರ್ಬನ್ ಖರೀದಿಸಿದ್ದು, ಮೇನಲ್ಲೂ ವಿಶ್ವದ ಎರಡನೇ ಅತಿ ದೊಡ್ಡ ರಷ್ಯಾ ಕಚ್ಚಾ ತೈಲ ಖರೀದಿದಾರ ರಾಷ್ಟ್ರವಾಗಿ ಭಾರತ ಉಳಿದುಕೊಂಡಿದೆ ಎಂದು ಐರೋಪ್ಯ ಚಿಂತನಾ ಚಾವಡಿ ಶುದ್ಧ ಗಾಳಿ ಮತ್ತು ಇಂಧನ ಸಂಶೋಧನಾ ಕೇಂದ್ರ (ಸಿಆರ್‌ಇಎ) ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಮೇನಲ್ಲಿ ಭಾರತೀಯ ತೈಲ ಕಂಪನಿಗಳು ಸುಮಾರು 5.8 ಶತಕೋಟಿ ಯೂರೋ (6.7 ಶತಕೋಟಿ ಡಾಲರ್) ಅಥವಾ ಅಂದಾಜು 57ರಿಂದ 58,000 ಕೋಟಿ ರೂ. ವೆಚ್ಚದ ಹೈಡ್ರೋಕಾರ್ಬನ್ ಅನ್ನು ರಷ್ಯಾದಿಂದ ಆಮದು ಮಾಡಿಕೊಂಡಿವೆ. ಆಮದು ಮಾಡಿಕೊಂಡ ಸಗಟು ಹೈಡ್ರೋಕಾರ್ಬನ್‌ನಿಂದ ಕಚ್ಚಾ ತೈಲ ತೆಗೆಯಲಾಗುತ್ತದೆ.

ಮೇ ತಿಂಗಳಲ್ಲಿ ಒಟ್ಟು ಮಾರಾಟವಾದ ರಷ್ಯಾ ತೈಲದ ಶೇ.83ರಷ್ಟು ಭಾರತವೇ ಆಮದು ಮಾಡಿಕೊಂಡಿದ್ದು, ಇದರ ವೆಚ್ಚ 4.8 ಶತಕೋಟಿ ಯೂರೋ (47,500 ಕೋಟಿ ರೂ.) ಆಗಿದೆ. ಉಳಿದಂತೆ ರಷ್ಯಾದಿಂದ 550 ದಶಲಕ್ಷ ಯೂರೋ (5,500 ಕೋಟಿ ರೂ.) ವೆಚ್ಚದಲ್ಲಿ ಪೆಟ್ರೋಲಿಯಂ ಉತ್ಪನ್ನಗಳು ಮತ್ತು 429 ದಶಲಕ್ಷ ಯೂರೋ (4,250 ಕೋಟಿ ರೂ.) ವೆಚ್ಚದಲ್ಲಿ ಕಲ್ಲಿದ್ದಲು ಆಮದು ಮಾಡಿಕೊಂಡಿದೆ.

ಭಾರತದ ಒಟ್ಟಾರೆ ಕಚ್ಚಾ ತೈಲ ಆಮದು ಮೇನಲ್ಲಿ ಶೇ.8ರಷ್ಟು ಏರಿಕೆ ಕಂಡಿದ್ದು, ಭಾರತದ ರಷ್ಯಾ ತೈಲ ಆಮದು ಶೇ.21 ಏರಿಕೆಯನ್ನು ಕಂಡಿದೆ.

ಹಿಮಾಲಯ ತಪ್ಪಲಿನಲ್ಲಿ ಸೈನಿಕರ ಯೋಗಾಭ್ಯಾಸ



ಡೆಹ್ರಾಡೂನ್: ಅಂತಾರಾಷ್ಟ್ರೀಯ ಯೋಗ ದಿನ ಸಮೀಪಿಸುತ್ತಿರುವ ಸಂದರ್ಭದಲ್ಲಿ ಹಿಮಾಲಯದ ಎತ್ತರದ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಗೋಲ್ಡನ್ ಕೀ ಡಿವಿಷನ್‌ನ ಯೋಧರು ಯೋಗಾಭ್ಯಾಸ ನಡೆಸಿ ತಮ್ಮ ಸಹಿಷ್ಣುತೆ, ಏಕಾಗ್ರತೆ ಮತ್ತು ಆಂತರಿಕ ಶಕ್ತಿಯನ್ನು ಮತ್ತಷ್ಟು ಬಲಪಡಿಸಿದರು. ಸವಾಲಿನ ಕಾರ್ಯಾಚರಣಾ ಭೌಗೋಳಿಕ ಪ್ರದೇಶದಲ್ಲಿ ಯೋಗವು ದೈಹಿಕ ಸನ್ನದ್ಧತೆ, ಮಾನಸಿಕ ಚುರುಕುತನ ಹಾಗೂ ಭಾವನಾತ್ಮಕ ಕ್ಷೇಮವನ್ನು ವೃದ್ಧಿಸಿ, ರಾಷ್ಟ್ರಸೇವೆಯಲ್ಲಿ ತೊಡಗಿರುವ ಯೋಧರು ತಮ್ಮ ಶ್ರೇಷ್ಠ ಸಾಮರ್ಥ್ಯವನ್ನು ಪ್ರದರ್ಶಿಸಲು ನೆರವಾಗುತ್ತದೆ.

ಕೇರಳದಲ್ಲಿ ಮಹಿಳೆಯರಿಗೆ ಉಚಿತ ಯಾನ ಇಂದಿನಿಂದ

ತಿರುವನಂತಪುರಂ: ಕೇರಳದಲ್ಲಿ ಮಹಿಳೆಯರು ಮತ್ತು ತೃತೀಯ ಲಿಂಗಿಗಳಿಗೆ ಸಾಮಾನ್ಯ ಕೆಎಸ್ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಪ್ರಿಯದರ್ಶಿನಿ ಯೋಜನೆಯನ್ನು ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಸೋಮವಾರ ಥಂಪನ್ನೂರ್ ಕೆಎಸ್‌ಆರ್‌ಟಿಸಿ ಬಸ್ಸು ನಿಲ್ದಾಣದಲ್ಲಿ ಉದ್ಘಾಟಿಸಲಿದ್ದಾರೆ. ಇದೇ ವೇಳೆ, ಕೇವಲ ರಾಜಕೀಯ ಉದ್ದೇಶಕ್ಕಾಗಿ ಸರಕಾರದ ಈ ಪಕ್ಷಪಾತಿ ನಡೆಯನ್ನು ಪ್ರತಿಭಟಿಸಿ ಕೇರಳದ ಖಾಸಗಿ ಬಸ್ಸೊಂದು ಪುರುಷರಿಗೂ ಒಂದು ದಿನ ಉಚಿತ ಪ್ರಯಾಣ ಸೌಕರ್ಯವನ್ನು ಘೋಷಿಸಿದ ಘಟನೆಯೂ ಇದೀಗ ಗಮನ ಸೆಳೆದಿದೆ.

ಕುಟುಂಬದ ಇತರ ಸದಸ್ಯರು ಟಿಕೆಟ್ ಮಾಡಿ ಜೊತೆಯಲ್ಲಿದ್ದ ಮಹಿಳೆಯರಿಗೆ ಉಚಿತ ಪ್ರಯಾಣ ಸೌಕರ್ಯ ಕಲ್ಪಿಸುವ 'ಪ್ರಿಯದರ್ಶಿನಿಯೋಜನೆ'ಯನ್ನು ಯುಡಿಎಫ್ ಇತ್ತೀಚಿನ ಚುನಾವಣೆಯ ಸಂದರ್ಭ ನೀಡಿದ 'ಗ್ಯಾರಂಟಿ'ಭರವಸೆಯಲ್ಲಿ ತಿಳಿಸಿತ್ತು. ಇದರಂತೆ ರಾಜ್ಯಮಟ್ಟದ ಈ ಯೋಜನೆಯನ್ನು ಮುಖ್ಯಮಂತ್ರಿಯವರು ಉದ್ಘಾಟಿಸುವರು.ವಿಧಾನಸಭಾಧ್ಯಕ್ಷ ತಿರುವಾಂಕೂರ್ ರಾಧಾಕೃಷ್ಣನ್ ಅವರು ಕೊಟ್ಟಾಯಂನಲ್ಲಿ ಉದ್ಘಾಟಿಸಲಿದ್ದು, ಪ್ರಥಮ ಉಚಿತ ಪ್ರಯಾಣ ಸೌಲಭ್ಯದ ಬಸ್ಸು ಕೊಟ್ಟಾಯಂನಿಂದ ಕುಮರಕಾಮ್ ಆಗಿ ಚೇರ್ತಲಕ್ಕೆ ಪ್ರಯಾಣಿಸಲಿದೆ.

ಇದರಡಿ ಮಹಿಳೆಯರು ಮತ್ತು ತೃತೀಯಲಿಂಗಿಗಳಿಗೆ ಬಸ್ಸು ನಿರ್ವಾಹಕರು 'ಶೂನ್ಯ ಟಿಕೆಟ್' ನೀಡಲಿದ್ದಾರೆ. ಅವರು ಯಾವುದೇ ಐಡಿ ಕಾರ್ಡ್ ಅಥವಾ ಇತರ ದಾಖಲೆಗಳನ್ನು ತೋರಿಸಬೇಕಾಗಿಲ್ಲ. ರಾಜ್ಯವ್ಯಾಪಿ 3125 ಬಸ್ಸುಗಳಲ್ಲಿ ಈ ಸೌಲಭ್ಯ ಇರಲಿದೆ.

ಮನೆಗೇ ನುಗ್ಗಿ ಬಿಜೆಪಿ ಸದಸ್ಯನ ಬರ್ಬರ ಹತ್ಯೆ

ಡೆಹ್ರಾಡೂನ್: ಉತ್ತರಾಖಂಡ್‌ನ ಸ್ಥಳೀಯ ಬಿಜೆಪಿ ಕಾರ್ಯಕರ್ತ ವಿನೋದ್ (44) ಅವರನ್ನು ಅದೇ ಗ್ರಾಮದ ಇಮ್ತಿಯಾಜ್ ನೇತೃತ್ವದ 40 ಮುಸ್ಲಿಮರ ಗುಂಪೊಂದು ಮನೆಗೆ ನುಗ್ಗಿ ಹತ್ಯೆ ನಡೆಸಿದ್ದು, ವಿನೋದ್ ಕುಟುಂಬದ ಮೂವರು ಸದಸ್ಯರೂ ಗಂಭೀರ ಗಾಯಗೊಂಡಿದ್ದಾರೆ. ಆರೋಪಿಗಳಿಗೆ ಸೇರಿದ ಕಾನೂನುಬಾಹಿರ ಕಟ್ಟಡಗಳನ್ನು ಬುಲ್ಡೋಜರ್ ಬಳಸಿ ನೆಲಸಮಗೊಳಿಸಲಾಗಿದೆ. ಘಟನೆ ಡೆಹ್ರಾಡೂನ್‌ನ ಬೈರಾಗಿವಾಲಾ ಗ್ರಾಮದಲ್ಲಿ ಶನಿವಾರ ನಡೆದಿದೆ.

ಹೊಲದಲ್ಲಿ ನೀರಾವರಿ ವಿಚಾರದಲ್ಲಿ ಭಿನ್ನಾಭಿಪ್ರಾಯ ಮೂಡಿತ್ತೆಂದು ಪೊಲೀಸರು ಹೇಳಿದ್ದಾರೆ. ವಿನೋದ್ ಹತ್ಯೆ ಖಂಡಿಸಿ ಬಿಜೆಪಿ ಕಾರ್ಯಕರ್ತರು ಜೈ ಶ್ರೀರಾಮ್ ಘೋಷಣೆ ಕೂಗಿ ದೊಡ್ಡ ಪ್ರತಿಭಟನೆ ನಡೆಸಿದ್ದಾರೆ. ವಿನೋದ್ ನಿವಾಸದಲ್ಲಿ ದಾಂಧಲೆ ನಡೆಸಿದ ದುಷ್ಕರ್ಮಿಗಳ ವಿರುದ್ಧ ಈಗ ಕ್ರಮಕ್ಕೆ ಆದೇಶಿಸಲಾಗಿದೆ.

ಹುಲಿ ಅಭಯಾರಣ್ಯದ ಕೆಳಭಾಗದಲ್ಲಿ 4.9 ಕಿಮೀ ಹೆದ್ದಾರಿ ನಿರ್ಮಾಣ

ಮೊದಲ 8 ಪಥ ಸುರಂಗ ಮಾರ್ಗ ಸಿದ್ಧ

ಹೊಸದಿಲ್ಲಿ: ಭಾರತದ ಮೊದಲ ಎಂಟು ಪಥಗಳ ಸುರಂಗ ಹೆದ್ದಾರಿ ರಾಜಸ್ಥಾನದ ಕೋಟಾ ಸಮೀಪ ಉದ್ಘಾಟನೆಗೆ ಸಿದ್ಧವಾಗಿದೆ. ಇದು 4.9 ಕಿ.ಮೀ. ಉದ್ದದ ಎಂಟು ಪಥಗಳ ಸುರಂಗ ಹೆದ್ದಾರಿಯಾಗಿದೆ. ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇನಲ್ಲಿ ಮುಕುಂದರ ಪರ್ವತ ಹುಲಿ ಅಭಯಾರಣ್ಯ ಪ್ರದೇಶದ ಕೆಳಭಾಗದಲ್ಲಿ ಎಂಟು ಪಥಗಳ ಸುರಂಗ ರಸ್ತೆಯನ್ನು ನಿರ್ಮಾಣ ಮಾಡಲಾಗಿದೆ.

1,386 ಕಿ.ಮೀ. ಉದ್ದದ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಕಾಮಗಾರಿ ಕೆಲಸಗಳು ಪೂರ್ಣಗೊಂಡಿದ್ದು, ಜೂ.20ರಂದು ತೆರೆಯಲಾಗುವುದು. ಬರೋಬ್ಬರಿ 95,000 ಕೋಟಿ ರೂ. ವೆಚ್ಚದಲ್ಲಿ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್ ಹೆದ್ದಾರಿಯನ್ನು ನಿರ್ಮಾಣ ಮಾಡಲಾಗಿದೆ.

ಸದ್ಯದ ಪರಿಸ್ಥಿತಿಯಲ್ಲಿ ದಿಲ್ಲಿ ಮತ್ತು ಮುಂಬೈ ನಡುವಿನ ಪ್ರಯಾಣವು ಸುಮಾರು 24 ಗಂಟೆಗೂ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತದೆ. ಆದರೆ ನೂತನ ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಕಾರಿಡಾರ್ ಸಂಪೂರ್ಣ ಕಾರ್ಯಾರಂಭಗೊಂಡ ನಂತರ ಕೇವಲ 12 ಗಂಟೆಯನ್ನಷ್ಟೇ ತೆಗೆದುಕೊಳ್ಳಲಿದೆ.



- ಎಂಟು ಪಥ ಸುರಂಗ ಹೆದ್ದಾರಿಯ ಉದ್ದ 4.9 ಕಿ.ಮೀ.
- ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಉದ್ದ 1,386 ಕಿ.ಮೀ.
- 95,000 ಕೋಟಿ ರೂ. ವೆಚ್ಚದಲ್ಲಿ ಎಕ್ಸ್‌ಪ್ರೆಸ್‌ವೇ ನಿರ್ಮಾಣ

ವನ್ಯಜೀವಿಗಳಿಗೆ ಹಾನಿಯಿಲ್ಲ

ವನ್ಯಜೀವಿಗಳಿಗೆ ಯಾವುದೇ ಹಾನಿಯಾಗದಂತೆ ಹಾಗೂ ತಿರುವು-ಮುರುವಾದ ಮಾರ್ಗವನ್ನು ತಪ್ಪಿಸುವ ಉದ್ದೇಶದಿಂದ ಹುಲಿ ಅಭಯಾರಣ್ಯದ ಕೆಳಭಾಗದಲ್ಲಿ ಎಂಟು ಪಥಗಳ ಸುರಂಗ ರಸ್ತೆ ನಿರ್ಮಿಸಲಾಗಿದೆ. ತಡೆರಹಿತ ಪ್ರಯಾಣಕ್ಕಾಗಿ ಕೋಟಾ ಪ್ರದೇಶವೊಂದೇ ಹೆದ್ದಾರಿ ಯೋಜನೆಯಲ್ಲಿ ಬಾಕಿಯಾಗಿತ್ತು. ಹುಲಿ ಅಭಯಾರಣ್ಯದ ಪರಿಸರದ ಸೂಕ್ಷ್ಮ ಸ್ವಭಾವವನ್ನು ಗಮನದಲ್ಲಿಟ್ಟುಕೊಂಡು ಸುರಂಗ ನಿರ್ಮಾಣಕ್ಕೆ ಸುಮಾರು ನಾಲ್ಕೂವರೆ ಐದು ವರ್ಷಗಳ ಕಾಲ ಬೇಕಾಯಿತು.

ಸಮಯ ಉಳಿತಾಯ

ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ ಸಹಾಯದಿಂದ ಪ್ರಯಾಣಿಕರ ಪ್ರಯಾಣದ ಸಮಯ ಉಳಿತಾಯ ಆಗಲಿದೆ. ಇದಲ್ಲದೆ, ಸರಕು ಸಾಗಣೆ ವೆಚ್ಚ ಅಗ್ಗವಾಗಲಿದೆ. ಹರ್ಯಾಣ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್ ಮತ್ತು ಮಹಾರಾಷ್ಟ್ರ ನಡುವಿನ ಸಾಮಾನ್ಯ ಜನರಿಗೆ ಪ್ರಯಾಣ ಸಂಪರ್ಕ ಬೆಳೆಸಲಿದೆ.

ಒಮಾನ್‌ನಲ್ಲಿ ಭಾರತೀಯ ಧ್ವಜದ ಹಡಗಿನ ಎಂಜಿನ್ ವೈಫಲ್ಯ

ಎಲ್ಲಾ 14 ಭಾರತೀಯ ಸಿಬ್ಬಂದಿ ರಕ್ಷಣೆ

ದುಬೈ: ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಇಂಜಿನ್ ವೈಫಲ್ಯಕ್ಕೊಳಗಾದ ಭಾರತೀಯ ಧ್ವಜದ ವಾಣಿಜ್ಯ ಹಡಗಿನಿಂದ ಎಲ್ಲಾ 14 ಭಾರತೀಯ ಸಿಬ್ಬಂದಿಯನ್ನು ಭಾನುವಾರ ರಕ್ಷಿಸಲಾಗಿದೆ.

ಈ ಘಟನೆ ಭಾರತೀಯ ಧ್ವಜದ ವ್ಯಾಪಾರ ಹಡಗು ವಿರಾಟ್ 1ರಲ್ಲಿ ಸಂಭವಿಸಿದೆ. ಮಸ್ಕಟ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಮಾಹಿತಿ ಪ್ರಕಾರ, ಹಡಗಿನಲ್ಲಿದ್ದ ಎಲ್ಲಾ 14 ಸಿಬ್ಬಂದಿಯನ್ನು ಸಮುದ್ರದಲ್ಲಿ ನಡೆಸಲಾದ ರಕ್ಷಣಾ ಕಾರ್ಯಾಚರಣೆಯ ಮೂಲಕ ಸುರಕ್ಷಿತವಾಗಿ ರಕ್ಷಿಸಲಾಗಿದೆ.

ರಾಯಭಾರ ಕಚೇರಿ ನೀಡಿದ ಮಾಹಿತಿಯಂತೆ, ಹಡಗಿನಲ್ಲಿ ಎಂಜಿನ್ ವೈಫಲ್ಯ ಉಂಟಾಗಿತ್ತು. ಇದರ ಪರಿಣಾಮವಾಗಿ ಸಿಬ್ಬಂದಿ ಸುರಕ್ಷಿತವಾಗಿ ಲೈಫ್ ರಾಫ್ಟ್‌ಗೆ ಸ್ಥಳಾಂತರಗೊಂಡಿದ್ದರು. ಒಮಾನ್ ಅಧಿಕಾರಿಗಳ ಸಮನ್ವಯದಲ್ಲಿ ಸಮೀಪದಲ್ಲಿದ್ದ ಹಡಗುಗಳ ನೆರವಿನಿಂದ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳಲಾಯಿತು ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

ಈ ಘಟನೆ ಗಲ್ಫ್ ಪ್ರದೇಶದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲಿ ನಡೆದಿದೆ. ಕಳೆದ ವಾರ ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಭಾರತೀಯ ಸಿಬ್ಬಂದಿ ಇದ್ದ ಮೂರು ಹಡಗುಗಳು ಅಮೆರಿಕದ ದಾಳಿಗೆ ಒಳಗಾಗಿದ್ದವು. ಆ ಘಟನೆಗಳಲ್ಲಿ



ಒಂದರಲ್ಲಿ ಭಾರತದ ಮೂವರು ನಾವಿಕರು ಮೃತಪಟ್ಟಿದ್ದರು.

ಶುಕ್ರವಾರ ಭಾರತ ಅಮೆರಿಕದ ಚಾರ್ಜ್ ಡಿ ಅಫೇರ್ಸ್ ಜೇಸನ್ ಮೀಕ್ಸ್ ಅವರನ್ನು ಒಂದು ವಾರದ ಅವಧಿಯಲ್ಲಿ ಎರಡನೇ ಬಾರಿ ಕರೆಸಿಕೊಂಡಿತ್ತು. ಭಾರತೀಯ ಸಿಬ್ಬಂದಿ ಇದ್ದ ವಾಣಿಜ್ಯ ಹಡಗುಗಳ ಮೇಲೆ ಒಮಾನ್ ಕರಾವಳಿಯ ಸಮುದ್ರ ಪ್ರದೇಶದಲ್ಲಿ ಅಮೆರಿಕ ಸೇನೆ ನಡೆಸಿದ ದಾಳಿಗಳು ಸ್ವೀಕಾರಾರ್ಹವಲ್ಲ ಎಂದು ಭಾರತ ತಿಳಿಸಿತ್ತು. ಇಂತಹ ಕ್ರಮಗಳು ಅಂತಾರಾಷ್ಟ್ರೀಯ ಸಮುದ್ರ ವಾಣಿಜ್ಯದ ಸುರಕ್ಷತೆ, ಭದ್ರತೆ ಮತ್ತು ಸ್ಥಿರತೆಯನ್ನು ದುರ್ಬಲಗೊಳಿಸುತ್ತವೆ ಎಂದು ಭಾರತ ಆಕ್ಷೇಪ ವ್ಯಕ್ತಪಡಿಸಿತ್ತು.

ಬೆಳ್ತಂಗಡಿ : ರೂ. 23 ಕೋಟಿ ವೆಚ್ಚದ ನೂತನ ನ್ಯಾಯಾಲಯ ಸಂಕೀರ್ಣದ ಶಿಲಾನ್ಯಾಸ

ಮುಕ್ತ ವಾತಾವರಣ ಅತ್ಯಗತ್ಯ

ಬೆಳ್ತಂಗಡಿ : 'ನ್ಯಾಯ ಕೊಡಲು ಮುಕ್ತವಾದ ವಾತಾವರಣ ಇರಬೇಕು. ಅದಕ್ಕೆ ಮುಖ್ಯವಾಗಿ ಬೇಕಾಗಿರುವುದು ನ್ಯಾಯಾಲಯದ ಕಟ್ಟಡವಾಗಿದೆ. ಕಟ್ಟಡ ಚೆನ್ನಾಗಿದ್ದು, ಅಲ್ಲಿನ ವಾತಾವರಣ ಉತ್ತಮವಾಗಿದ್ದಾಗ ನ್ಯಾಯಾಧೀಶರು, ವಕೀಲರುಗಳು ಕೆಲಸ ಮಾಡಲು ಅನುಕೂಲವಾಗುತ್ತದೆ. ಸಾರ್ವಜನಿಕರ ಮನೆಯಾದ ನ್ಯಾಯಾಲಯ ಕಟ್ಟಡ ಎಲ್ಲಿಯೂ ಕಳಪೆಯಾಗದಂತೆ ವಕೀಲರ ಸಂಘ ಹಾಗೂ ಎಲ್ಲಾ ವಕೀಲರುಗಳು ತಮ್ಮ ಮನೆಯಂತೆ ಕಟ್ಟಡ ಕಾಮಗಾರಿಯನ್ನು ಗಮನಿಸಬೇಕು ಎಂದು ಹೈಕೋರ್ಟ್ ನ್ಯಾಯಾಧೀಶ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಆಡಳಿತಾತ್ಮಕ ನ್ಯಾಯಾಧೀಶ ಎಚ್.ಟಿ. ನರೇಂದ್ರ ಪ್ರಸಾದ್ ಹೇಳಿದರು.

ಅವರು ಭಾನುವಾರ ಬೆಳ್ತಂಗಡಿ ನ್ಯಾಯಾಲಯದ ಆವರಣದಲ್ಲಿ ರೂ.23 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುವ ನೂತನ ನ್ಯಾಯಾಲಯ ಸಂಕೀರ್ಣದ ಶಿಲಾನ್ಯಾಸ ನೆರವೇರಿಸಿ ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು.

'ನ್ಯಾಯಾಲಯದಲ್ಲಿ ತುಂಬಾ ಜವಾಬ್ದಾರಿಯುತ ವಸ್ತುಗಳಿರುತ್ತವೆ. ಹಾಗಾಗಿ ಅದಕ್ಕೆ ಸುಸಜ್ಜಿತ ಕಟ್ಟಡದ ಅಗತ್ಯವಿದೆ. ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಿಕೊಡುವ ಜವಾಬ್ದಾರಿ ಸರ್ಕಾರದ್ದು. ಹೈಕೋರ್ಟ್ ವತಿಯಿಂದ ಕಳೆದ 10 ವರ್ಷಗಳಿಂದ ಮೂಲಭೂತ ಸೌಕರ್ಯವಿರುವ ನ್ಯಾಯಾಲಯ ಸಂಕೀರ್ಣ ಮತ್ತು ನ್ಯಾಯಾಧೀಶರಿಗೆ ವಸತಿಗೃಹಕ್ಕೆ ಆದ್ಯತೆ ನೀಡುತ್ತಾ ಬಂದಿದ್ದೇವೆ. ಈ ಕಟ್ಟಡದ ಕೆಲಸ ಕಾರ್ಯಗಳು ಸರಿಯಾಗಿ ನಡೆಯದೆ ಹೋದಾಗ ಪ್ರಿನ್ಸಿಪಾಲ್ ಜಡ್ಜ್ ಗೆ ಗಮನಕ್ಕೆ ತರಬಹುದು. ಅವರು ನಮ್ಮ ಗಮನಕ್ಕೆ ತಂದಾಗ ನಾವು ಸರಿಯಾದ ಕ್ರಮ ಕೈಗೊಳ್ಳುತೇವೆ' ಎಂದರು.



ನೂತನ ನ್ಯಾಯಾಲಯ ಸಂಕೀರ್ಣದ ಶಿಲಾನ್ಯಾಸ ಬಳಿಕ ನಡೆದ ಸಭಾ ಕಾರ್ಯಕ್ರಮ

ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಖಾತೆ ಸಚಿವ ಯು.ಟಿ.ಖಾದರ್ ಫರೀದ್ ಮಾತನಾಡಿ, 'ರಾಷ್ಟ್ರಮಟ್ಟದಲ್ಲಿ ಕರ್ನಾಟಕದ ಹೈಕೋರ್ಟ್, ನ್ಯಾಯಾಧಿಶರು ಮತ್ತು ವಕೀಲ ವೃತ್ತಿಗೆ ವಿಶೇಷ ಗೌರವವಿದೆ. ಬೆಳ್ತಂಗಡಿಯ ಹೊಸ ನ್ಯಾಯಾಲಯ ಸಂಕೀರ್ಣಕ್ಕೆ ಸರ್ಕಾರ ಸಂಪೂರ್ಣ ಸಹಕಾರ ನೀಡುವುದು. ಶಿಕ್ಷಣ, ಆರೋಗ್ಯ, ಕಾನೂನು ಕ್ಷೇತ್ರ ಎಲ್ಲದಕ್ಕೂ ಸುಸಜ್ಜಿತ ಸವಲತ್ತು ಕೊಡಲು ಸರ್ಕಾರ ಬದ್ಧವಾಗಿದೆ. ಈಗಾಗಲೇ ಸರ್ಕಾರ ರೂ. 9 ಕೋಟಿ ಬಿಡುಗಡೆ ಮಾಡಿದ್ದು, ಬಾಕಿ ಉಳಿದ ಮೊತ್ತವನ್ನು ಕೆಲಸ ಪೂರ್ತಿಯಾಗುವ ಮುಂಚಿತವಾಗಿಯೇ ಬಿಡುಗಡೆ ಮಾಡುತ್ತೇವೆ. ಹೊಸ ಕಟ್ಟಡವಾಗಿದೆ ಎಂದು ಕೇಸು ಜಾಸ್ತಿ ಮಾಡುವುದು ಬೇಡ. ಆಸ್ಪತ್ರೆ ಮತ್ತು ನ್ಯಾಯಾಲಯಕ್ಕೆ ಹೆಚ್ಚು ಜನರು ಬರುವುದು ಬೇಡ. ಆದಷ್ಟು ಸಂಧಾನದ ಮೂಲಕ ಕೇಸು ಇತ್ಯಾರ್ಥ ಮಾಡಿಕೊಳ್ಳಬೇಕು. ಕೇಸಿನಲ್ಲಿಯೇ ಜೀವನ ಕಳೆಯುವ ಬದುಕು ಬೇಡ' ಎಂದರು.

ಹೈಕೋರ್ಟ್ ನ್ಯಾಯಾಧೀಶ ಮಹಮ್ಮದ್ ನವಾಜ್ ಮಾತನಾಡಿ, 'ನ್ಯಾಯಾಲಯ ನ್ಯಾಯ ನೀಡುವ ದೇಗುಲ. ಉತ್ತಮ ನ್ಯಾಯಾಧೀಶರಿಗೆ ಕೊರತೆಯಿಲ್ಲ. ಆದರೆ ಅವರಿಗೆ ಉತ್ತಮ ಸೌಕರ್ಯ ನೀಡುವಲ್ಲಿ ವ್ಯವಸ್ಥೆ ವಿಫಲವಾಗಿದೆ.. ಮೂಲಭೂತ ಸೌಕರ್ಯಗಳ ಕೊರತೆಯಿಂದ ಕೆಲವೊಮ್ಮೆ ನ್ಯಾಯ ವಿಳಂಬವಾಗುತ್ತಿದೆ. ನ್ಯಾಯ ಬೇಡಿಕೊಂಡು ಬರುವವರಿಗೆ ಸರಿಯಾದ ವ್ಯವಸ್ಥೆ ಮಾಡಬೇಕು. ಸುಪ್ರೀಂಕೋರ್ಟಿನ ಗೈಡ್‌ಲೈನ್ಸ್ ಗೆ ಅನುಗುಣವಾಗಿ ಪಿಡಬ್ಲ್ಯೂಡಿ ಇಲಾಖೆಯವರು ಅಚ್ಚುಕಟ್ಟಾಗಿ ಕಟ್ಟಡ ಕೆಲಸವನ್ನು ಮಾಡಬೇಕು' ಎಂದರು.

> **'ಮಂಗಳೂರಿನಲ್ಲಿ ಹೊಸ ಕಟ್ಟಡಕ್ಕೆ ಈಗಾಗಲೇ ರೂ.60 ಕೋಟಿ ಅನುದಾನ ಬಿಡುಗಡೆಯಾಗಿದ್ದು ಮುಂದಿನ ದಿನಗಳಲ್ಲಿ ಕೆಲಸ ಕಾರ್ಯಗಳು ಆರಂಭವಾಗುತ್ತದೆ. ಕಟ್ಟಡ ಕೇವಲ ಕೇಸ್ ನಡೆಸಲು ಮಾತ್ರವಲ್ಲ. ಕಟ್ಟಡದಿಂದ ಎಲ್ಲರಿಗೂ ದೊಡ್ಡ ಮಟ್ಟದ ಪ್ರಯೋಜನವಾಗಬೇಕು' .**
>
> ■ **ಯು.ಟಿ.ಖಾದರ್**

ವೇದಿಕೆಯಲ್ಲಿ ಹೈಕೋರ್ಟ್ ನ್ಯಾಯಾಧೀಶರುಗಳಾದ ವಿಶ್ವಜಿತ್ ಶೆಟ್ಟಿ, ರಾಜೇಶ್ ರೈ ಕೆ, ತ್ಯಾಗರಾಜ ಎನ್. ಇನವಳ್ಳಿ, ಮುರಳೀಧರ ಪೈ, ಸಂಸದ ಕ್ಯಾ. ಬ್ರಿಜೇಶ್ ಚೌಟ, ವಿಧಾನ ಪರಿಷತ್ ಸದಸ್ಯರುಗಳಾದ ಐವನ್ ಡಿಸೋಜಾ, ಪ್ರತಾಪಸಿಂಹ ನಾಯಕ್, ಕರ್ನಾಟಕ ಬಾರ್ ಕೌನ್ಸಿಲ್ ಸದಸ್ಯ ಪಿ.ಪಿ. ಹೆಗ್ಡೆ ಇದ್ದರು.

ವಕೀಲರಾದ ಉಷಾ ಎನ್. ಜಿ., ಅಕ್ಷಯ್ ಡಿ ರಾವ್, ಮುಮ್ತಾಜ್ ಬೇಗಂ, ಪ್ರವೀಣ್ ಕುಮಾರ್ ವಂದೇ ಮಾತರಂ ಹಾಗೂ ನಾಡಗೀತೆಯನ್ನು ಹಾಡಿದರು. ಬೆಳ್ತಂಗಡಿ ವಕೀಲರ ಸಂಘದ ಅಧ್ಯಕ್ಷ ಆಲೋಸಿಯಸ್ ಲೋಬೋ ಸ್ವಾಗತಿಸಿದರು. ಹಿರಿಯ ವಕೀಲ ಧನಂಜಯ ರಾವ್ ಹಾಗೂ ಅಪರ ಸರ್ಕಾರಿ ವಕೀಲ ಮನೋಹರ್ ಕುಮಾರ್ ನಿರೂಪಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಎಂ ವಂದಿಸಿದರು.

ವಿವೇಕವಾಣಿ ಸರಣಿ ಉಪನ್ಯಾಸ ಕಾರ್ಯಕ್ರಮ

ಸ್ವಾಮಿ ವಿವೇಕಾನಂದರ ಪಯಣವು ವಿಶ್ವ ಮಾನವೀಯತೆಯ ಸಂದೇಶ



ಮಂಗಳೂರು: ಯುವ ಪರಿವ್ರಾಜಕರಾಗಿ ಭಾರತದೆಲ್ಲೆಡೆ ಸಂಚರಿಸಿದ ಸ್ವಾಮಿ ವಿವೇಕಾನಂದರು ದೇಶದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ವಾಸ್ತವತೆಗಳನ್ನು ನೇರವಾಗಿ ಅನುಭವಿಸಿದರು. ಈ ಅನುಭವಗಳೇ ಅವರನ್ನು ಮಾನವಸೇವೆ, ರಾಷ್ಟ್ರಜಾಗೃತಿ ಹಾಗೂ ವಿಶ್ವಭ್ರಾತೃತ್ವದ ಸಂದೇಶವನ್ನು ಸಾರಿದ ಮಹಾನ್ ಯುಗಪುರುಷರನ್ನಾಗಿ ರೂಪಿಸಿದವು ಎಂದು ನಾಗ್ಪುರ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ರಾಘವೇಂದ್ರಾನಂದಜಿ ಹೇಳಿದರು.

ಮಂಗಳೂರು ವಿಶ್ವವಿದ್ಯಾಲಯದ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ಆಶ್ರಯದಲ್ಲಿ ನಡೆಯುತ್ತಿರುವ ವಿವೇಕವಾಣಿ ಸರಣಿ ಉಪನ್ಯಾಸ ಕಾರ್ಯಕ್ರಮದ ಐವತ್ತಾರನೇ ಉಪನ್ಯಾಸ ಅಂಗವಾಗಿ ನಗರದ ಎ. ಜೆ. ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿಯಲ್ಲಿ 'ಪರಿವ್ರಾಜಕನಿಂದ ವಿಶ್ವಗುರು: ಸ್ವಾಮೀಜಿಯ ಪಯಣ' ಎಂಬ ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು.

ಯುವಜನತೆಯಲ್ಲಿ ಆತ್ಮಶಕ್ತಿ, ಸೇವಾಮನೋಭಾವ, ನಾಯಕತ್ವ ಹಾಗೂ ರಾಷ್ಟ್ರನಿರ್ಮಾಣದ ಚಿಂತನೆಗಳನ್ನು ಬೆಳೆಸುವ ಅವರ ಆದರ್ಶಗಳು ಇಂದಿಗೂ ಸ್ಫೂರ್ತಿಯ ಚಿಲುಮೆಯಾಗಿವೆ ಎಂದರು.

ಎ. ಜೆ. ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿಯ ಪ್ರಭಾರ ಪ್ರಾಂಶುಪಾಲ ಡಾ. ಪಿ. ಮಹಾಬಲೇಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ಕಲ್ಯಾಣ ವಿಭಾಗ ಡೀನ್ ಡಾ. ಕಿಶೋರ್ ಶೆಟ್ಟಿ, ಉಪಪ್ರಾಂಶುಪಾಲ ಡಾ. ಆಂಟೋನಿ ಪಿ. ಜೆ., ಉಪನ್ಯಾಸಕರು ಹಾಗೂ ಎಂ.ಬಿ.ಎ. ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಂಗಳೂರು ವಿಶ್ವವಿದ್ಯಾಲಯದ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ಸಂಯೋಜಕ ಡಾ. ಚಂದ್ರು ಹೆಗ್ಡೆ ಸ್ವಾಗತಿಸಿದರು. ಎಂ.ಬಿ.ಎ. ವಿಭಾಗದ ಮುಖ್ಯಸ್ಥೆ ಡಾ. ಪ್ರಮೀಳಾ ಎಸ್. ಶೆಟ್ಟಿ ವಂದಿಸಿದರು. ಎಂ.ಬಿ.ಎ. ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಮಹಿ ಎಂ. ರೈ ಕಾರ್ಯಕ್ರಮವನ್ನು ನಿರೂಪಿಸಿದರು.

ಥಾಮಸ್ ಕಪ್ ವಿಜೇತ ಆಯುಷ್ ಶೆಟ್ಟಿ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಭೇಟಿ

ಉಜಿರೆ: ಭಾರತದ ಭರವಸೆಯ ಬ್ಯಾಡ್ಮಿಂಟನ್ ತಾರೆ, ಥಾಮಸ್ ಕಪ್ ವಿಜೇತ ಹಾಗೂ 2026ರ ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನ ಬೆಳ್ಳಿ ಪದಕ ವಿಜೇತ ಆಯುಷ್ ಶೆಟ್ಟಿ ಅವರು ಸಕುಟುಂಬಿಕರಾಗಿ ಭಾನುವಾರ ಧರ್ಮಸ್ಥಳಕ್ಕೆ ಭೇಟಿ ನೀಡಿ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಆಶೀರ್ವಾದ ಪಡೆದರು.

ಬಳಿಕ ಅವರು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ದೇಶದ ಕ್ರೀಡಾ ಕ್ಷೇತ್ರದಲ್ಲಿ ಕರ್ನಾಟಕದ ಕೀರ್ತಿಯನ್ನು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸುತ್ತಿರುವ ಆಯುಷ್ ಶೆಟ್ಟಿ ಅವರ ಸಾಧನೆಯನ್ನು ಶ್ಲಾಘಿಸಿದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು, ಮುಂದಿನ ದಿನಗಳಲ್ಲಿ ಇನ್ನಷ್ಟು ಯಶಸ್ಸು ಸಾಧಿಸಿ ದೇಶಕ್ಕೆ ಕೀರ್ತಿ ತರಲೆಂದು ಶುಭ ಹಾರೈಸಿದರು.



ಈ ಸಂದರ್ಭ ಹೆಗ್ಗಡೆಯವರ ಆಪ್ತ ಕಾರ್ಯದರ್ಶಿ ಎ.ವಿ. ಶೆಟ್ಟಿ ಹಾಗೂ ಉಜಿರೆಯ ಎಸ್.ಡಿ.ಎಂ. ಆಂಗ್ಲ ಮಾಧ್ಯಮ ಶಾಲೆಯ ದೈಹಿಕ ಶಿಕ್ಷಕ ಸಂತೋಷ್ ಉಪಸ್ಥಿತರಿದ್ದರು.

ಅಡೂರಿನಲ್ಲಿ ದೊಂದಿ ಮೆರವಣಿಗೆ: ವಿಹಿಂಪ ವಿರುದ್ಧ ಕೇಸು

ಕಾಸರಗೋಡು: ಅಡೂರು ಪೇಟೆಯಲ್ಲಿ ಇತ್ತೀಚೆಗೆ ವಿಶ್ವ ಹಿಂದು ಪರಿಷತ್ ವತಿಯಿಂದ ನಡೆದ ದೊಂದಿ ಪ್ರತಿಭಟನಾ ಮೆರವಣಿಗೆಯ ನೇತೃತ್ವ ವಹಿಸಿದ್ದ ಪ್ರಮುಖರ ವಿರುದ್ಧ ಕೇಸು ದಾಖಲಿಸಲಾಗಿದೆ. ಹಿಂದು ಸಂಘಟನೆಯ ಪ್ರಮುಖರಾದ ಅಕ್ಷಯ್ ರಜಪೂತ್, ಅಭಿಷೇಕ್ ಸರಳಾಯ ಅಡೂರು, ಸತ್ಯನಾರಾಯಣ ಭಟ್, ಸಂಕಪ್ಪ ಭಂಡಾರಿ, ಭರತ್ ಅಡೂರು ಅವರ ಮೇಲೆ ಆದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಅಡೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಭಾವಚಿತ್ರವನ್ನು ಅಪಕೀರ್ತಿ ಮಾಡುವ ರೀತಿಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿರುವ ಕೃತ್ಯದ ವಿರುದ್ಧ ಅಡೂರು ಪೇಟೆಯಿಂದ ಬಸ್ ನಿಲ್ದಾಣ ವರೆಗೆ ದೊಂದಿ ಮೆರವಣಿಗೆ (ಪಂಜಿನ ಮೆರವಣಿಗೆ) ನಡೆಸುವ ಮೂಲಕ ವಿಶ್ವ ಹಿಂದು ಪರಿಷತ್ ಮತ್ತು ಬಜರಂಗ ದಳ ಅಡೂರು ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಗಿತ್ತು. ಪ್ರತಿಭಟನೆಯಲ್ಲಿ ಸಹಸ್ರ ಮಂದಿ ಭಾಗವಹಿಸಿದ್ದ ಹಿನ್ನೆಲೆಯಲ್ಲಿ ಆದೂರು ಪೊಲೀಸ್ ಠಾಣೆಯ ವತಿಯಿಂದ ಪರವಾನಿಗೆ ರಹಿತ ಪ್ರತಿಭಟನೆ ನಡೆಸಿದ ಆರೋಪದಂತೆ ಸುಮೋಟೋ ಪ್ರಕರಣವನ್ನು ಸಂಘಟನೆಯ ಪ್ರಮುಖರು ಹಾಗೂ ಕಾರ್ಯಕರ್ತರ ಮೇಲೆ ಹಾಕಲಾಗಿದೆ.



ಅಡೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಭಾವಚಿತ್ರವನ್ನು ಅನ್ಯಮತೀಯ ಸಂಘಟನೆ ಆಗಿರುವ ಎಸ್‌ಎಸ್‌ಎಫ್‌ನ ಕಾರ್ಯಕ್ರಮವೊಂದರ ಪೋಸ್ಟರ್ ಬಳಕೆಗೆ ಉಪಯೋಗಿಸಿದ್ದು, ಇದರಿಂದಾಗಿ ಹಿಂದು ಭಾವನೆಗೆ ಧಕ್ಕೆ ಉಂಟಾಗಿದೆ ಎಂಬ ಆರೋಪದ ಮೇರೆಗೆ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ರಜೆ ಹಿನ್ನೆಲೆ ಮಂತ್ರಾಲಯಕ್ಕೆ ಬಂದ ಭಕ್ತರ ಮಹಾಪೂರ


ರಾಯಚೂರು: ಇತ್ತೀಚೆಗೆ ಪ್ರತಿ ಎರಡನೇ ಹಾಗೂ ನಾಲ್ಕನೇ ಶನಿವಾರ, ಭಾನುವಾರಗಳಂತೆ ಈ ಎರಡನೇ ಶನಿವಾರವೂ ರಾಯರ ದರ್ಶನಕ್ಕೆಂದು ಮಂತ್ರಾಲಯಕ್ಕೆ ಭಕ್ತ ಸಾಗರ ಹರಿದು ಬಂದಿತು.



ಶನಿವಾರ ಮತ್ತು ಭಾನುವಾರ ಎರಡು ದಿನ ರಜೆ ಇರುವ ಹಿನ್ನೆಲೆ ಉತ್ತರ ಕರ್ನಾಟಕದ ಕೆಲ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಭಕ್ತರು ಆಗಮಿಸಿದ್ದು ಕಂಡುಬಂದಿದೆ. ಅತ್ಯಧಿಕ ಭಕ್ತರು ಆಗಮಿಸಿದ್ದರಿಂದ ಮಠದ ವಸತಿ ನಿಲಯಗಳು ಖಾಲಿ ಇಲ್ಲದ ಕಾರಣಕ್ಕೆ ಹಾಗೂ ಖಾಸಗಿ ವಸತಿ ನಿಲಯಗಳಲ್ಲಿ ಹೆಚ್ಚಿನ ಬಾಡಿಗೆ ಹೇಳುತ್ತಿರುವ ಕಾರಣಕ್ಕೆ ಭಕ್ತರು ಶ್ರೀಮಠದ ಮುಂದಿನ ಪ್ರಾಂಗಣ ಹಾಗೂ ಕಲ್ಯಾಣ ಮಂಟಪದಲ್ಲಿ ತಂಗುವ ಮೂಲಕ ರಾತ್ರಿ ಸಮಯ ಕಳೆದಿದ್ದಾರೆ. ಸಾಮಾನ್ಯವಾಗಿ ಗುರುವಾರ ಹೆಚ್ಚಿನ ಸಂಖ್ಯೆಯಲ್ಲಿ ರಾಯರ ದರ್ಶನಕ್ಕೆ ಭಕ್ತರು ಆಗಮಿಸುತ್ತಿದ್ದರು. ಆದರೆ, ಕಳೆದ ಮೂರ್ನಾಲ್ಕು ವರ್ಷಗಳಿಂದ ಮಂತ್ರಾಲಯಕ್ಕೆ ಭಕ್ತರ ಸಂಖ್ಯೆ ಗಮಾರ್ಹವಾಗಿ ಏರಿಕೆ ಆಗಿದೆ.

ಶನಿವಾರ ಮಧ್ಯ ರಾತ್ರಿ ಹಾಗೂ ಬೆಳಗಿನ ಜಾವ ಮಳೆ ಆಗಿದ್ದರಿಂದ ಮಠದ ಪ್ರಾಂಗಣದಲ್ಲಿ ಮಲಗಿಕೊಂಡಿದ್ದ ಭಕ್ತರ ನಿದ್ದೆಗೆಡಿಸಿತು. ಈ ಸಮಯದಲ್ಲಿ ಭಕ್ತರು ಮಠದಲ್ಲಿನ ಕಟ್ಟಡಗಳಲ್ಲಿ ಆಶ್ರಯವನ್ನು ಪಡೆದುಕೊಂಡಿದ್ದು ಕಂಡುಬಂದಿತು. ಶ್ರೀಮಠದಲ್ಲಿ ಬೇರೆ ಧಾರ್ಮಿಕ ಸ್ಥಳಗಳಲ್ಲಿ ಒಂದೊಂದು ರೂಮಿನಲ್ಲಿ 50-100 ಜನ ತಂಗುವಂತಹ ವ್ಯವಸ್ಥೆಯನ್ನು ಶ್ರೀಮಠ ಮಾಡಬೇಕೆಂದು ಭಕ್ತರು ಅಭಿಪ್ರಾಯ ವ್ಯಕ್ತಪಡಿಸುತ್ತಿರುವುದು ಕಂಡುಬಂದಿತು.

ರಾಮ ಬಾಣ



ಕೊಲ್ಲೂರು ದೇವಿ ದರ್ಶನ ಪಡೆದ ಅನಂತ್ ಅಂಬಾನಿ

ಬೈಂದೂರು: ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಭೇಟಿ ನೀಡಿದ್ದಾರೆ. ಹಲವು ದೇವಸ್ಥಾನಗಳಿಗೆ ಭೇಟಿ ನೀಡುತ್ತಿರುವ ಅನಂತ್ ಅಂಬಾನಿ ಇದೀಗ ಕೊಲ್ಲೂರಿನಲ್ಲಿ ದೇವಿ ದರ್ಶನ ಪಡೆದಿದ್ದಾರೆ.



ಇತ್ತೀಚೆಗೆ ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಕೊಲ್ಲೂರು ಮೂಕಾಂಬಿಕೆ ದರ್ಶನ ಪಡೆದು ಮರಳಿದ್ದರು. ಇದರ ಬೆನ್ನಲ್ಲೇ ಇದೀಗ ರಿಲಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ ಭೇಟಿ ನೀಡಿದ್ದಾರೆ. ಮೂಕಾಂಬಿಕೆ ದೇವಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಅಂಬಾನಿ ಕುಟುಂಬದ ಗುರೂಜಿಯ ಜೊತೆ ಆಗಮಿಸಿ ದರ್ಶನ ಅಂಬಾನಿ ಕುಟುಂಬದ ಗುರೂಜಿ ಜೊತೆ ಕೊಲ್ಲೂರು ಮೂಕಾಂಬಿಕೆ ದೇವಿ ದರ್ಶನಕ್ಕೆ ಆಗಮಿಸಿದ್ದರು.

ಜೂ. 13ರಂದು ಅನಂತ್ ಅಂಬಾನಿ ಕೊಲ್ಲೂರು ಮೂಕಾಂಬಿಕೆ ದರ್ಶನಕ್ಕೆ ದಿನಾಂಕ ನಿಗದಿಯಾಗಿತ್ತು. ಆದರೆ ಮುಂಬೈನಲ್ಲಿ ಭಾರೀ ಮಳೆ ಕಾರಣದಿಂದ ಪ್ರವಾಸ ಮುಂದೂಡಲಾಗಿತ್ತು. ಹಲವು ದೇವಸ್ಥಾನ ದರ್ಶನ ಮಾಡುತ್ತಿರುವ ಅನಂತ್ ಅಂಬಾನಿಗೆ ದೇವರ ಮೇಲೆ ಅಪಾರ ನಂಬಿಕೆ ಹಾಗೂ ಭಕ್ತಿ ಇದೆ. ಅನಂತ್ ಅಂಬಾನಿ ಸತತವಾಗಿ ದೇವಸ್ಥಾನಗಳಿಗೆ ಭೇಟಿ ನೀಡುತ್ತಿದ್ದಾರೆ. ಇತ್ತೀಚೆಗಷ್ಟೇ ಕೇರಳಕ್ಕೆ ತೆರಳಿ ಹಲವು ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದರು. ಇನ್ನು ತಿರುಪತಿಗೆ ಕುಟುಂಬ ಸಮೇತ ತೆರಳಿ ಪೂಜೆ ಸಲ್ಲಿಸಿದ್ದರು. ಇದೀಗ ಕೊಲ್ಲೂರು ಮೂಕಾಂಬಿಕೆ ದರ್ಶನ ಪಡೆದಿದ್ದಾರೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಧರ್ಮ ಎಂದರೆ ಪೂಜಾ ಪದ್ಧತಿಯಲ್ಲ, ಅದು ಜೀವನ ಪದ್ಧತಿ.ಜಗತ್ತಿನ ಎಲ್ಲ ಜನಗಳಿಗೆ ಮಾರ್ಗದರ್ಶನ ಮಾಡುವ ವಿಚಾರಗಳು ಭಾರತದಲ್ಲಿವೆ, ಅದುವೇ ಧರ್ಮ -ಪಿ.ಎಸ್.ಪ್ರಕಾಶ್

- ಪೂಜೆಯೇ ಧರ್ಮವಾಗಿದ್ದಲ್ಲಿ ಭಾರತದಲ್ಲಿ ರಾಮಾಯಣದ ಬದಲು ರಾವಣಾಯಣವನ್ನು ಓದಬೇಕಿತ್ತು, ಏಕೆಂದರೆ ರಾವಣ ಪರಮ ಭಕ್ತಿಯಿಂದ ಶಿವನ ಪೂಜೆಯನ್ನು ದಿನಾ ಮಾಡುತ್ತಿದ್ದ!

ದಿನ ಭವಿಷ್ಯ

ಮೇಷ
ವಿರಾಮ ಬಯಸಿದರೂ ಕೆಲಸದ ಒತ್ತಡ ಬಾಧಿಸುವುದು. ಆಪ್ತರ ಸಂಗಡ ವಾಗ್ವಾದಕ್ಕೆ ಇಳಿಯಬೇಡಿ. ನೀವು ಮೌನವಾಗಿ ಉಳಿಯಿರಿ.

ವೃಷಭ
ಗತದಿನಗಳ ಬಗ್ಗೆ ಅತಿಯಾಗಿ ಚಿಂತಿಸದಿರಿ. ಈಗ ಮಾಡಬೇಕಾದ ಕೆಲಸಕ್ಕೆ ಆದ್ಯತೆ ಕೊಡಿ. ಕೆಲ ವಿಷಯಗಳಿಗೆ ಅತಿರೇಕದ ಪ್ರತಿಕ್ರಿಯೆ ತೋರುತ್ತೀರಿ.

ಮಿಥುನ
ಗುಣಾತ್ಮಕ ಸಂಕೇತಗಳಿಂದಲೇ ಇಂದಿನ ದಿನ ಆರಂಭ. ನಿಮಗೆ ಪೂರಕ ಪರಿಸ್ಥಿತಿ. ಆರ್ಥಿಕ ಚಿಂತೆ ನಿವಾರಣೆ. ಆತ್ಮೀಯರ ಸಂಗಡ ಖುಷಿ ಪಡುವಿರಿ.

ಕಟಕ
ನಿಮ್ಮ ಜತೆಗೆ ಅತಿಯಾದ ಸಲುಗೆ ಸಾಧಿಸುವವರ ಕುರಿತು ಎಚ್ಚರವಿರಲಿ. ಮನೆಯಲ್ಲಿ ಸೌಹಾರ್ದ ವಾತಾವರಣ, ನೆಮ್ಮದಿ.

ಸಿಂಹ
ಕೆಲವರನ್ನು ಕುರುಡಾಗಿ ನಂಬದಿರಿ. ಅವರಿಂದಲೇ ಮೋಸ ಹೋಗುವಿರಿ. ಕೆಲಸದ ಒತ್ತಡದಿಂದಾಗಿ ವಿಶ್ರಾಂತಿಗೆ ಆಸ್ಪದ ಸಿಗಲಾರದು.

ಕನ್ಯಾ
ಯೋಜನೆ ಹಾಕಿ ಕೆಲಸ ನಿರ್ವಹಿಸಿ. ಇಲ್ಲವಾದರೆ ಗೊಂದಲ ಎದುರಿಸುವಿರಿ. ಆರೋಗ್ಯ ಸ್ಥಿರ. ಹಣದ ಚಿಂತೆಯೊಂದು ಪರಿಹಾರ.

ತುಲಾ
ಜಡತ್ವ ಬಿಟ್ಟು ಕ್ರಿಯಾಶೀಲರಾಗಿ. ನಿಮ್ಮ ಹವ್ಯಾಸ ಬಿಡಬೇಡಿ. ದೈಹಿಕ ಶ್ರಮದಿಂದ ಬಳಲುವಿರಿ. ಆಪ್ತರ ಜತೆ ಮಾತಿನ ಚಕಮಕಿ

ವೃಶ್ಚಿಕ
ಎಲ್ಲರೂ ನಿಮ್ಮಂತೆ ಯೋಚಿಸಬೇಕು ಎಂದು ಬಯಸುವುದು ತಪ್ಪು. ಇತರರ ಭಾವನೆ ಗೌರವಿಸಿ. ಮನೆಯಲ್ಲಿ ಹಿರಿಯರಿಗೆ ಅನಾರೋಗ್ಯ ಸಂಭವ.

ಧನು
ಕೌಟುಂಬಿಕ ವಿಷಯ ಮುಖ್ಯವಾಗುತ್ತದೆ. ಕಳೆದು ಹೋದುದಕ್ಕೆ ಕೊರಗುತ್ತಾ ಕೂರದಿರಿ. ನಗುನಗುತ್ತಾ ನಿಮ್ಮ ಹೊಣೆ ನಿಭಾಯಿಸಿ. ಆರೋಗ್ಯ ಕಾಯ್ದುಕೊಳ್ಳಿ.

ಮಕರ
ಕೌಟುಂಬಿಕ ಪರಿಸ್ಥಿತಿ ನೆಮ್ಮದಿ ತರಲಿದೆ. ಆತ್ಮೀಯರ ಒಡನಾಟದಲ್ಲಿ ಸಂತೋಷ ಕಾಣುವಿರಿ. ಹಣ ಗಳಿಕೆಗೆ ಮೊಟಕು ದಾರಿ ಹಿಡಿಯದಿರಿ.

ಕುಂಭ
ವ್ಯವಹಾರದ ಬಗ್ಗೆ ಹೆಚ್ಚು ಗಮನ ಕೊಡಿ. ನಿರ್ಲಕ್ಷ್ಯ ತೋರಿದರೆ ನಷ್ಟ ಉಂಟಾದೀತು. ಹೆತ್ತವರು ಮಕ್ಕಳ ಜತೆ ಮೆದುವಾಗಿ ವರ್ತಿಸಬೇಕು.

ಮೀನ
ವ್ಯವಹಾರದಲ್ಲಿ ಮಹತ್ವದ ಬದಲಾವಣೆ ತೋರುವ ಸಾಧ್ಯತೆಯಿದೆ. ಮಾನಸಿಕ ಒತ್ತಡ ನಿವಾರಣೆಗೆ ಧ್ಯಾನ ಸಹಕಾರಿಯಾದೀತು.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 8,2,7,47

ರಾಜ್ಯದೆಲ್ಲೆಡೆ ವರುಣಾರ್ಭಟ | ಜನಜೀವನ, ಸಂಚಾರಕ್ಕೆ ತೊಂದರೆ

ಐದು ದಿನ ಭಾರೀ ಮಳೆ

ಬೆಂಗಳೂರು: ಕರ್ನಾಟಕದಲ್ಲಿ ಮುಂದಿನ ಇಂದಿನಿಂದ ಅಂದರೆ ಜೂನ್ 15ರಿಂದ ಐದು ದಿನಗಳವರೆಗೆ ಕೆಲವೆಡೆ ವರುಣಾರ್ಭಟ ಮುಂದುವರಿಯಲಿದ್ದು, ಹಲವು ಜಿಲ್ಲೆಗಳಲ್ಲಿ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಭಾರಿ ಮಳೆಯಾಗುವ ಸಾಧ್ಯತೆಗಳಿವೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ದಕ್ಷಿಣ ಒಳನಾಡಿನಲ್ಲಿ ಮಳೆಯ ಅಬ್ಬರ ಜೋರಾಗಿರಲಿದ್ದು, ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ.

ರಾಜ್ಯದ ವಿವಿಧೆಡೆ ನಿರಂತರ ಮಳೆ: ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಮುಂಗಾರು ಮಳೆ ಆರಂಭವಾಗಿದ್ದು, ಭಾನುವಾರ ಬೆಳ್ಳಂಬೆಳಗ್ಗೆ ಆರಂಭವಾದ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಕಲಬುರಗಿ, ಬೀದರ್, ಕೊಪ್ಪಳ, ಯಾದಗಿರಿ, ರಾಯಚೂರು, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ, ಹಾವೇರಿ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮಳೆಯಾಗಿದೆ.

ರಸ್ತೆ ಸಂಚಾರ ಸ್ಥಗಿತ: ರಾಯಚೂರು ಜಿಲ್ಲೆಯಾದ್ಯಂತ ಬೆಳ್ಳಂಬೆಳಿಗ್ಗೆ ಆರಂಭವಾದ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಒಂದೇ ಮಳೆಗೆ ಹಳ್ಳಕೊಳ್ಳಗಳು ತುಂಬಿ ಹರಿಯುತ್ತಿದ್ದು, ಸರಣಿ ಅವಾಂತರಗಳು ಸೃಷ್ಟಿಯಾಗಿವೆ. ರಾಯಚೂರು ತಾಲೂಕಿನ ಇಡಪನೂರಿನಲ್ಲಿ ಹಳ್ಳದ ನೀರು ಕಿರು ಸೇತುವೆ ಮೇಲೆ ಹರಿದಿದ್ದರಿಂದ ಮೀರಾಪುರ ಹಾಗೂ ಯರಗೇರಾ ಮಾರ್ಗದ ರಸ್ತೆ ಸಂಚಾರ ಸ್ಥಗಿತಗೊಂಡಿದೆ.

ವೀಕೆಂಡ್ ಮೋಜು ಮಸ್ತಿಗೆ ಬ್ರೇಕ್: ಬೆಂಗಳೂರಿನ ವಿವಿಧೆಡೆ ಸುಮಾರು ಒಂದು ಗಂಟೆಗೂ ಹೆಚ್ಚು



ಅಧಿಕಾರಿಗಳ ನಿರ್ಲಕ್ಷ್ಯ, ಸಾರ್ವಜನಿಕರ ಆಕ್ರೋಶ

ರಾಯಚೂರು ಐಡಿಎಸ್ ಎಂಟಿ ಲೇಔಟ್‌ನಲ್ಲಿ ಅವೈಜ್ಞಾನಿಕ ಚರಂಡಿ ಕಾಮಗಾರಿಯಿಂದಾಗಿ ರಸ್ತೆಗಳು ಜಲಾವೃತಗೊಂಡು ವಾಹನ ಸವಾರರು ಪರದಾಡುವಂತಾಗಿದೆ. ಹಲವೆಡೆ ಚರಂಡಿ ಮಿಶ್ರಿತ ಮಳೆನೀರು ನುಗ್ಗಿದ್ದು, ನಿವಾಸಿಗಳು ನೀರು ಹೊರಹಾಕಲು ಹರಸಾಹಸ ಪಡುತ್ತಿದ್ದಾರೆ. ಪಾಲಿಕೆ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಾಲ ಸುರಿದ ಮಳೆಗೆ ವೀಕೆಂಡ್ ಮೋಜು ಮಸ್ತಿಗೆ ಪ್ಲ್ಯಾನ್ ಮಾಡಿದವರಿಗೆ ನಿರಾಶೆ ಮೂಡಿಸಿದೆ. ನಗರಾದ್ಯಂತ ಗುಡುಗು ಮಿಂಚು ಸಹಿತ ಧಾರಾಕಾರ ಮಳೆ ಸುರಿಯುತ್ತಿದ್ದು, ಜನರು ಮನೆಯಿಂದ ಕಾಲಿಡದಂತಹ ಸ್ಥಿತಿ ಇದೆ. ಪ್ರಮುಖ ರಸ್ತೆಗಳಲ್ಲಿ ಸಂಚಾರ ಅಸ್ತವ್ಯಸ್ಥಗೊಂಡಿತು.

ಹಲವೆಡೆ ಬಿರುಗಾಳಿ ಸಹಿತ ಭಾರೀ ಮಳೆಯಾಗಿದೆ. ಮಧ್ಯಾಹ್ನವಿದ್ದ ಜಿಟಿ ಜಿಟಿ ಮಳೆ, ಸಂಜೆ ಆಗುತ್ತಿದ್ದಂತೆ ಬಿರುಸು ಪಡೆದುಕೊಂಡಿದ್ದು ಮಹಾನಗರವನ್ನು ಮತ್ತಷ್ಟು ತಣ್ಣಗಾಗಿಸಿದೆ. ಆದರೆ, ಈ ದಿಢೀರ್ ಮಳೆಯಿಂದಾಗಿ ಕಚೇರಿ ಮುಗಿಸಿ ಮನೆಗೆ ಮರಳುತ್ತಿದ್ದ ಸಾರ್ವಜನಿಕರು ಹಾಗೂ ರಸ್ತೆ ಬದಿಯ ವ್ಯಾಪಾರಿಗಳು ತೀವ್ರ ತೊಂದರೆ ಅನುಭವಿಸುವಂತಾಯಿತು.

ಕೆಲವೆಡೆ ಟ್ರಾಫಿಕ್ ಜಾಮ್: ಧಾರಾಕಾರ ಮಳೆ ಹಿನ್ನೆಲೆ ನಗರದ ಪ್ರಮುಖ ರಸ್ತೆಗಳು ಕೆರೆಯಂತಾಗಿತ್ತು. ದಿಢೀರ್ ಮಳೆಗೆ ಸಿಲುಕಿದ ನೂರಾರು ಸಾರ್ವಜನಿಕರು ಮತ್ತು ದ್ವಿಚಕ್ರ ವಾಹನ ಸವಾರರು ಕೆ.ಆರ್. ಮಾರ್ಕೆಟ್ ಫ್ಲೈಓವರ್ ಕೆಳಗೆ ನಿಂತು ಆಶ್ರಯ ಪಡೆದರು. ಮಳೆಯಿಂದಾಗಿ ಕೆಲವೆಡೆ ಟ್ರಾಫಿಕ್ ಜಾಮ್ ಉಂಟಾಗಿತ್ತು.

ಮಂಗಳವಾರದಿಂದ ಮಳೆ ಕ್ಷೀಣಿಸಲಿದೆ. ಉತ್ತರ ಒಳನಾಡಿನಲ್ಲಿ ಪ್ರಸ್ತುತ ಒಣ ಹವೆ ಇದ್ದರೂ, ಮುಂದಿನ ದಿನಗಳಲ್ಲಿ ಕೆಲವು ಭಾಗಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಉತ್ತರ ಒಳನಾಡಲ್ಲಿ ಜೂನ್ 15 ರಿಂದ 20 ರವರೆಗೆ ಕೆಲವು ಕಡೆಗಳಲ್ಲಿ ಶೇ50 ಕಡೆ, ಹಗುರದಿಂದ ಸಾಧಾರಣ ಮಳೆಯಾಗಲಿದೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಕಲಬುರಗಿ, ಬೀದರ್, ಕೊಪ್ಪಳ, ಯಾದಗಿರಿ, ರಾಯಚೂರು, ಬೆಳಗಾವಿ, ಬಾಗಲಕೋಟೆ, ವಿಜಯಪುರ, ದಾರವಾಡ, ಗದಗ, ಹಾವೇರಿ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ಮೈಸೂರು, ಕೊಡಗು, ಹಾಸನಕ್ಕೆ ಮಂಗಳವಾರ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಕರ್ನಾಟಕ ಪೊಲೀಸರು ರಾಜಸ್ಥಾನ ಎಸಿಬಿ ಬಲೆಗೆ

ಬೆಂಗಳೂರು/ಜೈಪುರ: ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ರಾಜಸ್ಥಾನದ ಜೈಪುರಕ್ಕೆ ತೆರಳಿದ್ದ ಬೆಂಗಳೂರಿನ ಎಚ್ ಎಎಲ್ ಪೊಲೀಸ್ ಠಾಣೆಯ ಮಹಿಳಾ ಸಬ್ ಇನ್ಸ್‌ಪೆಕ್ಟರ್ ಹಾಗೂ ಇಬ್ಬರು ಹೆಡ್ ಕಾನ್ಸ್‌ಟೇಬಲ್‌ಗಳು ಭಾನುವಾರ ಜೈಪುರದ ಹೋಟೆಲೊಂದರಲ್ಲಿ 40,000 ರೂ. ಲಂಚ ಸ್ವೀಕರಿಸುತ್ತಿದ್ದಾಗ ರಾಜಸ್ಥಾನ ಎಸಿಬಿ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ಬಂಧಿತ ಆರೋಪಿಗಳನ್ನು ಎಚ್‌ಎಎಲ್ ಪೊಲೀಸ್ ಠಾಣೆಯ ಮಹಿಳಾ ಪಿಎಸ್‌ಐ ಅನಿತಾ ಕೆ., ಹೆಡ್ ಕಾನ್ಸ್‌ಟೇಬಲ್‌ಗಳಾದ ಉಳ್ಳವಪ್ಪ ತೇಗೂರ್ ಮತ್ತು ಯತೀಶ್ ಎಂದು ಗುರುತಿಸಲಾಗಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಜೈಪುರದಲ್ಲಿ ಲಂಚದ ಹಣ ಪಡೆಯುತ್ತಿದ್ದಾಗ ಕಾನ್ಸ್‌ಟೇಬಲ್ ಒಬ್ಬರು ಎಸಿಬಿ ಅಧಿಕಾರಿಗಳಿಗೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಎಚ್‌ಎಎಲ್ ಠಾಣೆಯಲ್ಲಿ ದಾಖಲಾಗಿದ್ದ ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ಈ ಮೂವರು ಸಿಬ್ಬಂದಿ ಅಲ್ಲಿಗೆ ತೆರಳಿದ್ದರು. ಸದ್ಯ ರಾಜಸ್ಥಾನ ಎಸಿಬಿ ಪೊಲೀಸರು ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಕೇಸ್ ಖುಲಾಸೆಗೊಳಿಸಲು 2 ಲಕ್ಷ ರೂ. ಬೇಡಿಕೆ!: ರಾಜಸ್ಥಾನ ಎಸಿಬಿ ಅಧಿಕಾರಿಗಳ ಪ್ರಕಾರ, ಜೈಪುರ ನಿವಾಸಿಯೊಬ್ಬರು ತಮ್ಮ ಮತ್ತು ತಮ್ಮ ಕುಟುಂಬದವರ ವಿರುದ್ಧ ಬೆಂಗಳೂರಿನ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳದ ದೂರು ದಾಖಲಾಗಿರುವ ಬಗ್ಗೆ ಮಾಹಿತಿ ನೀಡಿದ್ದರು.

ಈ ಪ್ರಕರಣದ ತನಿಖೆಗೆಂದು ಜೈಪುರಕ್ಕೆ ಬಂದಿದ್ದ ಬೆಂಗಳೂರಿನ ಮಹಿಳಾ ಪಿಎಸ್‌ಐ ನೇತೃತ್ವದ ಮೂವರ ತಂಡ, ಪ್ರಕರಣವನ್ನು ದುರ್ಬಲಗೊಳಿಸಲು ಹಾಗೂ ಕುಟುಂಬದವರ ಹೆಸರನ್ನು ಎಫ್‌ಐಆರ್‌ನಿಂದ ಕೈಬಿಡಲು 2 ಲಕ್ಷ ರೂಪಾಯಿ ಲಂಚದ ಬೇಡಿಕೆ ಇಟ್ಟಿತ್ತು.

ಲಂಚದ ಹಣದೊಂದಿಗೆ ಮರುದಿನ ಬೆಳಿಗ್ಗೆ ಜೈಪುರದ ಹೋಟೆಲ್‌ಗೆ ಬರುವಂತೆ ದೂರುದಾರರಿಗೆ ಪೊಲೀಸರು ಸೂಚಿಸಿದ್ದರು. ಇದರಿಂದ ಬೇಸತ್ತ ಸಂತ್ರಸ್ತ ಕುಟುಂಬದವರು ತಕ್ಷಣವೇ ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಿದ್ದರು. ದೂರಿನ ಆಧಾರದ ಮೇಲೆ ಜೈಪುರದ ದೂರುದಾರರಿಂದ ಮುಂಗಡವಾಗಿ 40,000 ರೂಪಾಯಿ ಲಂಚದ ಹಣವನ್ನು ಪಡೆಯುತ್ತಿದ್ದಾಗ ಹೆಡ್ ಕಾನ್ಸ್‌ಟೇಬಲ್‌ಗಳಾದ ಉಳ್ಳವಪ್ಪ ತೇಗೂರ್ ಅವರನ್ನು ಎಸಿಬಿ ಅಧಿಕಾರಿಗಳು ರೆಡ್ ಹ್ಯಾಂಡ್ ಬಂಧಿಸಿದ್ದಾರೆ. ಬಳಿಕ ನಡೆಸಿದ ತೀವ್ರ ತನಿಖೆಯಲ್ಲಿ ಮಹಿಳಾ ಪಿಎಸ್‌ಐ ಅನಿತಾ ಹಾಗೂ ಮತ್ತೊಬ್ಬ ಹೆಡ್ ಕಾನ್ಸ್‌ಟೇಬಲ್ ಯತೀಶ್ ಅವರ ಶಾಮೀಲಾತಿ ಸಾಬೀತಾದ ಹಿನ್ನೆಲೆಯಲ್ಲಿ ಅವರಿಬ್ಬರನ್ನೂ ವಶಕ್ಕೆ ಪಡೆಯಲಾಗಿದೆ.

ಬಂಧಿತ ಪೊಲೀಸರ ವಿರುದ್ಧ ರಾಜಸ್ಥಾನದಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ಮುಂದುವರಿದಿದೆ. ಲಂಚದ ಹಣಕ್ಕೆ ಕೈಯೊಡ್ಡಿ ಸಿಕ್ಕಿಬಿದ್ದ ಬೆಂಗಳೂರು ಪೊಲೀಸರ ನಡೆ ಇಲಾಖೆಗೆ ತಲೆನೋವಾಗಿದೆ.

ರಾಜ್ಯಕ್ಕೆ ಕೇಂದ್ರದಿಂದ ₹4 ಲಕ್ಷ ಕೋಟಿ ಹಂಚಿಕೆ

ಪುಟ ೧➡ 2014ರಿಂದ 2026ರ ನಡುವೆ 4 ಲಕ್ಷ ಕೋಟಿ ರೂ. ತೆರಿಗೆ ಕರ್ನಾಟಕಕ್ಕೆ ನೀಡಲಾಗಿದೆ. ಅದು 2014ಕ್ಕಿಂತ ಹಿಂದೆ ಯುಪಿಎ ಅವಧಿಯಲ್ಲಿ ನೀಡಿದ್ದಕ್ಕಿಂತ 5 ಪಟ್ಟು ಹೆಚ್ಚಾಗಿದೆ. ಅದೇ ರೀತಿ ಅನುದಾನ ಮತ್ತು ಸಹಾಯಧನ 2014ರಿಂದ 2026ರ ಮಧ್ಯೆ 2.71 ಲಕ್ಷ ಕೋಟಿ ರೂ.ಗಳಾದರೆ ಯುಪಿಎಯ 10 ವರ್ಷದ ಅವಧಿಯಲ್ಲಿ 60 ಸಾವಿರ ಕೋಟಿ ರೂ.ಗಳಾಗಿವೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಕರ್ನಾಟಕಕ್ಕೆ 63 ಸಾವಿರ ಕೋಟಿ ರೂ. ಆದಾಯ ಹಂಚಿಕೆಯಾಗಿದೆ ಎಂದು ನಿರ್ಮಲಾ ಸೀತಾರಾಮನ್ ಅಂಕಿ-ಅಂಶ ನೀಡಿದರು.

ಬಂಡವಾಳ ಆಸ್ತಿಗಳಲ್ಲಿ ಹೂಡಿಕೆ ಮಾಡಲು ರಾಜ್ಯಕ್ಕೆ 50 ವರ್ಷಗಳವರೆಗೆ 18 ಸಾವಿರ ಕೋಟಿ ರೂ. ಬಡ್ಡಿರಹಿತ ಸಾಲವನ್ನು ನೀಡಲಾಯಿತು. 8100 ಕಿ.ಮೀ. ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಲು ರಾಜ್ಯವು 63 ಸಾವಿರ ಕೋಟಿ ರೂ. ಕೇಂದ್ರ ನಿಧಿಯನ್ನು, ರೈಲ್ವೆ ಮೂಲಸೌಕರ್ಯಕ್ಕಾಗಿ 7700 ಕೋಟಿ ರೂ. ಮತ್ತು ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್ ಯೋಜನೆಗೆ 7 ಸಾವಿರ ಕೋಟಿ ರೂ. ಪಡೆದಿದೆ ಎಂದು ಮಾಹಿತಿ ನೀಡಿದರು.

ಕೊಪ್ಪಳ-ಗದಗ ಹಸಿರು ಇಂಧನ ಕೇಂದ್ರ

ನವೀಕರಿಸಬಹುದಾದ ಇಂಧನ ಯೋಜನೆಗಳನ್ನು ಕೈಗೊಳ್ಳಲು 1,354 ಕೋಟಿ ರೂ.ಗಳನ್ನು ನೀಡಲಾಗಿದೆ. ಮುಂದಿನ ವರ್ಷದ ಜೂನ್ ವೇಳೆಗೆ ಕೊಪ್ಪಳ ಮತ್ತು ಗದಗ ಹಸಿರು ಇಂಧನ ಕೇಂದ್ರಗಳಾಗಲಿವೆ. ಕರ್ನಾಟಕವು ಜನಧನ್, ಮುದ್ರಾ ಸಾಲಗಳು, ಆಯುಷ್ಮಾನ್, ಜಲ ಜೀವನ್ ಮಿಷನ್, ಉಜ್ವಲ, ಕಿಸಾನ್ ಸಮ್ಮಾನ್, ಜನೌಷಧಿ ಕೇಂದ್ರಗಳು ಮತ್ತು ನವೋದ್ಯಮಗಳಿಗೆ ನೀಡಲಾಗುವ ಪ್ರೋತ್ಸಾಹಕಗಳಿಂದ ಪ್ರಯೋಜನ ಪಡೆದಿದೆ ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಇರಾನ್ ಒಪ್ಪಂದಕ್ಕೆ ಸಹಿ: ರಾಷ್ಟ್ರಗಳ ಭಿನ್ನ ನಿಲುವು

ಪುಟ ೧➡ ಆದರೆ, ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮೈಲ್ ಬಘೈ, ಭಾನುವಾರ ಸಹಿ ಪ್ರಕ್ರಿಯೆ ನಡೆಯುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆದರೂ, ಮುಂದಿನ ದಿನಗಳಲ್ಲಿ ಒಪ್ಪಂದ ಅಂತಿಮಗೊಳ್ಳುವ ಸಾಧ್ಯತೆಯಿದೆ ಎಂದು ಅವರು ತಿಳಿಸಿದ್ದಾರೆ. ಈ ಪ್ರಸ್ತುತ ಒಪ್ಪಂದದಲ್ಲಿ ಪರಮಾಣು ವಿಷಯಗಳ ಬಗ್ಗೆ ಚರ್ಚಿಸಲಾಗಿಲ್ಲ ಎನ್ನಲಾಗಿದೆ.

ರಾಜತಾಂತ್ರಿಕ ಸಮಾಲೋಚನೆ: ಏಪ್ರಿಲ್ 7 ರಿಂದ ಕದನ ವಿರಾಮ ಜಾರಿಯಲ್ಲಿದೆ. ಸೋಮವಾರದಿಂದ ಆರಂಭವಾಗಲಿರುವ ಜಿ-7 ಶೃಂಗಸಭೆಯ ಸಂದರ್ಭದಲ್ಲಿ ಟ್ರಂಪ್, ಈಜಿಪ್ಟ್, ಕತಾರ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ನಾಯಕರನ್ನು ಭೇಟಿ ಮಾಡಲು ಯೋಜಿಸಿದ್ದಾರೆ. ಯುದ್ಧವನ್ನು ಕೊನೆಗೊಳಿಸುವುದು ಮತ್ತು ಹಾರ್ಮುಜ್ ಜಲಸಂಧಿಯಿಂದ ಮೈನ್‌ಗಳನ್ನು ತೆರವುಗೊಳಿಸುವ ಬಗ್ಗೆ ಈ ಮಾತುಕತೆಗಳಲ್ಲಿ ಚರ್ಚಿಸಲಾಗುವುದು. ಇದಕ್ಕೆ ಬ್ರಿಟನ್ ಮತ್ತು ಫ್ರಾನ್ಸ್ ಸಹಾಯ ನೀಡಲು ಮುಂದಾಗಿವೆ.

ಜಾಗತಿಕ ಕೊಡುಗೆದಾರ

ಪುಟ ೧➡ ಶನಿವಾರ ರಾತ್ರಿ ಪ್ರಧಾನಿ ಮೋದಿಯವರು ಇಲ್ಲಿಗೆ ಆಗಮಿಸಿದ್ದರು. ಭಾರತ್ ಇನ್ನೋವೇಟ್ಸ್ -2026 ಭಾರತ ಸರಕಾರವು ದೇಶದ ಮಹತ್ವದ ಟೆಕ್ ಸ್ಟಾರ್ಟ್‌ಅಪ್‌ಗಳು ಮತ್ತು ಸಂಶೋಧನಾ ಉದ್ಯಮಗಳನ್ನು ಜಾಗತಿಕ ಮಟ್ಟದಲ್ಲಿ ನಿಲ್ಲಿಸಲು ರೂಪಿಸಿರುವ ವಿಶೇಷ ಯೋಜನೆಯಾಗಿದೆ.

ಸುಧಾರಣಾ ಎಕ್ಸ್‌ಪ್ರೆಸ್ ನಿಲ್ಲದು

ಪುಟ ೧➡ ತಮ್ಮ ಸರಕಾರ ಉನ್ನತ ತಂತ್ರಜ್ಞಾನ, ರಕ್ಷಣೆ ಮತ್ತು ಆವಿಷ್ಕಾರಗಳಂತಹ ಪ್ರಮುಖ ಕ್ಷೇತ್ರಗಳಲ್ಲಿ ಬಹುದೊಡ್ಡ ಸುಧಾರಣೆಗಳನ್ನು ತಂದಿರುವುದನ್ನು ಬೊಟ್ಟು ಮಾಡಿ, ಭಾರತದ 'ಸುಧಾರಣಾ ಎಕ್ಸ್‌ಪ್ರೆಸ್' ಎಂದೂ ನಿಲ್ಲದೆ ನಿರಂತರ ಮುಂದುವರಿದು ವಿಶ್ವಕ್ಕೆ ಒಳಿತನ್ನುಂಟು ಮಾಡಲಿದೆ ಎಂದರು. ಭಾರತ-ಫ್ರಾನ್ಸ್‌ನದು ವಿಶೇಷ ಪಾಲುದಾರಿಕೆಯ ಬಾಂಧವ್ಯ. ಇದು ಸಂಪರ್ಕ, ದೃಢನಿಶ್ಚಯ, ನಾವೀನ್ಯತೆ, ಪ್ರೇರಣೆ ಮತ್ತು ದೃಷ್ಟಿಕೋನದ ಹಂಚಿಕೊಳ್ಳುವಿಕೆಯನ್ನು ಒಳಗೊಂಡಿರುವಂಥದ್ದು ಎಂದರು.

ಗೃಹಲಕ್ಷ್ಮಿ, ಗೃಹಜ್ಯೋತಿ ನಿಲ್ಲಲ್ಲ: ಡಿಕೆಶಿ

ಪುಟ ೧➡ ಗ್ಯಾರಂಟಿ ಯೋಜನೆಗಳ ಕುರಿತು ಮಾಧ್ಯಮ ಹೇಳಿಕೆ ನೀಡಿರುವ ಅವರು, ಎಲ್ಲ ಗ್ಯಾರಂಟಿ ಯೋಜನೆಗಳು ಶೇಕಡಾ ನೂರಕ್ಕೆ ನೂರರಷ್ಟು ಮುಂದುವರಿಯುತ್ತವೆ. ಯಾರೂ ಆತಂಕಪಡುವ ಅವಶ್ಯಕತೆ ಇಲ್ಲ. ಈ ಬಗ್ಗೆ ವಿರೋಧ ಪಕ್ಷಗಳು ಹಬ್ಬಿಸುತ್ತಿರುವ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು ಎಂದು ತಿಳಿಸಿದ್ದಾರೆ.

ಕೆಲವರು ಸತ್ತವರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಖಾತೆ ತೆರೆದು ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಹೀಗಾಗಿ ಗ್ಯಾರಂಟಿ ಯೋಜನೆ ಫಲಾನುಭವಿಗಳ ದೃಢೀಕರಣಕ್ಕಾಗಿ, ಅವರ ಹೆಸರು, ವಿಳಾಸ, ಅಕೌಂಟ್ ನಂಬರ್ ಖಚಿತಪಡಿಸಿಕೊಳ್ಳಲು ಮತ್ತೆ ಅರ್ಜಿ ಸಲ್ಲಿಸಲು ಹೇಳಲಾಗಿದೆಯೇ ಹೊರತು ಯೋಜನೆಗಳನ್ನು ನಿಲ್ಲಿಸಲು ಅಲ್ಲ ಎಂದು ಮುಖ್ಯಮಂತ್ರಿಗಳು ಮಾಧ್ಯಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಗ್ಯಾರಂಟಿಯಿಂದ ಆರ್ಥಿಕತೆಗೆ ಪೆಟ್ಟು

ಬೆಂಗಳೂರು: ಗ್ಯಾರಂಟಿಯಿಂದ ಆರ್ಥಿಕ ಸಂಕಷ್ಟಕ್ಕೆ ಪೆಟ್ಟು ಬಿದ್ದಿದೆ. ಒಂದೊಂದೇ ನೆಪಗಳನ್ನು ಒಡ್ಡಿ ಈಗ ಗ್ಯಾರಂಟಿ ಫಲಾನುಭವಿಗಳ ಸಂಖ್ಯೆಯನ್ನು ಲಕ್ಷ ಲಕ್ಷದಷ್ಟು ಇಳಿಸುವ ದುಸ್ಸಾಹಸಕ್ಕೆ ಕಾಂಗ್ರೆಸ್ ಸರ್ಕಾರ ಕೈ ಹಾಕಿದೆ ಎಂದು ಬಿಜೆಪಿ ಆರೋಪಿಸಿದೆ.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಯಾರು ಅರ್ಹರಿದ್ದಾರೋ ಅವರಿಗೆ ಕೊಡಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಮೂರು ವರ್ಷದ ಕೆಳಗೆ ಇವರದೇ ಸರ್ಕಾರ ಇತ್ತಲ್ಲವೇ? ಗ್ಯಾರಂಟಿ ಕೊಡುವಾಗ ಅರ್ಹತೆ, ಅನರ್ಹತೆಯನ್ನು ಯಾಕೆ ಯೋಚಿಸಿಲ್ಲ ಎಂದು ಪ್ರಶ್ನಿಸಿದರು.

ಗ್ಯಾರಂಟಿಯಿಂದ ಕ್ಷೇತ್ರದ ಅಭಿವೃದ್ಧಿ ಆಗುತ್ತಿಲ್ಲ ಎಂದು ಕಾಂಗ್ರೆಸ್ಸಿನ ಶಾಸಕ ದೇಶಪಾಂಡೆ ಹೇಳುತ್ತಾರೆ. ಗ್ಯಾರಂಟಿಯಿಂದ ಅಭಿವೃದ್ಧಿ ಆಗದೇ ಆತ್ಮಹತ್ಯೆ ಮಾಡಿಕೊಳ್ಳುವಂಥ ಸ್ಥಿತಿ ಇದೆ ಎಂದು ಕಾಂಗ್ರೆಸ್ ಶಾಸಕರೇ ಹೇಳಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಯರೆಡ್ಡಿ ಅವರೂ ಗ್ಯಾರಂಟಿಗಳಿಂದ ಸಂಕಷ್ಟ ಆಗಿದೆ ಎಂದು ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು. ಸತ್ಯ ಮರೆಮಾಚಿ ಲಕ್ಷ ಲಕ್ಷ ಅನರ್ಹ ಫಲಾನುಭವಿಗಳಿಗೆ ಚುನಾವಣೆ ವೇಳೆ ಗ್ಯಾರಂಟಿ ಕೊಟ್ಟರು ಆಗ ಹೇಳಿದ್ದು ಒಂದು; ಈಗ ಹೇಳುವುದು ಒಂದು. ಮೊದಲು ಅರ್ಹರಾದವರು ಚುನಾವಣೆ ಆದ ನಂತರ ಅನರ್ಹ ಎಂದು ಹೇಳುವುದು ಜನರಿಗೆ ಮಾಡಿದ ಅಪಮಾನ. ಇದು ಸರಿ ಅಲ್ಲ ಎಂದು ವಿವರಿಸಿದರು.

ಕಾಂಗ್ರೆಸ್ ಸರ್ಕಾರದಲ್ಲಿ ದುಡ್ಡಿಲ್ಲ: ಸದಾನಂದಗೌಡ

ಗದಗ: ಗೃಹಜ್ಯೋತಿ, ಗೃಹಲಕ್ಷ್ಮಿ ಯೋಜನೆ ಮರು ಅರ್ಜಿ ಸಲ್ಲಿಕೆ ನೋಡಿದ್ರೆ ಆಡಳಿತ ವೈಫಲ್ಯವಾದಾಗ ಕಾಂಗ್ರೆಸ್‌ನವರು ಇಂತಹ ಹೊಸ ಸ್ವರೂಪ ಕೊಡುತ್ತಾರೆ. ಅದು ಜನ ವಿರೋಧಿಯಾಗಲಿ, ಮತ್ತೊಂದಾಗಲಿ ಅದು ಕಾಂಗ್ರೆಸ್‌ನವರ ಚಟ ಎಂದು ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ನಗರದ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದಲ್ಲಿ ಈಗ ದುಡ್ಡಿಲ್ಲ. ಬೇಡವಾದಕ್ಕೆ ಖರ್ಚು ಮಾಡುತ್ತಾರೆ. ಇಂತಹ ಯೋಜನೆಗಳಿಗೆ ಖರ್ಚು ಮಾಡೋಕೆ ಅವರಲ್ಲಿ ದುಡ್ಡಿಲ್ಲ. ದಾರಿ ತಪ್ಪಿಸುವ ಕೆಲಸ ಮಾಡೋದು ಕಾಂಗ್ರೆಸ್‌ನವರ ಸಣ್ಣ ಪ್ರಯತ್ನ, ಇದು ಆಗಬಾರದು ಎಂದು ಹೇಳಿದರು.

ಬಿಡದಿ ಟೌನ್ ಶಿಪ್ ಜಟಾಪಟಿ: ರೈತರು ದೇಶದ ಬೆನ್ನೆಲುಬು. ಇತ್ತೀಚೆಗೆ ದೇವನಹಳ್ಳಿಯಲ್ಲಿ ಸಿದ್ದರಾಮಯ್ಯ ಅವರಿಗೆ ಇದೇ ರೀತಿ ಪರಿಸ್ಥಿತಿ ಎದುರಾಗಿತ್ತು. ರೈತರ ಒತ್ತಡಕ್ಕೆ ಮಣಿದು ಅದನ್ನೆಲ್ಲ ಹಿಂದಕ್ಕೆ ತೆಗೆದುಕೊಂಡರು. ಆದರೆ, ಸಿಎಂ ಡಿಕೆಶಿ ಅವರಿಗೆ ಇಡಿ ನೋಟಿಫಿಕೇಶನ್ ಸಂಬಂಧಗಳು ಸ್ವಲ್ಪ ಜಾಸ್ತಿ ಗೊತ್ತು. ಹಾಗಾಗಿ ಏನಾದ್ರೂ ಮಾಡಬಹುದು. ರಾಮನಗರ, ಬಿಡದಿ ಅವರ ಕಾರ್ಯಕ್ಷೇತ್ರಕ್ಕೊಳಪಡುತ್ತದೆ. ಹಾಗಾಗಿ ಇದರಲ್ಲಿ ಅವರ ಸ್ವಾರ್ಥ ಅಡಗಿದೆ ಅಂತ ಅನಿಸುತ್ತದೆ ಎಂದರು.

ಕಾರ್ಯಕರ್ತರ ಸೇವೆ ನೆನೆದು ಶರಣಪ್ರಕಾಶ ಪಾಟೀಲ ಭಾವುಕ

ಕಲಬುರಗಿ: ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ಸ್ವಕ್ಷೇತ್ರಕ್ಕೆ ಆಗಮಿಸಿದ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಕಾರ್ಯಕ್ರಮದ ವೇದಿಕೆಯಲ್ಲೇ ಭಾವುಕರಾಗಿ ಕಣ್ಣೀರಿಟ್ಟ ಘಟನೆ ಸೇಡಂ ಪಟ್ಟಣದಲ್ಲಿ ನಡೆದಿದೆ.

ಜಿಲ್ಲೆಯ ಸೇಡಂ ಪಟ್ಟಣದ ಶ್ರೀಕೊತ್ತಲ ಬಸವೇಶ್ವರ ದೇವಾಲಯದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿದ್ದ ವೇಳೆ ಅವರು ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಸೇವೆಯನ್ನು ಸ್ಮರಿಸಿ ಭಾವುಕರಾದರು. ಮೂರನೇ ಬಾರಿ ಸಚಿವ ಸ್ಥಾನ ದೊರೆತ ಹಿನ್ನೆಲೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪಕ್ಷದ ಬೆಳವಣಿಗೆ ಹಾಗೂ ತಮ್ಮ ರಾಜಕೀಯ ಪಯಣದಲ್ಲಿ ಸಾವಿರಾರು ಕಾರ್ಯಕರ್ತರ ನಿಸ್ವಾರ್ಥ ಸೇವೆ ಮಹತ್ತರ ಪಾತ್ರ ವಹಿಸಿದೆ. ಎಲ್ಲ ಕಾರ್ಯಕರ್ತರಿಗೂ ಹುದ್ದೆ ನೀಡುವುದು ಸಾಧ್ಯವಾಗದಿದ್ದರೂ, ಅವರ ತ್ಯಾಗ, ಶ್ರಮ ಮತ್ತು ನಿಷ್ಠೆ ಅಮೂಲ್ಯವಾಗಿದ್ದು, ಅದನ್ನು ಎಂದಿಗೂ ಮರೆಯುವುದಿಲ್ಲ ಎಂದು ತಿಳಿಸಿದರು.

ಸಚಿವರ ಭಾವನಾತ್ಮಕ ಮಾತುಗಳಿಂದ ಸಮಾರಂಭದಲ್ಲಿ ಉಪಸ್ಥಿತರಿದ್ದ ಕಾರ್ಯಕರ್ತರ ಕಣ್ಣಲ್ಲೂ ನೀರು ತರಿಸಿತು. ಕಾರ್ಯಕರ್ತರ ಸೇವೆಗೆ ತಾವು ಸದಾ ಬದ್ಧರಾಗಿದ್ದು, ಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಭರವಸೆ ನೀಡಿದ ಅವರು, ಗ್ರಾಮಗಳ ಸಮಸ್ಯೆಗಳು ಹಾಗೂ ಅಭಿವೃದ್ಧಿ ಅಗತ್ಯಗಳನ್ನು ಸರ್ಕಾರದ ಗಮನಕ್ಕೆ ತರಲು ಕಾರ್ಯಕರ್ತರು ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಸಮಾಜ ಸಂಘಟನೆ ಗುರಿ: ಭಾಗವತ್

ಪುಟ ೧➡ ಸಮಾಜದೊಳಗಿನ ಒಡಕಿನಿಂದಾಗಿ ಇಂತಹ ಸವಾಲುಗಳು ದೇಶಕ್ಕೆ ಎದುರಾಗುತ್ತಿದೆ. ಇಂತಹ ಸವಾಲುಗಳನ್ನು ಒಗ್ಗಟ್ಟಿನ, ಸಂಘಟಿತ ಮತ್ತು ಅನುಶಾಸನ ಬದ್ಧ ಸಮಾಜದಿಂದ ಮಾತ್ರವೇ ಎದುರಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂಬುದನ್ನು ಆರೆಸ್ಸೆಸ್ ಸಂಸ್ಥಾಪಕ ಡಾ.ಕೇಶವ ಬಲಿರಾಮ್ ಹೆಡಗೇವಾರ್ ಅವರು ಸುದೀರ್ಘ ಚಿಂತನೆ, ಸಮಾಲೋಚನೆ, ಅಧ್ಯಯನಗಳಿಂದ ಕಂಡುಕೊಂಡಿದ್ದರು ಎಂದು ಅವರು ನೆನಪಿಸಿದರು.

ಸಮಾಜ ಒಗ್ಗಟ್ಟಿನಿಂದ ಸಂಘಟಿತವಾಗಿರಬೇಕು. ಇದರಿಂದ ಸಮಾಜ ಸಶಕ್ತವಾಗುತ್ತದೆ. ಇದರಿಂದ ಜನರು ಎಲ್ಲ ವ್ಯತ್ಯಾಸಗಳ ಹೊರತಾಗಿಯೂ ಪರಸ್ಪರ ಒಟ್ಟಾಗಿ ತಮ್ಮ ಶ್ರೇಯಸ್ಸನ್ನು ಸಾಧಿಸಲು ಸಾಧ್ಯ. ಭಾರತದ ನಾಗರಿಕತೆ ಮತ್ತು ಸಾಂಸ್ಕೃತಿಕ ಅಸ್ಮಿತೆಯು ಈ ರಾಷ್ಟ್ರೀಯ ಏಕತೆಯನ್ನೇ ಆಧರಿಸಿದೆ ಎಂಬ ನಂಬಿಕೆಯಿಂದಲೇ ಆರೆಸ್ಸೆಸ್ ಸ್ಥಾಪನೆಯಾಗಿದೆ. ಸಮಾಜ ಕಟ್ಟುವುದು ನಮ್ಮ ಕೆಲಸ. ಒಂದು ಬಾರಿ ಸಮಾಜ ಸಂಘಟಿತವಾಗಿ ಮತ್ತು ಜಾಗೃತವಾಗಿ ಎದ್ದು ನಿಂತರೆ ಸಹಜವಾಗಿಯೇ ರಾಷ್ಟ್ರಕ್ಕೆ ಎದುರಾಗಿರುವ ಎಲ್ಲ ಸವಾಲುಗಳಿಗೆ ಸಹಜವಾಗಿಯೇ ಪರಿಹಾರ ಲಭಿಸುತ್ತದೆ ಎಂದು ಅವರು ನುಡಿದರು. ನಾವೆಲ್ಲರೂ ಒಂದು ಸಮಾನ ನಾಗರಿಕ ನೀತಿ ತತ್ತ್ವವೊಂದರ ಮೂಲಕ ಜೋಡಿಸಲ್ಪಟ್ಟಿದ್ದೇವೆ. ಈ ಸಾಂಸ್ಕೃತಿಕ ಏಕತೆಯೇ ರಾಷ್ಟ್ರಜೀವನವಾಗಿದೆ. ಸಂಘದ ಹಿಂದುತ್ವ ಯಾವುದೇ ಮತೀಯ ಸಮುದಾಯವನ್ನು ವಿರೋಧಿಸಿರುವ ತತ್ವವಲ್ಲ. ಹಿಂದು ವರ್ಸಸ್ ಮುಸ್ಲಿಂ ಅಥವಾ ಕ್ರಿಶ್ಚಿಯನ್ ಕೂಡ ಅಲ್ಲ. ಬದಲಿಗೆ ವಸುಧೈವ ಕುಟುಂಬಕಮ್ ಪರಿಕಲ್ಪನೆಯನ್ನು ಆಧರಿಸಿದ್ದು, ಎಲ್ಲ ವೈವಿಧ್ಯತೆಗಳ ಹೊರತಾಗಿಯೂ ಸೌಹಾರ್ದ, ಸಾಮರಸ್ಯದ ಸಹಬಾಳ್ವೆ ಸಾಧ್ಯ ಎಂಬುದು ಸಂಘದ ನಂಬಿಕೆ ಎಂದರು.

ಈ ಹಿನ್ನೆಲೆಯಲ್ಲೇ ಸಂಘ ಚಾರಿತ್ರ್ಯ ನಿರ್ಮಾಣವನ್ನು ಪ್ರಧಾನ ಕಾರ್ಯವನ್ನಾಗಿರಿಸಿಕೊಂಡಿದೆ. ರಾಷ್ಟ್ರೀಯ ಸೇವೆಗೆ ಬದ್ಧವಾದ ವ್ಯಕ್ತಿಗಳನ್ನು ಬೆಳೆಸುವುದು ಸಂಘದ ಕಾರ್ಯವಾಗಿದೆ. ಇದಕ್ಕಾಗಿಯೇ ಸಂಘ ಆರಂಭದಲ್ಲಿ ಪ್ರಾಮಾಣಿಕ, ನಿಸ್ವಾರ್ಥ, ಅನುಶಾಸನಬದ್ಧ ಹಾಗೂ ಸಮಾಜಕ್ಕೆ ಸಮರ್ಪಿತ ವ್ಯಕ್ತಿಗಳ ನಿರ್ಮಾಣಕ್ಕೆ ಆದ್ಯತೆ ನೀಡಿದ್ದು. ಇದರ ಫಲವಾಗಿಯೇ ಇಂದು ದೇಶದಲ್ಲಿ ಸಂಘಪ್ರೇರಿತವಾದ 1.30 ಲಕ್ಷಕ್ಕೂ ಅಧಿಕ ಸೇವಾ ಯೋಜನೆಗಳು ಸಮಾಜದ ಎಲ್ಲ ಕ್ಷೇತ್ರಗಳನ್ನು ಒಳಗೊಂಡು ನಡೆಯುತ್ತಿದ್ದು, ಜನರ ಬದುಕನ್ನು ಎತ್ತರಿಸುವ ಕೆಲಸ ನಡೆಯುತ್ತಿದೆ ಎಂದು ಅವರು ವಿವರಿಸಿದರು.

ವ್ಯಕ್ತಿಗಳನ್ನು ರಾಷ್ಟ್ರ ಸೇವೆಗೆ ಬದ್ಧವಾಗಿರುವಂತೆ ಬೆಳೆಸುವುದು ಸಂಘದ ಕಾರ್ಯವೇ ವಿನಾ ಅವರ ಸಾಧನೆಗಳಿಗೆ ಮನ್ನಣೆ ಪಡೆಯುವುದಲ್ಲ. ಸ್ವಯಂಸೇವಕರು ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾರೆ. ಅವರು ಏನು ಸಾಧನೆಗೈಯ್ಯುತ್ತಿದ್ದಾರೆಯೋ ಅದು ಅವರದೇ ಸಾಧನೆ. ಅದರ ಕೀರ್ತಿ ಸಂಘಕ್ಕೆ ಬೇಕಾಗಿಲ್ಲ ಎಂದ ಅವರು, ಸ್ವಯಂಸೇವಕ ಪ್ರಧಾನಿ ನರೇಂದ್ರ ಮೋದಿಯವರ ಸಾಧನೆಯ ನಿದರ್ಶನವನ್ನು ಉಲ್ಲೇಖಿಸಿದರು.

ಭಾರತದ ಭವಿಷ್ಯವು ಕೇವಲ ಸರಕಾರಗಳ ಮೇಲೆ ಅವಲಂಬಿತವಾಗಿಲ್ಲ. ಬದಲಿಗೆ ಸಾಮಾನ್ಯ ನಾಗರಿಕರ ಚಾರಿತ್ರ್ಯ ಮತ್ತು ರಾಷ್ಟ್ರನಿರ್ಮಾಣದಲ್ಲಿ ಅವರ ಸಹಭಾಗಿತ್ವ ವನ್ನು ಅವಲಂಬಿಸಿದೆ. ಸಮಾಜ ಅಭಿವೃದ್ಧಿಯಾದಾಗ ರಾಷ್ಟ್ರವೂ ಅಭಿವೃದ್ಧಿ ಹೊಂದುತ್ತದೆ. ರಾಷ್ಟ್ರೀಯ ಪುನರುತ್ಥಾನದ ಹೊಣೆ ಪ್ರತಿ ನಾಗರಿಕನದಾಗಿದೆ. ಒಬ್ಬ ವ್ಯಕ್ತಿ ವೈಯಕ್ತಿಕ ನೆಲೆಯಲ್ಲಿ ಇನ್ನೊಂದು ನಂಬಿಕೆಯನ್ನು ಆಯ್ಕೆ ಮಾಡಿಕೊಂಡರೆ ಆರೆಸ್ಸೆಸ್ ಆಕ್ಷೇಪಿಸದು. ಆದರೆ ವಂಚನೆ, ಪ್ರಲೋಭನೆ, ಆಮಿಷ, ನಂಬಿಕೆ, ಪರಂಪರೆಗಳ ಅವಹೇಳನ, ಬಲವಂತದ ನೆಲೆಯಲ್ಲಿ ಮತಾಂತರ ಚಟುವಟಿಕೆಗಳು ನಡೆಯುತ್ತಿರುವುದು ಕಳವಳದ ಅಂಶವಾಗಿದೆ. ಭಾರತದಲ್ಲಿ ವಾಸಿಸುವ ಯಹೂದಿ ಸಮುದಾಯಗಳ ಐತಿಹಾಸಿಕ ಅನುಭವವನ್ನು ಬೊಟ್ಟು ಮಾಡಿದ ಅವರು, ಮುಸ್ಲಿಮರು, ಹಿಂದುಗಳು ಶತಮಾನಗಳಿಂದ ಇಲ್ಲಿ ಒಟ್ಟಾಗಿ ವಾಸಿಸುತ್ತಿದ್ದಾರೆ ಎಂದರು.

ಭಕ್ತಿ ಮೂಲಕ ಯುವಜನರನ್ನು ಸೆಳೆಯುತ್ತಿದೆ ಇಸ್ಕಾನ್: ಸ್ವಾಮೀಜಿ

ಬೆಂಗಳೂರು: ಇಸ್ಕಾನ್ ಸಂಸ್ಥೆಯು ಭಕ್ತಿಯ ಮೂಲಕ ಯುವಜನರನ್ನು ಸೆಳೆಯುತ್ತಿದೆ. ಆ ಮೂಲಕ ಯುವಕರು ಮೋಜು-ಮಸ್ತಿ, ವ್ಯಸನಗಳಿಗೆ ದಾಸರಾಗುವುದನ್ನು ತಡೆಯುತ್ತಿದೆ ಎಂದು ಉಡುಪಿ ಅದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ರಾಜಾಜಿನಗರದ ಇಸ್ಕಾನ್ ವತಿಯಿಂದ ಭಾನುವಾರ ಆಯೋಜಿಸಿದ್ದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ವಿರಚಿತ ಇಸ್ಕಾನ್ ಸಂಸ್ಥಾಪಕ ಶ್ರೀಲ ಪ್ರಭುಪಾದರ ಸಮಗ್ರ ಜೀವನ ಚರಿತ್ರೆಯನ್ನು ಒಳಗೊಂಡ ಶ್ರೀಲ ಪ್ರಭುಪಾದ ಚರಿತಾಮೃತಮ್ ಕನ್ನಡ ಮಹಾಕಾವ್ಯ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಭಕ್ತಿಯ ಮೂಲಕ ಅಸಂಖ್ಯ ಯುವಜನರನ್ನು ಇಸ್ಕಾನ್ ಸೆಳೆಯುತ್ತಿದೆ. ಅವರ ಸಾಧನೆಗಳಿಗೆ ಇಸ್ಕಾನ್ ಸ್ಫೂರ್ತಿಯಾಗುತ್ತಿದೆ. ಯುವಜನರು ಮೋಜಿ-ಮಸ್ತಿ ಮಾಡುತ್ತಾ ವ್ಯಸನಗಳಿಗೆ ದಾಸರಾಗದಂತೆ ತಡೆಯುತ್ತಿದೆ. ಆ ಮೂಲಕ ಸದೃಢ ಸಮಾಜ ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡುತ್ತಿದೆ. ಪ್ರತಿಯೊಬ್ಬರಿಗೂ ದೇವರು ವಿಶೇಷ ಶಕ್ತಿ ನೀಡಿದ್ದು ಅದನ್ನು ಬಳಸಿಕೊಂಡು ಸಾಧನೆ ಮಾಡಬೇಕು ಎಂದು ಕರೆ ನೀಡಿದರು. ಶ್ರೀಲ ಪ್ರಭುಪಾದರ ಅಸಾಧಾರಣ ಸಾಧನೆ ಇಂದಿಗೂ ಜನಮಾನಸದಲ್ಲಿ ಪ್ರೇರಣೆಯನ್ನು ಹುರಿದುಂಬಿಸುವ ಶಕ್ತಿಯಾಗಿದೆ. ಇಸ್ಕಾನ್ ಬೆಂಗಳೂರು ಸಂಸ್ಥೆಯು ಅವರ ಹಾದಿಯನ್ನೇ ಅನುಸರಿಸಿ ಹರಿನಾಮ ಸಂಕೀರ್ತನೆ, ಪುಸ್ತಕ ವಿತರಣೆ ಮತ್ತು ಅನ್ನದಾನದಂತಹ ಕಾರ್ಯಕ್ರಮಗಳ ಮೂಲಕ ವಿಶ್ವಮಟ್ಟದಲ್ಲಿ ಗಮನ ಸೆಳೆದಿದೆ. ಮುಂದಿನ ದಿನಗಳಲ್ಲಿ ಇಂತಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತಷ್ಟು ವಿಸ್ತಾರಗೊಳ್ಳಲಿ ಎಂದು ಶುಭ ಹಾರೈಸಿದರು.

ಇಸ್ಕಾನ್ ಬೆಂಗಳೂರು ಸಂಸ್ಥೆಯ ಅಧ್ಯಕ್ಷ ಮಧು ಪಂಡಿತದಾಸ, ಖ್ಯಾತ ಶಿಕ್ಷಣತಜ್ಞ ಡಾ.ಗುರುರಾಜ ಕರ್ಜಗಿ, ಲೇಖಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಮತ್ತಿತರರು ಉಪಸ್ಥಿತರಿದ್ದರು.

ಸ್ವಚ್ಛ ಭಾರತ



ನಗರದ ಮೈಸೂರು ಬ್ಯಾಂಕ್ ವೃತ್ತದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಭಾನುವಾರ ಬಿಜೆಪಿ ವತಿಯಿಂದ ಸ್ವಚ್ಛ ಭಾರತ ಕಾರ್ಯಕ್ರಮ ನಡೆಸಲಾಯಿತು. ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಪಿ.ಸಿ. ಮೋಹನ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ಮುಖಂಡರು, ಕಾರ್ಯಕರ್ತರು ಸ್ವಚ್ಛತಾ ಕಾರ್ಯದಲ್ಲಿ ಇದ್ದರು.

ನಾನು, ಶಿವಕುಮಾರ್ ಒರಿಜಿನಲ್ ಜೋಡೆತ್ತುಗಳು: ಡಾ.ಪರಮೇಶ್ವರ್

ಕೊರಟಗೆರೆ: ನಾನು ಮತ್ತು ಡಿಕೆ ಶಿವಕುಮಾರ್ ಮೂಲ ಕಾಂಗ್ರೆಸ್‌ನ ಒರಿಜಿನಲ್ ಜೋಡೆತ್ತುಗಳು ಅವರು ಸಿಎಂ ನಾನು ಡಿಸಿಎಂ ನಾವು ರಾಜ್ಯದಲ್ಲಿ ಬದಲಾವಣೆ ಮಾಡುತ್ತೇವೆ. ಪಕ್ಷ ಮತ್ತು ರಾಜ್ಯ ಹಿತವನ್ನು ನಾವು ಎಂದೂ ಮರೆಯುವುದಿಲ್ಲ ಎಂದು ಡಿಸಿಎಂ ಡಾ.ಜಿ ಪರಮೇಶ್ವರ್ ತಿಳಿಸಿದರು. ಕೊರಟಗೆರೆ ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ಭಾನುವಾರ ಕಾಂಗ್ರೆಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ ಅಭಿನಂದನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಸಿಎಂ ಓರ್ವ ಸಾಮಾನ್ಯ ಕಾರ್ಯಕರ್ತ, ಅದೇ ರೀತಿ ಬಿ.ಕೆ ಹರಿಪ್ರಸಾದ್ ಮತ್ತು ನಾನೂ ಸಹ ಸಾಮಾನ್ಯ ಕಾರ್ಯಕರ್ತರೇ ನಾವು ಕಟ್ಟಾ ಕಾಂಗ್ರೆಸಿಗರು ನಮ್ಮನ್ನು ನಮ್ಮ ಪಕ್ಷ ಗುರುತಿಸಿ ಮೂವರಿಗೂ ಗುರುತ್ತರ ಜವಾಬ್ದಾರಿ ನೀಡಿದೆ. ನಮ್ಮದು ಮುಂದುರಿದ ಸರ್ಕಾರ ನಿರ್ಗಮಿತ ಸಿಎಂ ಸಿದ್ದರಾಮಯ್ಯ,



3 ವರ್ಷ ಉತ್ತಮ ಆಡಳಿತವನ್ನು ನೀಡಿ ಕಾಂಗ್ರೆಸ್ ಸಿದ್ದಾಂತಕ್ಕೆ, ಹೈ ಕಮಾಂಡ್ ತೀರ್ಮಾನಕ್ಕೆ ರಾಜಿನಾಮೆ ನೀಡಿದ್ದಾರೆ. ಅವರನ್ನು ಗೌರವಿಸುತ್ತೇನೆ.

ಈ ಹಿಂದೆ ಸರ್ಕಾರದ ಎಲ್ಲಾ ಹಳೆ ಯೋಜನೆಗಳನ್ನು ಮುಂದುವರಿಸುತ್ತಾ ಹಲವು ಹೊಸ ಜನಪರ ಯೋಜನೆಗಳನ್ನು ರೂಪಿಸುತ್ತೇವೆ ಎಂದರು. ನಾನು ಮತ್ತು ಸಿಎಂ ಇಬ್ಬರೂ ಸೇರಿಯೇ ಎಲ್ಲಾ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ ಜೋಡೆತ್ತುಗಳಾಗಿ ನಾವು ರಾಜ್ಯವನ್ನು ಮುನ್ನಡೆಸುತ್ತೇವೆ. ಶಿವಕುಮಾರ್ ಅವರಿಗೂ ಅಪಾರ ಅನುಭವಿದೆ. ಈಗಾಗಲೇ ಅಧಿಕಾರಿಗಳಿಗೆ ಶಿಸ್ತಿನ ಪಾಠವನ್ನು ತಿಳಿಸಿದ್ದಾರೆ. ಸರ್ಕಾರಿ ನೌಕರರಾಗಿ ಜನಪರ ಕೆಲಸವನ್ನು ಮಾಡುವಂತೆ ತಾಕೀತು ಮಾಡಿದ್ದಾರೆ. ಜನರ ಸಂಪರ್ಕಕ್ಕೆ ಬರದ ಅಧಿಕಾರಿಗಳಿಗೆ ಗೇಟ್ ಪಾಸ್ ನೀಡುವ ಎಚ್ಚರಿಗೆ ನೀಡಿದ್ದು ಆಡಳಿತದಲ್ಲಿ ಇದೊಂದು ದೊಡ್ಡ ಸಂಚಲವನ್ನು ಸೃಷ್ಟಿಸಲಿದೆ ಎಂದು ಹೇಳಿದರು.

ಕಿರುಸುದ್ದಿ

ಕಲುಷಿತ ಆಹಾರ: 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥ

ಬೆಳಗಾವಿ: ಬೆಳಗಾವಿಯ ಮಚ್ಚೆ ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ-6ರಲ್ಲಿ ಕಲುಷಿತ ಆಹಾರ ಸೇವಿಸಿದ ಪರಿಣಾಮ 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಘಟನೆ ಬೆಳಕಿಗೆ ಬಂದಿದೆ. ಘಟನೆಯ ಬಳಿಕ ವಾರ್ಡನ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡದ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ವಿದ್ಯಾರ್ಥಿಗಳು ಶನಿವಾರ ತಡರಾತ್ರಿ ವಸತಿ ನಿಲಯದ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿದರು. ಶನಿವಾರ ರಾತ್ರಿ ಹಾಸ್ಟೆಲ್‌ನಲ್ಲಿ ನೀಡಲಾದ ಆಹಾರ ಸೇವಿಸಿದ ಕೆಲವೇ ಸಮಯದಲ್ಲಿ ಸುಮಾರು 30ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತೀವ್ರ ಹೊಟ್ಟೆನೋವು, ವಾಂತಿ ಹಾಗೂ ಅಸ್ವಸ್ಥತೆ ಕಾಣಿಸಿಕೊಂಡಿದೆ. ವಿದ್ಯಾರ್ಥಿಗಳು ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆರಳಿ ವೈದ್ಯಕೀಯ ನೆರವು ಪಡೆದಿದ್ದಾರೆ. ಆದರೆ, ಇಷ್ಟೊಂದು ಗಂಭೀರ ಘಟನೆ ನಡೆದಿದ್ದರೂ ಹಾಸ್ಟೆಲ್ ವಾರ್ಡನ್ ಅಥವಾ ಸಮಾಜ ಕಲ್ಯಾಣ ಇಲಾಖೆಯ ಯಾವುದೇ ಹಿರಿಯ ಅಧಿಕಾರಿಗಳು ವಿದ್ಯಾರ್ಥಿಗಳ ಆರೋಗ್ಯ ವಿಚಾರಿಸಲು ಸ್ಥಳಕ್ಕೆ ಆಗಮಿಸಿಲ್ಲ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಉಡಾಫೆಯ ಧೋರಣೆಯಿಂದ ಆಕ್ರೋಶಗೊಂಡ ವಿದ್ಯಾರ್ಥಿಗಳು ಹಾಸ್ಟೆಲ್ ಆವರಣದಲ್ಲೇ ಧರಣಿ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಲೈಂಗಿಕ ಕಿರುಕುಳ: ವ್ಯಕ್ತಿ ಕೊಲೆ

ಬಳ್ಳಾರಿ: ಲೈಂಗಿಕ ಕಿರುಕುಳ ಆರೋಪಕ್ಕೆ ಸಂಬಂಧಿಸಿ ವ್ಯಕ್ತಿಯೊಬ್ಬನನ್ನು ಕೊಲೆ ಮಾಡಿದ ಘಟನೆ ಸಮೀಪದ ಮೊಕ ಗ್ರಾಮದ ಕಾಲುವೆ ಬಳಿ ನಡೆದಿದೆ. ನೆರೆಯ ಆಂಧ್ರಪ್ರದೇಶದ ಬಲಗುಡ್ಡ ಗ್ರಾಮದ ಬಸವನಗೌಡ ಪಾಟೀಲ್(27) ಕೊಲೆಯಾದ ಯುವಕ. ನಗರದ ಖಾಸಗಿ ಲ್ಯಾಬ್‌ನಲ್ಲಿ ಬಸವನಗೌಡ ಪಾಟೀಲ್ ಕೆಲಸ ನಿರ್ವಹಿಸುತ್ತಿದ್ದ, ತಾಲೂಕಿನ ಎಂ.ಗೋನಾಳ ಗ್ರಾಮದ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದ. ಬೇಸತ್ತ ಮಹಿಳೆ ತಮ್ಮ ಸಹೋದರ, ಸಂಬಂಧಿಕರಿಗೆ ಮಾಹಿತಿ ನೀಡಿ ಕೊಲೆ ಮಾಡಿಸಿದ್ದಾಳೆ ಎನ್ನುವ ಆರೋಪಗಳು ಕೇಳಿ ಬಂದಿವೆ. ಈ ಕುರಿತು ಪ್ರಕರಣ ದಾಖಲಿಸಿಕೊಂಡ ಮೊಕ ಪೊಲೀಸ್ ಠಾಣೆ ಅಧಿಕಾರಿಗಳು ತನಿಖೆ ನಡೆಸಿದ್ದು, ವೈ.ದೊಡ್ಡ ಬಸವನಗೌಡ, ಶ್ವೇತಾ, ವಿಜಯ್ ಎನ್ನುವ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ.

ಮಗನನ್ನೇ ಕದ್ದೊಯ್ದ ತಂದೆ: ತಾಯಿಯಿಂದ ದೂರು

ಮಡಿಕೇರಿ: ತಂದೆಯೇ ತನ್ನ ಮಗುವನ್ನು ಅಪಹರಿಸಿರುವ ಆರೋಪ ಕೇಳಿ ಬಂದಿದೆ. ಮೂರ್ನಾಡಿನಲ್ಲಿ ಜೂ.10ರಂದು ಈ ಘಟನೆ ನಡೆದಿದ್ದು, ಜಗಳವಾಡಿಕೊಂಡು ಗಂಡನ ಮನೆ ಬಿಟ್ಟು ತಾಯಿ ಮನೆಯಲ್ಲಿದ್ದ ಭವ್ಯಾ ಎಂಬವರ ಐದು ವರ್ಷದ ಮಗುವನ್ನು ಆಕೆಯ ಗಂಡ ತಿಮ್ಮಯ್ಯ ಕಾರಿನಲ್ಲಿ ಅಪಹರಿಸಿರುವುದಾಗಿ ಹೇಳಲಾಗಿದೆ. ಈ ಸಂಬಂಧ ಭವ್ಯಾ ಮೂರ್ನಾಡು ಉಪ ಠಾಣೆಗೆ ದೂರು ನೀಡಿದ್ದಾರೆ. ಮಡಿಕೇರಿ ತಾಲೂಕಿನ ಕಟ್ಟೆಮಾಡು ಗ್ರಾಮದ ತಿಮ್ಮಯ್ಯ ಎಂಬವರೊಂದಿಗೆ 6 ವರ್ಷಗಳ ಹಿಂದೆ ಕಾಂತೂರಿನ ಭವ್ಯಾ ಅವರ ವಿವಾಹವಾಗಿತ್ತು. ಗಂಡು ಮಗುವೂ ಜನಿಸಿತ್ತು. ಅದಾದ ಬಳಿಕ ಕ್ರಮೇಣ ಇವರ ಸಂಸಾರದಲ್ಲಿ ಬಿರುಕು ಮೂಡಿದ್ದು, ಯಾವಾಗಲೂ ಮದ್ಯಪಾನ ಮಾಡಿ ಮನೆಯಲ್ಲೇ ಇರುತ್ತಿದ್ದ ತಿಮ್ಮಯ್ಯನಿಗೆ ತಾನು ದುಡಿದು ತಂದ ಸಂಬಳವನ್ನೆಲ್ಲಾ ನೀಡಬೇಕಾಗಿತ್ತು. ಅಲ್ಲದೆ, ಮಗುವಿನ ಬಗ್ಗೆಯೂ ಆತ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಹಲ್ಲೆ ಮಾಡುತ್ತಿದ್ದ ಮತ್ತು ಮಗುವಿಗೂ ಜೀವ ಬೆದರಿಕೆ ಹಾಕುತ್ತಿದ್ದ ಎಂದು ಭವ್ಯಾ ಅವರ ಆರೋಪವಾಗಿದೆ.

ರೈಸ್ ಕಾನ್‌ಕ್ಲೇವ್ ಸಮಾರೋಪದಲ್ಲಿ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

ನಾವೀನ್ಯತೆಗೆ ಉತ್ತೇಜನ

ಬೆಂಗಳೂರು: ನಾವೀನ್ಯತೆ-ಚಾಲಿತ ಉತ್ಪಾದನೆ, ಸ್ಥಳೀಯ ತಂತ್ರಜ್ಞಾನಗಳು ಮತ್ತು ಉದ್ಯಮಶೀಲತೆಯ ಮೂಲಕ ಸ್ವಾವಲಂಬಿ ಮತ್ತು ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ಕೊಡುಗೆ ನೀಡಬೇಕೆಂದು ನಾವೀನ್ಯಕಾರರು, ಉದ್ಯಮಿಗಳು ಮತ್ತು ಸಂಶೋಧಕರಿಗೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕರೆ ನೀಡಿದರು.

ರಾಷ್ಟ್ರೀಯ ಪ್ರಾದೇಶಿಕ ವಿಜ್ಞಾನ ಪ್ರಯೋಗಾಲಯ, ಸಿಎಸ್‌ಐಆರ್-ಫೋರ್ತ್ ಪ್ಯಾರಾಡೈಮ್ ಇನ್‌ಸ್ಟಿಟ್ಯೂಟ್ ಮತ್ತು ಸಿಎಸ್‌ಐಆರ್-ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯ ಸಂಯುಕ್ತ ಆಶ್ರಯದಲ್ಲಿ ಶನಿವಾರ ವಿ.ವಿ. ಘಾಟಗೆ ಕನ್ವೆಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡ ರೈಸ್ ಕಾನ್‌ಕ್ಲೇವ್ 2026 ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಭಾರತವು ವೈಜ್ಞಾನಿಕ ಪ್ರಗತಿ, ತಾಂತ್ರಿಕ ನಾವೀನ್ಯತೆ ಮತ್ತು ಯುವ ಜನತೆಯ ಆಕಾಂಕ್ಷೆಗಳಿಂದ ಚಾಲಿತವಾಗಿರುವ ಪರಿವರ್ತನಾತ್ಮಕ ಹಂತಕ್ಕೆ ಸಾಕ್ಷಿಯಾಗುತ್ತಿದೆ. ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಬಲಪಡಿಸುವ, ಉತ್ಪಾದನಾ ಸಾಮರ್ಥ್ಯಗಳನ್ನು ವಿಸ್ತರಿಸುವ ಮತ್ತು ನಾವೀನ್ಯತೆಯ ಸಂಸ್ಕೃತಿಯನ್ನು ಉತ್ತೇಜಿಸುವ ಅಗತ್ಯವಾಗಿದೆ.

ರಾಷ್ಟ್ರೀಯ ಆದ್ಯತೆಗಳನ್ನು ಪರಿಣಾಮಕಾರಿಯಾಗಿ ಪೂರೈಸಲು ಭಾರತದೊಳಗೆ ವಿನ್ಯಾಸಗೊಳಿಸಿದ ಮತ್ತು ಅಭಿವೃದ್ಧಿಪಡಿಸಿದ ಪರಿಹಾರಗಳ ಅಗತ್ಯವಿದೆ ಎಂದರು. ಭಾರತವನ್ನು ಜಾಗತಿಕ ನಾವೀನ್ಯತೆಯ ಕೇಂದ್ರವನ್ನಾಗಿ ಮಾಡಲು ಸಂಶೋಧನೆ ಮತ್ತು ಉದ್ಯಮ ಒಟ್ಟಾಗಿ ಕೆಲಸ ಮಾಡುವ ಅಗತ್ಯವಾಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.



ವಿಕಸಿತ ಭಾರತಕ್ಕೆ ನಾವೀನ್ಯತೆ ಪಾತ್ರ ಅನನ್ಯ

ವಿಕಸಿತ ಭಾರತ 2047ರ ಗುರಿ ತಲುಪಲು ಕೃಷಿ ಆಹಾರ ತಂತ್ರಜ್ಞಾನ ಮತ್ತು ನಾವೀನ್ಯತೆಗಳ ಪಾತ್ರ ಅತಿ ದೊಡ್ಡದಾಗಿದೆ. ತಂತ್ರಜ್ಞಾನಗಳು ಮಾರುಕಟ್ಟೆಯನ್ನು ತಲುಪಿ ಸಾಮಾನ್ಯ ಜನರ ಜೀವನವನ್ನು ಸುಗಮಗೊಳಿಸಬೇಕು. ಈ ನಿಟ್ಟಿನಲ್ಲಿ ಸಿಎಸ್‌ಐಆರ್ ಸಂಸ್ಥೆಗಳ ಕೊಡುಗೆ ಅತ್ಯಂತ ಶ್ಲಾಘನೀಯ.

> **ವೈಜ್ಞಾನಿಕ ಆವಿಷ್ಕಾರಗಳನ್ನು ತಂತ್ರಜ್ಞಾನಗಳು, ಉದ್ಯಮಗಳು ಮತ್ತು ಸಾಮಾಜಿಕ ಪ್ರಯೋಜನಗಳಾಗಿ ಪರಿವರ್ತಿಸಲು ಅನುಕೂಲವಾಗುವಂತಹ ಪೂರಕ ಪರಿಸರ ವ್ಯವಸ್ಥೆಯ ಅಗತ್ಯವಾಗಿದೆ ಎಂದು ಹೇಳಿದರು.**
> ■ ಡಾ.ಗಿರಿಧರ್ ಪರ್ವತಮ್, ಸಿಎಸ್‌ಐಆರ್-ಸಿಎಫ್‌ಟಿಆರ್‌ಐ ನಿರ್ದೇಶಕ

ಶನಿವಾರ ಹಾಗೂ ಭಾನುವಾರ ನಡೆದ ರೈಸ್ ಕಾನ್‌ಕ್ಲೇವ್‌ನಲ್ಲಿ 60 ಕ್ಕೂ ಹೆಚ್ಚಿನ ನವೋದ್ಯಮವಿತ್ತು. ಅದರಲ್ಲಿ ಪ್ರಮುಖವಾಗಿ ವಾಣಿಜ್ಯ ಪೈಲಟ್ ಪರವಾನಗಿಗಾಗಿ ದೇಶಿಯವಾಗಿ ವಿನ್ಯಾಸಗೊಳಿಸಲಾದ ತರಬೇತಿ ವಿಮಾನ ಹಂಸ-3, ಹೈ ಆಲ್ಟಿಟ್ಯೂಡ್ ಪ್ಲಾಟ್‌ಫಾರ್ಮ್ ಎಂಬ ನಿರಂತರ ಕಣ್ಗಾವಲು ನಡೆಸಲು ಸೌರಶಕ್ತಿಯಿಂದ ಚಲಿಸುವ ಡ್ರೋನ್ ತಂತ್ರಜ್ಞಾನ, ಚಂದ್ರಯಾನ -4 ಮಾದರಿ, ಅಗ್ನಿಶಾಮಕ ಡ್ರೋನ್ ಮುಂತಾದವುಗಳ ಗಮನ ಸೆಳೆಯಿತು.

ಇಸ್ರೋ ಅಧ್ಯಕ್ಷ ಡಾ.ನಾರಾಯಣನ್, ಸಿಎಸ್‌ಐಆರ್ - ಎನ್‌ಎಎಲ್ ನಿರ್ದೇಶಕರಾದ ಅಭಯ್ ಪಾಸ್ಲೇಕರ್, ಸಿಎಸ್‌ಐಆರ್ - ಎಚ್‌ಪಿಐ ನಿರ್ದೇಶಕರಾದ ಡಾ ಗೋಪಾಲಕೃಷ್ಣ ಪತ್ರ ಮುಂತಾದವರಿದ್ದರು.

ವಿಕಸಿತ ಭಾರತಕ್ಕೆ ಎಲ್ಲರ ಸಹಭಾಗಿತ್ವ ಅಗತ್ಯ: ನಿರ್ಮಲಾ

ಬೆಂಗಳೂರು: ವಿಕಸಿತ ಭಾರತದ ಕನಸು ಸಾಕಾರಗೊಳ್ಳಲು ಸರ್ಕಾರದ ಜತೆಗೆ ಸಮಾಜದ ಎಲ್ಲ ವಲಯಗಳ ಸಹಭಾಗಿತ್ವ ಅಗತ್ಯ ಎಂದು ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಕರೆ ನೀಡಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸರ್ಕಾರವು 12 ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಬೆಂಗಳೂರಿನ ಜಯನಗರದಲ್ಲಿ ಭಾನುವಾರ ಏರ್ಪಡಿಸಿದ ವಿಕಸಿತ ಭಾರತ ಸಂಕಲ್ಪ ಸಮಾವೇಶ ಉದ್ಘಾಟಿಸಿದ ಅವರು, 2047ರ ಅಭಿವೃದ್ಧಿ ಗುರಿ ಸಾಧನೆಗೆ ನಾವೀನ್ಯತೆ ಮತ್ತು ಸಾಮೂಹಿಕ ಪ್ರಯತ್ನ ಅಗತ್ಯ ಎಂದರು.

ಪಶ್ಚಿಮ ಏಷ್ಯಾದ ಉದ್ವಿಗ್ನತೆ, ಜಾಗತಿಕ ಒತ್ತಡ, ಕಚ್ಚಾ ತೈಲ ಬೆಲೆ ಏರಿಳಿತ ಮತ್ತು ಸಾಗಣೆ ವೆಚ್ಚ ಹೆಚ್ಚಳದಂತಹ ಸಮಸ್ಯೆಗಳ ನಡುವೆಯೂ ದೇಶದ ಪೂರೈಕೆ ವ್ಯವಸ್ಥೆ ಮತ್ತು ಆರ್ಥಿಕ ಸ್ಥಿರತೆ ಕಾಪಾಡಲಾಗಿದೆ. ತ್ರೈಮಾಸಿಕದಿಂದ ತ್ರೈಮಾಸಿಕಕ್ಕೆ, ವರ್ಷದಿಂದ ವರ್ಷಕ್ಕೆ ಭಾರತವು ಜಾಗತಿಕ ಮಟ್ಟದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಮುನ್ನಡೆಯುತ್ತಿದೆ ಎಂದು ತಿಳಿಸಿದರು.

ಕಳೆದ ಹಣಕಾಸು ವರ್ಷದಲ್ಲಿ (2025-26) ಭಾರತದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಪ್ರಗತಿ ದರವು ಶೇ. 7.7ಕ್ಕೆ ಏರಿಕೆಯಾಗಿದೆ. ಇದು ಅದರ ಹಿಂದಿನ ವರ್ಷ ದಾಖಲಾಗಿದ್ದ ಶೇ. 7.1ಕ್ಕಿಂತ ಗಣನೀಯ ಪ್ರಮಾಣದ ಪ್ರಗತಿ ತೋರಿಸುತ್ತದೆ. ಪ್ರಸಕ್ತ ಸಾಲಿನ ಜನವರಿ-ಮಾರ್ಚ್ ಅವಧಿಯ ನಾಲ್ಕನೇ ತ್ರೈಮಾಸಿಕದಲ್ಲಿ ಆರ್ಥಿಕತೆಯು ಶೇ. 7.8ರಷ್ಟು ಪ್ರಗತಿ ಸಾಧಿಸಿದೆ.

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ, ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಸಂಸದ ತೇಜಸ್ವಿ ಸೂರ್ಯ, ಶಾಸಕ ಸಿ.ಕೆ. ರಾಮಮೂರ್ತಿ, ವಿಧಾನ ಪರಿಷತ್ ಸದಸ್ಯ ಗೋಪಿನಾಥ್ ರೆಡ್ಡಿ, ಪದಾಧಿಕಾರಿಗಳು ಉಪಸ್ಥಿತರಿದ್ದರು.



ಪೋಲಿಯೊ: ಜೂ.25ರಂದು ಜಾಥಾ

ಬೆಂಗಳೂರು: ರಾಜ್ಯದಲ್ಲಿ ಜೂ.28ರಂದು ನಡೆಯಲಿರುವ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದ್ದು, ರಾಜ್ಯದ ಎಲ್ಲ ಶಾಲೆಗಳಲ್ಲಿ ಜೂ. 25 ರಂದು ಪಲ್ಸ್ ಪೋಲಿಯೋ ಕುರಿತು ಜಾಗೃತಿ ಜಾಥಾ ಆಯೋಜಿಸುವಂತೆ ಹಾಗೂ ಜೂ. 28 ರಂದು ನಡೆಯಲಿರುವ ಲಸಿಕಾ ಕಾರ್ಯಕ್ರಮಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ. ಜೂ. 28ರಂದು ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲು ಸೂಕ್ತ ವ್ಯವಸ್ಥೆ ಕಲ್ಪಿಸುವಂತೆ ಶಾಲೆಗಳಿಗೆ ನಿರ್ದೇಶನ ನೀಡಲಾಗಿದೆ. ಅಲ್ಲದೇ, ಪಾಲಕರು ತಮ್ಮ ಮೊದಲ ಕಾರ್ಯವಾಗಿ ಮಕ್ಕಳಿಗೆ ಪೋಲಿಯೋ ಹನಿ ಹಾಕಿಸುವ ಮೂಲಕ ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಬೇಕು ಎಂದು ಇಲಾಖೆ ಮನವಿ ಮಾಡಿದೆ.

ಕೈದಿಗಳಿಂದ ವಾರ್ಡನ್ ಮೇಲೆ ಹಲ್ಲೆ

ಧಾರವಾಡ: ಒಂದಿಲ್ಲೊಂದು ವಿವಾದಗಳಿಂದ ಸುದ್ದಿಯಲ್ಲಿರುವ ಧಾರವಾಡದ ಕೇಂದ್ರ ಕಾರಾಗೃಹದಲ್ಲಿ ಇದೀಗ ಮತ್ತೊಂದು ಘಟನೆ ನಡೆದಿದೆ. ಜೈಲಿನ ವಾರ್ಡರ್ ಮೇಲೆ ವಿಚಾರಣಾಧೀನ ಕೈದಿಗಳು ಗುಂಪಾಗಿಯೇ ಹಲ್ಲೆ ನಡೆಸಿರುವುದು ತಡವಾಗಿ ಬೆಳಕಿಗೆ ಬಂದಿದೆ. ಕಿರಣ ಘೋರ್ಪಡೆ ಎಂಬುವರೇ ಹಲ್ಲೆಗೆ ಒಳಗಾದ ಕೇಂದ್ರ ಕಾರಾಗೃಹದ ವಾರ್ಡನ್.



ಹಲ್ಲೆಯಿಂದಾಗಿ ಕಿರಣ ಅವರ ಮುಖ, ತಲೆ ಭಾಗಕ್ಕೆ ತೀವ್ರ ಪೆಟ್ಟಾಗಿದೆ.

ಘಟನೆ ಹಿನ್ನೆಲೆ?: ಶಿವಮೊಗ್ಗದ ಬಜರಂಗದಳದ ಕಾರ್ಯಕರ್ತರ ಹರ್ಷ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಕಾರಾಗೃಹ ಸೇರಿದ ರಿಹಾನ್, ಕಾಶಿಫ್ ಮತ್ತು ಉಡುಪಿ ಡ್ರಗ್ಸ್ ಪ್ರಕರಣದಲ್ಲಿ ಜೈಲಿನಲ್ಲಿದ್ದ ಫೈಜಲ್ ಎಂಬ ಮೂವರು ಸೇರಿ ವಾರ್ಡನ್ ಕಿರಣ ಮೇಲೆ ಹಲ್ಲೆ ಮಾಡಿದ್ದಾರೆ.

» ವಿಚಾರಣಾಧೀನ ಕೈದಿಗಳ ಉದ್ಧಟತನ
» ವಾರ್ಡನ್ ಸ್ಥಿತಿ ಗಂಭೀರ

ವಿಚಾರಣಾಧೀನ ಕೈದಿಗಳ ದುರ್ನಡತೆ ಹಿನ್ನೆಲೆ ಅವರನ್ನು ಬಿಗಿ ಭದ್ರತಾ ಸೆಲ್‌ನಲ್ಲಿ ಇರಿಸಿತ್ತು. ಹೊರಗಡೆ ಬಿಡುವಂತೆ ಸಿಬ್ಬಂದಿಗೆ ಪೀಡಿಸುತ್ತಿದ್ದು, ಜೂ.11ಕ್ಕೆ ತಮ್ಮನ್ನು ಹೊರಗಡೆ ಬಿಡುವಂತೆ ಒತ್ತಾಯಿಸಿದಾಗ ವಾರ್ಡರ್ ಕಿರಣ ಘೋರ್ಪಡೆ ನಿರಾಕರಣೆ ಮಾಡಿದ್ದಾರೆ. ಕುಪಿತಗೊಂಡ ಕೈದಿಗಳು ಸೆಲ್ ಗೋಡೆ ಜಿಗಿದು ಬಂದು ವಾರ್ಡನ್ ಮೇಲೆ ಲಾಠಿ ಮೂಲಕ ಮನಸೋ ಇಚ್ಛೆ ಹಲ್ಲೆ ಮಾಡಿದ್ದು, ಹಲ್ಲೆ ಮಾಡಿದ ಮೂವರು ಆರೋಪಿಗಳ ವಿರುದ್ಧವೂ ಧಾರವಾಡ ಉಪನಗರ ಠಾಣೆಯಲ್ಲಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ದೂರು ದಾಖಲಾಗಿದೆ.

3ನೇ ಸಿಎಂ ಬಂದರೂ ಅಚ್ಚರಿಯಿಲ್ಲ: ಬಿವೈವಿ

ಮಡಿಕೇರಿ: ರಾಜ್ಯದಲ್ಲಿ ನೂತನವಾಗಿ ಅಧಿಕಾರಕ್ಕೆ ಬಂದಿರುವ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರಕಾರ ಯಾವುದೇ ಸಂದರ್ಭ ಉರುಳುವ ಸಾಧ್ಯತೆ ಇದ್ದು, ಮೂರನೇ ಮುಖ್ಯಮಂತ್ರಿ ಅಧಿಕಾರಕ್ಕೇರಿದರೂ ಅಚ್ಚರಿ ಪಡಬೇಕಾಗಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಭವಿಷ್ಯ ನುಡಿದರು. ಶನಿವಾರಸಂತೆ ಸಮೀಪದ ಖಾಸಗಿ ರೆಸಾರ್ಟ್ ಒಂದರಲ್ಲಿ ನಡೆದ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.



ಕಾಂಗ್ರೆಸ್ ಸರಕಾರದಲ್ಲಿ ಸಚಿವ ಸ್ಥಾನ ಪಡೆಯಲು ಪೇಮೆಂಟ್ ಮತ್ತು ಮ್ಯಾನೇಜ್‌ಮೆಂಟ್ ಕೋಟಾ ಎಂದು ಕಾಂಗ್ರೆಸ್ ವಿಂಗಡಣೆ ಮಾಡಿದೆ. ಅದರಂತೆ ಈಗಾಗಲೇ ಅನೇಕ ಶಾಸಕರು ದೆಹಲಿಯಲ್ಲಿ ಸಚಿವ ಸ್ಥಾನಕ್ಕಾಗಿ ಲಾಬಿ ನಡೆಸುತ್ತಿದ್ದಾರೆ. ಈ ಎರಡು ಕೋಟಾದಡಿ ಯಾವ ಶಾಸಕರು ಬೇಕಾದರೂ ಸಚಿವರಾಗಬಹುದು ಎಂದು ಅವರು ಟೀಕಿಸಿದರು. ಡಿ.ಕೆ.ಶಿವಕುಮಾರ್ ಅವರ ಬಾಯಿಯಲ್ಲಿ ರೌಡಿಗಳನ್ನು ಮಟ್ಟ ಹಾಕುವ ಹೇಳಿಕೆ ಬಂದಿರುವುದು ಅಚ್ಚರಿ ಮೂಡಿಸಿದೆ ಎಂದರು. ರಾಜ್ಯದ ಬೊಕ್ಕಸ ಬರಿದಾಗಿದ್ದು, ಈ ಸರಕಾರದಿಂದ ರಾಜ್ಯದಲ್ಲಿ ಅಭಿವೃದ್ಧಿ ಸಾಧ್ಯವಿಲ್ಲ ಎಂದು ನುಡಿದರು.

ಟೌನ್‌ಶಿಪ್ ಹೆಸರಲ್ಲಿ ಹಣ ಲೂಟಿ ಹುನ್ನಾರ: ಎಚ್‌ಡಿಕೆ

ಮಂಡ್ಯ: ಬಿಡದಿ ಟೌನ್‌ಶಿಪ್ ಯೋಜನೆ ಸರ್ಕಾರಿ ರಿಯಲ್ ಎಸ್ಟೇಟ್ ಯೋಜನೆಯಾಗಿದೆ. ಇದು ಸಂಪೂರ್ಣವಾಗಿ ಹಣ ಲೂಟಿ ಮಾಡುವ ಯೋಚನೆಯಾಗಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಡದಿ ಟೌನ್‌ಶಿಪ್ ನಾಡಿನ ಹಿತಾಸಕ್ತಿ ಅಡಗಿಲ್ಲ. ಭೂ ಮಾಫಿಯ ಹಾಗೂ ಭೂ ಲೂಟಿಕೋರರಿಗೆ ಲಾಭ ಮಾಡಿಕೊಡಲು ಇದನ್ನು ರೂಪಿಸಲಾಗಿದೆ.

ಹೀಗಾಗಿ ಇದನ್ನು ನಾನು ಸರಕಾರಿ ರಿಯಲ್ ಎಸ್ಟೇಟ್ ದಂಧೆ ಎಂದು ಕರೆಯುತ್ತೇನೆ ಎಂದು ಹೇಳಿದರು. ರಸ್ತೆಗಳಲ್ಲಿ ಮೊಣಕಾಲುದ್ದ ಗುಂಡಿಗಳು ಬಿದ್ದು ವಾಹನ ಸಂಚಾರ ದೊಡ್ಡ ಪ್ರಯಾಸವಾಗಿದೆ. ಅದೇನೋ ಬ್ರ್ಯಾಂಡ್ ಬೆಂಗಳೂರು ಎಂದು ಹೇಳುತ್ತಿದ್ದರಲ್ಲ, ಅದನ್ನು ಮಾಡುವುದು ಬಿಟ್ಟು ಬಿಡದಿ ರೈತರ ಬದುಕಿಗೆ ಬೆಂಕಿ ಹಾಕಲು ಹೊರಟಿದ್ದಾರೆ ಎಂದು ಅವರು ಕಟುವಾಗಿ ಟೀಕಿಸಿದರು.

ಬೆಂಗಳೂರು ಅಭಿವೃದ್ಧಿಗೆ ಎಳ್ಳಷ್ಟು ಉಪಯೋಗ ಆಗದ ಈ ಯೋಜನೆಯನ್ನು ತಮ್ಮ ಸ್ವಾರ್ಥಕ್ಕಾಗಿ, ರಿಯಲ್ ಎಸ್ಟೇಟ್ ಮಾಫಿಯಾ ದೊಂದಿಗೆ ಕೈಜೋಡಿಸಿ ರೈತರ ಭೂಮಿಯನ್ನು ಲೂಟಿ ಹೊಡೆಯಲು ಹೊರಟಿದ್ದಾರೆ. ಈ ಹಿನ್ನೆಯಲ್ಲಿ ನಮ್ಮ ಪಕ್ಷ ರೈತರ ಪರವಾಗಿ ನಿಲ್ಲುತ್ತದೆ. ಅವರ ಜತೆ ನಿಂತು ಕಾನೂನು ಹೋರಾಟ ನಡೆಸುತ್ತದೆ ಎಂದು ಕೇಂದ್ರ ಸಚಿವರು ಹೇಳಿದರು.



> **ನಾನು ಚಿಂತನೆ ಮಾಡಿದ್ದು 2006ರಲ್ಲಿ, ಈಗ ನಾವು ಇರುವುದು 2026. 20 ವರ್ಷಗಳಲ್ಲಿ ಎಷ್ಟು ಬದಲಾವಣೆಯಾಗಿದೆ, ಎಷ್ಟೊಂದು ಅಭಿವೃದ್ಧಿಯಾಗಿದೆ. ಇಷ್ಟು ವರ್ಷಗಳಲ್ಲಿ ಏನೆಲ್ಲಾ ಆಯಿತು ಎನ್ನುವುದನ್ನು ಈ ಸರ್ಕಾರ ಅರ್ಥ ಮಾಡಿಕೊಳ್ಳಬೇಕು.**
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಯುವ ಸಂಕಲ್ಪದ ಅನುಪಮ ಉದಾಹರಣೆ-ಆನಂದಪುರ ಭಾಲಿ

▸ ಸುಬ್ರಾಯ ನಂದೋಡಿ

ಹರಿಯಾಣದ ರೋಹ್ತಕ್ ಜಿಲ್ಲೆಯ ಈ ಗ್ರಾಮವು ಒಂದು ಕಾಲದಲ್ಲಿ ರಾಜಕೀಯ ದ್ವೇಷದ ನೆಲೆಯಾಗಿತ್ತು. ಪರಿಸ್ಥಿತಿ ಹೇಗಿತ್ತು ಎಂದರೆ ಗ್ರಾಮದ ಹೆಚ್ಚಿನ ಯುವಕರಿಗೆ ಜೈಲು ಮತ್ತು ಪೊಲೀಸ್ ಠಾಣೆಗಳ ಪರಿಚಯ ಚೆನ್ನಾಗಿತ್ತು. ಬಸ್ ಕಂಡಕ್ಟರ್ ಇವರನ್ನು ಬಸ್ಸಿನಲ್ಲಿ ಕೂರಿಸಿಕೊಳ್ಳುತ್ತಿರಲಿಲ್ಲ. ಅವರು ಕುಳಿತರೂ ಟಿಕೆಟ್ ಹಣ ಕೇಳಲು ಹೆದರುತ್ತಿದ್ದರು.

ಆದರೆ ಇಂದು ಇಲ್ಲಿನ ಕೆಲವು ಯುವಕರ ಸಾರ್ಥಕ ಪ್ರಯತ್ನದ ಫಲವಾಗಿ ಹಳ್ಳಿಯ ಚಿತ್ರಣವೇ ಬದಲಾಗಿದೆ. ಗ್ರಾಮದ ಮಧ್ಯದಲ್ಲಿ ನಿರ್ಮಿಸಲಾದ ಮೂರು ಅಂತಸ್ತಿನ ಕೇಶವ ಭವನ ಮತ್ತು ಅದರಲ್ಲಿ ನಡೆಯುತ್ತಿರುವ ತಕ್ಷಶಿಲಾ ವಿದ್ಯಾ ಮಂದಿರ, ಆರ್ಯಭಟ್ಟ ಅಧ್ಯಯನ ಕೇಂದ್ರ, ಲೆಫ್ಟಿನೆಂಟ್ ಅತುಲ್ ಪವಾರ್ ಕಂಪ್ಯೂಟರ್ ಸೆಂಟರ್ ಅಥವಾ ಹುತಾತ್ಮ ಪೈಲಟ್ ಸಂದೀಪ್ ಪಲಡವಾಲ್ ಗ್ರಂಥಾಲಯ ಇವು ಗ್ರಾಮದಲ್ಲಿನ ಬದಲಾವಣೆಯ ಕಥೆ ಹೇಳುತ್ತಿವೆ. ಭಾಲಿ ಆನಂದಪುರದ ಈ ಹೊಸ ರೂಪದ ಯಶಸ್ಸು ಹರಿಯಾಣ ಪ್ರಾಂತದ, ಪ್ರಾಂತ ಸಹಗ್ರಾಮ ವಿಕಾಸ ಪ್ರಮುಖ್ ಅನೂಪ್ ಸಿಂಗ್ ಮತ್ತು ಅವರ ಸಹಕಾರಿಗಳಿಗೆ ಸಲ್ಲುತ್ತದೆ. ಈ ಯುವಕರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದಿಂದ ಮತ್ತು ಸೇವಾಭಾರತಿಯಿಂದ ಪ್ರೇರಣೆ ದೊರೆತಾಗ



ಬದಲಾವಣೆಯ ತಂಗಾಳಿ ಬೀಸಲಾರಂಭಿಸಿತು. ಹಳ್ಳಿಯ ಬಯಲುಗಳಲ್ಲಿ ಹಿರಿಯರಿಗೆ ಪತ್ರಿಕೆ ಹಂಚುವ ಮೂಲಕ ಪ್ರಾರಂಭಿಸಿದ ಸೇವಾ ಪ್ರಯಾಣಕ್ಕೆ ಹೊಸ ಆಯಾಮಗಳು ಸೇರುತ್ತಾ ಹೋಯಿತು ಮತ್ತು ಹುತಾತ್ಮ ಚಂದ್ರಶೇಖರ್ ಆಜಾದ್ ಸೇವಾ ಸಮಿತಿ ಜನ್ಮ ತಾಳಿತು.

ತಕ್ಷಶಿಲಾ ಅಧ್ಯಯನ ಕೇಂದ್ರದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಿದ ಗ್ರಾಮದ 48 ಯುವಕರು ಇಂದು ಸರ್ಕಾರಿ ಕೆಲಸಗಳನ್ನು ಮಾಡುತ್ತಿದ್ದಾರೆ. ರಾಷ್ಟ್ರೀಯ ಸೇವಾ ಭಾರತಿಗೆ ಸಂಬಂಧಿಸಿದ ಈ ಸಂಸ್ಥೆಯ ಯಶಸ್ಸನ್ನು ನಾವು ಇದರಿಂದಲೇ ತಿಳಿಯಬಹುದು. ಹರಿಯಾಣದ ಹೆಣ್ಣುಮಕ್ಕಳು, ಕುಸ್ತಿಯಿಂದ ಹಿಡಿದು ಅಥ್ಲೆಟಿಕ್ಸ್‌ವರೆಗೆ ತಮ್ಮ ವಿಜಯ ಪತಾಕೆಯನ್ನು ದೇಶದೆಲ್ಲೆಡೆ ಹಾರಿಸಿದ್ದಾರೆ.

ಆದ್ದರಿಂದ ಭಾಲಿ ಆನಂದಪುರದ ಹೆಣ್ಣುಮಕ್ಕಳು ದುರ್ಗಾ ಕ್ರೀಡಾ ಕೇಂದ್ರದಲ್ಲಿ ತರಬೇತುದಾರರ ಮೇಲ್ವಿಚಾರಣೆಯಲ್ಲಿ ಫುಟ್ಬಾಲ್ ಮತ್ತು ಇತರ ಕ್ರೀಡೆಗಳನ್ನು ನಿಯಮಿತವಾಗಿ ಆಡುತ್ತಾರೆ. ಇದರ ಪರಿಣಾಮವಾಗಿ, ನಿಶು, ಮಂಜು ಮತ್ತು ಕಾಜಲ್ ಸೇರಿದಂತೆ 5 ಬಾಲಕಿಯರು ರಾಷ್ಟ್ರೀಯ ತಂಡದಲ್ಲಿ ಆಡುತ್ತಿದ್ದಾರೆ.

ಸೇವಾಗಾಥ
ಕಥೆ-9

ಅಲ್ಲಿನ ಪ್ರಾಂತ ಸೇವಾ ಪ್ರಮುಖರಾದ ಕೃಷ್ಣಕುಮಾರ್ ಗ್ರಾಮದ ಅಗತ್ಯತೆಗೆ ತಕ್ಕಂತೆ ಸೇವೆಯ ಹೊಸ ಆಯಾಮಗಳನ್ನು ಜೋಡಿಸುತ್ತಾ ಹೋದರು. 3ನೇ ತರಗತಿಯಿಂದ ಹನ್ನೆರಡನೇ ತರಗತಿಯ ಮಕ್ಕಳಿಗಾಗಿ, ವಿವೇಕಾನಂದ ಸಂಸ್ಕಾರ ಕೇಂದ್ರವನ್ನು 6 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿತ್ತು. ನಂತರ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಅಧ್ಯಯನ ಮಾಡಲು ಹವಾನಿಯಂತ್ರಿತ ಸಭಾಂಗಣವನ್ನು ನಿರ್ಮಿಸಲಾಯಿತು.

ಅಲ್ಲಿಗೆ ಹತ್ತಿರದ ಗ್ರಾಮಗಳಾದ ಗಡ್ಡಿ, ಖೇಡಿ, ಬನಿಯಾನಿ ಮತ್ತು ದೋಬ್‌ನಿಂದ ಯುವಕರು ಬಂದು ಓದುತ್ತಿದ್ದಾರೆ. ಹುತಾತ್ಮ ಪೈಲಟ್ ಸಂದೀಪ ಪಲಡವಾಲ್ ಗ್ರಂಥಾಲಯದಲ್ಲಿ 5000 ಪುಸ್ತಕಗಳ ಭಂಡಾರ ಗ್ರಾಮದ ವಿದ್ಯಾರ್ಥಿಗಳಿಗೆ ಪುಸ್ತಕ-ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದೆ. ಗ್ರಂಥಾಲಯವು ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿಗಾಗಿ ಎಲ್ಲಾ ಪ್ರಮುಖ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳನ್ನು ಸಹ ಹೊಂದಿದೆ. ಬರೇಲಿಯ, ಸ್ಟೇಷನ್ ಮಾಸ್ಟರ್ ಮೋನು ರೋಸ್ ಅಥವಾ ಸಿಐಎಫ್‌ನ ಸಬ್ ಇನ್ಸ್‌ಪೆಕ್ಟರ್ ಸುಮಿತ್ ರೋಸ್‌ರಲ್ಲಿ ಈ ಪುಸ್ತಕಗಳು ಮತ್ತು ತಕ್ಷಶಿಲಾ ಅಧ್ಯಯನಕೇಂದ್ರವು ಅವರ ಯಶಸ್ಸಿನಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಯುವಕರು, ವಯಸ್ಕರು ಮತ್ತು ಮಹಿಳೆಯರಿಗಾಗಿ ಹಲವಾರು ವರ್ಷಗಳಿಂದ ನಡೆಯುತ್ತಿರುವ ಸಂಘ ಮತ್ತು ಸಮಿತಿಯ ಶಾಖೆಯು ಗ್ರಾಮದಲ್ಲಿ ಸಾಮರಸ್ಯ ಮತ್ತು ಅಭಿವೃದ್ಧಿಯ ಹೊಸ ಕಥೆಯನ್ನು ಬರೆದಿದೆ. ಜನವರಿ 2013ರಂದು ಹುತಾತ್ಮ ಸಬ್ ಲೆಫ್ಟಿನೆಂಟ್ ಅತುಲ್ ಪವಾರ್ ಕಂಪ್ಯೂಟರ್ ಸೆಂಟರ್ ನ್ನು ಪ್ರಾರಂಭಿಸಿದಾಗ, ಕೆಲವು ಕಂಪ್ಯೂಟರ್‌ಗಳನ್ನು ಸೇವಾಭಾರತಿಯಿಂದ ಮತ್ತು ಕೆಲವು ಗ್ರಾಮದ ಜನರೇ ನೀಡಿದರು. ಕೇಶವ ಭವನಕ್ಕೆ ಭೂಮಿಯನ್ನು ಸಹ ಪಂಚಾಯತಿಯೆ ಸಮಿತಿಗೆ ನೀಡಿತು. ಸಾವಯವ ಕೃಷಿಯನ್ನು ಉತ್ತೇಜಿಸಲು, ಬಲರಾಮ್ ಕಿಸಾನ್ ಸೇವಾ ಕೇಂದ್ರವನ್ನು ಪ್ರಾರಂಭಿಸಲಾಯಿತು. ಇದರ ಮೂಲಕ ಮನೆಮನೆಗಳಲ್ಲಿ ಸಾವಯವ ಗೊಬ್ಬರ ತಯಾರಿಸಲು ಗ್ರಾಮದಲ್ಲಿ ತರಬೇತಿ ನೀಡಲಾಗುತ್ತಿದೆ. ಮಹಿಳೆಯರಿಗಾಗಿ ನಡೆಯುತ್ತಿವ ರಾಣಿ ಲಕ್ಷ್ಮೀಬಾಯಿ ಹೊಲಿಗೆ ಕೇಂದ್ರದ ವಿಶೇಷತೆಯೆಂದರೆ, ಒಂದು ಬ್ಯಾಚ್ ಪೂರ್ಣಗೊಂಡ ನಂತರ ಅದು ಹಳ್ಳಿಯ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಗೊಳ್ಳುತ್ತದೆ. ಇದರಿಂದಾಗಿ ಅಲ್ಲಿನ ಎಲ್ಲಾಮಹಿಳೆಯರು ಸುಲಭವಾಗಿ ಹೊಲಿಗೆ ಕಲಿಯಬಹುದಾಗಿದೆ.

ಸೇವೆ ಪಡೆದವರಲ್ಲಿ ಸೇವಾ ಭಾವದ ಜಾಗೃತಿ ಮಾಡುವುದು ಸಂಘದ ಮೂಲ ಮಂತ್ರ. ಅದನ್ನು ನಾವು ಭಾಲಿ ಆನಂದಪುರದಲ್ಲಿ ನೋಡಬಹುದು. ರೈಲ್ವೆಯಲ್ಲಿ ನೌಕರಿ ಮಾಡುತ್ತಿರುವ ಸಮುಂದರ್ ಗಿಲೌಡ್ ಆಗಿರಲಿ ಅಥವಾ ಬಾಲಕಿಯರ ಕೋಚ್ ನರೇಂದ್ರ ಪಲಡ್ವಾಲ್ ಆಗಿರಲಿ, ಎಲ್ಲಾ ಯುವಕರೂ ಸಹ ಗ್ರಾಮದಲ್ಲಿ ನಡೆಯುತ್ತಿರುವ ಈ ಸೇವಾ ಕಾರ್ಯಗಳಿಗೆ ಸಮಯವನ್ನು ನೀಡುತ್ತಾರೆ. ಜಲ ಸಂರಕ್ಷಣೆಯಿಂದ ಹಿಡಿದು ವೃಕ್ಷಾರೋಪಣದವರೆಗೆ ಪ್ರತಿಯೊಂದು ಚಟುವಟಿಕೆಯಲ್ಲೂ ಗ್ರಾಮಸ್ಥರ ಸಂಪೂರ್ಣ ಬೆಂಬಲ ದೊರೆಯುತ್ತದೆ ಎಂದು ಈ ಸೇವಾಕಾರ್ಯಗಳ ಸೂತ್ರಧಾರ ಅನೂಪ್ ಹೇಳುತ್ತಾರೆ. ಕಳೆದ 5ವರ್ಷಗಳಿಂದ ನಡೆಯುತ್ತಿರುವ ಗ್ರಾಮೋತ್ಸವವು ವಿವಿಧ ಬಣಗಳಾಗಿ ವಿಭಜನೆಯಾಗಿದ್ದ ಭಾಲಿ ಆನಂದಪುರವನ್ನು ಒಂದುಗೂಡಿಸಿದೆ ಎಂದು ಅವರು ಹೇಳುತ್ತಾರೆ.

ಸಂಪರ್ಕ-ಅನೂಪ್ ಸಿಂಗ್, 9034729351

ಸಂಪಾದಕೀಯ

ಅಮೆರಿಕದ ಉದ್ಧಟತನಕ್ಕೆ ಕಡಿವಾಣ ಅಗತ್ಯ

ಜಾಗತಿಕ ಮಟ್ಟದಲ್ಲಿ ಸ್ನೇಹ, ಸಹಕಾರ ಮತ್ತು ಪರಸ್ಪರ ಗೌರವದ ಮಾತುಗಳನ್ನು ಆಡುವ ರಾಷ್ಟ್ರಗಳು ತಮ್ಮ ನಡೆ-ನುಡಿಗಳಲ್ಲೂ ಅದನ್ನೇ ಪ್ರತಿಬಿಂಬಿಸಬೇಕು. ಆದರೆ ಇತ್ತೀಚೆಗೆ ಭಾರತೀಯ ತೈಲ ಹಡಗಿನ ಮೇಲೆ ಅಮೆರಿಕದ ಸೇನೆ ನಡೆಸಿರುವ ದಾಳಿ ಹಾಗೂ ಅದರ ಬಳಿಕ ವ್ಯಕ್ತವಾಗಿರುವ ಧೋರಣೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಎರಡು ದೇಶಗಳು ಉತ್ತಮ ರಾಜತಾಂತ್ರಿಕ ಮತ್ತು ಆರ್ಥಿಕ ಸಂಬಂಧಗಳನ್ನು ಹೊಂದಿರುವ ಸಂದರ್ಭದಲ್ಲಿ ಇಂತಹ ಘಟನೆ ನಡೆಯುವುದು ಸಮಂಜಸವಲ್ಲ. ಇದು ಪರಸ್ಪರ ವಿಶ್ವಾಸಕ್ಕೆ ಧಕ್ಕೆ ತರುವುದರ ಜತೆಗೆ ರಾಷ್ಟ್ರಗಳ ನಡುವೆ ಅಪನಂಬಿಕೆಯ ವಾತಾವರಣವನ್ನೂ ಸೃಷ್ಟಿಸುತ್ತದೆ.



ಘಟನೆಯ ಬಳಿಕ ವಿಷಾದ ವ್ಯಕ್ತಪಡಿಸುವುದು ಅಥವಾ ಸ್ಪಷ್ಟನೆ ನೀಡುವ ಬದಲು ತಾನು ಮಾಡಿದ ಕ್ರಮವೇ ಸರಿ ಎಂಬ ರೀತಿಯಲ್ಲಿ ಅಮೆರಿಕ ವರ್ತಿಸುತ್ತಿರುವುದು ಮತ್ತಷ್ಟು ಆತಂಕಕಾರಿ. ಜಾಗತಿಕ ಶಕ್ತಿಯಾಗಿರುವುದರಿಂದ ಏನು ಮಾಡಿದರೂ ನಡೆಯುತ್ತದೆ ಎಂಬ ಮನೋಭಾವ ಇಂದಿನ ಜಗತ್ತಿನಲ್ಲಿ ಯಾರಿಗೂ ಅನುಕೂಲಕರವಲ್ಲ. ಅದರ ಪರಿಣಾಮಗಳನ್ನು ಅಮೆರಿಕ ಈಗಾಗಲೇ ಹಲವು ಸಂದರ್ಭಗಳಲ್ಲಿ ಅನುಭವಿಸಿದೆ.

ವಿಶೇಷವಾಗಿ ಇರಾನ್ ವಿಚಾರದಲ್ಲಿ ಅಮೆರಿಕದ ಲೆಕ್ಕಾಚಾರಗಳು ಹಲವು ಬಾರಿ ತಪ್ಪಾಗಿವೆ. ತನ್ನ ಪ್ರಾಬಲ್ಯದಿಂದ ಎಲ್ಲವನ್ನೂ ಸಾಧಿಸಬಹುದು ಎಂಬ ಅಹಂಕಾರಕ್ಕೆ ಅಲ್ಲಿನ ಬೆಳವಣಿಗೆಗಳು ಸವಾಲು ಹಾಕಿವೆ. ಶಾಂತಿ ಮಾತುಕತೆಗಳ ಪ್ರಯತ್ನಗಳು ನಿರೀಕ್ಷಿತ ಫಲ ನೀಡದಿರುವುದು ಕೂಡ ಇದೇ ವಾಸ್ತವವನ್ನು ತೋರಿಸುತ್ತದೆ. ಅಂತಾರಾಷ್ಟ್ರೀಯ ಸಂಬಂಧಗಳು ಕೇವಲ ಸೇನಾ ಬಲ ಅಥವಾ ಆರ್ಥಿಕ ಶಕ್ತಿಯ ಮೇಲೆ ನಿಂತಿರುವುದಿಲ್ಲ. ಪರಸ್ಪರ ಗೌರವ, ವಿಶ್ವಾಸ ಮತ್ತು ಜವಾಬ್ದಾರಿಯುತ ನಡವಳಿಕೆಗಳು ಅವುಗಳ ಅಡಿಪಾಯವಾಗಿವೆ. ದೊಡ್ಡ ರಾಷ್ಟ್ರಗಳು ತಮ್ಮ ಪ್ರಭಾವವನ್ನು ಬಳಸುವಾಗ ಇನ್ನಷ್ಟು ಎಚ್ಚರಿಕೆಯಿಂದ ವರ್ತಿಸಬೇಕಾಗುತ್ತದೆ. ಇಲ್ಲವಾದರೆ ಸಣ್ಣ ಘಟನೆಗಳೇ ದೊಡ್ಡ ರಾಜತಾಂತ್ರಿಕ ಬಿಕ್ಕಟ್ಟುಗಳಿಗೆ ಕಾರಣವಾಗುವ ಸಾಧ್ಯತೆ ಇರುತ್ತದೆ.

ಭಾರತವು ಕಳೆದ ಕೆಲವು ವರ್ಷಗಳಲ್ಲಿ ಜಾಗತಿಕ ವೇದಿಕೆಯಲ್ಲಿ ತನ್ನದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದೆ. ಆರ್ಥಿಕತೆ, ಭದ್ರತೆ, ತಂತ್ರಜ್ಞಾನ ಹಾಗೂ ವಿದೇಶಾಂಗ ನೀತಿಯಲ್ಲಿ ದೇಶ ಮಹತ್ವದ ಪ್ರಗತಿಯನ್ನು ಸಾಧಿಸಿದೆ. ಇಂತಹ ಸಂದರ್ಭದಲ್ಲಿ ಭಾರತದ ಹಿತಾಸಕ್ತಿಗಳಿಗೆ ಧಕ್ಕೆಯಾಗುವ ಯಾವುದೇ ಕ್ರಮವನ್ನು ದೇಶ ಸುಮ್ಮನೆ ಒಪ್ಪಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಸ್ನೇಹಪರ ಸಂಬಂಧಗಳನ್ನು ಕಾಪಾಡಿಕೊಳ್ಳುವ ಇಚ್ಛೆ ಇದ್ದರೂ ರಾಷ್ಟ್ರೀಯ ಹಿತಾಸಕ್ತಿಯ ವಿಚಾರದಲ್ಲಿ ಭಾರತ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ಅಮೆರಿಕವೂ ಈ ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕಿದೆ. ಸ್ನೇಹಿತ ರಾಷ್ಟ್ರಗಳೊಂದಿಗೆ ವ್ಯವಹರಿಸುವಾಗ ದರ್ಪ ಮತ್ತು ಪ್ರಾಬಲ್ಯದ ರಾಜಕಾರಣಕ್ಕಿಂತ ಸಮಾನತೆಯ ಮನೋಭಾವ ಅಗತ್ಯ. ತಪ್ಪು ನಡೆದಿದ್ದರೆ ಅದನ್ನು ಒಪ್ಪಿಕೊಳ್ಳುವ ಮತ್ತು ತಿದ್ದುಪಡಿ ಕ್ರಮ ಕೈಗೊಳ್ಳುವ ಪ್ರೌಢತೆ ವಿಶ್ವ ನಾಯಕತ್ವದ ಲಕ್ಷಣವಾಗಬೇಕು. ಇಲ್ಲವಾದರೆ ವಿಶ್ವಾಸದ ಬಿರುಕುಗಳು ಮತ್ತಷ್ಟು ಅಗಲವಾಗುವ ಅಪಾಯವಿದೆ.

ಹೀಗಾಗಿ ಅಮೆರಿಕ ತನ್ನ ನಡೆ-ನುಡಿಗಳನ್ನು ಮರುಪರಿಶೀಲಿಸಬೇಕಾದ ಸಮಯ ಇದು. ಶಕ್ತಿಯ ಪ್ರದರ್ಶನಕ್ಕಿಂತ ಸಂವಾದ ಮತ್ತು ಸಹಕಾರದ ಮಾರ್ಗವೇ ಶಾಶ್ವತ ಪರಿಹಾರವನ್ನು ನೀಡಬಲ್ಲದು. ಭಾರತ ಸೇರಿದಂತೆ ಸ್ನೇಹ ರಾಷ್ಟ್ರಗಳ ಭಾವನೆಗಳಿಗೆ ಗೌರವ ನೀಡುವ ಮೂಲಕವೇ ಅಮೆರಿಕ ತನ್ನ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳಲು ಸಾಧ್ಯ. ಜಾಗತಿಕ ಶಾಂತಿ ಮತ್ತು ಸ್ಥಿರತೆಯ ದೃಷ್ಟಿಯಿಂದಲೂ ಇದೇ ಸೂಕ್ತ ಮಾರ್ಗವಾಗಿದೆ.

ಮುರಿಯಲಾಗದ ನೆಹರೂ ಮಹಾನ್ ದಾಖಲೆಗಳು!

ಮೋದಿ ಸಾಧನೆಗಳನ್ನು ಟೀಕಿಸುವ ಕಾಂಗ್ರೆಸಿಗರು ನೆಹರು ಸಾಧಿಸಿದ ಈ ಕೆಲವು ಋಣಾತ್ಮಕ ಸಾಧನೆಗಳನ್ನು ಕೂಡಾ ಅರಿಯಬೇಕಾಗಿದೆ.

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಪ್ರಧಾನಿಯಾಗಿ ಮೋದಿಯ ದೀರ್ಘಾವಧಿ ಆಡಳಿತದ ಚರ್ಚೆ ಆರೋಗ್ಯಪೂರ್ಣ ಹಂತ ದಾಟಿ ಇನ್ನೆಲ್ಲಿಗೋ ಸಾಗಿದೆ. ಇಟಲಿ ಪ್ರಧಾನಿ ಮೆಲೋನಿಗೆ ಮೆಲೋಡಿ ಚಾಕಲೇಟ್ ನೀಡಿದ್ದೊಂದೇ ಪ್ರಧಾನಿ ಮೋದಿಯ ದಾಖಲೆ ಎಂಬಲ್ಲಿವರೆಗೂ ಕಾಂಗ್ರೆಸ್ ಮುಖಂಡರೆನಿಸಿಕೊಂಡವರಿಂದ ಅತ್ಯಂತ ಕುತ್ಸಿತ ಟೀಕೆಗಳು ವ್ಯಕ್ತವಾಗುತ್ತಲೇ ಇವೆ. ಆದರೆ ದೇಶದ ಮೊದಲ ಪ್ರಧಾನಿ ನೆಹರು ಅವರು ಸಾಧಿಸಿದ ದಾಖಲೆಗಳನ್ನು ಮೋದಿ ಇರಲಿ, ಇನ್ನಾರಿಗೂ ಮುರಿಯಲು ಸಾಧ್ಯವೇ ಇಲ್ಲ ಎಂಬ ಅಸಲಿ ಸತ್ಯ ಸಂಗತಿಗಳು ಈಗಿನ ಕಾಂಗ್ರೆಸ್ ಮುಖಂಡರಿಗೆ ಖಂಡಿತ ಗೊತ್ತಿರಲಿಕ್ಕಿಲ್ಲ. ಅದೇನಾದರೂ ಗೊತ್ತಾದರೆ ಅವರೆಲ್ಲ ಹೌಹಾರಿ, ದಂಗಾಗಬಹುದು.

ಹೌದು. ನೆಹರು ಅವರ ಅಂತಹ ದಾಖಲೆಗಳು ಒಂದೆರಡಲ್ಲ. ಅಂತಹ ಕೆಲವು ದಾಖಲೆಗಳನ್ನಾದರೂ ಪರಿಶೀಲಿಸೋಣ. ಅದು ಸ್ವಾತಂತ್ರ್ಯ ಬಂದ ಹೊಸತು. ಕಾಶ್ಮೀರ ಇನ್ನೂ ಭಾರತದೊಳಗೆ ವಿಲೀನವಾಗಿರಲಿಲ್ಲ. ಗೃಹಮಂತ್ರಿ ಸರ್ದಾರ್ ಪಟೇಲರ ಸತತ ಪ್ರಯತ್ನ ಈ ದಿಸೆಯಲ್ಲಿ ನಡೆದೇ ಇತ್ತು. ಪಟೇಲರನ್ನು ಅವರಷ್ಟಕ್ಕೇ ಬಿಟ್ಟಿರುತ್ತಿದ್ದರೆ, ನೆಹರೂ ನಡುವೆ ಮೂಗು ತೂರಿಸದಿರುತ್ತಿದ್ದರೆ ಕಾಶ್ಮೀರ ಸಮಸ್ಯೆ ಪೆಡಂಭೂತವಾಗಿ ಕಾಡುತ್ತಲೇ ಇರಲಿಲ್ಲ. ಹೈದ್ರಾಬಾದ್, ಜುನಾಗಢದಂತಹ ಸ್ವತಂತ್ರ ಸಂಸ್ಥಾನಗಳನ್ನು ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ವಿಲೀನಗೊಳಿಸಿದ ಪಟೇಲರಿಗೆ ಕಾಶ್ಮೀರವನ್ನೂ ಅದೇ ರೀತಿ ವಿಲೀನಗೊಳಿಸುವುದು ಏನೇನೂ ಕಷ್ಟದ ಸಂಗತಿಯಾಗಿರಲಿಲ್ಲ. ಆಗ ಕಾಶ್ಮೀರದ ರಾಜನಾಗಿದ್ದವನು ರಾಜಾ ಹರಿಸಿಂಗ್. ಆದರೆ ಸಂಸ್ಥಾನದ ಶೇ. 77 ಮಂದಿ ಪ್ರಜೆಗಳು ಮುಸ್ಲಿಮರಾಗಿದ್ದರು. ಇದೇ ಕಾರಣಕ್ಕೆ ನೆರೆಯ ಪಾಕಿಸ್ತಾನ ಕಾಶ್ಮೀರದ ಮೇಲೆ ದಾಳಿ ಎಸಗಿತು. ರಾಜಾ ಹರಿಸಿಂಗ್ ರಕ್ಷಣೆಗಾಗಿ ಪಟೇಲರ ಬಳಿ ಧಾವಿಸಿ ಬಂದರು. ಕೊಡಗಿನ ಕಲಿ ಜನರಲ್ ತಿಮ್ಮಯ್ಯ ಕಾಶ್ಮೀರದ ರಕ್ಷಣೆಯ ಸಂಪೂರ್ಣ ಹೊಣೆ ಹೊತ್ತಿದ್ದರು. ಪಾಕಿಸ್ತಾನ ವಶಪಡಿಸಿಕೊಂಡ ಐದನೇ ಎರಡು ಭಾಗ ಕಾಶ್ಮೀರವನ್ನು (ಪಿಓಕೆ) ಮರಳಿ ಪಡೆಯಲು ಸೈನ್ಯದೊಂದಿಗೆ ಸಜ್ಜಾಗಿದ್ದರು. ಆದರೆ ಅವರ ಈ ಸಾಹಸಕ್ಕೆ ಅಡ್ಡಿಯಾದವರು ಸನ್ಮಾನ್ಯ ನೆಹರು ಅವರು. ಇದ್ದಕ್ಕಿದ್ದಂತೆ ನೆಹರು ಕದನ ವಿರಾಮ ಘೋಷಿಸಿಬಿಟ್ಟರು. ಅನಂತರ ಕಾಶ್ಮೀರ ಸಮಸ್ಯೆಯನ್ನು ವಿಶ್ವಸಂಸ್ಥೆಗೊಯ್ದು ಅದನ್ನೊಂದು ಅಂತಾರಾಷ್ಟ್ರೀಯ ಸಮಸ್ಯೆಯನ್ನಾಗಿಸಿದರು. ಜಮ್ಮು-ಕಾಶ್ಮೀರಕ್ಕೆ 370ನೇ ವಿಧಿ ಕರುಣಿಸಿ , ವಿಶೇಷ ಸ್ಥಾನಮಾನ ನೀಡಿ ಒಂದೇ ದೇಶದಲ್ಲಿ ಇಬ್ಬರು ಪ್ರಧಾನಿ, ಎರಡು ಸಂವಿಧಾನ, ಎರಡು ರಾಷ್ಟ್ರಧ್ವಜಗಳಿರುವಂತೆ ನೋಡಿಕೊಂಡರು. ನೆಹರು ಎಸಗಿದ ಈ ಪ್ರಮಾದವನ್ನು ಸರಿಪಡಿಸಲು 73 ವರ್ಷ ಬೇಕಾಯ್ತು. ನೆಹರೂ ಅವರ ಈ ದಾಖಲೆಯನ್ನು ಸರಿಗಟ್ಟಲು ಸಾಧ್ಯವೆ?

ಕಲಾತ್ ವಿಲೀನಕ್ಕೆ ತಿರಸ್ಕಾರ : 1947ರಲ್ಲಿ ಬಲೂಚಿಸ್ತಾನದ ಒಂದು ರಾಜ ಸಂಸ್ಥಾನವಾಗಿದ್ದ ಕಲಾತ್ ಅನ್ನು ಭಾರತದಲ್ಲಿ ವಿಲೀನಗೊಳಿಸಲು ಆ ಸಂಸ್ಥಾನದ ಮುಖ್ಯಸ್ಥ ಅಹಮದ್ ಯಾರ್ಖಾನ್ ಎಲ್ಲ ಬಗೆಯ ಸಿದ್ಧತೆಗಳೊಡನೆ ನೆಹರು ಬಳಿಗೆ ಬಂದಿದ್ದರು. ಸಮ್ಮತಿ ಪತ್ರಕ್ಕೆ ನೆಹರು ಸಹಿ ಹಾಕಿದ್ದರೆ ಸಾಕಿತ್ತು. ಆದರೆ ಯಾವುದೋ ಕಾರಣಕ್ಕೆ ನೆಹರು ಸಹಿ ಹಾಕಲೇ ಇಲ್ಲ. ಇದನ್ನೇ ಕಾಯುತ್ತಿದ್ದ ಪಾಕಿಸ್ತಾನ ಕಲಾತ್ ಮೇಲೆ ದಾಳಿ ನಡೆಸಿ ಅದನ್ನು ತನ್ನ ವಶಪಡಿಸಿಕೊಂಡಿತು. ಭಾರತದ ಭಾಗವೇ ಆಗಿಹೋಗುತ್ತಿದ್ದ ಬಲೂಚಿಸ್ತಾನ್ ಹೀಗೆ ಪಾಕ್‌ಗೆ ಸೇರಿಹೋಯಿತು. ಇದೆಂತಹ ದಾಖಲೆ ನೆಹರು ಅವರದು!

ಹೈದ್ರಾಬಾದ್ ವಿಲೀನಕ್ಕೂ ವಿರೋಧ : ನಿಜಾಮನ ಆಳ್ವಿಕೆಯಲ್ಲಿದ್ದ ಹೈದ್ರಾಬಾದ್ ಸಂಸ್ಥಾನದ ವಿಲೀನಕ್ಕೂ ನೆಹರು ತೀವ್ರ ವಿರೋಧವಿತ್ತು. ಆದರೆ ಗೃಹಮಂತ್ರಿ ಪಟೇಲರು ನೆಹರು ವಿರೋಧಕ್ಕೆ ಮಣಿಯಲಿಲ್ಲ. ನಿಜಾಮನ ವಿರುದ್ಧ ಮಿಲಿಟರಿ ಕಾರ್ಯಾಚರಣೆ ಕೈಗೊಂಡು ಅದನ್ನು ಭಾರತದೊಳಗೆ ವಿಲೀನ ಗೊಳಿಸಿದರು. ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ ನೀವೇಕೆ ಕೋಮುವಾದಿ ಎಂಬ ಹಣೆಪಟ್ಟಿ ಅಂಟಿಸಿಕೊಳ್ಳಲು ಹೊರಟಿದ್ದೀರಿ? ಎಂದು ಪಟೇಲರನ್ನು ನೆಹರು ಹಂಗಿಸಿದ್ದರು. ಉಕ್ಕಿನ ಮನುಷ್ಯ ಪಟೇಲ್ ಅದಕ್ಕೆ ಸೊಪ್ಪು ಹಾಕಲಿಲ್ಲ. ನೆಹರು ಅವರ ಈ 'ಸೆಕ್ಯುಲರ್' ದಾಖಲೆ ಮುರಿಯಲು ಮೋದಿಗೆ ಸಾಧ್ಯವೆ?

ಕಾಬೋ ಕಣಿವೆ ಬರ್ಮಾಕ್ಕೆ ಬಹುಮಾನ : ಫಲವತ್ತಾದ, ಸಮೃದ್ಧ ಹಸಿರು ನಳನಳಿಸುವ 11 ಸಾವಿರ ಚ.ಕಿ.ಮೀ. ವಿಸ್ತೀರ್ಣದ ಮಣಿಪುರ ರಾಜಧಾನಿಯ ಭಾಗವಾಗಿದ್ದ ಕಾಬೋ ಕಣಿವೆ 1450ರಿಂದಲೂ ಭಾರತದ ಭಾಗವಾಗಿಯೇ ಇತ್ತು. ಬ್ರಿಟಿಷರು ಮಣಿಪುರವನ್ನು ವಶಪಡಿಸಿಕೊಂಡ ಬಳಿಕ ಕಾಬೋ ಕಣಿವೆಯನ್ನು 1834ರಲ್ಲಿ ಬರ್ಮಾಕ್ಕೆ ಭೋಗ್ಯಕ್ಕೆ ನೀಡಿದ್ದರು. ಸ್ವಾತಂತ್ರ್ಯ ಬಂದ ಬಳಿಕ ಭೋಗ್ಯಕ್ಕೆ ನೀಡಲಾದ ಕಾಬೋ ಕಣಿವೆಯನ್ನು ಬರ್ಮಾದಿದ ಮರಳಿ ಪಡೆಯುವ ಎಲ್ಲಾ ಅವಕಾಶಗಳೂ ಮುಕ್ತವಾಗಿತ್ತು. ಸೂಕ್ತ ಪರಿಹಾರ ನೀಡಿದ್ದರೆ ಬರ್ಮಾ ಅದನ್ನು ಭಾರತಕ್ಕೆ ಬಿಟ್ಟುಕೊಡುತ್ತಿತ್ತು. ಆದರೆ ನೆಹರೂಗೆ ತಾನೊಬ್ಬ ದಾನಶೂರ ಕರ್ಣನೆಂದು ಬಿಂಬಿಸಿಕೊಳ್ಳಬೇಕಿತ್ತು. ಬರ್ಮಾಕ್ಕೆ ಅದನ್ನು ಬಹುಮಾನವಾಗಿ ಬಳುವಳಿ ನೀಡಿಬಿಟ್ಟರು. ನಮ್ಮ ನೆಹರು ಎಂತಹ ತ್ಯಾಗಮಯಿ! ಎಂತಹ ದಾಖಲೆವೀರ.

ಕೋಕೋ ದ್ವೀಪಗಳು ಬರ್ಮಾಕ್ಕೆ ದಾನ : ಅಂಡಮಾನ್‌ನ ಭಾಗವಾಗಿದ್ದ ಎರಡು ಕೋಕೋ ದ್ವೀಪಗಳನ್ನೂ ಸ್ವಾತಂತ್ರ್ಯ ಬಂದ ಕೂಡಲೇ ನೆಹರು ಬರ್ಮಾಕ್ಕೆ ದಾನ ಮಾಡಿಬಿಟ್ಟರು. ಬರ್ಮಾ ಅವುಗಳನ್ನು ಚೀನಾ ದೇಶಕ್ಕೆ ಕೊಡುಗೆಯಾಗಿ ನೀಡಿತು. ಚೀನಾ ಮಾತ್ರ ಭಾರತದ ಮಿಲಿಟರಿ ಕಾರ್ಯಾಚರಣೆ ಮೇಲೆ ಕಣ್ಣಿಡಲು ಆ ದ್ವೀಪದಲ್ಲೊಂದು ಎಲೆಕ್ಟ್ರಾನಿಕ್ ಸರ್ವಿಯಲೆನ್ಸ್ ಸ್ಟೇಷನ್ ಸ್ಥಾಪಿಸಿದೆ. ಬಂಗಾಳ ಕೊಲ್ಲಿಯಲ್ಲಿ ಭಾರತದ ನೌಕಾಪಡೆಯ ಯಾವುದೇ ಚಟುವಟಿಕೆ ನಡೆದರೂ ಚೀನಾಕ್ಕೆ ತಕ್ಷಣ ತಿಳಿಯುತ್ತದೆ. ಅದು ಭಾರತದಲ್ಲೇ ಇದ್ದಿದ್ದರೆ ಭಾರತದ ಮಿಲಿಟರಿ ಕಾರ್ಯಾಚರಣೆಗೆ ಅದೊಂದು ವ್ಯೂಹಾತ್ಮಕ ಕೇಂದ್ರವಾಗಿರುತ್ತಿತ್ತು. ನೆಹರೂ ಮತ್ತೊಮ್ಮೆ ತ್ಯಾಗಮಯಿಯಾದರು!

ವಿಶ್ವಸಂಸ್ಥೆಯ ಖಾಯಂ ಸ್ಥಾನ ಬೇಡವೆಂದರು : 1950ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಭಾರತವನ್ನು ಖಾಯಂ ಸದಸ್ಯನನ್ನಾಗಿ ಮಾಡಿಕೊಳ್ಳಲು ಅಮೆರಿಕ ಆಹ್ವಾನ ನೀಡಿತ್ತು. ನೆಹರು ಮಾತ್ರ ಅದನ್ನು ತಿರಸ್ಕರಿಸಿದರು. ಚೀನಾಕ್ಕೆ ಖಾಯಂ ಸ್ಥಾನ ನೀಡದಿದ್ದರೆ ಭಾರತಕ್ಕೂ ಬೇಡ ಎಂದರು. 1955ರಲ್ಲಿ ಅಮೆರಿಕ ಮತ್ತೊಮ್ಮೆ ರಷ್ಯಾದೊಂದಿಗೆ ಸೇರಿ ಭಾರತಕ್ಕೆ ಖಾಯಂ ಸ್ಥಾನ ನೀಡಲು ಮುಂದಾಗಿತ್ತು. ಆಗಲೂ ನೆಹರು ಅವರದ್ದು ಅದೇ ಹಠ. ಹೀಗಾಗಿ ನೆಹರು ಕೃಪೆಯಿಂದ ಚೀನಾಕ್ಕೆ ಖಾಯಂ ಸ್ಥಾನ ಸಿಕ್ಕಿಬಿಟ್ಟಿತು. ಇದಂತೂ ನೆಹರೂ ಅವರ ತ್ಯಾಗದ ಪರಾಕಾಷ್ಠೆಯ ದಾಖಲೆ!

ಗ್ವಾದರ್ ಬಂದರು, ಬೇಡವೆಂದರು: 1958ರಲ್ಲಿ ಓಮನ್ ದೇಶದ ಸುಲ್ತಾನರು ಆಯಕಟ್ಟಿನ ಗ್ವಾದರ್ ಬಂದರು ಪ್ರದೇಶವನ್ನು ಭಾರತಕ್ಕೆ ನೀಡಲು ಸಿದ್ಧರಾಗಿದ್ದರು. ನೆಹರು ಅವರೇ ಬೇಡವೆಂದರು. ಕೂಡಲೇ ಪಾಕಿಸ್ತಾನ ಅದನ್ನು ಖರೀದಿಸಿತು. ಇದೀಗ ಗ್ವಾದರ್ ಬಂದರು ಚೀನಾದ ಎಲ್ಲಾ ರಸ್ತೆ ನಿರ್ಮಾಣ ಯೋಜನೆಗಳಿಗೆ ಹೆಬ್ಬಾಗಿಲಿನಂತಾಗಿದೆ. ಚೀನಾದ ಸಾಮ್ರಾಜ್ಯಶಾಹಿ ದಾಹಕ್ಕೆ ಕಡಿವಾಣ ಹಾಕಬಹುದಾಗಿದ್ದ ಗ್ವಾದರ್ ಬಂದರು ಖರೀದಿಸದ ನೆಹರು ದಾಖಲೆ ಮೀರುವವರಾರು?

ನೇಪಾಳ ವಿಲೀನಕ್ಕೂ ಅಡ್ಡಿ: ಹಿಂದು ದೇಶವಾಗಿದ್ದ, ಹಿಂದು ಸಂಸ್ಕೃತಿ ಪರಂಪರೆಗಳನ್ನೇ ಹಾಸಿ ಹೊದ್ದಿರುವ ನೇಪಾಳವನ್ನು ಭಾರತದಲ್ಲಿ ವಿಲೀನಗೊಳಿಸಲು ಅಲ್ಲಿನ ರಾಜ ತ್ರಿಭುವನ ಬೀರು ಬಿಕ್ರಂ ಶಹಾದೇವ್ (1906–1955) ಅವರು 1950ರಲ್ಲಿ ಬಯಸಿದ್ದರು. ಭಾರತದಲ್ಲಿ ವಿಲೀನವಾದರೆ ನೇಪಾಳದ ಸರ್ವಾಂಗೀಣ ವಿಕಾಸ ಸಾಧ್ಯವೆಂದು ತ್ರಿಭುವನ್ ನಂಬಿದ್ದರು. ಆದರೆ ನೆಹರುಗೆ ಅದು ಬೇಕಿರಲಿಲ್ಲ. ವಿಲೀನಕ್ಕೆ ಒಪ್ಪಲಿಲ್ಲ. ಇವತ್ತು ಮಾವೋವಾದಿಗಳ ಹಿಡಿತದಲ್ಲಿ ನೇಪಾಳ ತೊಳಲಾಡಬೇಕಾದ ಅನಿವಾರ್ಯತೆಗೆ ನೆಹರು ಅವರ ಈ ಕೆಟ್ಟ ನಿರ್ಧಾರವೇ ಕಾರಣ.

ಭಾರತ ಪರಮಾಣು ಶಕ್ತಿ ರಾಷ್ಟ್ರವಾಗದಂತೆ ತಡೆ: ಚೀನಾ ದೇಶಕ್ಕೂ ಮೊದಲು ಭಾರತ ಪರಮಾಣು ಶಕ್ತಿ ರಾಷ್ಟ್ರವಾಗಲು ಅಮೆರಿಕ ಅಧ್ಯಕ್ಷರಾಗಿದ್ದ ಜಾನ್ ಎಫ್. ಕೆನಡಿ ರಾಜಸ್ಥಾನದ ಮರಳುಗಾಡಿನಲ್ಲಿ ಪರಮಾಣು ಬಾಂಬ್ ಪರೀಕ್ಷೆಗೆ ನೆರವು ನೀಡುವುದಾಗಿ ಭರವಸೆ ನೀಡಿದ್ದರು. ಆದರೆ ನೆಹರುಗೆ ಭಾರತ ನ್ಯೂಕ್ಲಿಯರ್ ಪವರ್ ದೇಶವಾಗುವುದು ಬೇಡ ಎಂಬ ಬಯಕೆ ಇತ್ತು. ಹೀಗಾಗಿಯೇ 1962ರಲ್ಲಿ ಚೀನಾ ಜೊತೆಗೆ ಯುದ್ಧ ಸಂಭವಿಸಿ ಭಾರತದ ಸಾವಿರಾರು ಚದರ ಕಿ.ಮೀ. ಭೂಭಾಗ ಕೈ ತಪ್ಪಿತು. ಹಿಂದಿ-ಚೀನಿ ಭಾಯಿ ಭಾಯಿ ಎಂಬ ನೆಹರು ಅವರ ಭೋಳೆತನದ ಈ ದಾಖಲೆಯನ್ನು ಯಾರಿಗಾದರೂ ಮುರಿಯಲು ಸಾಧ್ಯವೇ?

ಸೋಮನಾಥ ಪುನರ್ ನಿರ್ಮಾಣಕ್ಕೂ ವಿರೋಧ: ಮೋದಿ ಪ್ರಧಾನಿಯಾದ ಬಳಿಕ ಹಿಂದುಗಳ ಅಸ್ಮಿತೆ, ಶ್ರದ್ಧಾ ಕೇಂದ್ರವಾಗಿದ್ದ ಅಯೋಧ್ಯೆ ಶ್ರೀರಾಮ ಮಂದಿರ ಜನ್ಮಸ್ಥಾನದಲ್ಲೇ ಪುನರ್ ನಿರ್ಮಾಣ ಆಗುವಂತೆ ತಾರ್ಕಿಕ ಅಂತ್ಯಕ್ಕೆ ಸಹಕರಿಸಿದರು.

ಕಾಶಿ ವಿಶ್ವನಾಥ ಮಂದಿರಕ್ಕೆ ವಿಶೇಷ ಕಾರಿಡಾರ್ ನಿರ್ಮಿಸಿದರು. ಆದರೆ ನೆಹರು ನಮ್ಮ ಪ್ರಮುಖ ಜ್ಯೋತಿರ್ಲಿಂಗಗಳಲ್ಲಿ ಒಂದಾಗಿರುವ ಸೌರಾಷ್ಟ್ರದ ಸೋಮನಾಥ ಮಂದಿರದ ಪುನರ್ ನಿರ್ಮಾಣಕ್ಕೆ ಉಗ್ರ ವಿರೋಧ ವ್ಯಕ್ತಪಡಿಸಿದ್ದರು. ತನ್ಮೂಲಕ ತಾನೊಬ್ಬ 'ಸೆಕ್ಯುಲರ್' ಪ್ರಧಾನಿ ಎಂಬ ದಾಖಲೆ ಬರೆಯಲು ಹೊರಟಿದ್ದರು. ಆದರೆ ಗೃಹಮಂತ್ರಿ ಪಟೇಲರು ಪಟ್ಟು ಹಿಡಿದು ಈ ಹಿಂದು ಶ್ರದ್ಧಾ ಕೇಂದ್ರದ ಪುನರ್ ನಿರ್ಮಾಣ ಪೂರ್ತಿಗೊಳಿಸಿದ್ದರು.

ಆತ್ಮರತಿಯ ಪರಾಕಾಷ್ಠೆ: 1947ರಿಂದ ಹೆಚ್ಚು ಕಡಿಮೆ 2000 ಇಸವಿಯವರೆಗೆ ದೇಶದ ದೊಡ್ಡ ಯೋಜನೆಗಳು, ಬೃಹತ್ ಸೇತುವೆಗಳು, ವಿದ್ಯುತ್ ಕೇಂದ್ರಗಳು, ವಿವಿಗಳು, ಆಸ್ಪತ್ರೆಗಳು, ರಸ್ತೆಗಳು, ಉದ್ಯಾನವನಗಳು ಎಲ್ಲವೂ ನೆಹರು ಸಂತತಿಮಯ. ನೆಹರು ಹೆಸರು ಬಿಟ್ಟರೆ ಬೇರೆ ಪುಣ್ಯಾತ್ಮರ ಹೆಸರೇ ಹೊಳೆಯಲಿಲ್ಲ. ಮೋದಿ ಕಾಲದಲ್ಲಿ ನೂರಾರು ವಿವಿಗಳು, ಆಸ್ಪತ್ರೆಗಳು, ವಿಮಾನ ನಿಲ್ದಾಣಗಳು, ಹೊಸ ರೈಲುಗಳು, ಬೃಹತ್ ಸೇತುವೆಗಳ ನಿರ್ಮಾಣ ವಾಯಿತು. ಆದರೆ ಯಾವುದಕ್ಕೂ ಮೋದಿಯ ಹೆಸರಿಡಲಿಲ್ಲ (ಅಹ್ಮದಾಬಾದಿನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂ ಮಾತ್ರ ಇದಕ್ಕೆ ಅಪವಾದ). ನೆಹರು ತಮಗೆ ತಾವೇ 'ಭಾರತ ರತ್ನ' ಪುರಸ್ಕಾರ ಸಿಗುವಂತೆ ನೋಡಿಕೊಂಡರು. ಆತ್ಮರತಿಯ ಪರಾಕಾಷ್ಠೆಯ ಈ ನೆಹರು ದಾಖಲೆ ಸದಾ ಕಾಲಕ್ಕೂ ಅಬಾಧಿತ.

ಇಲ್ಲಿ ದಾಖಲಿಸಿದ ನೆಹರೂ ಕುರಿತ ದಾಖಲೆಗಳು ಖಂಡಿತ ಉತ್ಪ್ರೇಕ್ಷೆಯದಲ್ಲ. ಬಾಬು ರಾಜೇಂದ್ರ ಪ್ರಸಾದರ 'ಇಂಡಿಯಾ ಡಿವೈಡೆಡ್', ಲೋಹಿಯಾ ಅವರ 'ಗಿಲ್ಟಿಮೆನ್ ಆಫ್ ಪಾರ್ಟೀಶನ್', ದಳವಿಯವರ 'ದಿ ಹಿಮಾಲಯನ್ ಬ್ಲಂಡರ್', ಎಂ. ಓ. ಮಥಾಯ್ ಬರೆದ 'ರೆಮಿನಿಸೆನ್ಸಸ್ ಆಫ್ ದಿ ನೆಹರು ಏಜ್', ಬಂದೋಪಾಧ್ಯಾಯರ 'ದಿ ಮೇಕಿಂಗ್ ಆಫ್ ಇಂಡಿಯಾಸ್ ಫಾರಿನ್ ಪಾಲಿಸಿ' ಮುಂತಾದ ಕೃತಿಗಳಲ್ಲಿ ನೆಹರು ಅವರ ದ್ವಂದ್ವ ನಿಲುವುಗಳು ,ದೇಶವಿರೋಧಿ ನೀತಿಗಳ ಬಗ್ಗೆ ಬೆಳಕು ಚೆಲ್ಲಲಾಗಿದೆ.

ನೆಹರು ಅವರ ಇನ್ನಷ್ಟು ದಾಖಲೆಗಳಿವೆ. ಪ್ರಧಾನಿಯಾಗಿ ಮಾಡಬಾರದಿದ್ದ ಹಲವು ಸಂಗತಿಗಳಿವೆ. ಈ ಲೇಖನದಲ್ಲಿ ದಾಖಲಿಸಲಾಗದ 'ದಾಖಲೆಗಳೂ' ಇವೆ! ನೆಹರು ಅಂಧಾಭಿಮಾನಿಗಳು ಬೇಕಿದ್ದರೆ ಅವನ್ನೆಲ್ಲ ಹುಡುಕಿ ಓದಿ, ಜನ್ಮ ಪಾವನ ಮಾಡಿಕೊಳ್ಳಲಿ.


ಹರೆಯದವರು ಮತ್ತು ಲೈಂಗಿಕ ವಿಜ್ಞಾನ-1

ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಅದಕ್ಕಾಗಿ ಹರೆಯದವರಿಗೆ ಲೈಂಗಿಕ ವಿಜ್ಞಾನದ ಅರಿವು ಅನಿವಾರ್ಯ.

ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಹರೆಯದವರಿಗೆ ಲೈಂಗಿಕ ವಿಜ್ಞಾನದ ಕುರಿತು ಲೇಖನವನ್ನು ಬರೆದರೆ ಸರಿಯೇ ಎಂದು ಓದುಗರು ಪ್ರಶ್ನೆಮಾಡಬಹುದು. ನಮ್ಮ ದೇಶದಲ್ಲಿ ವಿಶೇಷವಾಗಿ ಹತ್ತನೇ ವಯಸ್ಸಿನಿಂದ ಹತ್ತೊಂಭತ್ತನೇ ವಯಸ್ಸಿನ ಹರೆಯದವರು ಜನಸಂಖ್ಯೆಯ ಸುಮಾರು ಐದನೇ ಒಂದು ಭಾಗದಷ್ಟಿದ್ದಾರೆ. ನಮ್ಮ ಸಮಾಜದಲ್ಲಿ ಶತಮಾನಗಳಿಂದ ಮಕ್ಕಳು ಮತ್ತು ಹರೆಯದವರಿಗೆ ಲೈಂಗಿಕತೆ ಕುರಿತು ಹೇಳುವುದು ಅಪಾಯ. ಲೈಂಗಿಕ ವಿಚಾರಗಳನ್ನು ಹಂಚಿಕೊಳ್ಳುವುದು ನಾಚಿಕೆಗೇಡು. ಅವರಿಗೆ ಲೈಂಗಿಕತೆ ಕುರಿತು ಮಾಹಿತಿ ನೀಡಿದರೆ, ದಾರಿ ತಪ್ಪಿದ ಮಕ್ಕಳಾಗುತ್ತಾರೆ ಎಂದು ಹಿರಿಯರು ಭಾವಿಸುತ್ತಾರೆ. ಅದರೊಂದಿಗೆ ಪುರುಷ-ಸ್ತ್ರೀ ಮಧ್ಯೆ ಇರುವ ಲಿಂಗಭೇದ ಮತ್ತು ಪುರುಷ ಪ್ರಧಾನ ಸಮಾಜ ಹೀಗೆ ಕೆಲವು ಅಂಶಗಳಿಂದ ಪೋಷಕರಾಗಲೀ, ಸ್ನೇಹಿತರಾಗಲೀ ಹರೆಯದವರನ್ನು ಲೈಂಗಿಕ ಜ್ಞಾನದಿಂದ ದೂರವಿಡಲು ಪ್ರಯತ್ನಿಸುತ್ತಾರೆ. ಹಾಗಾಗಿ ಹರೆಯದವರು ಲೈಂಗಿಕ ಅಂಗಾಂಗಗಳ ಬೆಳವಣಿಗೆ, ಲೈಂಗಿಕ ಪ್ರಕ್ರಿಯೆ, ಲೈಂಗಿಕ ಅಜ್ಞಾನ ಮತ್ತು ತಪ್ಪು ಕಲ್ಪನೆಗಳು, ಮತ್ತು ಅದರ ಸಾಧಕ-ಬಾಧಕಗಳನ್ನು ಕುರಿತು ಸಂದೇಹ ಮತ್ತು ಒತ್ತಡಗಳಿಂದ ಬಳಲುವುದನ್ನು ನಾವು ಸಮಾಜದಲ್ಲಿ ಕಾಣುತ್ತೇವೆ. ಇದಕ್ಕೆ ಅವರಲ್ಲಿ ಇರುವ ಲೈಂಗಿಕ ಅಜ್ಞಾನ ಮತ್ತು ತಪ್ಪು ಕಲ್ಪನೆಗಳೇ ಕಾರಣ. ಈಗ ನಮ್ಮದು ನಾಗರೀಕ ಸಮಾಜ. ಎಲ್ಲರೂ ಲೈಂಗಿಕ ಜ್ಞಾನ ಉಳ್ಳವರೆಂದು ಜನರು ಭಾವಿಸುತ್ತಾರೆ. ಆದರೆ ಅರ್ಧಕ್ಕಿಂತ ಹೆಚ್ಚು ಮಂದಿ ಹಿರಿಯರು ಲೈಂಗಿಕತೆ ಕುರಿತು ಹರೆಯದ ಮಕ್ಕಳೊಂದಿಗೆ ಸಹಜ ಜ್ಞಾನವನ್ನು ಹಂಚಿಕೊಂಡು ಅವರ ಸಂದೇಹಗಳನ್ನು ನಿವಾರಿಸಲು ನಾಚಿಕೊಳ್ಳುತ್ತಾರೆ. ಇದು ಕೇವಲ ಅವಿದ್ಯಾವಂತರು ಮತ್ತು ಹಳ್ಳಿಗಳಲ್ಲಿ ಒಂದೇ ಅಲ್ಲ, ವಿದ್ಯಾವಂತರು ಎನಿಸಿಕೊಂಡವರಲ್ಲೂ ವ್ಯಾಪಕವಾಗಿ ಕಾಣಬಹುದು. ಈ ದಿಶೆಯಲ್ಲಿ ಒಂದೆರಡು ಉದಾಹರಣೆಗಳನ್ನು ತಿಳಿಯೋಣ.



ಎರಡನೇ ಪಿಯುಸಿಯಲ್ಲಿ ಓದುತ್ತಿದ್ದ ಹದಿನಾರು ವರ್ಷದ ರವಿಗೆ ಇದ್ದಕ್ಕಿದ್ದಂತೆ ಹೊಟ್ಟೆ ನೋವು ಕಾಣಿಸಿಕೊಂಡಿತು. ರವಿ ಹೊಟ್ಟೆನೋವೆಂದು ಹೇಳಿದಾಗ ಮೊದಲಿಗೆ ಮನೆ ಮದ್ದು ಮಾಡಿದ ತಂದೆ ತಾಯಿಗಳು ಮಗನಿಗೆ ತರಗತಿಯಲ್ಲಿ ಓದುವುದು ಕಷ್ಟವಾಗಿ ಹೀಗೆ ಹೇಳುತ್ತಿದ್ದಾನೆಂದು ಭಾವಿಸಿದರು. ದಿನಕಳೆದಂತೆ ರವಿಯ ಹೊಟ್ಟೆನೋವು ಹೆಚ್ಚಾಗಿ ಸುಸ್ತು ಎಂದು ಹೇಳಲು ಪ್ರಾರಂಭಿಸಿದ. ಹಸಿವಿಲ್ಲದೇ ಊಟ ಕಡಿಮೆ ಮಾಡುತ್ತಿದ್ದ. ನಿದ್ದೆ ಬರುವುದಿಲ್ಲ ಮತ್ತು ನಿದ್ದೆಗೆ ಹೋದರೆ ಭಯ ಎಂದ. ಆದರೂ ಕಾಲೇಜಿಗೆ ಹೋಗುತ್ತಿದ್ದ. ಕ್ರಮೇಣ ಓದಿನಲ್ಲಿ ನಿರಾಸಕ್ತಿ, ಏಕಾಗ್ರತೆಯ ಕೊರತೆ, ಸುಸ್ತು ಎಂದು ಹೇಳಿ, ಮನೆಯಲ್ಲೇ ಉಳಿಯುತ್ತಿದ್ದ. ಗತ್ಯಂತರವಿಲ್ಲದೇ ರವಿಯನ್ನು ವೈದ್ಯರಲ್ಲಿ ಕರೆದೊಯ್ದರು. ಅಲ್ಲಿ ಎಲ್ಲ ವೈದ್ಯಕೀಯ ಪರೀಕ್ಷೆಗಳೂ ನಾರ್ಮಲ್ ಆಗಿದ್ದವು. ಹೊಟ್ಟೆ ಸ್ಕ್ಯಾನ್, ಎಂ.ಆರ್.ಐ. ಹೀಗೆ ವೈದ್ಯರ ಶಾಪಿಂಗ್ ಪ್ರಾರಂಭವಾಗಿ ಎರಡು ಮೂರು ತಿಂಗಳುಗಳೇ ಕಳೆದವು. ಆದರೆ ರವಿಯ ತೊಂದರೆ ವಾಸಿಯಾಗಲಿಲ್ಲ. ಯಾರೋ ಏನೋ ಮಾಡಿಸಿರಬೇಕೆಂದು ಮಂತ್ರ-ತಂತ್ರ, ಮಾಟ ಎಲ್ಲವೂ ನಡೆಯಿತು. ಕೊನೆಗೆ ಕೈಮದ್ದು ಹಾಕಿಸಿದ್ದಾರೆಂದು, ಔಷಧ ನೀಡಿ ವಾಂತಿ ಮಾಡಿಸಿದರು. ವಾಂತಿಯಲ್ಲಿದ್ದ ಒಂದು ಗಡ್ಡೆ ನೋಡಿ, ಇನ್ನೇನು ತಮ್ಮ ಮಗ ಅಂತೂ ಇಂತೂ ಬಚಾವಾದ ಎಂದು ಅಂದುಕೊಂಡರು. ಆದರೆ ಹದಿನೈದು ದಿನಗಳ ನಂತರ ಒಂದು ರಾತ್ರಿ ರವಿ ಎದ್ದು ಬಂದು ಅಮ್ಮನ ಹತ್ತಿರ ತನಗೆ ಇರುವುದೇ ಬೇಡ ಅನಿಸುತ್ತದೆ ಎಂದ. ಕೂಡಲೇ ರವಿಯನ್ನು ಕುಟುಂಬ ವೈದ್ಯರ ಹತ್ತಿರ ಕರೆದೊಯ್ದರು. ಕುಟುಂಬ ವೈದ್ಯರು ರವಿಯನ್ನು ಪರೀಕ್ಷಿಸಿ ಮನೋವೈದ್ಯರ ಹತ್ತಿರ ಕರೆದುಕೊಂಡು ಹೋಗಲು ಹೇಳಿದರು. ಒಲ್ಲದ ಮನಸ್ಸಿನಿಂದ ರವಿಯ ಅಪ್ಪ ಅಮ್ಮ ರವಿಯನ್ನು ಮನೋವೈದ್ಯರಲ್ಲಿಗೆ ಕರೆದೊಯ್ದರು.

ವಿವರವಾದ ಮಾಹಿತಿಗಳನ್ನು ಪಡೆದ ವೈದ್ಯರು ರವಿಯ ಮನಃಪರೀಕ್ಷೆ ಮಾಡಿದರು. ರವಿಗೆ ಇತ್ತೀಚಿಗೆ ನಿದ್ದೆಯಲ್ಲಿ ವೀರ್ಯ ಸ್ಖಲನವಾಗಿ ಅದರಿಂದ ತಾನು ಮುಂದೆ ನಪುಂಸಕನಾಗುತ್ತೇನೆಂಬ ಭಯವೇ ಕಾರಣ. ಆದರಿಂದ ರವಿಗೆ ಈ ವಿಧದ ತೊಂದರೆಗಳು ಪ್ರಾರಂಭವಾಗಿವೆ ಎಂದು ತಿಳಿಯಿತು. ರವಿಯ ಅಪ್ಪ ಅಮ್ಮನನ್ನು ಕರೆದು ರವಿಯ ತೊಂದರೆಯನ್ನು ವಿವರಿಸಿ, ರವಿಗೆ ಆಪ್ತ ಸಲಹೆ ಮತ್ತು ಖಿನ್ನತೆಗೆ ಅವಶ್ಯವಾದ ಔಷಧ ಅವಶ್ಯವೆಂದು ತಿಳಿಸಿದರು. ಇದನ್ನು ಕೇಳಿದ ರವಿಯ ತಾಯಿ, ನಮ್ಮ ರವಿ ಬಹಳ ಬುದ್ಧಿವಂತ ಹುಡುಗ, ಅವನಿಗೆ ಇದು ಸಹಜ ಎನ್ನೋದು ಗೊತ್ತಿರಬೇಕು. ಅದನ್ನೆಲ್ಲಾ ಹೇಗೆ ನಾವು ದೊಡ್ಡವರು ಹೇಳೋದು ಹೇಳಿ ಸಾರ್ ಎಂದರು. ವೈದ್ಯರು ಆದರ ಕುರಿತು ವಿವರಿಸಿದ ನಂತರ ಮಗನಿಗೆ ಚಿಕಿತ್ಸೆ ಕೊಡಿಸಲು ಒಪ್ಪಿದರು. ಚಿಕಿತ್ಸೆಯ ನಂತರ ರವಿ ಪೂರ್ಣ ಗುಣಮುಖನಾಗಿ ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಒಳ್ಳೆಯ ಅಂಕ ಗಳಿಸಿದನು.

ಹದಿನಾಲ್ಕು ವರ್ಷ ವಯಸ್ಸಿನ ವಿದ್ಯಾರ್ಥಿನಿಯೊಬ್ಬಳು ಹನ್ನೆರಡು ವರ್ಷಕ್ಕೆ ಋತುಮತಿಯಾದಳು. ಏಕಮಾತ್ರ ಪುತ್ರಿ. ಇಷ್ಟು ಬೇಗ ಋತುಮತಿಯಾದಳಲ್ಲಾ ಎಂದು ಒಂದೆಡೆ ಅಪ್ಪ ಅಮ್ಮನಿಗೆ ಗಾಬರಿ. ಎಷ್ಟೋ ಜನ ಗೆಳತಿಯರು "ಹದಿಮೂರು -ಹದಿನಾಲ್ಕು ವರ್ಷವಾದರೂ ಇನ್ನೂ ಋತುಮತಿಯಾಗಿಲ್ಲ. ಅದು ನಮಗೆ ದೊಡ್ಡ ಚಿಂತೆ ಆಗಿದೆ" ಎಂದು ಹೇಳುವುದನ್ನು ಕೇಳಿದಾಗ, ತಮ್ಮ ಮಗಳು ಋತುಮತಿಯಾದಳು, ತಾನೆಷ್ಟು ಅದೃಷ್ಟವಂತೆ ಎಂದು ಮನದಲ್ಲೇ ತಾಯಿ ಸಂತಸಪಟ್ಟರು. ಹೇಗಿದ್ದರೂ ಮಗಳು ಬುದ್ಧಿವಂತೆ, ಮಗಳಿಗೆ ಋತುಮತಿಯಾಗುವುದರ ಅರ್ಥ ಏನು? ಅದರಿಂದ ಭವಿಷ್ಯದಲ್ಲಿ ಏನಾಗುತ್ತದೆ ಎಂಬುದನ್ನು ಅವಳೇ ತಿಳಿದುಕೊಳ್ಳುತ್ತಾಳೆ. ತಾನು ಹೇಳುವ ಅವಶ್ಯಕತೆ ಇಲ್ಲ ಎಂದು ಮಗಳಿಗೆ ವಿವರಿಸಲೇ ಇಲ್ಲ. ಒಂದು ದಿನ ಮಗಳು (ಹೆಸರು ನಮೂದಿಸುವುದು ಸರಿಯಲ್ಲ, ಆದರೆ ಇದು ನೈಜ ಘಟನೆ) ಇದ್ದಕ್ಕಿದ್ದಂತೆ ಬೆಳಿಗ್ಗೆ ಎದ್ದು, ತನಗೆ ಯಾಕೋ ಏನೋ ಹೊಟ್ಟೆಯಲ್ಲಿ ವಾಕರಿಕೆ ಆಗುತ್ತಿದೆ ಎಂದಳು. ರಾತ್ರಿ ಏನೋ ತಿಂದಿದ್ದು ಅಜೀರ್ಣ ಆಗಿರಬಹುದು ಎಂದು ತಾಯಿ ಮಾತ್ರೆಗಳನ್ನು ಕೊಟ್ಟರು. ಆದರೆ ಮಾರನೇ ದಿನ ಪುನಃ ವಾಂತಿ ಆದಾಗ, ಮಗಳು ಕಳೆದ ಎರಡು ತಿಂಗಳಿಂದ ಮುಟ್ಟಾಗಿಲ್ಲ ಎಂಬುದು ನೆನಪಿಗೆ ಬಂದು ಮಗಳನ್ನು ಕೇಳಿದಳು. ಆದಕ್ಕೆ ಮಗಳು ಏನೇನೋ ಕಾರಣ ಹೇಳಿ ಸುಮ್ಮನಾದಳು. ಮೂರು ದಿನಗಳಾದರೂ ವಾಕರಿಕೆ ನಿಲ್ಲದಿದ್ದಾಗ ವೈದ್ಯರ ಹತ್ತಿರ ಕರೆದೊಯ್ದರು. ವಿದ್ಯಾರ್ಥಿನಿಯನ್ನು ಪರೀಕ್ಷಿಸಿದ ವೈದ್ಯರು ಹುಡುಗಿಯ ರಕ್ತ ಪರೀಕ್ಷೆ ಮಾಡಿದಾಗ, ಮಗಳು ಎರಡು ತಿಂಗಳ ಗರ್ಭಿಣಿ ಎಂದು ತಿಳಿದುಬಂತು. ಇದನ್ನು ತಿಳಿಸಿದಾಗ ತಾಯಿಗೆ ಶಾಕ್. ಅದು ಯಾಕೆಂದು ಮಗಳನ್ನು ವಿಚಾರಿಸಿದಾಗ ತನಗೆ ಫೇಸ್ ಬುಕ್‌ನಲ್ಲಿ ಒಬ್ಬ ಡಿಗ್ರಿ ಹುಡುಗನ ಪರಿಚಯವಾಗಿ ಒಂದು ದಿನ ಇಬ್ಬರೂ ಕಾಫಿಗೆಂದು ಹೋದಾಗ ನಡೆದ ಘಟನೆ ಎಂದು ವಿವರಿಸಿ ಅಳುವುದಕ್ಕೆ ಪ್ರಾರಂಭಿಸಿದಳು. ನಂತರ ಅದನ್ನು ಯಾರಿಗೂ ಹೇಳಬಾರದೆಂದೂ, ಇತರರಿಗೆ ತಿಳಿದರೆ ತಮ್ಮ ಮಾನ ಹೋಗುತ್ತದೆಂದೂ ಕೂಡಲೇ ಗರ್ಭಪಾತ ಮಾಡಿಸಬೇಕೆಂದು ವೈದ್ಯರಿಗೂ ತಿಳಿಸದೇ ಅಲ್ಲಿಂದ ಪಲಾಯನ ಮಾಡಿದರು. ಮುಂದೇನಾಯಿತು ಎಂಬುದರ ಕುರಿತು ವೈದ್ಯರಿಗೂ ಮಾಹಿತಿ ಸಿಗಲಿಲ್ಲ. ಇಂತಹ ಎಷ್ಟೋ ಉದಾಹರಣೆಗಳನ್ನು ತಿಳಿಸಬಹುದು.

ಮೇಲಿನ ಉದಾಹರಣೆಗಳು ಹರೆಯದವರು ಹೇಗೆ ಲೈಂಗಿಕ ಅಜ್ಞಾನದಿಂದ ಬೇರೆಯವರ ಶೋಷಣೆಗಳಿಗೊಳಗಾಗುತ್ತಾರೆ ಎಂಬುದು ಓದುಗರಿಗೆ ಈಗ ಸ್ಪಷ್ಟವಾಗಿರಲು ಸಾಕು.

ಹರೆಯದಲ್ಲಿ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಇದರಿಂದ ಹರೆಯದವರ ಮನಸ್ಸಿನಲ್ಲಿ ತಡೆಯಲಾಗದ ಗೊಂದಲಗಳುಂಟಾಗುತ್ತದೆ. ಸಂದೇಹಗಳು ಪುಟಿದೇಳುತ್ತವೆ. ಸಂದೇಹಗಳನ್ನು ಹಿರಿಯರ ಅಥವಾ ಗೆಳೆಯರ ಹತ್ತಿರ ಕೇಳಲು ನಾಚಿಕೆ. ಸಾಮಾಜಿಕ ಜಾಲತಾಣಗಳಲ್ಲಿ ತೋರಿಸುವ ದೃಶ್ಯಗಳು ಮನಸ್ಸನ್ನು ಮತ್ತಷ್ಟು ಒತ್ತಡಕ್ಕೀಡು ಮಾಡುತ್ತದೆ. ಇದರಿಂದ ಹಲವಾರು ದುಷ್ಪರಿಣಾಮಗಳಾಗುತ್ತವೆ. ಅದಕ್ಕಾಗಿ ಹರೆಯದವರಿಗೆ ಲೈಂಗಿಕ ವಿಜ್ಞಾನದ ಅರಿವು ಅನಿವಾರ್ಯ.

ಕೆಲವು ದಶಕಗಳ ಹಿಂದೆ ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣ ಅವಶ್ಯವೇ ಎಂಬುದರ ಕುರಿತು ಸರ್ಕಾರಿ ಹಂತದಲ್ಲಿ ಚರ್ಚೆ ನಡೆಯಿತು. ಕೆಲವರು ವಿದ್ಯಾರ್ಥಿಗಳಿಗೆ ಲೈಂಗಿಕ ಶಿಕ್ಷಣ ಆವಶ್ಯ ಎಂದು ವಾದಿಸಿದರೆ, ಕೆಲವರು ಅದು ಅಪಾಯ ಎಂದು ವಾದಿಸಿದರು. ಶಾಲೆಗಳಲ್ಲಿ ಯಾವ ಹಂತದಲ್ಲಿ ಲೈಂಗಿಕ ಶಿಕ್ಷಣವನ್ನು ಕೊಡಬೇಕು ಎಂಬುದರ ಕುರಿತು ಪುನಃ ಚರ್ಚೆಯಾಯಿತು. ಪ್ರೌಢಶಾಲಾ ಹಂತದಲ್ಲಿ ಲೈಂಗಿಕ ಶಿಕ್ಷಣ ನೀಡುವುದು ಒಳ್ಳೆಯದು ಎಂದು ತೀರ್ಮಾನಿಸಿದರು. ಅದನ್ನು ವಿದ್ಯಾರ್ಥಿಗಳಿಗೆ ಹೇಳುವುದು ಕಷ್ಟ ಎಂಬ ಅಭಿಪ್ರಾಯ ಉಪಾಧ್ಯಾಯರಿಂದ ಬಂತು. ಅಂತೂ ಈಗ ಲೈಂಗಿಕ ಶಿಕ್ಷಣವನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸಲಾಗಿದೆ ಎಂಬುದು ಸಮಾಧಾನದ ಸಂಗತಿ.

(ಮುಂದುವರಿಯುವುದು)

ಬಿಡುವಿಲ್ಲ, ಈ ಬೆರಳುಗಳು ಭಲೇ ಬ್ಯುಸಿ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ನಮ್ಮ ದೇಹದ ಪ್ರತಿಯೊಂದು ಅಂಗಗಳ ಮೇಲೂ ನಮಗೆ ಒಂದಲ್ಲ ಒಂದು ರೀತಿಯ ನಿಯಂತ್ರಣ ಇರುವ ವಿಚಾರ ಗೊತ್ತಿರುವಂಥದ್ದೇ. ಆ ಅಂಗಗಳ ಮೇಲಿನ ಹಾಗೊಂದು ನಿಯಂತ್ರಣದ ಅಗತ್ಯ, ಅವಶ್ಯಕತೆ ಹಾಗೂ ಪರಿಣಾಮಗಳ ಅರಿವೂ ನಮ್ಮಲ್ಲಿ ಬಹುತೇಕರಿಗೆ ಇರುತ್ತದೆ. ಆದಾಗ್ಯೂ ನಮ್ಮ ದೇಹದ ಯಾವುದಾದರೂ ಒಂದು ಅಂಗ ಮಾತ್ರ ನಮ್ಮ ಮಾತನ್ನೇ ಕೇಳದೇ ಆಗಾಗ ತನ್ನದೇ ಚಟುವಟಿಕೆಗಳಲ್ಲಿ – ಚಟುವಟಿಕೆ ಅನ್ನುವುದಕ್ಕಿಂತಲೂ ಕಿತಾಪತಿಯಲ್ಲಿ– ತೊಡಗಿಸಿಕೊಳ್ಳುತ್ತದೆ ಎಂದರೆ ಅದು ನಮ್ಮ ಬೆರಳುಗಳು. "ಇದು ಬೇಡ..., ಅದು ಬೇಡ...., ಬೇಡಪ್ಪಾ ಮಾಡಬೇಡ" ಎಂದು ಅದೆಷ್ಟೇ ಹೇಳಿದರೂ, ಮನಸ್ಸು ಆ ಕುರಿತು ಜಾಗೃತವಾಗಿದ್ದರೂ ಕೂಡಾ ಅವು ಅದು ಹೇಗೋ ನಮ್ಮ ಗಮನವನ್ನು ತಪ್ಪಿಸಿಕೊಂಡು ಒಂದಿಲ್ಲೊಂದು ಇಂಥ ಕೀಟಲೆಗಳಲ್ಲಿ ತೊಡಗಿಸಿಕೊಳ್ಳದೇ ಇರಲಾರವು!

ನೀವು ಸುಮ್ಮನೇ ಇದ್ದರೂ, ನಿಮ್ಮ ಮೆದುಳು ಕೊಂಚ ವಿರಾಮ ತೆಗೆದುಕೊಳ್ಳೋಣ ಅಂದುಕೊಂಡರೂ, ಈ ಬೆರಳುಗಳು ಮಾತ್ರ, 'ಇಲ್ಲ ಇಲ್ಲ ನಮಗಂತೂ ಏನೂ ಮಾಡದೇ ಸುಮ್ಮನೇ ನಿಶ್ಚಲ ಸ್ಥಿತಿಯಲ್ಲಿ ಇರಲೂ ಸಾಧ್ಯವೇ ಇಲ್ಲ' ಎಂದೆನ್ನುತ್ತಾ ಏನಾದರೊಂದು ಕಾರುಬಾರಿಗೆ ಇಳಿದೇ ಇಳಿಯುತ್ತವೆ. ಆಗಷ್ಟೇ ಶಾಲೆಗೆ ಸೇರಿದ ಪುಟ್ಟ ಪುಟ್ಟ ಮಕ್ಕಳಿಗೆ ಟೀಚರ್, 'ಏನೂ ಮಾಡಬೇಡಿ, ಸುಮ್ಮನೇ ಕುಳಿತುಕೊಳ್ಳಿ, ಮಾತಾಡಬೇಡಿ' ಎಂದು ಅದೆಷ್ಟೇ ಸಲ, ಪರಿ ಪರಿಯಾಗಿ ಹೇಳಿದರೂ ಆ ಪುಟಾಣಿ ಪಿಳ್ಳೆಗಳು ಏನಾದರೊಂದು ನಾನ್‌ಸ್ಟಾಪ್ ಕೆಲಸದಲ್ಲಿ ಇನ್ನಿಲ್ಲದಂತೆ ತೊಡಗಿಸಿಕೊಳ್ಳುತ್ತವಲ್ಲ ಹಾಗೆಯೇ ನಮ್ಮ ಬೆರಳುಗಳು. 'ಐ ಹ್ಯಾವ್ ನಂಥಿಂಗ್ ಟು ಡೂ' ಎಂದು ಈ ನರಮಾನವರಾದರೂ ಆಗಾಗ ಹೇಳುತ್ತಲೇ ಇರುತ್ತಾರೆ. ಏನೇನೋ ಮಾಡಲು ಇದ್ದರೂ ಮಾಡಲು ಏನೂ ಇಲ್ಲವೇ ಇಲ್ಲ ಎಂದು ನೆಪ ಹೇಳಿಯಾದರೂ ಕೆಲವೊಮ್ಮೆ ಸುಮ್ಮನೇ ಖಾಲಿ ಖಾಲಿಯಾಗಿ ಕುಳಿತುಕೊಳ್ಳುವುದೂ ಇದೆಯೆನ್ನಿ. ಆದರೆ ಈ ನಮ್ಮ ಬೆರಳುಗಳೋ ತಾವೆಂದೂ 'ಐ ಹ್ಯಾವ್ ನಂಥಿಂಗ್ ಟು ಡೂ' ಎಂದು ಹೇಳಿಕೊಂಡವರೂ ಅಲ್ಲ, ಹಾಗೆ ನಡೆದುಕೊಂಡವರೂ ಅಲ್ಲ ಎಂದು ಪರಮ ಬಿಗುಮಾನದಿಂದ ಹೇಳಿ ಬೀಗಿಕೊಳ್ಳಬಹುದು. ಆ ಮಟ್ಟಿಗೆ ಅವು ಒಂದಿಲ್ಲೊಂದು ಕೆಲಸದಲ್ಲಿ ಸದಾ ವ್ಯಸ್ತ. ಹಾಗಾದರೆ ಈ ಬೆರಳುಗಳು ಬಿಡುವಿನಲ್ಲಿ ಏನೇನು ಮಾಡುತ್ತವೆ? ಬನ್ನಿ ಒಂದೊಂದಾಗಿ ನೋಡೋಣ.

ಬೆರಳುಗಳ ಚಂಡೆ-ಮದ್ದಳೆ ನಾದ: ಮಾಡಲು ತಮಗೇನೂ ಕೆಲಸ ಇಲ್ಲ ಎನ್ನುವುದು ಖಾತ್ರಿಯಾದ ತಕ್ಷಣ ಬೆರಳುಗಳು ಮಾಡಲಿಳಿಯುವ ಮೊದಲ ಕೆಲಸವೇ ಸಿಕ್ಕ ಸಿಕ್ಕಲ್ಲಿ ಸಣ್ಣಗೆ ಬಡಿಯುತ್ತಾ, ಸಂಗೀತ ರಸ ಧಾರೆ ಹರಿಸುತ್ತಾ ಯಾವುದೋ ವಾದ್ಯ ತಂಡದ ಸದಸ್ಯರಂತೆ ವರ್ತಿಸುವುದು. ಯಾವ ಮೇಲ್ಮೈ ಆದರೂ ಸರಿಯೇ ಬೆರಳುಗಳಿಗೆ ಅವು ಒಂದು ಬಗೆಯಲ್ಲಿ ಚೆಂಡೆ, ಮದ್ದಳೆ, ತಮಟೆ, ಡ್ರಮ್‌ನಂತೆ ಕಾಣಿಸಲಾರಂಭಿಸುತ್ತವೆ. ಮತ್ತೆ ಅರೆಕ್ಷಣವೂ ತಡ ಮಾಡದೇ ಬೆರಳುಗಳು ಅವುಗಳ ಮೇಲೆ ಹಾರಿ ಹಾರಿ ಕುಣಿದು, ನೆಗೆಯುತ್ತಾ ಬಗೆ ಬಗೆಯ ಶಬ್ದ ಹೊರಡಿಸುವಲ್ಲಿ ನಿರತರಾಗುತ್ತವೆ. ತಮಾಷೆ ಅಂದರೆ ಬೆರಳುಗಳು ಈ ಪರಿ ಸಂಗೀತ ಕಚೇರಿ, ಪರಸ್ಪರ ಜುಗಲ್‌ಬಂಧಿಯಲ್ಲಿ ತೊಡಗಿಸಿಕೊಂಡರೂ ಅದು ಕೆಲವೊಮ್ಮೆ ನಮಗೇ ಗೊತ್ತಾಗುವುದಿಲ್ಲ!

ಗಡ್ಡ ನೇವರಿಸೋ 'ದಾಡಿ'ಗಾರ್ಡ್: ಕೆಲಸ ಇಲ್ಲದ ಬೆರಳುಗಳು ಮಾಡೋ ಇನ್ನೊಂದು ಕೆಲಸ ಗಡ್ಡ ನೇವರಿಸುವುದು. ಆರಂಭದಲ್ಲಿ ನಯವಾಗಿ, ವಿನಯವಾಗಿ ಗಡ್ಡವನ್ನು ನೇವರಿಸಲಾರಂಭಿಸಿ, ಕ್ರಮೇಣ ಅದು ಪರ ಪರನೇ ಗಡ್ಡ ಕೆರೆಯುವವರೆಗೂ ಮುಂದುವರಿದೀತು. ಸದಾ ಗಡ್ಡದ ಅಕ್ಕಪಕ್ಕವೇ ಸುಳಿದಾಡುವ ಈ ಬೆರಳುಗಳ ನಡೆ ನುಡಿಯನ್ನು ಗಮನಿಸುತ್ತಿದ್ದರೆ, ಇವುಗಳನ್ನು 'ದಾಡಿ'ಗಾರ್ಡ್ ಎಂದು ಕರೆಯಬಹುದು ನೋಡಿ. ಆಲೋಚನೆ, ಅಸಹಾಯಕತೆ, ಕೋಪ, ನಿಟ್ಟುಸಿರು ಹೀಗೆ ಒಂದೊಂದಕ್ಕೂ ಒಂದೊಂದು ರೀತಿಯಲ್ಲಿ ಗಡ್ಡದ ಕಡೆಗೆ ಬೆರಳುಗಳು ದೌಡಾಯಿಸುತ್ತವೆ. ವಿಶೇಷವೆಂದರೆ ಇದಾವುದೂ ಇಲ್ಲದೇ ಇರುವಾಗಲೂ ಆಗಾಗ ಗಡ್ಡವೆಂಬ ಗುಡ್ಡವನ್ನು ಹತ್ತದೇ ಹೋದರೆ ಬೆರಳುಗಳಿಗೆ ಸಮಾಧಾನವೇ ಇರಲಾರದು.

ಪರಿ ಪರಿ ಪೆನ್ ಆಟ: ಅತ್ಯಂತ ಗಂಭೀರವಾಗಿ ನಡೆಯುತ್ತಿದ್ದ ಮೀಟಿಂಗ್ ಒಂದು ನೀರಸವಾಗುತ್ತಿರುವುದರ ನಿಜ ದ್ಯೋತಕ ಯಾವುದು ಗೊತ್ತೇ? ಯಾವುದೆಂದರೆ ಆ ಮೀಟಿಂಗ್‌ನಲ್ಲಿ ಭಾಗಿಯಾದವರ ಬೆರಳುಗಳು ಪೆನ್ ಜೊತೆಗೆ ಆಟಕ್ಕೆ ಇಳಿಯುವುದು. ಅಷ್ಟೊತ್ತೂ ಸುಮ್ಮನೇ ಎಲ್ಲೋ ನೋಟ್‌ಪ್ಯಾಡ್ ಅಥವಾ ಡೈರಿಯ ನಡುವಿನಲ್ಲಿದ್ದ ಪೆನ್ನು ಬೆರಳುಗಳ ಸುಪರ್ದಿಗೆ ಬಂದು, ಬೆರಳುಗಳು ಒಂದೇ ಸಮನೆ ಪೆನ್‌ನ ಜೊತೆಗೆ ಸರಸ ಸಲ್ಲಾಪಕ್ಕೆ ಇಳಿದಿವೆ ಎಂದರೆ ಮೀಟಿಂಗ್ ಬೋರ್ ಹೊಡೆಸಲಾರಂಭಿಸಿದೆ ಎಂದೇ ಅರ್ಥ. ಬೆರಳುಗಳು ಪೆನ್ನನ್ನು ಅತ್ತಿಂದಿತ್ತ ಲಾಗ ಹಾಕಿಸುತ್ತಾ ಥೇಟ್ ಜಿಮ್ನಾಸ್ಟಿಕ್ ಪಟುವಿನಂತೆ ನಡೆಸಿಕೊಳ್ಳಲಾರಂಭಿಸುತ್ತವೆ ಹಾಗೂ ಲೆಕ್ಕವಿಲ್ಲದಷ್ಟು ಸಲ ಸುಮ್ಮ ಸುಮ್ಮನೆ 'ಟಿಕ್ ಟಾಕ್.. ಟಿಕ್ ಟಾಕ್' ಎಂದು ಕ್ಲಿಕ್ ಮಾಡಿಸಿಕೊಳ್ಳಬೇಕಾದ ಅನಿವಾರ್ಯತೆ ಅವುಗಳದ್ದು.

ಸರಿ ಸರಿ ಕೂದಲ ಸರಿಸು: ವಾಹನಗಳಲ್ಲಿ ವೈಪರ್‌ಗಳಿರುತ್ತವೆ. ಗಾಜಿನ ಮೇಲೆ ಬೀಳುವ ನೀರನ್ನು ಬದಿಗೆ ಸಾರಿಸುವುದು ಅವುಗಳ ಕೆಲಸ. ಕೆಲವರ ಬೆರಳುಗಳದ್ದೂ ಅದೇ ಕೆಲಸ. ಆದರಲ್ಲಿ ಎರಡು ವಿಧಗಳು. ಆಗಾಗ ಮುಖಕ್ಕೆ ಅಡ್ಡ ಬರುವ ಕೂದಲನ್ನು ಥಟ್ಟನೇ ಬದಿಗೆ ಸರಿಸುವುದು ಒಂದಾದರೆ, ಇನ್ನೊಂದು ಕೂದಲು ಅಡ್ಡ ಬರದಿದ್ದರೂ ಸುಮ್ಮನೇ ಆಗಾಗ ಸರಿಸದೇ ಹೋದರೆ ಅದೇನೋ ಬೆರಳುಗಳಿಗೆ ಸಮಾಧಾನವೇ ಇಲ್ಲ. ಮತ್ತೆ ಮತ್ತೆ ಇಳಿಯುತ್ತದೆ ಎಂದು ಗೊತ್ತಿದ್ದರೂ ಸರಿಸುವ ಈ ಕಾಯಕದಲ್ಲಿ ಬೆರಳುಗಳು ಭಾರೀ ಬ್ಯುಸಿ.

ನಟಿಕೆ ಮುರಿಯೋಣು ಬಾ: ಬೆರಳುಗಳು ತಮ್ಮ ಈ ಬಗೆಯ ಕೀಟಲೆಗಳಿಗೆ ಬೇರೆ ವಸ್ತು ಅಥವಾ ಸಾಮಾಗ್ರಿಯ ಸಾಥ್ ದೊರಕದೇ ಇದ್ದಾಗ ಅವು ತಮ್ಮಲ್ಲೇ ಏನಾದರೂ ಬದಲೀ ವ್ಯವಸ್ಥೆ ಮಾಡಿಕೊಳ್ಳಲು ಮುಂದಾಗುತ್ತವೆ. ಅದರ ಪರಿಣಾಮವೇ ನಟಿಕೆ ಮುರಿಯೋದು. ಈ ಕೈಯ ಬೆರಳಿನಿಂದ ಆ ಕೈಯ ಬೆರಳುಗಳ, ಹಾಗೂ ಆ ಕೈಯ ಬೆರಳಿನಿಂದ ಈ ಕೈಯ ಬೆರಳುಗಳ ನಟಿಕೆ ಮುರಿಯುವ ವೈಖರಿ ನೀ ನನಗಾದರೆ ನಾ ನಿನಗಾಗುವೆ ಎಂಬ ತತ್ವವನ್ನು ನೆನಪಿಸುವಂತಿದೆ. ಮುರಿಯುವುದು ಒಳ್ಳೆಯದಲ್ಲ ಎಂದರೂ ಈ ನಟಿಕೆ ಮುರಿಯುವುದು ಅವುಗಳ ಪ್ರಕಾರ ಆ ಪರಿಧಿಯ ಹೊರಗೆ ನಿಲ್ಲುವಂಥದ್ದು.

ನಿಲ್ಲದ ಉಗುರು ಕಚ್ಚಾಟ: ಗುರುತರ ಹೊಣೆಗಾರಿಕೆ ಇರುವ ಬಗ್ಗೆ ಕೇಳಿರುತ್ತೇವೆ. ಆದರೆ ಎಲ್ಲೋ ಕೆಲವರಲ್ಲಿ ಒಂದು ಬಗೆಯ 'ಉಗುರು'ತರ ಹೊಣೆಯೂ ಇದೆ ಎನ್ನುವುದನ್ನು ಹೊರ ಪ್ರಪಂಚಕ್ಕೆ ಸಾಧಿಸಿ ತೋರಿಸುವ ದೀಕ್ಷೆ ತೊಟ್ಟಿರುವಂತೆ ಬೆರಳುಗಳು ತಮ್ಮ ಉಗುರನ್ನು ಕಚ್ಚುವಂತೆ ಮತ್ತೆ ಮತ್ತೆ ಹಲ್ಲಿಗೆ ಸುಪಾರಿ ನೀಡುತ್ತಿರಬೇಕು. ಉಗುರು ಕತ್ತರಿಸಿಕೊಳ್ಳಲು ಬಿಡುವು ಮಾಡಿಕೊಳ್ಳುವ ಬದಲಾಗಿ, ಚೂರೇ ಚೂರು ಬಿಡುವು ಸಿಕ್ಕರೂ ಹೀಗೆ ಉಗುರು ಒಂದೇ ಸಮನೆ ಕತ್ತರಿಸಿಕೊಳ್ಳಲ್ಪಡುವುದರಿಂದ ಆ ಉಗುರುಗಳ ನಿರ್ನಾಮವೇ ಆಗಿರುತ್ತದೆ. ಉಗುರು ಕಚ್ಚುವುದು ಒಳ್ಳೆಯ ಅಭ್ಯಾಸವಲ್ಲ ಎಂದು ಯಾರೇ ಗುರ್ರ್ ಎಂದರೂ ಬೆರಳುಗಳು ಅದಕ್ಕೆಲ್ಲಾ ಸೊಪ್ಪು ಹಾಕದೇ, ಈ ಕಚ್ಚುವ ಕ್ರಿಯೆಗೆ ಶರಣಾಗುತ್ತಲೇ ಇರುತ್ತವೆ.

ಆಗೆಯುವ ಕೆಲಸ ಪ್ರಗತಿಯಲ್ಲಿದೆ: ಬೆರಳುಗಳು ತಮಗಿನ್ನು ಬಿಡುವು ಎಂದಾಕ್ಷಣ ಅವು ಕೇವಲ ಬೆರಳಾಗಿ ಉಳಿಯದೇ ಅಕ್ಷರಶಃ ಡ್ರಿಲ್ಲಿಂಗ್ ಯಂತ್ರವೇನೋ ಎನಿಸುವಂತೆ ಪರಿವರ್ತನೆ ಹೊಂದುವುದೂ ಇದೆ. ಆಗಾಗ ಹೀಗೆ ಮೂಗು, ಕಿವಿಯ ಹೂಳೆತ್ತದೇ ಹೋದರೆ, ಬೆರಳುಗಳು ತಮ್ಮ ಬಿಡುವಿನ ಸಮಯ ಸಾಗುವುದೇ ಇಲ್ಲವೇನೋ ಎನ್ನುವುದನ್ನು ನಿರ್ಧರಿಸಿದಂತೆ ವರ್ತಿಸುತ್ತವೆ. ಬೆರಳಿನ ಈ ಕ್ರಿಯೆ ಅದೆಷ್ಟೋ ಬಾರಿ ಮುಜುಗರಕ್ಕೆ ಕಾರಣವಾದರೂ ಅವು ಮಾತ್ರ ಜಗ್ಗುವ ಮಾತೇ ಇಲ್ಲ ಎಂದೆನ್ನಬಹುದು. ಇದೋ ಎಂದೂ ಪೂರ್ಣಗೊಳ್ಳದ ಕಾಮಗಾರಿ ಎಂದರೆ ಬಹುಶಃ ಯಾರೂ ಮೂಗುಮುರಿಯಲಿಕ್ಕಿಲ್ಲ.

ಮೊಬೈಲ್ ಮೇಲೆ ನಲಿದಾಡೋ: ಈ ಮೇಲೆ ಹೇಳಿದ್ದೆಲ್ಲವನ್ನೂ ಮೀರಿಸುವಂತೆ ಬೆರಳು ಇನ್ನೊಂದು ಬಹುಮುಖ್ಯ ಕೆಲಸದಲ್ಲಿ ಸದಾ ನಿರತವಾಗಿರುತ್ತದೆ. ಅದುವೇ ಮೊಬೈಲ್ ಮೇಲೆ ನಲಿದಾಡುವುದು. ಅದನ್ನು ಸುಮ್ಮನೆ ಕೈಯಲ್ಲಿ ಎತ್ತಿಕೊಳ್ಳುವುದು, ಸ್ಕ್ರೀನ್ ನೋಡುವುದು, ಪವರ್ ಆನ್ ಮಾಡುವುದು, ಮತ್ತೆ ಅನ್‌ಲಾಕ್ ಮಾಡುವುದು, ಹತ್ತು-ಹದಿನೈದು ಸೆಕೆಂಡ್ ಬಿಟ್ಟು ಲಾಕ್ ಮಾಡಿ ಬದಿಗಿರಿಸುವುದು. ಅದಾಗಿ ಐದಾರು ನಿಮಿಷವೂ ಆಗಿರುವುದಿಲ್ಲ ಮತ್ತೊಮ್ಮೆ ಅದೆಲ್ಲವನ್ನೂ ಇನ್ನೊಮ್ಮೆ ಸರಣಿಯಂತೆ ಮಾಡಿ ಮುಗಿಸುವುದು. ಹೀಗೆ ಇನ್ನೊಂದು, ಮತ್ತೊಂದು, ಮಗದೊಂದು ಸಿರೀಸ್ ಮುಂದುವರಿಯುತ್ತಲೇ ಇರುತ್ತದೆ, ನಿಜವಾಗಿಯೂ ಏನಾದರೊಂದು ಮಾಡಲೇಬೇಕಾದ ಕೆಲಸ ಸಿಕ್ಕುವ ತನಕವೂ. ಮೊಬೈಲ್‌ನ ಕಾರಣದಿಂದ ಬೆರಳುಗಳಿಗಂತೂ ಈಗ ಫುಲ್ ಟೈಮ್ ಎಂಪ್ಲಾಯ್‌ಮೆಂಟ್ ಎಂದರೆ ತಪ್ಪಾಗಲಾರದು!

ಈಗ ಸುಮ್ಮನೆ ಯೋಚಿಸಿ. ನೀವು ಏನೇನೂ ಕೆಲಸವಿಲ್ಲವೆಂದು ಭಾರೀ ಬಿಡುವಿನ, ರಿಲ್ಯಾಕ್ಸ್ ಮೂಡ್‌ನಲ್ಲಿ ಇರುವಾಗ, ನಿಮ್ಮ ಆಣತಿಗೆ ಕಾಯದ ಬೆರಳುಗಳು ಇನ್ನು ಅದ್ಯಾವ್ಯಾವ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತವೆ ಎನ್ನುವುದನ್ನು ಒಂದೊಂದಾಗಿ ಗುರುತಿಸಿ ನೋಡೋಣ.

ಓವರ್‌ಡೋಸ್: ಎಲ್ಲರೂ ಉದ್ಯೋಗ ಸೃಷ್ಟಿಯ ಬಗ್ಗೆ ಮಾತನಾಡುತ್ತಾರೆ. ಆದರೆ ತಮಗೆ ಬೇಕಾದ ಉದ್ಯೋಗವನ್ನು ತಾವೇ ಸೃಷ್ಟಿಸಿಕೊಳ್ಳುವ ಸ್ವಾವಲಂಬನೆಯನ್ನು ಸಾಧಿಸುವಲ್ಲಿ ಬೆರಳುಗಳು ಎಂದೋ ಯಶಸ್ವಿಯಾಗಿವೆ!

ಕಿರುಸುದ್ದಿ

ಅರ್ಹ ತಾಯಂದಿರಿಗೆ ಇನ್ನೂ ಹಣ ಬಂದಿಲ್ಲ: ಕಾಮತ್

ಮಂಗಳೂರು: ಅಧಿಕಾರಕ್ಕೆ ಬಂದರೆ ರಾಜ್ಯದ ಪ್ರತೀ ಮನೆಯ ಯಜಮಾನಿಗೆ ಯಾವುದೇ ಷರತ್ತಿಲ್ಲದೇ ಎರಡು ಸಾವಿರ ರೂಪಾಯಿ ನೀಡುತ್ತೇವೆ ಎಂದು ಭರವಸೆ ನೀಡಿದ್ದ ಕಾಂಗ್ರೆಸ್ ಸರ್ಕಾರ, ಇದೀಗ ನಾನಾ ಕಾರಣಗಳನ್ನು ನೀಡಿ ಒಂದೂವರೆ ಲಕ್ಷಕ್ಕೂ ಅಧಿಕ ಫಲಾನುಭವಿಗಳನ್ನು ಯೋಜನೆಯಿಂದ ಹೊರ ಹಾಕಲು ಹುನ್ನಾರ ನಡೆಸಿರುವುದು ಖಂಡನೀಯ ಎಂದು ಶಾಸಕ ವೇದವ್ಯಾಸ ಕಾಮತ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಸ್ಪಷ್ಟ ಮಾರ್ಗಸೂಚಿ, ಸಮರ್ಪಕ ಯೋಜನೆ, ಪಾರದರ್ಶಕ ವ್ಯವಸ್ಥೆಯಿಲ್ಲದೇ ಬೇಕಾಬಿಟ್ಟಿಯಾಗಿ ಯೋಜನೆ ಜಾರಿಗೆ ತಂದ ಪರಿಣಾಮ ರಾಜ್ಯದ ಪ್ರತಿಯೊಬ್ಬ ತೆರಿಗೆದಾರರ ಶ್ರಮದ ಹಣ ಪೋಲಾಗಿದೆ.

ಸಾವಿರಾರು ಮೃತ ಮಹಿಳೆಯರ ಹೆಸರಿನಲ್ಲಿ ನೂರಾರು ಕೋಟಿ ಹಣ ವರ್ಗಾವಣೆಯಾಗಿರುವುದು ರಾಜ್ಯ ಸರ್ಕಾರ ಕೃಪಾಪೋಷಿತ ಲೂಟಿಯಾಗಿದೆ. ಆದರೆ ಅರ್ಹ ತಾಯಂದಿರಿಗೆ ಪ್ರತೀ ತಿಂಗಳು ಬರಬೇಕಿದ್ದ ಬಾಕಿ ಹಣ ಅನೇಕರಿಗೆ ಇದುವರೆಗೂ ಜಮೆಯಾಗಿಲ್ಲ. ಇದು ಕಾಂಗ್ರೆಸ್ ಸರ್ಕಾರದ ದುರಾಡಳಿತ ಹಾಗೂ ಆಡಳಿತ ವೈಫಲ್ಯಕ್ಕೆ ಸಾಕ್ಷಿ ಎಂದು ಅವರು ಹೇಳಿದ್ದಾರೆ. ಬಾಕಿ ಉಳಿಸಿಕೊಂಡಿದ್ದ ಎರಡು ಕಂತಿನ ಐದು ಸಾವಿರ ಕೋಟಿ ಏನಾಯಿತು ಎಂಬ ಬಗ್ಗೆ ಅಧಿವೇಶನದಲ್ಲಿ ಪ್ರಶ್ನಿಸಿದರೂ ಸಮರ್ಪಕ ಉತ್ತರ ನೀಡಿಲ್ಲ. ಒಟ್ಟಾರೆಯಾಗಿ ಗೃಹಲಕ್ಷ್ಮಿ ಹೆಸರಲ್ಲಿ ಕಾಂಗ್ರೆಸ್ ಸರ್ಕಾರ ಬಹುದೊಡ್ಡ ಭ್ರಷ್ಟಾಚಾರ ನಡೆಸುತ್ತಿದ್ದು, ಅದನ್ನು ಮುಚ್ಚಿ ಹಾಕಲು ಲಕ್ಷಾಂತರ ಸ್ವಾಭಿಮಾನಿ ಮಹಿಳೆಯರನ್ನು ಯೋಜನೆಯಿಂದ ತೆಗೆದು ಹಾಕಲಾಗುತ್ತಿರುವುದು ಖಂಡನೀಯ. ಈ ಸರ್ಕಾರದ ಅಸಲಿ ಬಣ್ಣ ಬಯಲಾಗುತ್ತಿದ್ದು ಮುಂದಿನ ದಿನಗಳಲ್ಲಿ ಗೃಹಲಕ್ಷ್ಮಿಯರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಫಾರ್ಮಸಿಸ್ಟರ್‌ಗೆ ಮುಂಬಡ್ತಿ, ಅಭಿನಂದನೆ, ಬಿಳ್ಕೋಡುಗೆ

ಕೋಟ: ಸೇವಾ ಕಾರ್ಯದಲ್ಲಿ ಕರ್ತವ್ಯ ನಿಷ್ಠೆ ಮೆರೆದಾಗ ಸಮಾಜದಲ್ಲಿ ಗೌರವ ಹಾಗೂ ಯಶಸ್ಸು ತಾನಾಗಿಯೇ ಹುಡುಕಿಕೊಂಡು ಬರುತ್ತದೆ ಎಂದು ಆರೋಗ್ಯ ರಕ್ಷಾ ಸಮಿತಿಯ ಪ್ರಮುಖರಾದ ಐರೋಡಿ ವಿಠ್ಠಲ ಪೂಜಾರಿ ಅವರು ಹೇಳಿದರು. ಸಾಸ್ತಾನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಳೆದ ಎಂಟು ವರ್ಷಗಳಿಂದ ಫಾರ್ಮಸಿಸ್ಟರ್ ಆಗಿ ಸುದೀರ್ಘ ಸೇವೆ ಸಲ್ಲಿಸಿ, ಇದೀಗ ಮುಂಬಡ್ತಿ ಪಡೆದು ಜಿಲ್ಲಾ ಆಸ್ಪತ್ರೆಗೆ ವರ್ಗಾವಣೆಗೊಂಡ ಸೀಮಾ ಮ್ಯಾಥ್ಯೂ ಅವರಿಗೆ ಸಾಸ್ತಾನ ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ರಕ್ಷಾ ಸಮಿತಿ ಹಾಗೂ ಸಾರ್ವಜನಿಕರ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ನಾಗರಿಕ ಸನ್ಮಾನ ಮತ್ತು ಗೌರಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಧ್ಯಕ್ಷತೆಯನ್ನು ಮಾಜಿ ತಾ.ಪಂ ಅಧ್ಯಕ್ಷೆ ಜ್ಯೋತಿ ಉದಯ್ ಕುಮಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಾಸ್ತಾನ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ರಾಘವೇಂದ್ರ ರಾವ್, ಪ್ರತಾಪ್ ಶೆಟ್ಟಿ, ಸುರೇಶ್ ಕುಂದರ್, ಲೀಲಾವತಿ ಗಂಗಾಧರ್, ಗಣೇಶ್ ಜಿ, ಸುಲತಾ ಹೆಗ್ಡೆ, ಅಮಿತಾ ಉಮೇಶ್, ಕುಸುಮ ಮನೋಜ್, ಆರೋಗ್ಯ ಕೇಂದ್ರದ ಸಿಬ್ಬಂದಿ ಶೀಲಾ, ಆರೋಗ್ಯ ಕೇಂದ್ರದ ಸಿಬ್ಬಂದಿವರ್ಗ, ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಎಲ್.ಎಚ್.ವಿ. ಕುಮಾರಿ ರಜನಿ ನಿರೂಪಿಸಿದರೆ, ಹೇಮಾವತಿ ವಂದಿಸಿದರು.

ಮಿಜಾರು ಕೆಪಿಎಸ್ ಪ್ರೌಢಶಾಲೆಯಲ್ಲಿ ಮಾದಕ ವಸ್ತು ವಿರೋಧಿ ಜಾಗೃತಿ

ಮೂಡುಬಿದಿರೆ: ಮದ್ಯಪಾನ ಮತ್ತು ಮಾದಕ ವಸ್ತುಗಳ ವ್ಯಸನವು ವ್ಯಕ್ತಿ, ಕುಟುಂಬ ಹಾಗೂ ಸಮಾಜದ ಮೇಲೆ ಗಂಭೀರ ಪರಿಣಾಮ ಬೀರುವ ಸಾಮಾಜಿಕ ಸಮಸ್ಯೆಯಾಗಿದೆ. ಕ್ಷಣಿಕ ಸಂತೋಷ ಅಥವಾ ಒತ್ತಡ ನಿವಾರಣೆಯ ನೆಪದಲ್ಲಿ ಆರಂಭವಾಗುವ ಈ ಅಭ್ಯಾಸವು ಕ್ರಮೇಣ ವ್ಯಸನವಾಗಿ ಆರೋಗ್ಯ, ಆರ್ಥಿಕ ಸ್ಥಿತಿ ಹಾಗೂ ಕುಟುಂಬದ ನೆಮ್ಮದಿಯನ್ನು ಹಾಳು ಮಾಡುತ್ತದೆ ಎಂದು ಮೂಡುಬಿದಿರೆ ಧವಲಾ ಕಾಲೇಜಿನ ಉಪನ್ಯಾಸಕಿ ಮಲ್ಲಿಕಾ ರಾವ್ ಕಳವಳ ವ್ಯಕ್ತಪಡಿಸಿದರು. ಮಿಜಾರು ಬಂಗಬೆಟ್ಟು ಕೆಪಿಎಸ್ ಪ್ರೌಢಶಾಲೆ ವಿಭಾಗದಲ್ಲಿ ಆಯೋಜಿಸಲಾಗಿದ್ದ ಮಾದಕ ವಸ್ತು ವಿರೋಧಿ ದಿನಾಚರಣೆ ಮಾಹಿತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಒತ್ತಡ ಅಥವಾ ದುಃಖಗಳಿಂದ ಪಾರಾಗಲು ಮದ್ಯ ಅಥವಾ ಮಾದಕ ವಸ್ತುಗಳು ಪರಿಹಾರವಲ್ಲ. ಕ್ರೀಡೆ, ಪುಸ್ತಕ ಓದು, ಸಂಗೀತ, ಸಮಾಜಸೇವೆ ಹಾಗೂ ಕುಟುಂಬದೊಂದಿಗೆ ಸಮಯ ಕಳೆಯುವಂತಹ ಆರೋಗ್ಯಕರ ಚಟುವಟಿಕೆಗಳು ಶಾಶ್ವತ ಸಂತೋಷ ನೀಡುತ್ತವೆ. ಆರೋಗ್ಯವಂತ ಸಮಾಜ ಮತ್ತು ವ್ಯಸನಮುಕ್ತ ಯುವಜನತೆಯನ್ನು ನಿರ್ಮಿಸಲು ಎಲ್ಲರೂ ಸಂಕಲ್ಪ ಮಾಡಬೇಕು ಎಂದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸೇವಾ ಪ್ರತಿನಿಧಿ ನಾಗವೇಣಿ ಒಕ್ಕೂಟದ ಅಧ್ಯಕ್ಷ ಪ್ರಕಾಶ್ ಪೂಜಾರಿ, ಪುತ್ತಿಗೆ ವಲಯದ ಮೇಲ್ವಿಚಾರಕಿ ಮಮತಾ, ಅಶ್ವಿನಿ ಹಾಗೂ ರಾಮಚಂದ್ರ ಶೆಟ್ಟಿ, ಪದಾಧಿಕಾರಿ ಅಶ್ವಿನಿ ಶೆಟ್ಟಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.



ಕೇಂದ್ರ ಸರ್ಕಾರದ ಕಾರ್ಯಕ್ರಮವಾದ ಕೃಷಿ ಭೂಮಿ ಉಳಿಸಿ ಅಭಿಯಾನದ ಅಂಗವಾಗಿ ಗೋಣಿಕೊಪ್ಪ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಸಸಿ ನೆಡುವ ಮೂಲಕ ಸಂಸದ ಯದುವೀರ್ ಒಡೆಯರ್ ಜಾಗೃತಿ ಮೂಡಿಸಿದರು. ಈ ಸಂದರ್ಭ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ವೀರಾಜಪೇಟೆ ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ, ಎಂಎಲ್ಸಿ ಮಂಡೇಪಂಡ ಸುಜಾ ಕುಶಾಲಪ್ಪ, ಮಾಜಿ ಶಾಸಕ ಕೆ.ಜಿ ಬೋಪಯ್ಯ, ಮುಖಂಡರಾದ ಕುಟ್ಟಂಡ ಅಜಿತ್ ಕರುಂಬಯ್ಯ, ಅರುಣ್ ಭೀಮಯ್ಯ, ಗುಮ್ಮಟ್ಟೀರ ಕಿಲನ್, ನೆಲ್ಲೀರ ಚಲನ್ ಕುಮಾರ್ ಮತ್ತಿತರರು ಇದ್ದರು.

ಮಹಿಳಾ-ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳಿಗೆ ಮಾಹಿತಿ ಕಾರ್ಯಕ್ರಮ

ಉಡುಪಿ: ಭಾರತೀಯ ವಿಕಾಸ ಟ್ರಸ್ಟ್ ಮಣಿಪಾಲ ವತಿಯಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ ಇವರ ಸಹಯೋಗದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ವಿಭಾಗಗಳ ಮೇಲ್ವಿಚಾರಕಿಯರಿಗೆ ಸೌರಶಕ್ತಿ, ಸಾವಯವ ಕೃಷಿ ಎರೆಹುಳು ಗೊಬ್ಬರ ತಯಾರಿಕೆ ಹಾಗೂ ಯೋಗ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆ ಕುರಿತು ಒಂದು ದಿನದ ಮಾಹಿತಿ ಕಾರ್ಯಕ್ರಮವು ಬುಧವಾರ ಉಡುಪಿಯ ಬಾಲಭವನ ಇಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಅನುರಾಧ ಹಾದಿಮನಿ ಉದ್ಘಾಟಿಸಿ ಮಾತನಾಡಿ, ಮಹಿಳಾ ಮತ್ತು ಮಕ್ಕಳ ಇಲಾಖೆ ಹಾಗೂ ಬಿ.ವಿ.ಟಿ. ಮಹಿಳಾ ಸಬಲೀಕರಣದ ಕ್ಷೇತ್ರದಲ್ಲಿ ಅನೇಕ ತರಬೇತಿಗಳನ್ನು ಜಂಟಿಯಾಗಿ ಹಮ್ಮಿಕೊಳ್ಳುತ್ತಿದ್ದು, ಮಹಿಳೆಯರು ಇದರ ಸದುಪಯೋಗ ಪಡೆದುಕೊಳ್ಳುವಂತೆ ಕರೆ ನೀಡಿದರು.

ಭಾರತೀಯ ವಿಕಾಸ ಟ್ರಸ್ಟ್‌ನ ಕಾರ್ಯಕ್ರಮ ಅಧಿಕಾರಿ ಪ್ರತಿಮಾ ಪ್ರಸ್ತಾವನೆಗೈದರು.

ಮಾಹಿತಿ ಕಾರ್ಯಕ್ರಮದಲ್ಲಿ ಅರುಣ್ ಪಟವರ್ಧನ್ ಮತ್ತು ಪ್ರವೀಣ್ ಸೌರಶಕ್ತಿ ಮತ್ತು ಜೀವನೋಪಾಯ ಸೌರ ಉಪಕರಣಗಳ ಬಗ್ಗೆ, ಸಾವಯವ ಕೃಷಿಕ ಗೋಪಾಲ ನಾಯಕ್ ಅವರು ಸಾವಯವ ಕೃಷಿ ಹಾಗೂ ಎರೆಹುಳು ಗೊಬ್ಬರ ತಯಾರಿಕೆ ಕುರಿತು ಉಪನ್ಯಾಸ ನೀಡಿದರು.

ಪ್ರಕಾಶ್ ನಾಯಕ್ ಅವರು ಯೋಗದ ಮಹತ್ವ ಹಾಗೂ ಅದರ ಆರೋಗ್ಯಕರ ಪ್ರಯೋಜನಗಳ ಬಗ್ಗೆ ಪ್ರಾತ್ಯಕ್ಷಿಕೆಯೊಂದಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ಸಖಿ ಒನ್ ಸ್ಟಾಪ್ ಕೇಂದ್ರದ ಸಿಬ್ಬಂದಿಗಳು, ಸಾಂತ್ವನ ಕೇಂದ್ರದ ಸಿಬ್ಬಂದಿಗಳು, ಬಾಲಭವನದ ಸಿಬ್ಬಂದಿಗಳು ಮತ್ತು ಯೋಜನಾ ಸಿಬ್ಬಂದಿಗಳು ಭಾಗವಹಿಸಿದರು.

ಜಿಲ್ಲಾ ಮಹಿಳಾ ಸಬಲೀಕರಣ ಘಟಕದ ದೀಪಾ ಸ್ವಾಗತಿಸಿ, ವಂದಿಸಿದರು.

ಶ್ರೀಕೃಷ್ಣಪ್ರಸಾದ್ ಗ್ರೂಪ್ ಆಫ್ ಇಂಡಸ್ಟ್ರೀಸ್, ಶ್ರೀಕೃಷ್ಣಪ್ರಸಾದ ಫೌಂಡೇಶನ್ ವತಿಯಿಂದ 'ಸೇವಾ ಸಂಕಲ್ಪ'

ಒಳ್ಳೆಯ ಕೆಲಸಗಾರರನ್ನು ಗೌರವಿಸೋಣ: ಕೋಟ

ಕುಂದಾಪುರ : ಒಂದು ಕಾಲದಲ್ಲಿ ಶಿಕ್ಷಣ ಅನ್ನುವುದು ಸೀಮಿತ ಸಂಖ್ಯೆಯ ಜನರಿಗಷ್ಟೇ ಇತ್ತು. ಆದರೆ ಇವತ್ತು ಕಾಲ ಘಟ್ಟ ಬದಲಾಗಿದೆ. ಪ್ರತಿಭೆ ಇದ್ದರೆ, ಶಕ್ತಿ ಇದ್ದರೆ, ಸಾಮರ್ಥ್ಯ ಮತ್ತು ಓದಬೇಕೆಂಬ ಹಂಬಲ ಇದ್ದರೆ ಸಮಾಜದಲ್ಲಿ ಶ್ರೀಮಂತ ಮತ್ತು ಬಡವರೆನ್ನದೆ ಅವಕಾಶಗಳು ಇಂದು ಮುಕ್ತವಾಗಿದೆ. ಸಾರ್ವಜನಿಕ ಜೀವನದಲ್ಲಿ ಒಳ್ಳೆಯ ಕೆಲಸ ಮಾಡಿದವರನ್ನು ಗೌರವಿಸಬೇಕಾದುದು, ಗುರುತಿಸಬೇಕಾದುದು, ಸಮರ್ಥಿಸಬೇಕಾದುದು ಸಮಾಜದ ಕರ್ತವ್ಯ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಶ್ರೀಕೃಷ್ಣಪ್ರಸಾದ್ ಗ್ರೂಪ್ ಆಫ್ ಇಂಡಸ್ಟ್ರೀಸ್ ಮತ್ತು ಶ್ರೀಕೃಷ್ಣಪ್ರಸಾದ ಫೌಂಡೇಶನ್ ವಂಡಾರು ಬ್ರಹ್ಮಾವರ ಇದರ ವತಿಯಿಂದ ಕೋಟೇಶ್ವರದ ಯುವ ಮೆರಿಡಿಯನ್ ಗ್ರಾಮ್ಮಿ ಬಾಲ್ ರೂಮ್‌ನಲ್ಲಿ ಭಾನುವಾರ ಜರಗಿದ 'ಸೇವಾ ಸಂಕಲ್ಪ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಟಿ.ಎ.ಪೈ, ಶ್ರೀನಿವಾಸ ಮಲ್ಯ, ಜಾರ್ಜ್ ಫೆರ್ನಾಂಡಿಸ್ ಅಂತಹ ಅನೇಕ ನಾಯಕರು ಅವರ ದೂರದೃಷ್ಟಿತ್ವದ ಫಲವಾಗಿ ಇಂದು ಬಹಳಷ್ಟು ಅಭಿವೃದ್ಧಿಯನ್ನು ಕಾಣುವಂತಾಗಿದೆ. ಹಿಂದಿನ ತಲೆಮಾರು ಮಾಡಿದ ಶ್ರಮವನ್ನು ನೆನಪಿಸಬೇಕಾದ ಅನಿವಾರ್ಯತೆ ಇದೆ. ಇತರ ರಾಜ್ಯ, ಜಿಲ್ಲೆಗಳಿಗೆ ಇತರ ವ್ಯವಸ್ಥೆಗಳಿಗೆ ಹೋಲಿಸಿದರೆ ನಮ್ಮ ಜಿಲ್ಲೆಯ ಜನರು ಅತ್ಯಂತ ಪ್ರತಿಭಾವಂತರು ಎನ್ನುವ ಗೌರವ ಮತ್ತು ಸಾಮರ್ಥ್ಯಕ್ಕೆ ಸಾಕ್ಷಿಯಾಗಿ ಬೆಳೆದು



ನಿಂತಿದ್ದೇವೆ ಎಂದು ಹೇಳಿದ ಅವರು, ಸಂಪತ್ ಶೆಟ್ಟಿ ಅವರು ಶಿಕ್ಷಣಕ್ಕೆ ಒತ್ತು ಕೊಟ್ಟು ಬಡ ವಿದ್ಯಾರ್ಥಿಗಳಿಗೆ ತಮ್ಮ ಆರ್ಥಿಕ ಶಕ್ತಿಯನ್ನು ನೀಡಿ ಸುಮಾರು ಒಂದು ಕೋಟಿ ರೂ. ತನಕ ವಿತರಣೆ ಮಾಡುತ್ತಿರುವುದು ಒಂದು ಅಪರೂಪದ ಕಾರ್ಯಕ್ರಮ. ಸಂಪತ್ ಕುಮಾರ್ ಅಂತಹ ವ್ಯಕ್ತಿಗಳು ಶಕ್ತಿಗಳಾಗಿ ನಿಮ್ಮ ಮುಂದೆ ನಿಂತು ನಮ್ಮ ಕೈಯಲ್ಲಾದ ಸಹಾಯವನ್ನು ಮಾಡುತ್ತೇವೆ ಎಂದರೆ ಅದೊಂದು ಬಹಳ ದೊಡ್ಡ ಕಲ್ಪನೆ, ಕನಸು ಮತ್ತು ನನಸಾಗಿರುವ ಒಂದು ಸಾರ್ಥಕ ಶ್ರಮದ ಸಂಕೇತ.

ಶ್ರೀಕೃಷ್ಣಪ್ರಸಾದ್ ಗ್ರೂಪ್ ಆಫ್ ಇಂಡಸ್ಟ್ರೀಸ್ ಸುಮಾರು 4 ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳಿಗೆ, ಜನರಿಗೆ ಉದ್ಯೋಗ ನೀಡುತ್ತಿರುವುದು ಶ್ಲಾಘನೀಯ ಎಂದು ಅವರು ಅಭಿನಂದಿಸಿದರು.

ಮುಖ್ಯ ಅತಿಥಿಯಾಗಿದ್ದ ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಮಾತನಾಡಿ, ಸರಕಾರ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಮಹತ್ವನ್ನು ನೀಡಬೇಕು. ಆದರೆ ಅದು ನಾವೆಲ್ಲ ತಿಳಿದಿರುವ ಮಟ್ಟಿಗೆ ಸಿಗುತ್ತಿಲ್ಲ. ಸಂಪತ್ ಶೆಟ್ಟಿ ಅವರು ದುಡಿಮೆಯ ಒಂದು ಭಾಗವನ್ನು ಶಿಕ್ಷಣಕ್ಕೆ ಮೀಸಲಿಟ್ಟು, ಮಕ್ಕಳನ್ನು ದತ್ತು ಸ್ವೀಕರಿಸಿ, ವಿದ್ಯಾರ್ಥಿವೇತನ ವಿತರಿಸಿ ಅವರ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುತ್ತಿರುವುದು ಪ್ರಶಂಸನೀಯ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಶ್ರೀಕೃಷ್ಣಪ್ರಸಾದ್ ಗ್ರೂಪ್ ಆಫ್ ಇಂಡಸ್ಟ್ರೀಸ್‌ನ ಚೇರ್‌ಮನ್ ಸಂಪತ್ ಶೆಟ್ಟಿ ಮಾತನಾಡಿ, ಶಿಕ್ಷಣದ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ. ಪ್ರತಿಭಾವಂತ ಬಡ ವಿದ್ಯಾರ್ಥಿಗಳ ಕನಸಿಗೆ ಮುನ್ನಡಿ ಬರೆಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮ ನಡೆಸಲಾಗುತ್ತಿದೆ. ದಾನ ನೀಡುವ ಶೇ.80 ರಷ್ಟನ್ನು ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ, ಅವರ ಕನಸಿಗೆ ಜೀವ ಕೊಡುವ ಕಾರ್ಯಕ್ರಮಗಳಿಗೆ ವಿನಿಯೋಗ ಮಾಡಲಾಗುತ್ತಿದೆ. ಶೈಕ್ಷಣಿಕ ಪ್ರೋತ್ಸಾಹ ಪಡೆದ ಒಂದಷ್ಟು ಮಕ್ಕಳು ಐಎಎಸ್ ಅಥವಾ ಐಪಿಎಸ್ ಮಾಡಬೇಕು. ಈ ನಿಟ್ಟಿನಲ್ಲಿ ಓದುವವರಿದ್ದರೆ, ಅವರ ಕನಸಿಗೆ ನೆರವಾಗುತ್ತೇನೆ ಎಂದರು.

- ಟಿ.ಎ.ಪೈ, ಶ್ರೀನಿವಾಸ ಮಲ್ಯ, ಜಾರ್ಜ್ ಫೆರ್ನಾಂಡಿಸ್ ಅಂತಹ ಅನೇಕ ನಾಯಕರು ಅವರ ದೂರದೃಷ್ಟಿತ್ವದ ಫಲವಾಗಿ ಇಂದು ಬಹಳಷ್ಟು ಅಭಿವೃದ್ಧಿಯನ್ನು ಕಾಣುವಂತಾಗಿದೆ.
- ನಮ್ಮ ಜಿಲ್ಲೆಯ ಜನರು ಅತ್ಯಂತ ಪ್ರತಿಭಾವಂತರು ಎನ್ನುವ ಗೌರವ ಮತ್ತು ಸಾಮರ್ಥ್ಯಕ್ಕೆ ಸಾಕ್ಷಿಯಾಗಿ ಬೆಳೆದು ನಿಂತಿದ್ದೇವೆ
- ಶ್ರೀಕೃಷ್ಣಪ್ರಸಾದ್ ಗ್ರೂಪ್ ಆಫ್ ಇಂಡಸ್ಟ್ರೀಸ್ ಸುಮಾರು 4 ಸಾವಿರಕ್ಕೂ ಮಿಕ್ಕಿ ವಿದ್ಯಾರ್ಥಿಗಳಿಗೆ, ಜನರಿಗೆ ಉದ್ಯೋಗ ನೀಡುತ್ತಿರುವುದು ಶ್ಲಾಘನೀಯ

ಇದೇ ಸಂದರ್ಭ ಕಲ್ಲಡ್ಕ ಶ್ರೀರಾಮ ವಿದ್ಯಾ ಕೇಂದ್ರಕ್ಕೆ ನೆರವು, ಕುಂದಾಪುರ ಬಿ.ಬಿ.ಹೆಗ್ಡೆ ಕಾಲೇಜಿಗೆ 50 ಕಂಪ್ಯೂಟರ್ ವಿತರಣೆ, 6 ಸರಕಾರಿ ಶಾಲೆಗಳಿಗೆ ಕಂಪ್ಯೂಟರ್ ವಿತರಣೆ, ಆದುರೋ ಫೌಂಡೇಶನ್ ಮೂಲಕ ಬಡ ಕುಟುಂಬದ ವಿದ್ಯಾಭ್ಯಾಸಕ್ಕೆ ಮತ್ತು ವೈದ್ಯಕೀಯ ಕ್ಯಾಂಪ್‌ಗೆ ಸಹಾಯಧನ, 2025-26ನೇ ಸಾಲಿಗೆ ಬಡ ಕುಟುಂಬದಿಂದ ಬಂದ 5 ವಿದ್ಯಾರ್ಥಿಗಳ ದತ್ತು ಸ್ವೀಕಾರ ಮತ್ತು 2026-27ನೇ ಸಾಲಿಗೆ 14 ವಿದ್ಯಾರ್ಥಿಗಳ ದತ್ತು ಸ್ವೀಕಾರ, ವಿದ್ಯಾರ್ಥಿ ವೇತನ ವಿತರಣೆ, ವಂಡಾರು ಮತ್ತು ಸ್ಯಾಬ್ರಕಟ್ಟೆ ಶಾಲೆಯ ಅತಿಥಿ ಶಿಕ್ಷಕರ ವೇತನ ಪಾವತಿ, ವೈದ್ಯಕೀಯ ಸಹಾಯಧನ ಮತ್ತು ಶಾಲಾ ಮಕ್ಕಳಿಗೆ ಪುಸ್ತಕ, ಬ್ಯಾಗ್ ಮತ್ತು ಕೊಡೆ ವಿತರಣೆ ಸೇರಿದಂತೆ ಸುಮಾರು 93.64 ಲಕ್ಷ ಮೌಲ್ಯದ ನೆರವನ್ನು ವಿತರಿಸಲಾಯಿತು.

ಉದ್ಯಮಿ ದಿನೇಶ ಹೆಗ್ಡೆ ಮೊಳಹಳ್ಳಿ, ಕುಂದಾಪುರ ಬಿ.ಬಿ.ಹೆಗ್ಡೆ ಕಾಲೇಜಿನ ಪ್ರಾಂಶುಪಾಲ ಡಾ. ಕೊತ್ತಾಡಿ ಉಮೇಶ ಶೆಟ್ಟಿ, ಜನಸೇವಾ ಟ್ರಸ್ಟ್ ಅಧ್ಯಕ್ಷ ವಸಂತ ಗಿಳಿಯಾರ್, ಯುವ ಮೆರಿಡಿಯನ್‌ನ ಆಡಳಿತ ನಿರ್ದೇಶಕರಾದ ಬಿ.ಉದಯಕುಮಾರ್ ಶೆಟ್ಟಿ ಮತ್ತು ಬಿ.ವಿನಯ ಕುಮಾರ್ ಶೆಟ್ಟಿ, ಕುಂದಾಪುರದ ನ್ಯಾಯವಾದಿ ಶಿರಿಯಾರ ಗೋಪಾಲಕೃಷ್ಣ ಶೆಟ್ಟಿ, ಪತ್ರಕರ್ತ ರಾಜೇಶ ಕೆ.ಸಿ., ಸೋನಾಲಿ ಎಸ್.ಶೆಟ್ಟಿ ಉಪಸ್ಥಿತರಿದ್ದರು. ಎಳ್ಳಂಪಳ್ಳಿ ಸಂತೋಷ ಶೆಟ್ಟಿ ಸ್ವಾಗತಿಸಿ ನಿರೂಪಿಸಿದರು. ಶ್ರೀನಿವಾಸ ಶೆಟ್ಟಿ ವಂದಿಸಿದರು.

ಕೃಷ್ಣಾಪುರ ಸರ್ಕಾರಿ ಶಾಲೆಯಲ್ಲಿ ಉಚಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮ

ಸುರತ್ಕಲ್: ಪುಸ್ತಕಗಳು ಜ್ಞಾನವೃದ್ಧಿಗೆ ಮಾಧ್ಯಮ. ಸರಕಾರಿ ಶಾಲಾ ವಿದ್ಯಾರ್ಥಿಗಳು ಸಾಧನೆಯ ಹಿರಿಮೆಯನ್ನು ಹೆಚ್ಚಿಸಿ ಗೌರವಪೂರ್ಣ ಪ್ರಜೆಯಾಗಲು ಪ್ರತಿಜ್ಞಾಬದ್ಧರಾಗಬೇಕು ಎಂದು ಮಂಗಳೂರು ನಗರ ಉತ್ತರ ಶಾಸಕ ಡಾ. ಭರತ್ ಶೆಟ್ಟಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರಕಾರಿ ಪ್ರೌಢಶಾಲೆ 5 ನೇ ಬ್ಲಾಕ್ ಕೃಷ್ಣಾಪುರ ಕಾಟಿಪಳ್ಳ ಇಲ್ಲಿಯ ವಿದ್ಯಾರ್ಥಿಗಳಿಗೆ ಹಳೆ ವಿದ್ಯಾರ್ಥಿ ಸಂಘದ ಪ್ರಾಯೋಜಕತ್ವದಲ್ಲಿ ಒದಗಿಸಲಾದ ಉಚಿತ ನೋಟ್ ಪುಸ್ತಕ ವಿತರಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿ ಲೋಕೋಪಯೋಗಿ ಇಲಾಖೆ ಮಂಗಳೂರು ವರ್ತುಲದ ಅಧೀಕ್ಷಕ ಅಭಿಯಂತರ ಗೋಕುಲ್ ದಾಸ್ ಮಾತನಾಡಿ, ವಿದ್ಯಾರ್ಥಿಗಳು ಸ್ಪಷ್ಟ ಗುರಿಯೊಂದಿಗೆ ಅಧ್ಯಯನ ಕೈಗೊಂಡಾಗ ನಿಶ್ಚಿತ ಫಲಿತಾಂಶ ದೊರಕುತ್ತದೆ. ಸಾಮರ್ಥ್ಯಕ್ಕೆ ಅನುಗುಣವಾದ ಶಿಕ್ಷಣದಿಂದ ಯಾರೊಬ್ಬರೂ ವಂಚಿತರಾಗದಂತೆ ನಿಗಾ ವಹಿಸುವುದು ಹಾಗೂ ಪೂರಕ ವ್ಯವಸ್ಥೆ ಕಲ್ಪಿಸುವುದು ಸಂಘ ಸಂಸ್ಥೆಗಳ ಜವಾಬ್ದಾರಿ ಎಂದು ನುಡಿದರು.



> ಸರಕಾರಿ ಸಂಸ್ಥೆಯ ವಿದ್ಯಾರ್ಥಿಗಳು ಬಡತನದ ಕೀಳರಿಮೆಯಿಂದ ಹೊರಬಂದು ಗುಣಮಟ್ಟದ ಶಿಕ್ಷಣ ಪಡೆಯಬೇಕೆಂಬ ಧ್ಯೇಯದಿಂದ ಶ್ರಮಿಸುತ್ತಿರುವ ಹಳೆ ವಿದ್ಯಾರ್ಥಿ ಸಂಘದ ಶ್ರಮ ಶ್ಲಾಘನೀಯ
>
> ■ ಡಾ. ವೈ. ಭರತ್ ಶೆಟ್ಟಿ, ಶಾಸಕರು

ನವ ಮಂಗಳೂರು ಬಂದರ ಮಾಜಿ ಟ್ರಸ್ಟಿ ಪಿ. ಸುಧಾಕರ ಕಾಮತ್ ಅಧ್ಯಕ್ಷತೆ ವಹಿಸಿ ಸಂದರ್ಭೋಚಿತವಾಗಿ ಮಾತನಾಡಿದರು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಅಶೋಕ್ ಕೃಷ್ಣಾಪುರ, ಉಭಯ ಸಂಸ್ಥೆಗಳ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಕರುಣಾಕರ ದೇವಾಡಿಗ ಮತ್ತು ನರೇಶ್ ಅಮೀನ್, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ಚಂದ್ರಾವತಿ ವೇದಿಕೆಯಲ್ಲಿದ್ದರು.

ಪ್ರೌಢಶಾಲಾ ಮುಖ್ಯಸ್ಥೆ ಝುಹಿದಾ ಮುತಹರ ಬಿ. ಸ್ವಾಗತಿಸಿ ಪ್ರಸ್ತಾವನೆಗೈದರು. ಜಾಹ್ನವಿ ಕೆ. ವಂದಿಸಿದರು. ಸೌಮ್ಯ ನಾಗೇಶ್ ಕಾರ್ಯಕ್ರಮ ನಿರೂಪಿಸಿದರು.

ಹಳೆ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಪ್ರಶಾಂತ್ ಆಚಾರ್ಯ, ಸತೀಶ್ ಸಾಲಿಯಾನ್, ಮಾಧವ ಬಂಗೇರ, ವಿಶ್ವನಾಥ ಮೂಲ್ಯ, ಸೈಮನ್ ಮೊಂತೇರೋ ಹಾಗೂ ಪೋಷಕರು ಉಪಸ್ಥಿತರಿದ್ದರು.

ವಿಶಿಷ್ಟ ಸಾಧಕರಿಗೆ ವಿದ್ಯಾರ್ಥಿ ವೇತನ ವಿತರಣೆ, ಸಾಧಕ ಕ್ರೀಡಾಪಟುಗಳಿಗೆ ಗೌರವ ಸನ್ಮಾನ

ಕುಂದಾಪುರ : ಮೊಳಹಳ್ಳಿ ದಿನೇಶ್ ಹೆಗ್ಡೆ ಜಯರತ್ನ ಟ್ರಸ್ಟ್, ಮೊಳಹಳ್ಳಿ ಇವರ ಆಶ್ರಯದಲ್ಲಿ ರಾಜ್ಯ ಮಟ್ಟದಲ್ಲಿ ಶೈಕ್ಷಣಿಕ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ರಾಜ್ಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾ ಸಾಧನೆಗೈದ ಕ್ರೀಡಾಪಟುಗಳಿಗೆ ಗೌರವ ಸನ್ಮಾನ, ಮೊಳಹಳ್ಳಿ ಗ್ರಾಮದ ವಿಶಿಷ್ಟ ಶೈಕ್ಷಣಿಕ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ಹಾಗೂ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮವು ಬಿದ್ಕಲ್‌ಕಟ್ಟೆಯ ಕರ್ನಾಟಕ ಪಬ್ಲಿಕ್ ಸ್ಕೂಲ್ (ಪ್ರೌಢ ಶಾಲಾ ವಿಭಾಗ)ದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟ್ರಸ್ಟ್‌ನ ಸಂಸ್ಥಾಪಕ ಮೊಳಹಳ್ಳಿ ದಿನೇಶ್ ಹೆಗ್ಡೆ ವಹಿಸಿದ್ದರು. ನಿವೃತ್ತ ಪ್ರಾಂಶುಪಾಲ ಎಂ. ಬಾಲಕೃಷ್ಣ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಶುಭ ಹಾರೈಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕುಂದಾಪುರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಶೋಭಾ ಶೆಟ್ಟಿ ಮಾತನಾಡಿದರು. ನಿವೃತ್ತ ತೋಟಗಾರಿಕಾ ಇಲಾಖೆ ನಿರ್ದೇಶಕ ಜಯಶೀಲ ಶೆಟ್ಟಿ ಟ್ರಸ್ಟ್‌ನ ಕಾರ್ಯಚಟುವಟಿಕೆಗಳ ಸಂಚಿಕೆಯನ್ನು ಅನಾವರಣಗೊಳಿಸಿದರು. ಬಿದ್ಕಲ್‌ಕಟ್ಟೆಯ ಕರ್ನಾಟಕ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲ ವಿಘ್ನೇಶ್ವರ ಭಟ್ ಬಿ. ಮತ್ತು ಉಪಪ್ರಾಂಶುಪಾಲ ಕರುಣಾಕರ ಶೆಟ್ಟಿ ಟ್ರಸ್ಟ್‌ನಿಂದ ಶಾಲೆಗೆ ದೊರೆತಿರುವ ವಿವಿಧ ಸವಲತ್ತುಗಳನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.



ಈ ಸಂದರ್ಭದಲ್ಲಿ ಒಟ್ಟು 30 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿ ಗೌರವಿಸಲಾಯಿತು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಪ್ರೀತಂ ಪೂಜಾರಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ತೃತೀಯ ರ‍್ಯಾಂಕ್ ಗಳಿಸಿದ ಮಾನ್ಯ ಅವರಿಗೆ ತಲಾ 25,000 ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು. ಅಲ್ಲದೆ, ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲಿ ಸಾಧನೆಗೈದ ಕ್ರೀಡಾಪಟು ಗೌರವ್ ಅವರನ್ನು ವಿಶೇಷವಾಗಿ ಗೌರವಿಸಲಾಯಿತು.

ಎಕ್ಸಲೆಂಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಚೇರ್‌ಮೆನ್ ಎಂ.ಮಹೇಶ ಹೆಗ್ಡೆ, ಶಾಲೆಯ ಶಿಕ್ಷಕರು, ಶಿಕ್ಷಕೇತರ ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಹಾಗೂ ಫಲಾನುಭವಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಿಕ್ಷಕ ಗಿರೀಶ್ ಎಂ.ಎನ್. ಸ್ವಾಗತಿಸಿದರು. ಟ್ರಸ್ಟಿ ಸಂತೋಷ್ ಕಾಂಚನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಗಣೇಶ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಆದರ್ಶ ವಂದಿಸಿದರು.

ಕಾನೂನು ಅರಿವು ಕಾರ್ಯಕ್ರಮದಲ್ಲಿ ಎಸ್‌ಐ ಆಂಜನೇಯ ರೆಡ್ಡಿ ಸಲಹೆ

ಪೊಲೀಸ್ ನೇಮಕಾತಿಗೆ ಅರ್ಹ ಆಟೋ ಚಾಲಕರು ಅರ್ಜಿ ಸಲ್ಲಿಸಲಿ

ಸುಬ್ರಹ್ಮಣ್ಯ: ಶೀಘ್ರದಲ್ಲಿ ಪೊಲೀಸ್ ಇಲಾಖೆಗೆ ನೇಮಕಾತಿ ನಡೆಯಲಿದೆ. ಅರ್ಹ ಆಟೋ ಚಾಲಕರು ಇಲಾಖೆಗೆ ಸೇರಲು ಅರ್ಜಿ ಸಲ್ಲಿಸಿ. ಅದಕ್ಕೆ ಯಾವುದೇ ರೀತಿಯ ನೆರವು ಬೇಕಾದರೂ ನೇರವಾಗಿ ಠಾಣೆಗೆ ಬಂದು ನನ್ನನ್ನು ಭೇಟಿಯಾಗಿ. ವೈಯಕ್ತಿಕವಾಗಿ ನಾನು ಸಂಪೂರ್ಣ ಸಹಾಯ ಮಾಡುತ್ತೇನೆ ಎಂದು ಸುಬ್ರಹ್ಮಣ್ಯ ಠಾಣಾಧಿಕಾರಿ ಆಂಜನೇಯ ರೆಡ್ಡಿ ಹೇಳಿದರು.

ಸುಬ್ರಹ್ಮಣ್ಯ ಪೊಲೀಸ್ ಠಾಣೆ, ಕುಕ್ಕೆ ಶ್ರೀ ಆಟೋ ಚಾಲಕ-ಮಾಲಕರ ಸಂಘ ಮತ್ತು ಬಿ.ಯಂ.ಎಸ್. ಆಟೋ ಚಾಲಕ-ಮಾಲಕರ ಸಂಘದ ಆಶ್ರಯದಲ್ಲಿ ಆಟೋ ಚಾಲಕರಿಗಾಗಿ ಗುರುವಾರ ನಡೆದ ವಿಶೇಷ ಕಾನೂನು ಅರಿವು ಕಾರ್ಯಾಗಾರದಲ್ಲಿ ಅವರು ಉಪನ್ಯಾಸ ನೀಡಿದರು.

ಕಾನೂನು ಅರಿವು

ಆಟೋದಲ್ಲಿ ಕಾನೂನು ಪ್ರಕಾರ ಎಷ್ಟು ಜನರಿಗೆ ಅವಕಾಶ ಇದೆಯೇ ಅಷ್ಟೇ



ಜನರನ್ನು ಹಾಕಬೇಕು. ತಪ್ಪಿದಲ್ಲಿ ಸೂಕ್ತ ದಂಡ ವಿಧಿಸಲಾಗುವುದು. ದಿನಪೂರ್ತಿ ದುಡಿದ ಹಣವನ್ನು ದಂಡ ಕಟ್ಟಲು ವ್ಯರ್ಥ ಮಾಡಬೇಡಿ. ಕ್ಷೇತ್ರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರಿಗೆ ಆಟೋ ಚಾಲಕರು ಸಹಕರಿಸಬೇಕು. ಯಾವುದೇ ರೀತಿಯ ಕಾನೂನು ಬಾಹಿರ ಚಟುವಟಿಕೆ ಕಂಡು ಬಂದರೆ ತಕ್ಷಣ ಠಾಣೆಗೆ ಮಾಹಿತಿ ನೀಡಬೇಕು. ಸಾಧ್ಯವಾದರೆ ವೀಡಿಯೋ ಚಿತ್ರೀಕರಣ ಮಾಡಿಕೊಳ್ಳಿ ಎಂದು ಆಂಜನೇಯ ರೆಡ್ಡಿ ಸಲಹೆ ನೀಡಿದರು.

ಕುಕ್ಕೆಶ್ರೀ ಆಟೋ ಚಾಲಕ ಸಂಘದ ಗೌರವಾಧ್ಯಕ್ಷ ಉಮೇಶ್ ಕೆ.ಎನ್., ಅಧ್ಯಕ್ಷ ಭುವನೇಶ್ ಆಗೋಳಿಕಜೆ, ಬಿ.ಎಂ.ಎಸ್. ಆಟೋ ಸಂಘದ ಗೌರವಾಧ್ಯಕ್ಷ ಗಿರಿಧರ್ ಹೊಸೋಳಿಕೆ, ಅಧ್ಯಕ್ಷ ಕಿರಣ್ ಪೈಲಾಜೆ, ಪ್ರಮುಖರಾದ ಗಿರೀಶ್ ಆಚಾರ್ಯ ಪೈಲಾಜೆ, ರವಿ ಕಕ್ಕೆಪದವು, ಆಟೋ ಸಂಘದ ಪದಾಕಾರಿಗಳು, ಚಾಲಕರು ಉಪಸ್ಥಿತರಿದ್ದರು. ಆಟೋ ಚಾಲಕ ಉಮೇಶ್ ಜೆ. ಕಾರ್ಯಕ್ರಮ ನಿರ್ವಹಿಸಿದರು.

ಪ್ರಶ್ನೋತ್ತರ

ಆಟೋ ಚಾಲಕರಿಗೆ ಪ್ರಶ್ನೋತ್ತರ ಕಾರ್ಯಕ್ರಮ ನಡೆಸಿ ನೇರವಾಗಿ ಠಾಣಾಧಿಕಾರಿ ಅವರೊಂದಿಗೆ ತಮ್ಮ ಪ್ರಶ್ನೆಗಳನ್ನು ಕೇಳುವ ಅವಕಾಶ ಕಲ್ಪಿಸಿಕೊಡಲಾಯಿತು. ಚಾಲಕರು ಕೇಳಿದ ಅನೇಕ ಪ್ರಶ್ನೆಗಳಿಗೆ ಆಂಜನೇಯ ರೆಡ್ಡಿ ಉತ್ತರಿಸಿದರು. ಅಲ್ಲದೆ ಆಟೋ ಚಾಲಕರ ಎಲ್ಲಾ ಸಮಸ್ಯೆ ಪರಿಹರಿಸಲು ಪ್ರಯತ್ನಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಗಂಗೊಳ್ಳಿಯ ಮಲ್ಯರಬೆಟ್ಟು ಅಂಗನವಾಡಿ ಕೇಂದ್ರದಲ್ಲಿ

ಮಕ್ಕಳಿಗೆ ಶೈಕ್ಷಣಿಕ ಪರಿಕರಗಳ ವಿತರಣೆ



ಕುಂದಾಪುರ : ಗಂಗೊಳ್ಳಿಯ ಬಿಲ್ಲವರ ಹಿತರಕ್ಷಣಾ ವೇದಿಕೆ ಮತ್ತು ಕಲಾಶ್ರೀ ಶಿಕ್ಷಣ ಪ್ರೇಮಿ ಬಳಗದ ವತಿಯಿಂದ ಮಕ್ಕಳಿಗೆ ಉಚಿತ ನೋಟ್ಸ್ ಪುಸ್ತಕ ಹಾಗೂ ಶೈಕ್ಷಣಿಕ ಪರಿಕರಗಳನ್ನು ಗಂಗೊಳ್ಳಿಯ ಮಲ್ಯರಬೆಟ್ಟು ಅಂಗನವಾಡಿ ಕೇಂದ್ರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ವಿತರಿಸಲಾಯಿತು.

ಮಲ್ಯರಬೆಟ್ಟು ಅಂಗನವಾಡಿಯ ಪ್ರಾರಂಭೋತ್ಸವವನ್ನು ಅಂಗನವಾಡಿಯ ಬಾಲವಿಕಾಸ ಸಮಿತಿ ಅಧ್ಯಕ್ಷೆ ಅನಿತಾ ಖಾರ್ವಿ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು. ಅಂಗನವಾಡಿಗೆ ಆಗಮಿಸಿದ ಪುಟಾಣಿಗಳಿಗೆ ತಿಲಕವನ್ನಿಟ್ಟು ಆರತಿ ಬೆಳಗಿಸಿ ಸಿಹಿತಿಂಡಿ ನೀಡಿ ಸ್ವಾಗತಿಸಲಾಯಿತು. ಬಿಲ್ಲವರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಜಿ.ಗೋಪಾಲ ಬಿಲ್ಲವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗಂಗೊಳ್ಳಿ ಗ್ರಾಪಂ ಅಧ್ಯಕ್ಷೆ ಜಯಂತಿ ಖಾರ್ವಿ ಅವರು ಪುಸ್ತಕಗಳನ್ನು ಮಕ್ಕಳಿಗೆ ವಿತರಿಸಿ ಶುಭ ಹಾರೈಸಿದರು. ಕಲಾಶ್ರೀ ಶಿಕ್ಷಣ ಪ್ರೇಮಿ ಬಳಗದ ಸುಮಿತ್ರಾ ಜಿ., ಜಿ.ಈಶ್ವರ, ವೀಣಾ, ಶೋಭಾ, ನಿಹಾಪ್, ರೋಶನಮೀನ್ ಚೌಗುಲೆ, ಅಬೀರಾ, ಕೃಷ್ಣ ಖಾರ್ವಿ ಮೊದಲಾದವರು ಉಪಸ್ಥಿತರಿದ್ದರು.

ಅನಿತಾ ಖಾರ್ವಿ ಸ್ವಾಗತಿಸಿದರು. ಅಂಗನವಾಡಿ ಕಾರ್ಯಕರ್ತೆ ರೇಖಾ ಖಾರ್ವಿ ಕಾರ್ಯಕ್ರಮ ನಿರ್ವಹಿಸಿದರು. ಅಂಗನವಾಡಿ ಸಹಾಯಕಿ ಶಾಂತಿ ಖಾರ್ವಿ ವಂದಿಸಿದರು.

ಅನುದಾನ ಇದ್ದರೂ ಡಾಮರು ಲಭ್ಯವಿಲ್ಲದೆ ರಸ್ತೆ ಅಭಿವೃದ್ಧಿಗೆ ತೊಡಕು

ಬೇಸತ್ತು ತಾವೇ ದುರಸ್ತಿ ಕಾರ್ಯಕ್ಕೆ ಮುಂದಾದ ಜನರು

ಕಡಬ: ಸಂಪೂರ್ಣ ನಾದುರಸ್ತಿ ಸ್ಥಿತಿಯಲ್ಲಿರುವ ಕಡಬ ತಾಲೂಕಿನ ಕ್ಯೊಲ ಗ್ರಾಮದ ಗೋಳಿತ್ತಡಿ-ಸಬಳೂರು-ಕುದುಲೂರು ರಸ್ತೆಯಲ್ಲಿ ದೊಡ್ಡ ಗಾತ್ರದ ಹೊಂಡಗಳು ನಿರ್ಮಾಣವಾಗಿ ವಾಹನ ಸಂಚಾರ ದುಸ್ತರವೆನಿಸಿದೆ. ಅನುದಾನ ಬಿಡುಗಡೆಯಾಗಿದ್ದರೂ ಡಾಮರು ಲಭ್ಯವಿಲ್ಲದೆ ರಸ್ತೆ ಅಭಿವೃದ್ಧಿಗೆ ತೊಡಕುಂಟಾಗಿರುವುದು ಸಮಸ್ಯೆಗೆ ಕಾರಣವಾಗಿದೆ.



40 ಲಕ್ಷ ಅನುದಾನ ಬಿಡುಗಡೆ

ಈಗಾಗಲೇ ಶಾಸಕಿ ಭಾಗೀರಥಿ ಮುರಳ್ಯ ಅವರ ಶಿಫಾರಸ್ಸಿನ ಮೇರೆಗೆ ರಸ್ತೆಯನ್ನು ಡಾಮರು ಹಾಕಿ ಅಭಿವೃದ್ಧಿಪಡಿಸಲು ರೂ. 40 ಲಕ್ಷ ಅನುದಾನ ಬಿಡುಗೆಯಾಗಿದೆ. ಕಾಮಗಾರಿ ನಡೆಸಲು ಪವಿತ್ರ ಕನ್ಸ್ಟ್ರಕ್ಷನ್ಸ್‌ನವರಿಗೆ ಟೆಂಡರ್ ಕೂಡಾ ಆಗಿತ್ತು. ಅವರು ಕೊಂಬಾರಿನ ರಸ್ತೆಯೊಂದರ ಡಾಮರೀಕರಣ ಮುಗಿಸಿ ಗೋಳಿತ್ತಡಿ- ಸಬಳೂರು-ಕುದುಲೂರು ರಸ್ತೆಯ ಕಾಮಗಾರಿ ಕೈಗೆತ್ತಿಕೊಳ್ಳುವುದೆಂದು ಹೇಳಲಾಗಿತ್ತು. ಬಳಿಕ ನಡೆದ ಬೆಳವಣಿಗೆಯಲ್ಲಿ ಡಾಮರು ಕೊರತೆಯಿಂದ ಕಾಮಗಾರಿ ಆರಂಭವಾಗಲಿಲ್ಲ. ಈಗ ಮಳೆಗಾಲ ಶುರುವಿಟ್ಟುಕೊಂಡಿರುವುದರಿಂದ ರಸ್ತೆ ಅಭಿವೃದ್ಧಿ ನಡೆಯದೆ ರಸ್ತೆಯಲ್ಲಿ ಓಡಾಡುವಂತಿಲ್ಲ ಎನ್ನುವಂತಾಗಿದೆ.

ವರ್ಷದ ಹಿಂದೆ ಈ ರಸ್ತೆಯನ್ನು ತೇಪೆಹಾಕಿ ಗುಂಡಿ ಮುಚ್ಚಿ ದುರಸ್ತಿ ಮಾಡಲಾಗಿತ್ತು. ಇದೀಗ ಮತ್ತೆ ಹೊಂಡ ಗುಂಡಿಗಳು ನಿರ್ಮಾಣವಾಗಿ ಸಮಸ್ಯೆ ಉಲ್ಬಣವಾಗಿದೆ.

> ರಸ್ತೆಯ ದುರವಸ್ಥೆಯಿಂದಾಗಿ ವಾಹನ ಸಂಚಾರ ಬಿಡಿ ಜನರು ನಡೆದು ಹೋಗುವುದರೂ ಸಾಧ್ಯವಿಲ್ಲದಂತಾಗಿದೆ. ಅನುದಾನವಿದ್ದರೂ ಕಾಮಗಾರಿ ನಡೆಸಲಾಗದ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಆದರಿಂದಾಗಿ ಸಾರ್ವಜನಿಕರೇ ಸೇರಿಕೊಂಡು ರಸ್ತೆಯ ದುರಸ್ತಿ ಕಾರ್ಯ ಕೈಗೆತ್ತಿಕೊಂಡಿದ್ದೇವೆ.
> ■ ಸುಪ್ರೀತ್ ರೈ ಕ್ಯೊಲ,
> ಗ್ರಾ.ಪಂ. ಮಾಜಿ ಸದಸ್ಯರು

ಈ ರಸ್ತೆಯನ್ನು 36 ವರ್ಷಗಳ ಹಿಂದೆ ಸಂಪೂರ್ಣ ಡಾಮರೀಕರಣ ಮಾಡಲಾಗಿತ್ತು. ಬಳಿಕ ಒಂಬತ್ತು ವರ್ಷದ ಹಿಂದೆ ನಬಾರ್ಡ್ ಯೋಜನೆಯಡಿ 34 ಲಕ್ಷ ದಲ್ಲಿ ಗೋಳಿತ್ತಡಿಯಿಂದ ನೆಲ್ಯೊಟ್ಟು ತನಕ ಮರು ಡಾಮರೀಕರಣಗೊಳಿಸಲಾಗಿತ್ತು. ಡಾಮರೀಕರಣಗೊಂಡು ಎರಡು ತಿಂಗಳಲ್ಲೇ ರಸ್ತೆ ಗಬ್ಬೆದ್ದು ಹೋಗಿತ್ತು. ಅಂದಿನಿಂದ ಇಂದಿನ ತನಕ ತೇಪೆ ನಡೆಯುತ್ತಲೇ ಇದ್ದರೂ ರಸ್ತೆಗೆ ಪೂರ್ಣ ದುರಸ್ತಿಯ ಭಾಗ್ಯ ಸಿಕ್ಕಿಲ್ಲ.

ರಸ್ತೆ ಅಭಿವೃದ್ಧಿ ನಿಗಮದಡಿ ರೂ. 4.50 ಲಕ್ಷದಲ್ಲಿ ಒಮ್ಮೆ ರಸ್ತೆ ದುರಸ್ತಿ ಕಾರ್ಯ ನಡೆಯಿತು. ಮತ್ತೆ ಶಾಸಕಿ ಭಾಗೀರಥಿ ಮುರುಳ್ಯ ಅವರ ಶಿಫಾರಸ್ಸಿನಂತೆ ಜಿ.ಪಂ ಇಂಜಿನಿಯರಿಂಗ್ ವಿಭಾಗದಿಂದ 9.13 ಲಕ್ಷ ವೆಚ್ಚದಲ್ಲಿ ದುರಸ್ತಿಗೊಳಿಸಲಾಯಿತು. ಆದರೆ ಕೆಲವೇ ತಿಂಗಳಿನಲ್ಲಿ ರಸ್ತೆಯ ಸ್ಥಿತಿ ಮತ್ತೆ ಅಧೋಗತಿಯಾಗಿದೆ.

> **ಅಕ್ಟೋಬರ್ ಬಳಿಕವಷ್ಟೇ ಕಾಮಗಾರಿ**
> ಡಾಮರು ಇಲ್ಲದೇ ರಸ್ತೆ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲು ಸಾಧ್ಯವಾಗಿಲ್ಲ. ಮಳೆ ಆರಂಭವಾಗಿರುವುದರಿಂದಾಗಿ ಈಗ ಡಾಮರಿನ ಲಭ್ಯತೆ ಇದ್ದರೂ ಕಾಮಗಾರಿ ನಡೆಸುವಂತಿಲ್ಲ. ಇನ್ನು ಬರುವ ಅಕ್ಟೋಬರ್ ಬಳಿಕವಷ್ಟೇ ಕಾಮಗಾರಿ ನಡೆಸಲು ಸಾಧ್ಯ.
> ■ ಭರತ್ ಬಿ.ಎಂ., ಕಾರ್ಯಪಾಲಕ ಸಹಾಯಕ ಇಂಜಿನಿಯರ್

ರಸ್ತೆ ದುರಸ್ತಿಗೆ ಮುಂದಾದ ಸಾರ್ವಜನಿಕರು

ಈ ರಸ್ತೆಯ ಫಲಾನುಭವಿಗಳ ತಾಳ್ಮೆಯ ಕಟ್ಟೆ ಒಡೆದು ಹೋಗಿದೆ. ಪ್ರತಿಭಟನೆ, ಹೋರಾಟ ಯಾವುದೂ ಮಾಡಿ ಪ್ರಯೋಜನವಿಲ್ಲ ಎನ್ನುವ ನಿರ್ಧಾರಕ್ಕೆ ಬಂದಿರುವ ಸಾರ್ವಜನಿಕರು ತಾವೇ ಹಣ ಸಂಗ್ರಹಿಸಿ ದುರಸ್ತಿ ಕಾರ್ಯಕ್ಕೆ ಮುಂದಾಗಿದ್ದಾರೆ. ಜೆಸಿಬಿಯಲ್ಲಿ ರಸ್ತೆ ಬದಿಯ ಗಿಡಗಂಟಿಗಳನ್ನು ತೆರವು, ಚರಂಡಿ ದುರಸ್ತಿಗೆ ಮಾಡಿ ಭಾನುವಾರ ಗುಂಡಿ ಮುಚ್ಚುವ ಕಾರ್ಯ ನಡೆಸಲಾಯಿತು.

ಬೆಳ್ತಂಗಡಿ: ಕಳೆಂಜ ಶಾಲೆಯಲ್ಲಿ ಉಚಿತ ಯಕ್ಷಗಾನ ತರಬೇತಿ ಶಿಬಿರ ಉದ್ಘಾಟನೆ



ಬೆಳ್ತಂಗಡಿ: ಕಳೆಂಜ ಕಾಯರ್ತಡ್ಕದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜೂ 11ರಂದು ಗುರುವಾರ ಬೆಳಿಗ್ಗೆ ಯಕ್ಷಧ್ರುವ ಪಟ್ಲ ಫೌಂಡೇಶನ್ ವತಿಯಿಂದ ಶಾಲಾ ಮಕ್ಕಳಿಗೆ ಉಚಿತ ಯಕ್ಷಗಾನ ತರಬೇತಿ ಶಿಬಿರ ಉದ್ಘಾಟನೆಗೊಂಡಿತು. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧ್ಯಕ್ಷ ವಿಜಯ್ ಕೆ. ಅಧ್ಯಕ್ಷತೆ ವಹಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯ ಕೃಷ್ಣಪ್ಪ ಟಿ. ಸ್ವಾಗತಿಸಿದರು. ಗಂಗಾಧರ ಕೆ. ಪಾಂಗಳ ಪ್ರಸ್ತಾವಿಸಿದರು. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಳಿಯ ಹಿರಿಯ ಕಲಾವಿದ ವಸಂತಗೌಡ ಕಾಯರ್ತಡ್ಕ ಕಾರ್ಯಕ್ರಮವನ್ನು ದೀಪ ಪ್ರಜ್ವಲನೆ ಮೂಲಕ ಉದ್ಘಾಟಿಸಿ ಶುಭ ಕೋರಿದರು. ಯಕ್ಷಗಾನ ತರಬೇತಿಯ ಗುರುಗಳಾದ ಸುಂದರ ಗೌಡ ಅರಸಿನಮಕ್ಕಿ ಯಕ್ಷಗಾನದ ಮಹತ್ವ ಹಾಗೂ ಪಟ್ಲ ಫೌಂಡೇಶನ್‌ನ ಉದ್ದೇಶ ಹಾಗೂ ಕಲಾವಿದರಿಗೆ ಮಾಡುವಂತಹ ಸಹಕಾರವನ್ನು ತಿಳಿಸಿದರು. ಪ್ರಗತಿಪರ ಕೃಷಿಕರು, ಸಮಾಜಸೇವಕರಾದ ಲಕ್ಷ್ಮಣ್ ಗೌಡ ಕಾರ್ಯಕ್ರಮಕ್ಕೆ ಶುಭ ಕೋರಿದರು, ಅಶ್ವಿನಿ ಕಾರ್ಯಕ್ರಮ ನಿರೂಪಿಸಿ, ಸುಮಲತಾ ಕೆ.ಟಿ. ವಂದಿಸಿದರು.

ಭಾಷಾ ಬೆಳವಣಿಗೆಗೆ ಅನುವಾದ ಸಾಹಿತ್ಯ ಮುಖ್ಯವಾದುದು : ಪ್ರೊ.ಎ.ವಿ.ನಾವಡ

ಮಂಗಳೂರು: ಭಾಷೆಯ ಬೆಳವಣಿಗೆಗೆ ಸಾಹಿತ್ಯ ಅನುವಾದ ತುಂಬಾ ಮುಖ್ಯವಾಗಿದೆ. ಇತರ ಭಾಷೆಯ ಸಾಹಿತ್ಯ ತುಳು ಭಾಷೆಗೆ ಬರುವಂತಹದ್ದು, ತುಳುವಿನ ಪಾಡ್ದನ ಸೇರಿದಂತೆ ತುಳು ಸಾಹಿತ್ಯ ಇತರ ಭಾಷೆಗಳಿಗೆ ಅನುವಾದಗೊಳ್ಳುವಂತಹ ಕೆಲಸಗಳು ನಡೆಯಬೇಕಾಗಿದೆ ಎಂದು ಹಿರಿಯ ವಿದ್ವಾಂಸ ಡಾ.ಎ. ವಿ.ನಾವಡ ಹೇಳಿದರು.



ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ತುಳು ಭವನದಲ್ಲಿ ಆಯೋಜಿಸಿದ ತುಳು ಭಾಷೆಗೆ ಅನುವಾದಿಸಲಾದ ಕನಕದಾಸರ ಸಮಗ್ರ ಸಾಹಿತ್ಯ ಕೃತಿಗಳ ಸಂವಾದ ಹಾಗೂ ಕಾವ್ಯ ವಾಚನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕ ಸರ್ಕಾರದ ಸಂತ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಅನುವಾದಿಸಿದ ಕನಕದಾಸರ ಕಾವ್ಯ 'ಮೋಹನ ತರಂಗಿಣಿ', 'ಹರಿಭಕ್ತಿ ಸಾರ', 'ರಾಮಧಾನ್ಯ ಚರಿತೆ', 'ನಳಚರಿತ್ರೆ' ಹಾಗೂ 'ಕೀರ್ತನೆಗಳು'ಗಳನ್ನು ಪ್ರೊ. ಎ.ವಿ.ನಾವಡ ಅವರ ಸಂಪಾದಕತ್ವದಲ್ಲಿ ವಿವಿಧ ಸಾಹಿತಿಗಳ ಪಾಲ್ಗೊಳ್ಳುವಿಕೆಯಲ್ಲಿ ತುಳುವಿಗೆ ಅನುವಾದಿಸಲಾಗಿದ್ದು, ಈ ಕೃತಿಗಳ ಬಗ್ಗೆ ಅವಲೋಕನ ನಡೆಸಲಾಯಿತು.

ಕೃತಿಗಳ ಅವಲೋಕನ ನಡೆಸಿದ ತುಳು ಕನ್ನಡ ವಿದ್ವಾಂಸ ಪ್ರೊ. ಶಿವರಾಮ ಶೆಟ್ಟಿ ಮಾತನಾಡಿ, ಕನಕದಾಸರ ಅಧ್ಯಯನವು ಕೇವಲ ಸಾಹಿತ್ಯಿಕ ದೃಷ್ಟಿಯಿಂದ ಮಾತ್ರವಲ್ಲ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿಯೂ ನಡೆಯಬೇಕು ಎಂದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ಪ್ರಾಂಶುಪಾಲ ಪ್ರೊ.ಕೃಷ್ಣಮೂರ್ತಿ, ಉಪನ್ಯಾಸಕರಾದ ರಘು ಇಡ್ಕಿದು, ಡಾ.ಸುಧಾರಾಣಿ ಕೃತಿಗಳ ಬಗ್ಗೆ ಪ್ರತಿಕ್ರಿಯೆ ನೀಡಿದರು.

ಕೃತಿ ಅನುವಾದಕರಾದ ಆತ್ರಾಡಿ ಅಮೃತಾ ಶೆಟ್ಟಿ, ಭಾಸ್ಕರ್ ರೈ ಕುಕ್ಕುವಳ್ಳಿ, ಪ್ರೊ.ಟಿ.ವಿ.ಎಸ್. ಖಂಡಿಗೆ, ಮುದ್ದು ಮೂಡುಬೆಳ್ಳೆ, ಡಾ. ಕಾತ್ಯಾಯಿನಿ ಕುಂಜಿಬೆಟ್ಟು ಡಾ. ವಸಂತಕುಮಾರ್ ಪೆರ್ಲ, ಅಕಾಡೆಮಿ ಸದಸ್ಯರಾದ ಕುಂಬ್ರ ದುರ್ಗಾಪ್ರಸಾದ್ ರೈ ಉಪಸ್ಥಿತರಿದ್ದರು.

ಅಕಾಡೆಮಿಯ 'ನಮ್ಮ ತುಳುವೆರ್' ಮಾಲಿಕೆಯಲ್ಲಿ ಪ್ರಕಟಿಸಲಾದ ರಘು ಇಡ್ಕಿದು ಅವರು ರಚಿಸಿದ 'ತುಳು ಕನ್ನಡೊದ ಮಾಮಲ್ಲ ಸಂಶೋಧಕೆರ್ ಪ್ರೊ.ಎ.ವಿ.ನಾವಡೆರ್' ಕೃತಿಯನ್ನು ಪ್ರೊ. ಶಿವರಾಮ ಶೆಟ್ಟಿ ಅವರು ಬಿಡುಗಡೆ ಮಾಡಿದರು.

ನಾದಾ ಮಣಿನಾಲ್ಕೂರು ಅವರಿಂದ ಕನಕದಾಸರ ತುಳು ಕೀರ್ತನೆ, ಕಾವ್ಯಗಳ ಗಾಯನ ಕಾರ್ಯಕ್ರಮ ನಡೆಯಿತು. ಅಕಾಡೆಮಿ ಸದಸ್ಯ ಉದ್ಯಾವರ ನಾಗೇಶ್ ಕುಮಾರ್ ಸ್ವಾಗತಿಸಿದರು. ಅಕಾಡೆಮಿ ಸದಸ್ಯೆ ಅಕ್ಷಯ ಆರ್.ಶೆಟ್ಟಿ ನಿರೂಪಿಸಿ, ವಂದಿಸಿದರು.

ರೆಡ್‌ಕ್ರಾಸ್‌ನಿಂದ ವಿಶ್ವ ತಂಬಾಕು ರಹಿತ ದಿನಾಚರಣೆ



ಮಂಗಳೂರು: ಯುವ ಸಮುದಾಯ ತಂಬಾಕು ಉತ್ಪನ್ನ ಗಳಿಂದ ದೂರವಿರುವುದು ಮಾತ್ರವಲ್ಲ, ತಂಬಾಕು ದುಷ್ಪರಿಣಾಮದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸಬೇಕು.

ತಂಬಾಕಿನ ವಿರುದ್ಧ ವಿದ್ಯಾರ್ಥಿಗಳು ಕೈಗೊಳ್ಳುವ ಜಾಗೃತಿ ಮಹತ್ವದ ಬದಲಾವಣೆ ತರಬಲ್ಲದು ಎಂದು ಹಂಪನಕಟ್ಟೆ ಸರ್ಕಾರಿ ಪ.ಪೂ.ಕಾಲೇಜಿನ ಪ್ರಾಂಶುಪಾಲ ವಿನ್ಸೆಂಟ್ ಆಂತೋನಿ ಮಸ್ಕರೇನ್ಹಸ್ ಹೇಳಿದರು.

ಭಾರತೀಯ ರೆಡ್‌ಕ್ರಾಸ್ ಸೊಸೈಟಿಯ ದ.ಕ.ಜಿಲ್ಲಾ ಘಟಕದ ವತಿಯಿಂದ ಸರ್ಕಾರಿ ಪ.ಪೂ. ಕಾಲೇಜು ಹಂಪನಕಟ್ಟೆ, ಜಿಲ್ಲಾ ಸರ್ವೇಕ್ಷಣಾ ಘಟಕ ಮತ್ತು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ ಶನಿವಾರ ನಗರದ ಹಂಪನಕಟ್ಟೆ ಸರ್ಕಾರಿ ಪ.ಪೂ. ಕಾಲೇಜಿನ ಸಭಾಂಗಣದಲ್ಲಿ ನಡೆದ ವಿಶ್ವ ತಂಬಾಕು ರಹಿತ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿದ ಮಂಗಳೂರು ಪ್ರೆಸ್ ಕ್ಲಬ್ ಅಧ್ಯಕ್ಷ ಪಿ.ಬಿ.ಹರೀಶ್ ರೈ ಮಾತನಾಡಿ, ವಿದ್ಯಾರ್ಥಿಗಳು ತಂಬಾಕು ಸೇವನೆ, ಧೂಮಪಾನದಂತಹ ದುಶ್ಚಟಗಳಿಂದ ದೂರವಿರಲು ದೃಢ ನಿರ್ಧಾರ ಕೈಗೊಂಡರೆ ಅವರ ಭವಿಷ್ಯ ಉಜ್ವಲವಾಗಲು ಸಾಧ್ಯ ಎಂದರು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಮಾಲೋಚಕ ಪುಂಡಲೀಕ ಲಕಾಟೆ ಮತ್ತು ವೆನ್ಲಾಕ್ ಆಸ್ಪತ್ರೆಯ ತಂಬಾಕು ನಿಯಂತ್ರಣ ಕೇಂದ್ರದ ಸಮಾಲೋಚಕ ವಿಜಯಕುಮಾರ್ ಸಂಪನ್ಮೂಲ ವ್ಯಕ್ತಿಗಳಾಗಿದ್ದರು, ರೆಡ್‌ಕ್ರಾಸ್ ಸೊಸೈಟಿಯ ಜಿಲ್ಲಾ ಘಟಕದ ಖಜಾಂಜಿ ಗುರುದತ್ ನಾಯಕ್, ಕಾರ್ಯದರ್ಶಿ ಕಿಶೋರ್‌ಚಂದ್ರ ಹೆಗ್ಡೆ, ಕಾಲೇಜಿನ ಹಿರಿಯ ಉಪನ್ಯಾಸಕಿ ಶ್ಯಾಮಲಾ ಉಪಸ್ಥಿತರಿದ್ದರು. ಯೂತ್ ರೆಡ್‌ಕ್ರಾಸ್ ಉಪ ಸಮಿತಿ ನಿರ್ದೇಶಕಿ ಡಾ.ಸುಮನಾ ಬಿ. ಸ್ವಾಗತಿಸಿ, ಕಾರ್ಯಕ್ರಮದ ಸಂಯೋಜಕಿ ಮಲ್ಲಿಕಾ ವಂದಿಸಿದರು. ಉಪನ್ಯಾಸಕ ರಮೇಶ್ ಎಂ. ಕಾರ್ಯಕ್ರಮ ನಿರೂಪಿಸಿದರು.

ನಾಪತ್ತೆಯಾದ ಬಾಲಕರು ಬೆಂಗಳೂರಿನಲ್ಲಿ ಪತ್ತೆ

ಮಂಜೇಶ್ವರ: ಕುಂಜತ್ತೂರಿನಿಂದ ಶನಿವಾರ ಸಂಜೆಯಿಂದ ನಾಪತ್ತೆಯಾಗಿದ್ದ ಇಬ್ಬರು ಬಾಲಕರು ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಸುರಕ್ಷಿತವಾಗಿ ಪತ್ತೆಯಾಗಿದ್ದಾರೆ. ಕುಂಜತ್ತೂರು ಸ್ವಾಗತ್ ಹೊಟೇಲ್ ಸಮೀಪದ ನಿವಾಸಿಗಳಾದ ಇಬ್ರಾಹಿಂ ಅಶ್ರಫ್ ಅವರ ಪುತ್ರ ಯಾಸೀನ್ (13) ಮತ್ತು ಆಮೀರ್ ಅವರ ಪುತ್ರ ಸುಲ್ತಾನ್ (14) ನಾಪತ್ತೆಯಾಗಿದ್ದ ಬಾಲಕರು. ಶನಿವಾರ ಸಂಜೆ 5 ಗಂಟೆಯ ಬಳಿಕ ಅವರು ನಾಪತ್ತೆಯಾಗಿದ್ದರು. ಬಾಲಕರು ನಾಪತ್ತೆಯಾದ ಬಗ್ಗೆ ಮಂಜೇಶ್ವರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಪೊಲೀಸರು, ಸ್ಥಳೀಯರು ಮತ್ತು ಸಂಬಂಧಿಕರು ಜಂಟಿ ಕಾರ್ಯಾಚರಣೆ ನಡೆಸಿದರು. ಈ ವೇಳೆ ಬಾಲಕರು ಮಂಗಳೂರು ರೈಲ್ವೆ ನಿಲ್ದಾಣದಿಂದ ಬೆಂಗಳೂರಿಗೆ ಹೋಗುವ ರೈಲಿನಲ್ಲಿ ಪ್ರಯಾಣಿಸುತ್ತಿರುವ ದೃಶ್ಯಗಳು ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದ್ದವು. ಈ ಸುಳಿವಿನ ಆಧಾರದ ಮೇಲೆ ಕಾರ್ಯಾಚರಣೆ ತೀವ್ರಗೊಳಿಸಿದಾಗ ಬಾಲಕರು ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿರುವುದು ಖಚಿತವಟ್ಟಿತು. ಸದ್ಯ ಪೊಲೀಸರು ಬಾಲಕರನ್ನು ತಮ್ಮ ವಶಕ್ಕೆ ಪಡೆದಿದ್ದು, ಅವರನ್ನು ಸುರಕ್ಷಿತವಾಗಿ ಮಂಜೇಶ್ವರಕ್ಕೆ ಕರೆತರುವ ಪ್ರಕ್ರಿಯೆ ನಡೆಯುತ್ತಿದೆ. ನಿಯಮಾನುಸಾರ ಬಾಲಕರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಸಿದ್ಧತೆಗಳು ನಡೆಯುತ್ತಿವೆ. ತಮ್ಮ ಮಕ್ಕಳನ್ನು ಪತ್ತೆಹಚ್ಚುವಲ್ಲಿ ಸಹಕರಿಸಿದ ಪೊಲೀಸ್ ಅಧಿಕಾರಿಗಳು, ಸ್ಥಳೀಯರು ಮತ್ತು ಪ್ರತಿಯೊಬ್ಬರಿಗೂ ಬಾಲಕರ ಕುಟುಂಬಸ್ಥರು ಕೃತಜ್ಞತೆ ಸಲ್ಲಿಸಿದ್ದಾರೆ.

ಬನ್ನಂಜೆಯಲ್ಲಿ ಒಮ್ಮೆಲೇ ಕುಸಿದು ಬಿದ್ದು ಸಾವು

ಉಡುಪಿ: ಬ್ಯಾನರ್ ಮಾಡಲು ಪ್ರಿಂಟಿಂಗ್ ಪ್ರೆಸ್‌ಗೆ ಬಂದಿದ್ದ ಆಯುರ್ವೇದಿಕ್ ಪ್ರೊಡಕ್ಟ್ ಮಾರ್ಕೆಟಿಂಗ್ ಉದ್ಯೋಗಿಯೊಬ್ಬರು ಒಮ್ಮೆಲೇ ಕುಸಿದು ಬಿದ್ದು, ಚಿಕಿತ್ಸೆ ಫಲಕಾರಿಯಾಗದೆ ಜಿಲ್ಲಾಸ್ಪತ್ರೆಯಲ್ಲಿ ಮೃತಪಟ್ಟ ಘಟನೆ ಬನ್ನಂಜೆಯಲ್ಲಿ ಸಂಭವಿಸಿದೆ. ತೆಂಕನಿಡಿಯೂರು ಗ್ರಾಮದ ನಿವಾಸಿ ಸುರೇಶ್ (50) ಮೃತಪಟ್ಟ ದುರ್ದೈವಿ. ಮೃತರ ಅಣ್ಣ ಚಂದ್ರಶೇಖರ (52) ನೀಡಿದ ದೂರಿನಂತೆ ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರೊ. ಯು. ಆರ್. ಅನಂತಮೂರ್ತಿ ವಿಶ್ವ ಮಾನ್ಯ ಲೇಖಕ

ಮಂಗಳೂರು: ಜಾಗತಿಕ ಸಾಹಿತ್ಯ ಮತ್ತು ತತ್ವಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿದ ಪ್ರೊ. ಯು. ಆರ್. ಅನಂತಮೂರ್ತಿಯವರು ಜಾಗತಿಕ ಮನ್ನಣೆಗೆ ಒಳಗಾಗುವ ಕೃತಿಗಳನ್ನು ರಚಿಸಿದರು. ಕನ್ನಡ ಭಾಷೆಯನ್ನು ವಿಶ್ವಮಾನ್ಯಗೊಳಿಸಿದರು. ರಾಜಕೀಯ ವೈರುಧ್ಯಗಳು, ಅಸಮಾನತೆ ಮತ್ತು ಅಭಿವೃದ್ಧಿಯ ವೇಗಗಳು ಜೊತೆಯಲ್ಲಿ ಸಾಗುತ್ತಿರುವುದು ಈ ಕಾಲದ ದೊಡ್ಡ ಅಪಾಯ ಎಂಬುದು ಅವರ ಚಿಂತನೆಯಾಗಿತ್ತು ಎಂದು ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಸಹ ಪ್ರಾಧ್ಯಾಪಕ ರಾಜಶೇಖರ ಹಳೆಮನೆ ಹೇಳಿದರು.



ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಂಗಳೂರು ಹಾಗೂ ಲೀಲಾವತಿ ಶೆಟ್ಟಿ ಶಿಕ್ಷಣ ಕಾಲೇಜು ಮಂಗಳೂರು ಸಯೋಗದಲ್ಲಿ ನಡೆದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಯು. ಆರ್. ಅನಂತಮೂರ್ತಿಯವರ ಕವಿ ಕಾವ್ಯ ಸಾಹಿತ್ಯ ಪರಂಪರೆ ಮಾಲಿಕೆ -6 ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಡಾ. ಎಂ. ವಿ. ಶೆಟ್ಟಿ ಶಿಕ್ಷಣ ಸಮೂಹ ಸಂಸ್ಥೆ ಅಕಾಡೆಮಿ ಅಸೋಸಿಯೇಟ್ ಡಾ. ಪ್ರಕಾಶ್ ಅಮೀನ್ ಕಾರ್ಯಕ್ರಮ ಉದ್ಘಾಟಿಸಿದರು. ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಎಂ.ಪಿ. ಶ್ರೀನಾಥ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ. ಮಾಲತಿ ಆರ್. ಭಾವಿಮನೆಪ್ರಾಸ್ತಾವಿಕನುಡಿಗಳನ್ನಾಡಿದರು. ಉಪನ್ಯಾಸಕಿ ಶೋಭಿತ ಸ್ವಾಗತಿಸಿದರು. ಸಮಿತ ವಂದಿಸಿದರು. ವಿದ್ಯಾರ್ಥಿನಿ ಕಾವ್ಯ ಕಾರ್ಯಕ್ರಮ ನಿರೂಪಿಸಿದರು.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-59) ಡ್ರಾ ಜೂನ್ 14ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
MF 935347 (PATHANAMTHITTA)
Consolation Prize Rs.5,000/-
MA 935347 MB 935347 MC 935347 MD 935347
ME 935347 MG 935347 MH 935347 MJ 935347
MK 935347 ML 935347 MM 935347
2nd Prize Rs.25,00,000/- [25 Lakhs]
MF 518590 (KOTTAYAM)
3rd Prize Rs. 5,00,000/- [5 Lakhs]
MG 322749 (IRINJALAKKUDA)

FOR THE TICKETS ENDING WITH THE FOLLOWING NUMBERS

4th Prize Rs.5,000/-
1058 1970 2692 2794 2805 3099 4011 4363 4416 4883
4985 5322 6054 6281 6315 6741 7541 7634 8836
5th Prize Rs.2,000/-
4665 5383 5388 5630 8221 9540
6th Prize Rs.1,000/-
0391 1520 2383 2737 2849 3256 3611 5003 5384 5849
6028 6438 7071 7133 7238 7487 7597 7685 7788 7796
8196 8849 8922 9003 9857
7th Prize Rs.500/-
0004 0349 0389 0450 0782 0786 0853 1018 1244 1353
1441 1660 1734 1763 1822 1907 2050 2474 2534 2574
2756 2821 2832 2867 2964 2972 2976 2984 3313 3748
3851 3921 4317 4351 4376 4409 4450 4595 4662 4947
5133 5202 5315 5577 5586 5692 5825 5969 6127 6670
6727 6934 7006 7171 7263 7413 7445 7461 7491 7549
7560 7584 7636 7817 8178 8182 8417 8707 8825 8876
8908 8969 8980 9195 9361 9683
8th Prize Rs.200/-
0018 0032 0400 0475 0497 0572 0637 0657 0763 0965
1175 1268 1273 1380 1393 1548 1676 1939 2227 2392
2536 2541 2590 2679 3023 3036 3127 3129 3432 3534
3682 3737 3874 3954 3970 4054 4155 4540 4586 4587
4848 4916 5091 5252 5320 5414 5489 5537 5826 5896
5957 5993 6172 6185 6370 6796 6807 6881 6929 6965
7271 7375 7432 7450 7528 7606 7638 7832 7843 7852
7854 7991 7998 7999 8198 8224 8259 8311 8428 8718
8895 9006 9084 9131 9320 9348 9497 9518 9575 9638
9962 9995
9th Prize Rs.100/-
0011 0025 0098 0222 0283 0373 0392 0410 0424 0491
0658 0662 0675 0729 0824 0860 0884 0974 1030 1069
1128 1165 1202 1281 1285 1311 1350 1354 1360 1409
1431 1512 1593 1650 1840 1896 2091 2200 2217 2243
2269 2291 2549 2563 2597 2604 2621 2718 2776 2892
2931 2963 3045 3108 3273 3379 3492 3506 3533 3630
3654 3674 3812 3833 3926 3962 4008 4020 4044 4073
4125 4130 4199 4206 4360 4442 4478 4550 4685 4725
4864 5025 5281 5338 5394 5581 5585 5688 5755 5927
5989 6003 6007 6058 6158 6174 6184 6209 6219 6235
6241 6335 6405 6465 6547 6573 6603 6740 6755 6850
6900 6958 6967 7145 7232 7431 7677 7757 7766 7829
7830 7888 7894 7928 7934 8042 8261 8281 8302 8332
8357 8487 8528 8652 8728 9002 9059 9102 9109 9171
9190 9240 9357 9391 9544 9737 9747 9839 9912 9945

ಅಳದಂಗಡಿ ಶ್ರೀ ಸತ್ಯದೇವತಾ ಕಲ್ಲುರ್ಟಿ ದೈವಸ್ಥಾನದ ವತಿಯಿಂದ ಉಚಿತ ಪುಸ್ತಕ, ಕಂಪ್ಯೂಟರ್ ವಿತರಣೆ, ಪ್ರತಿಭಾ ಪುರಸ್ಕಾರ

ಸುಪ್ತ ಪ್ರತಿಭೆ ಹೊರ ತರುವ ಪ್ರಯತ್ನ ನಿರಂತರವಾಗಬೇಕು

ಬೆಳ್ತಂಗಡಿ: ಪ್ರತಿಭೆ ಎಲ್ಲರಲ್ಲೂ ಇದೆ. ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಆಗಬೇಕು. ಬೆಳ್ತಂಗಡಿ ತಾಲೂಕಿನಲ್ಲಿ ಕಬಡ್ಡಿ ಅಕಾಡೆಮಿ ತೆರೆಯುವುದಾದರೆ ನನ್ನ ಸಂಪೂರ್ಣ ಸಹಕಾರ ಇರುತ್ತದೆ ಎಂದು ಭಾರತೀಯ ಕಬಡ್ಡಿ ತಂಡದ ನಾಯಕ ಪವನ್ ಶೆಹ್ರಾವತ್ ಭರವಸೆ ನೀಡಿದರು.



ಜೂನ್ 14ರಂದು ಇತಿಹಾಸ ಪ್ರಸಿದ್ಧ ಅಳದಂಗಡಿ ಶ್ರೀ ಸತ್ಯದೇವತಾ ಕಲ್ಲುರ್ಟಿ ದೈವಸ್ಥಾನದ ವತಿಯಿಂದ ಶ್ರೀ ಸೋಮನಾಥೇಶ್ವರಿ ದೇವಸ್ಥಾನದ ವಠಾರದಲ್ಲಿ ನಡೆದ 24ನೇ ವರ್ಷದ ಉಚಿತ ಪುಸ್ತಕ ವಿತರಣೆ, ಪ್ರತಿಭಾ ಪುರಸ್ಕಾರ ಹಾಗೂ ಕಂಪ್ಯೂಟರ್ ವಿತರಣಾ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಪ್ರತಿಭೆ ಎಲ್ಲರಲ್ಲೂ ಸುಪ್ತವಾಗಿರುತ್ತದೆ. ಅದನ್ನು ಹೊರತರುವ ಪ್ರಯತ್ನ ನಿರಂತರವಾಗಿ ನಡೆಯಬೇಕು. ಕರ್ನಾಟಕದಿಂದ ಈಗಾಗಲೇ ಹಲವರು ಕಬಡ್ಡಿ ಕ್ಷೇತ್ರದಲ್ಲಿ ಮಿಂಚಿದ್ದಾರೆ. ನಾನು ಕಬಡ್ಡಿಯನ್ನು ನಿರಂತರವಾಗಿ ಆಡುತ್ತೇನೆ, ಅದಕ್ಕಾಗಿ ನನ್ನಿಂದಾದ ಸೇವೆಯನ್ನು ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಪುಸ್ತಕ, ವಸ್ತ್ರ ಹಾಗೂ ಕಂಪ್ಯೂಟರ್‌ಗಳನ್ನು ವಿತರಿಸಿದ ರಾಜ್ಯ ಆರೋಗ್ಯ ಸಚಿವ ಯು.ಟಿ. ಖಾದರ್ ಮಾತನಾಡಿ, ಬಡತನದಲ್ಲಿ ಹುಟ್ಟಿ ಬಡತನದಲ್ಲೇ ಬದುಕು ಮುಗಿಸುವ ಕಾಲ ಈಗಿಲ್ಲ. ಇಂತಹ ಕಾರ್ಯಕ್ರಮಗಳಿಂದ ಶಿಕ್ಷಣದಿಂದ ಯಾರೂ ವಂಚಿತರಾಗುವುದಿಲ್ಲ. ಎಲ್ಲರನ್ನು ಒಗ್ಗೂಡಿಸಿ ಮಾಡುವ ಈ ಕೆಲಸ ಮಾದರಿಯಾಗಿದೆ. ಭಾರತ ವಿಶ್ವದಲ್ಲೇ ನಂಬರ್ ಒನ್ ಆಗಬೇಕು ಎಂಬುದು ನಮ್ಮೆಲ್ಲರ ಆಸೆ. ಅದಕ್ಕಾಗಿ ವಿದ್ಯಾರ್ಥಿಗಳು ಮತ್ತು ಕ್ರೀಡಾಪಟುಗಳು ಬಲಿಷ್ಠರಾಗಬೇಕು. ತಾಳ್ಮೆ ಮತ್ತು ನಿಯತ್ತು ವಿದ್ಯಾರ್ಥಿಗಳ ಮುಖ್ಯ ಗುಣವಾಗಿರಬೇಕು. ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಧಾರ್ಮಿಕ ಮತ್ತು ಲೌಕಿಕ ಶಿಕ್ಷಣ ಎರಡೂ ಅಗತ್ಯ. ಪ್ರೀತಿ-ವಿಶ್ವಾಸಗಳು ನಮ್ಮ ವ್ಯಕ್ತಿತ್ವಕ್ಕೆ ಮೆರುಗು ನೀಡುತ್ತವೆ" ಎಂದರು.

> ಶೆಹ್ರಾವತ್ ಅವರ ಸಹಿ ಪಡೆದುಕೊಳ್ಳಲು ಹಾಗೂ ಅವರೊಂದಿಗೆ ಫೋಟೋ ತೆಗಿಸಿಕೊಳ್ಳಲು ವಿದ್ಯಾರ್ಥಿಗಳು ಮುಗಿಬಿದ್ದರು. ಪವನ್ ಅವರು ತಾಳ್ಮೆಯಿಂದ ಎಲ್ಲರೊಂದಿಗೆ ಬೆರೆತದ್ದು ವಿಶೇಷವಾಗಿತ್ತು

ಶಾಸಕ ಹರೀಶ್ ಪೂಂಜ ಮಾತನಾಡಿ, "ನಮ್ಮ ತಾಲೂಕಿನ ಯುವಕರು ಕಬಡ್ಡಿಯಲ್ಲಿ ಮಿಂಚಬೇಕು. ಅದಕ್ಕಾಗಿ ಕಬಡ್ಡಿ ಅಕಾಡೆಮಿ ಆರಂಭವಾಗಲಿ. ಇಂದು ಪೋಷಕರು ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದರಿಂದ ಇಂತಹ ಕಾರ್ಯಕ್ರಮಗಳು ಪೂರಕವಾಗಿವೆ" ಎಂದರು.

> **ಕಬಡ್ಡಿ ಅಕಾಡೆಮಿಗೆ ನನ್ನ ಎಲ್ಲಾ ಸಹಕಾರ**
> ಅಳದಂಗಡಿಯ ಸೋಮನಾಥೇಶ್ವರಿ ಹಾಗೂ ಸತ್ಯದೇವತೆಯೇ ನನ್ನನ್ನು ಇಲ್ಲಿಗೆ ಕರೆತಂದಿದ್ದಾರೆ ಎಂದು ನಂಬಿದ್ದೇನೆ. ಮುಂದಿನ ಏಷ್ಯನ್ ಗೇಮ್ಸ್‌ನಲ್ಲಿ ಕಬಡ್ಡಿಯಲ್ಲಿ ಚಿನ್ನ ಗೆದ್ದರೆ ಖಂಡಿತಾ ಮತ್ತೊಮ್ಮೆ ಇಲ್ಲಿಗೆ ಬರುತ್ತೇನೆ. ಕಬಡ್ಡಿ ಅಕಾಡೆಮಿಗೆ ನನ್ನ ಎಲ್ಲಾ ಸಹಕಾರ ನೀಡುತ್ತೇನೆ
> ■ ಪವನ್ ಶೆಹ್ರಾವತ್

ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್, ಪುಸ್ತಕ ವಿತರಣೆಯಂತಹ ಪುಣ್ಯ ಕಾರ್ಯಕ್ಕೆ ಭಾರತದ ಕಬಡ್ಡಿ ನಾಯಕ ಬಂದಿರುವುದು ನಮಗೆ ಅಭಿಮಾನದ ವಿಷಯ. ಕಬಡ್ಡಿ ಭಾರತದ ಮಣ್ಣಿನ ಆಟ. ಇದಕ್ಕೆ ನಾವು ಗೌರವ ನೀಡಲೇಬೇಕು. ಕಬಡ್ಡಿ ಆಟ ಜೀವನವನ್ನು ಗೆಲ್ಲುವ ಪಾಠ ಕಲಿಸುತ್ತದೆ ಎಂದರು.

ಅಳದಂಗಡಿ ಅರಮನೆಯ ಡಾ. ಪದ್ಮಪ್ರಸಾದ ಅಜಿಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯಲ್ಲಿ ರಾಷ್ಟ್ರಮಟ್ಟದ ಕಬಡ್ಡಿ ಆಟಗಾರರಾದ ಸುಕೇಶ್ ಹೆಗ್ಡೆ, ಮೋಹಿತ್ ಕುಮಾರ್, ಮರೋಡಿ ಶ್ರೀ ಉಮಾಮಹೇಶ್ವರ ದೇವಸ್ಥಾನದ ಆಡಳಿತ ಮೊಕ್ತೇಸರ ದೇವೇಂದ್ರ ಹೆಗ್ಡೆ, ಆಮೆಚೂರು ಕಬಡ್ಡಿ ಅಸೋಸಿಯೇಷನ್ ತಾಲೂಕು ಅಧ್ಯಕ್ಷ ರಂಜನ್ ಗೌಡ, ಬಡಗಕಾರಂದೂರು ಸರ್ಕಾರಿ ಶಾಲೆಗೆ ಕಂಪ್ಯೂಟರ್ ಕೊಡುಗೆ ನೀಡಿದ ದುಬೈಯ ನಾರಾಯಣ ದೇವಾಡಿಗ, ಮೆಸ್ಕಾಂ ಅಧ್ಯಕ್ಷ ಹರೀಶ್ ಕುಮಾರ್, ಬೆಸ್ಟ್ ಫೌಂಡೇಶನ್ ಅಧ್ಯಕ್ಷ ರಕ್ಷಿತ್ ಶಿವರಾಂ, ಸತೀಶ್ ಕಾಶಿಪಟ್ಣ ಉಪಸ್ಥಿತರಿದ್ದರು.

ನಿವೃತ್ತ ಸೈನಿಕರಾದ ಎಸಿಪಿ ನಾಯಕ ಸುಬೇದಾರ್ ಎನ್.ಪಿ. ತಂಗಚ್ಚನ್, ರೂಬಿನ್ ಜೋಸೆಫ್; ಪಿಯುಸಿಯಲ್ಲಿ ರಾಜ್ಯ ರ್‍ಯಾಂಕ್ ಪಡೆದ ಎಕ್ಸೆಲ್ ಕಾಲೇಜಿನ ಅಕ್ಷಯ್, ವಾಣಿ ಕಾಲೇಜಿನ ಸಮೀಕ್ಷಾ ಅಳದಂಗಡಿ; ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಅನುಗ್ರಹ ಶಾಲೆಯ ಅನನ್ಯ ಗುಡಿಗಾರ್, ವಾಣಿ ಶಾಲೆಯ ಪ್ರಾಪ್ತಿ ಎಂ. ಗೌಡ ಅವರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ನಡೆಯಿತು. ಕಾರ್ಯಕ್ರಮಕ್ಕೂ ಮೊದಲು ಕೆದ್ದುವಿನಿಂದ ದೇವಸ್ಥಾನದವರೆಗೆ ಅತಿಥಿಗಳೊಂದಿಗೆ ಆಕರ್ಷಕ ಮೆರವಣಿಗೆ ನಡೆಯಿತು. ಸುಮಾರು 6,000 ಮಕ್ಕಳಿಗೆ ಪುಸ್ತಕಗಳನ್ನು ಉಚಿತವಾಗಿ ವಿತರಿಸಲಾಯಿತು.

ಶ್ರೀಸತ್ಯದೇವತಾ ದೈವಸ್ಥಾನದ ಆಡಳಿತದಾರ ಶಿವಪ್ರಸಾದ ಅಜಿಲ ಸ್ವಾಗತಿಸಿದರು. ಪ್ರಜ್ಞಾ ಓಡಿಲ್ನಾಳ ಮತ್ತು ಸಮೀಕ್ಷಾ ಶಿರ್ಲಾಲು ಕಾರ್ಯಕ್ರಮ ನಿರೂಪಿಸಿದರು.

ರೈತ ಪರ ಬಿಜೆಪಿ ನಿಲುವು: ವಿಜಯೇಂದ್ರ ಸ್ಪಷ್ಟನೆ

ರೈತರ ಒಕ್ಕಲೆಬ್ಬಿಸುವುದು ಶೋಭೆಯಲ್ಲ

ಬೆಂಗಳೂರು: ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಬಿಜೆಪಿ ನಿಲುವು ಸ್ಪಷ್ಟವಾಗಿದೆ ರೈತರ ಪರವಾಗಿ ನಾವು ನಿಲ್ಲುತ್ತೇವೆ. ಒತ್ತಾಯವಾಗಿ ರೈತರ ಜಮೀನು ಕಸಿಯಲು ನಾವು ಬಿಡುವುದಿಲ್ಲ. ಸ್ವತಃ ಮುಖ್ಯಮಂತ್ರಿ ಅವರೇ ಆಸಕ್ತಿ ವಹಿಸಿ ರೈತರನ್ನು ಒಕ್ಕಲೆಬ್ಬಿಸಲು ಹೋಗಿರುವುದು ಸರಿ ಅಲ್ಲ. ಇದು ಅಕ್ಷಮ್ಯ ಅಪರಾಧ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ.



ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾವು ಜಮೀನು ಬಿಡುವುದಿಲ್ಲ ಎಂದು ರೈತರೇ ಹೇಳಿದ್ದಾರೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರೇ ಮುಖ್ಯಮಂತ್ರಿ ಮೇಲೆ ಒತ್ತಡ ಹೇರಿ ಇದನ್ನು ತಡೆಯಬೇಕು. ರೈತರಿಗೆ ತೊಂದರೆ ಆಗುವುದನ್ನು ಖಂಡಿಸಿ ಬಿಜೆಪಿ ಹೋರಾಟ ಮಾಡಲಿದೆ. ಟೌನ್‌ಶಿಪ್ ವಿಚಾರದಲ್ಲಿ ಪ್ರಧಾನಿ ಮೋದಿ ಅವರ ಹೆಸರು ಹೇಳಿ ದಲ್ಲಾಳಿತನ ಮಾಡಲು ಬಿಡಲ್ಲ ಭೂಸ್ವಾಧೀನಕ್ಕೆ ಕೆಐಎಡಿಬಿ ನಿಯಮ ಪಾಲನೆ ಮಾಡಲಿ ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಸರ್ಕಾರದ ಷಡ್ಯಂತ್ರ

ಧರ್ಮಸ್ಥಳದ ಬುರುಡೇ ಪ್ರಕರಣ ಕಾಂಗ್ರೆಸ್ ಸರ್ಕಾರದ ಷಡ್ಯಂತ್ರ. ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾದಿಬೀದಿಯಲ್ಲಿ ಹೋಗುವ ನಗರ ನಕ್ಸಲರ ಮಾತು ಕೇಳಿ ಎಸ್‌ಐಟಿ ರಚಿಸಿದರು. ಅದರ ಅಗತ್ಯ ಇರಲಿಲ್ಲ. ಇದೇ ಈಗ ಸರ್ಕಾರಕ್ಕೆ ಗಂಡಾಂತರ ತಂದಿದೆ. ಇಡೀ ದೇಶದ ಮೂಲೆ ಮೂಲೆಯಿಂದ ಕೋಟಿ ಭಕ್ತರು ಧರ್ಮಸ್ಥಳಕ್ಕೆ ಬರುತ್ತಾರೆ. ಎಸ್‌ಐಟಿ ರಚಿಸಲು ಮುಖ್ಯಮಂತ್ರಿ ವಿವೇಚನೆ ಬಳಸಬೇಕಿತ್ತು. ಬುರುಡೆ ಪ್ರಕರಣದಲ್ಲಿ ನೂರಾರು ಕೋಟಿ ಅವ್ಯವಹಾರ ಆಗಿದೆ ಎಂಬ ವರದಿಗಳಿವೆ. ಇದಕ್ಕೆಲ್ಲ ಕಾಂಗ್ರೆಸ್ ಸರ್ಕಾರವೇ ಹೊಣೆ. ಅವರ ಆಸಕ್ತಿ ಏನಿತ್ತು ಎಂಬುದು ತಿಳಿಯಲಿ ಎಂದು ವಿಜಯೇಂದ್ರ ಹೇಳಿದರು.

ಜನರ ಆರೋಗ್ಯಕ್ಕೆ ಒತ್ತು ನೀಡಿ

ದಾಸರಹಳ್ಳಿ: ಇಂದಿನ ಒತ್ತಡದ ಜೀವನದಲ್ಲಿ ಜನರು ಮುಖ್ಯವಾಗಿ ಆರೋಗ್ಯ ಕಾಪಾಡಿಕೊಳ್ಳಿ. ಆರೋಗ್ಯದಲ್ಲಿ ಏನದರೂ ಸಮಸ್ಯೆ ಕಂಡು ಬಂದರೆ ಕೂಡಲೇ ತಪಾಸಣೆ ಮಾಡಿಸಿಕೊಂಡು ಸರಿಯಾದ ಚಿಕಿತ್ಸೆ ಪಡೆಯಿರಿ ಎಂದು ದಾಸರಹಳ್ಳಿ ಶಾಸಕ ಎಸ್ ಮುನಿರಾಜು ತಿಳಿಸಿದರು.



ಕ್ಷೇತ್ರದ ಹೆಸರುಘಟ್ಟ ಮುಖ್ಯ ರಸ್ತೆಯಲ್ಲಿ ನೇಸರ ಫೌಂಡೇಶನ್ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಕುಟುಂಬ ನಿರ್ವಹಣೆಗೆ ಜನರು ಒಂದಲ್ಲಾ ಒಂದು ಸಮಸ್ಯೆ ಎದುರಿಸುತ್ತಾ ಒತ್ತಡದ ಜೀವನ ನಡೆಸುತ್ತಿರುವುದು ಇತ್ತೀಚಿನ ದಿನಗಳಲ್ಲಿ ಜಾಸ್ತಿ. ಅದರಲ್ಲೂ ಯುವಕ, ಯುವತಿಯರು ತಮ್ಮ ಜೀವನ ಶೈಲಿ ಐಷಾರಾಮಿಯಂತಿರಬೇಕೆಂದು ಕನಸು ಕಾಣುತ್ತಾ ಒತ್ತಡದ ಜೀವನದಲ್ಲಿ ಸಿಲುಕುತ್ತಿದ್ದಾರೆಂಬ ವಾತಾವರಣ ಎಲ್ಲೆಲ್ಲೂ ಕಾಣುತ್ತಿದೆ. ಆದ್ದರಿಂದ ಎಲ್ಲರೂ ಬಿಡುವು ಮಾಡಿಕೊಂಡು ತಮ್ಮ ಆರೋಗ್ಯದ ಕಡೆ ಗಮನ ಹರಿಸಿ ಇರುವಷ್ಟರಲ್ಲೇ ಸುಖವಾಗಿ ಜೀವನ ನಡೆಸಿ ಆರೋಗ್ಯ ಕಾಪಾಡಿಕೊಳ್ಳಿ ಎಂದು ಹೇಳಿದರು. ನೇಸರ ಫೌಂಡೇಶನ್ ಸಂಸ್ಥಾಪಕ ಬಿ ಎಸ್ ಅನಿಲ್ ಕುಮಾರ್ ಮಾತನಾಡಿ, ಈಗಾಗಲೇ ನಮ್ಮ ಫೌಂಡೇಶನ್ ವತಿಯಿಂದ ಪರಿಸರ ರಕ್ಷಣೆಗಾಗಿ ಅನೇಕ ಬಡಾವಣೆಗಳಲ್ಲಿ ಗಿಡ ನೆಡುವುದರ ಮೂಲಕ ಹಸಿರು ಕ್ರಾಂತಿಯ ಆಂದೋಲನ ಆರಂಭಿಸಿದ್ದೇವೆ ಎಂದು ಹೇಳಿದರು. ಶಿಬಿರದಲ್ಲಿ ಸೂರಜ್ ಫೌಂಡೇಶನ್ ಅಧ್ಯಕ್ಷೆ ಸುಜಾತಾ ಮುನಿರಾಜು, ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಅಧ್ಯಕ್ಷೆ ಉಮಾದೇವಿ ನಾಗರಾಜ್,ಮಲ್ಲಸಂದ್ರದ ಟಿ ಶಿವಕುಮಾರ್, ಬಾಗಲಗುಂಟೆಯ ಬಿ ಎಂ ನಾರಾಯಣ್, ಬಿ ಎಂ ಕೃಷ್ಣ ಬಾಣಾವರದ ಭಾಗ್ಯಮ್ಮ ಇದ್ದರು.

ಪ್ರಶಸ್ತಿ ಪ್ರದಾನ



ನಗರದ ಶೇಷಾದ್ರಿಪುರ ಕಾಲೇಜಿನ ಸಭಾಂಗಣದಲ್ಲಿ ಗೌಡತಿಯರ ಸೇನೆ ವತಿಯಿಂದ ಆಯೋಜಿಸಿದ್ದ ಉಪನ್ಯಾಸ ಮತ್ತು ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬೊಮ್ಮನಾಯಕನಹಳ್ಳಿ ಮಹೇಶ್ (ಕಾರ್ಮಿಕರ ಸೇವೆ), ಎಚ್.ಕೆ.ಬೊಮ್ಮೇಗೌಡ (ಪತ್ರಿಕಾ ಸೇವೆ), ಭಾಗ್ಯಶ್ರೀ (ಸಂಗೀತ ಕ್ಷೇತ್ರ) , ಎಚ್.ಡಿ.ಪುಷ್ಪಾ (ಶಿಕ್ಷಣ, ಪರಿಸರ ಸೇವೆ)ಗಳ ಜಾನಪದ ತಜ್ಞೆ ಡಾ.ಕೆ.ಆರ್.ಸಂಧ್ಯಾರೆಡ್ಡಿ, ಬ್ರಹ್ಮ ಸಮಾಜದ ಚಿಂತಕ ಡಬ್ಲ್ಯೂ.ಡಿ.ಅಶೋಕ್ ಅವರು ಸೇವಾ ಗೌರವ ಪ್ರಶಸ್ತಿ ನೀಡಿ ಅಭಿನಂದಿಸಿದರು. ಈ ವೇಳೆ ಶಾಸನ ತಜ್ಞ ಡಾ.ಸ್ಮಿತಾ ಡಿ. ರೆಡ್ಡಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಮಾಯಣ್ಣ, ಸಾಹಿತಿ ಡಾ.ಎಸ್.ರಾಮಲಿಂಗೇಶ್ವರ ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ಗಾಯಾಳು ಮಹಿಳೆ ಸಾವು

ಉಪ್ಪಿನಂಗಡಿ : ಇಲ್ಲಿನ ಕೂಟೇಲು ಎಂಬಲ್ಲಿ ಜೂನ್ 1 ರಂದು ಸಂಭವಿಸಿದ್ದ ಲಾರಿ – ಕಾರು ಡಿಕ್ಕಿ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಭಾರತಿ (48) ಚಿಕಿತ್ಸೆ ಫಲಕಾರಿಯಾದೆ ಶನಿವಾರದಂದು ಸಾವನ್ನಪ್ಪಿದ್ದಾರೆ. ಮಂಗಳೂರಿನ ಮರೋಳಿ ನಿವಾಸಿಯಾಗಿದ್ದ ಇವರು, ಕುಟುಂಬಸ್ಥರೊಂದಿಗೆ ಶ್ರೀ ಕ್ಷೇತ್ರ ಸುಬ್ರಹ್ಮಣ್ಯಕ್ಕೆ ಯಾತ್ರೆ ಕೈಗೊಂಡಿದ್ದ ಸಮಯದಲ್ಲಿ ಉಪ್ಪಿನಂಗಡಿಯಲ್ಲಿ ಅವರು ಪ್ರಯಾಣಿಸುತ್ತಿದ್ದ ಕಾರಿಗೆ ಅಡುಗೆ ಅನಿಲದ ಜಾಡಿಗಳನ್ನು ಹೊತ್ತೊಯ್ಯುತ್ತಿದ್ದ ಲಾರಿಯೊಂದು ಡಿಕ್ಕಿ ಹೊಡೆದಿತ್ತು. ಕಾರಿನಲ್ಲಿದ್ದ ಚಾಲಕ ದೀಪಕ್, ಯಾತ್ರಾರ್ಥಿಗಳಾದ ಗುರುರಾಜ್, ಧನುಷ್, ಗೀತಾ ಹಾಗೂ ಭಾರತಿ ಗಾಯಗೊಂಡು ಮಂಗಳೂರಿನ ಆಸ್ಪತ್ರೆಗೆ ದಾಖಲಾಗಿದ್ದರು. ಚಿಕಿತ್ಸೆ ಫಲಕಾರಿಯಾಗದೆ ಭಾರತಿ ಮೃತಪಟ್ಟಿದ್ದು, ಗಾಯಾಳುಗಳ ಪೈಕಿ ದೀಪಕ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿದ್ದು, ಉಳಿದವರು ಆಸ್ಪತ್ರೆಯಿಂದ ಬಿಡುಗಡೆಗೊಂಡಿದ್ದಾರೆ. ಪುತ್ತೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ.



ಲೈಂಗಿಕ ಕಿರುಕುಳ ದೂರು

ಬೆಳ್ತಂಗಡಿ : ಮಹಿಳಾ ಸಿಬ್ಬಂದಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಬೆಳ್ತಂಗಡಿ ಸರಕಾರಿ ಆಸ್ಪತ್ರೆಯ ಚಂದ್ರಶೇಖರ್ ವಿರುದ್ಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬೆಳ್ತಂಗಡಿ ತಾಲೂಕು ಸಾರ್ವಜನಿಕ ಸರಕಾರಿ ಆಸ್ಪತ್ರೆಯಲ್ಲಿ ಕಳೆದ 25 ವರ್ಷಗಳಿಂದ ಔಷಧಿ ವಿಭಾಗದ ಮುಖ್ಯಸ್ಥನಾಗಿರುವ ಬೆಳ್ತಂಗಡಿ ತಾಲೂಕಿನ ಶಿರ್ಲಾಲು ಗ್ರಾಮದ ಕೆದ್ದು ನಿವಾಸಿಯಾಗಿರುವ ಚಂದ್ರಶೇಖರ್ ತನ್ನ ಆಸ್ಪತ್ರೆಯ ಮಹಿಳಾ ಸಿಬ್ಬಂದಿಗೆ ಔಷಧಾಲಯದ ಉಗ್ರಾಣದಲ್ಲಿ ಲೈಂಗಿಕ ಕಿರುಕುಳ ಕೊಟ್ಟಿದ್ದು ಈ ಬಗ್ಗೆ ಯಾರಲ್ಲಾದ್ದರೂ ಹೇಳಿದ್ರೆ ಕೆಲಸದಿಂದ ತೆಗೆಯುವುದಾಗಿ ಪದೆ ಪದೆ ಬೆದರಿಕೆ ಹಾಕಿರುವುದಾಗಿ ದೌರ್ಜನ್ಯ ಕ್ಕೆ ಒಳಗಾದ ಮಹಿಳೆ ಬೆಳ್ತಂಗಡಿ ಪೊಲೀಸರಿಗೆ ದೂರು ನೀಡಿದ್ದು ಪ್ರಕರಣ ಸಂಬಂಧ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಜೂ.11 ರಂದು ಪ್ರಕರಣ ದಾಖಲಾಗಿದೆ. ಚಂದ್ರಶೇಖರ್ ಹಲವಾರು ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದ್ದ ಎಂಬ ಆರೋಪವೂ ಕೂಡ ಕೇಳಿ ಬಂದಿದೆ. ಆದ್ರೆ ಭಯದಿಂದ ಮಾರ್ಯಾದೆಗೆ ಅಂಜಿ ಯಾರು ದೂರು ಕೊಡಲು ಮುಂದೆ ಬಂದಿರಲ್ಲಿಲ್ಲ. ಇದೀಗ ಆಸ್ಪತ್ರೆಯ ಸಿಬ್ಬಂದಿ ಧೈರ್ಯದಿಂದ ಲೈಂಗಿಕ ಕಿರುಕುಳವನ್ನು ಮನೆಯವರಿಗೆ ತಿಳಿಸಿ ದೂರು ಕೊಟ್ಟಿದ್ದು ಪೊಲೀಸರು ಪ್ರಕರಣದಬಗ್ಗೆ ತನಿಖೆ ನಡೆಸುತ್ತಿದ್ದಾರೆ.

ಬೆಂಗಳೂರು ಕೃಷಿ ವಿವಿ ದೇಶದಲ್ಲಿ 7ನೇ ಸ್ಥಾನ

ಬೆಂಗಳೂರು: ಕೃಷಿ ಶಿಕ್ಷಣ, ಸಂಶೋಧನೆ ಮತ್ತು ರೈತಪರ ಸೇವೆಗಳಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ದೇಶದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಪೈಕಿ ಮತ್ತೊಮ್ಮೆ ಗಮನಾರ್ಹ ಸಾಧನೆ ಮಾಡಿದೆ. ಇಂಡಿಯನ್ ಇನ್ಸ್‌ಟಿಟ್ಯೂಷನಲ್ ರ‍್ಯಾಂಕಿಂಗ್ ಫ್ರೇಮ್ ವರ್ಕ್ (ಐಐಆರ್‌ಎಫ್)–2026 ಪ್ರಕಟಿಸಿರುವ ಶ್ರೇಯಾಂಕ ಪಟ್ಟಿಯಲ್ಲಿ ವಿಶ್ವವಿದ್ಯಾಲಯವು ದೇಶದಲ್ಲಿ 7ನೇ ಸ್ಥಾನ ಪಡೆದುಕೊಂಡಿದ್ದು, ಕರ್ನಾಟಕದ ಕೃಷಿ ವಿಶ್ವವಿದ್ಯಾಲಯಗಳ ಪೈಕಿ ಅಗ್ರಸ್ಥಾನವನ್ನು ಕಾಯ್ದುಕೊಂಡಿದೆ. ಈ ಹಿಂದೆ ವಿಶ್ವವಿದ್ಯಾಲಯ ಪಡೆದಿದ್ದ ನ್ಯಾಕ್ ಎ+ ಮಾನ್ಯತೆಯ ನಂತರ ದೊರೆತಿರುವ ಈ ರಾಷ್ಟ್ರೀಯ ಮಟ್ಟದ ಗೌರವವು, ಗುಣಮಟ್ಟದ ಶಿಕ್ಷಣ, ಕೃಷಿ ಕ್ಷೇತ್ರದ ಸಂಶೋಧನಾ ಸಾಧನೆಗಳು, ತಂತ್ರಜ್ಞಾನ ಅಭಿವೃದ್ಧಿ, ರೈತಪರ ವಿಸ್ತರಣಾ ಚಟುವಟಿಕೆಗಳು ಹಾಗೂ ಸಮಾಜಮುಖಿ ಕಾರ್ಯಗಳಿಗೆ ದೊರೆತ ಮತ್ತೊಂದು ಮನ್ನಣೆಯಾಗಿದೆ.

ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಉನ್ನತೀಕರಣ | ಕನ್ನಡ ಹಸ್ತಪ್ರತಿಗಳ ಡಿಜಿಟಲೀಕರಣಕ್ಕೆ ಆದ್ಯತೆ

ವಿವಿಯ ವಸ್ತುಸಂಗ್ರಹಾಲಯ ನವೀಕರಣ

ನಂದಿನಿ ಎನ್.

ದಿಗಂತ ವಿಶೇಷ

ಬೆಂಗಳೂರು: ಶಿಕ್ಷಣ, ಸಂಶೋಧನೆ ಮತ್ತು ಪರಂಪರೆ ಸಂರಕ್ಷಣೆಗೆ ಹೊಸ ಆಯಾಮ ನೀಡುವ ಉದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿರುವ ಐದು ವಸ್ತು ಸಂಗ್ರಹಾಲಯಗಳನ್ನು 1 ಕೋಟಿ ರೂ. ವೆಚ್ಚದಲ್ಲಿ ನವೀಕರಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಕೇಂದ್ರ ಶಿಕ್ಷಣ ಸಚಿವಾಲಯದ ಪ್ರಧಾನ ಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ (ಪಿಎಂ-ಉಷಾ) ಯೋಜನೆ ಅಡಿಯಲ್ಲಿ ವಿಶ್ವವಿದ್ಯಾಲಯಕ್ಕೆ ಬಿಡುಗಡೆಯಾಗಿರುವ 100 ಕೋಟಿ ರೂ. ಅನುದಾನದ ಭಾಗವಾಗಿ ಈ ಕಾಮಗಾರಿಗಳು ಕೈಗೆತ್ತಿಕೊಳ್ಳಲಾಗಿದೆ.

ಪ್ರಾಣಿ ವಿಜ್ಞಾನ, ಭೂ–ವಿಜ್ಞಾನ, ಸಸ್ಯ ವಿಜ್ಞಾನ, ಇತಿಹಾಸ ಹಾಗೂ ಕನ್ನಡ ವಿಭಾಗಗಳಲ್ಲಿರುವ ವಸ್ತು ಸಂಗ್ರಹಾಲಯಗಳನ್ನು ಜಾಗತಿಕ ವಸ್ತು ಸಂಗ್ರಹಾಲಯಗಳ ಮಾನದಂಡಗಳಿಗೆ ಅನುಗುಣವಾಗಿ ಉನ್ನತೀಕರಿಸಲಾಗುತ್ತಿದೆ. ಈ ಮೂಲಕ ಅಮೂಲ್ಯ ಐತಿಹಾಸಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ವಸ್ತುಗಳನ್ನು ಸಂರಕ್ಷಿಸುವುದರ ಜತೆಗೆ ಅವುಗಳನ್ನು ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಸಾರ್ವಜನಿಕರಿಗೂ ಹೆಚ್ಚು ಪರಿಣಾಮಕಾರಿಯಾಗಿ ತಲುಪಿಸುವ ಉದ್ದೇಶ ಹೊಂದಲಾಗಿದೆ.



> ಪರಂಪರೆಯ ಸಂರಕ್ಷಣೆ ಮತ್ತು ಆಧುನಿಕ ತಂತ್ರಜ್ಞಾನದ ಸಮನ್ವಯದ ಮೂಲಕ ಬೆಂಗಳೂರು ವಿಶ್ವವಿದ್ಯಾಲಯ ತನ್ನ ವಸ್ತು ಸಂಗ್ರಹಾಲಯಗಳನ್ನು ಜ್ಞಾನ, ಸಂಶೋಧನೆ ಮತ್ತು ಸಾರ್ವಜನಿಕ ಶಿಕ್ಷಣದ ನೂತನ ಕೇಂದ್ರಗಳನ್ನಾಗಿ ರೂಪಿಸಲು ಮುಂದಾಗಿದೆ.
> ■ ಎಸ್.ಎಂ. ಜಯಕರ, ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

ಪಾರಂಪರಿಕ ಕಟ್ಟಡಗಳ ಮೂಲ ವಾಸ್ತುಶಿಲ್ಪಕ್ಕೆ ಯಾವುದೇ ಧಕ್ಕೆಯಾಗದಂತೆ, ಈಗಾಗಲೇ ಕಟ್ಟಡಗಳ ದುರಸ್ತಿ ಮತ್ತು ಆಧುನೀಕರಣ ಕಾರ್ಯ ಆರಂಭಗೊಂಡಿದ್ದು, ಸೂಕ್ತ ತಂತ್ರಜ್ಞಾನ ಬಳಸಿ ಸಂಗ್ರಹಾಲಯಗಳನ್ನು ನೂತನ ರೂಪದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಅಲ್ಲದೇ, ಕಲಾಕೃತಿಗಳು ಹಾಗೂ ಅಪರೂಪದ ವಸ್ತುಗಳಿಗೆ ಯಾವುದೇ ಹಾನಿಯಾಗದಿರಲು, ವಿಶೇಷ ಎಲ್‌ಇಡಿ ಬೆಳಕಿನ ವ್ಯವಸ್ಥೆಯನ್ನು ಬಳಸಲಾಗುತ್ತಿದೆ. ಇದರಿಂದ ವಸ್ತುಗಳ ಮೇಲೆ ಉಷ್ಣದ ಪರಿಣಾಮ ಕಡಿಮೆ ಯಾಗುವುದರೊಂದಿಗೆ ಪ್ರದರ್ಶನದ ಗುಣಮಟ್ಟವೂ ಹೆಚ್ಚಳವಾಗಲಿದೆ.

ಶಾಲಾ ವಿದ್ಯಾರ್ಥಿಗಳಿಗೆ ಕಲಿಕಾ ಕೇಂದ್ರಗಳಾಗಿ ರೂಪಾಂತರ: ವಸ್ತು ಸಂಗ್ರಹಾಲಯಗಳು ಕೇವಲ ಪ್ರದರ್ಶನ ಕೇಂದ್ರಗಳಾಗಿರದೆ, ಕಾರ್ಯಾಗಾರಗಳು, ವಿಚಾರಗೋಷ್ಠಿಗಳು ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಪೂರಕ ಕಲಿಕಾ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸಲಿವೆ. ಸಂಗ್ರಹಾಲಯ ಆಧಾರಿತ ಶಿಕ್ಷಣವನ್ನು ಉತ್ತೇಜಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸಂಶೋಧನಾ ಮನೋಭಾವ ಮತ್ತು ಪರಂಪರೆ ಬಗ್ಗೆ ಅರಿವು ಮೂಡಿಸುವ ಉದ್ದೇಶವನ್ನು ವಿಶ್ವವಿದ್ಯಾಲಯ ಹೊಂದಿದೆ.

ಬೋಧನೆ ಮತ್ತು ಸಂಶೋಧನೆಗೆ ಮತ್ತಷ್ಟು ಬಲ: ವಸ್ತು ಸಂಗ್ರಹಾಲಯಗಳು ಬೋಧನೆ ಮತ್ತು ಅಧ್ಯಯನ ಪ್ರಕ್ರಿಯೆಗಳನ್ನು ಬಲಪಡಿಸುವುದರ ಜತೆಗೆ ಉನ್ನತ ಮಟ್ಟದ ಸಂಶೋಧನೆಗೂ ಬೆಂಬಲ ನೀಡುತ್ತದೆ. ವಿಭಾಗೀಯ ಸಂಗ್ರಹಾಲಯಗಳನ್ನು ಶೈಕ್ಷಣಿಕ ಹಾಗೂ ಸಾರ್ವಜನಿಕ ಜ್ಞಾನ ಕೇಂದ್ರಗಳಾಗಿ ಪರಿವರ್ತಿಸುವ ಮೂಲಕ ಅಮೂಲ್ಯ ವೈಜ್ಞಾನಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಪತ್ತನ್ನು ಮುಂದಿನ ಪೀಳಿಗೆಗೆ ಉಳಿಸಬಹುದಾಗಿದೆ.

ಡಿಜಿಟಲೀಕರಣ ಯೋಜನೆಯ ಮಹತ್ವದ ಹೆಜ್ಜೆ

ಕನ್ನಡ ವಿಭಾಗದ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಲ್ಪಟ್ಟಿರುವ ಸುಮಾರು 10 ಸಾವಿರಕ್ಕೂ ಹೆಚ್ಚು ಕನ್ನಡ ಹಸ್ತಪ್ರತಿಗಳು ಹಾಗೂ ಲಿಪಿಗಳನ್ನು ಡಿಜಿಟಲೀಕರಣಗೊಳಿಸುವ ವಿಶೇಷ ಯೋಜನೆ ರೂಪಿಸಲಾಗಿದ್ದು, ಈ ಕಾರ್ಯ ಪೂರ್ಣಗೊಂಡ ನಂತರ ಅಪರೂಪದ ದಾಖಲೆಗಳ ಸಂರಕ್ಷಣೆ ಸುಲಭವಾಗಲಿದೆ. ಹಳೆಯ ಮತ್ತು ಅಮೂಲ್ಯ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಸಂರಕ್ಷಿಸುವ ಮೂಲಕ ಅವುಗಳ ದೀರ್ಘಕಾಲೀನ ರಕ್ಷಣೆ ಸಾಧ್ಯವಾಗಲಿದೆ. ಕಾಲಕ್ರಮೇಣ ಹಾಳಾಗುವ ಸಾಧ್ಯತೆಯಿರುವ ಹಸ್ತಪ್ರತಿಗಳು ಹಾಗೂ ಲಿಪಿಗಳನ್ನು ತಂತ್ರಜ್ಞಾನದ ನೆರವಿನಿಂದ ಸುರಕ್ಷಿತವಾಗಿ ಉಳಿಸಿಕೊಳ್ಳುವ ಉದ್ದೇಶ ಹೊಂದಿದ್ದು ಸಂಶೋಧಕರು, ವಿದ್ವಾಂಸರು, ಭಾಷಾ ತಜ್ಞರು ಮತ್ತು ವಿದ್ಯಾರ್ಥಿಗಳಿಗೆ ಅಮೂಲ್ಯ ಮಾಹಿತಿ ಲಭ್ಯವಾಗಲಿದೆ.

ಯುವಕರಿಗೆ ಸಂಸದ ತೇಜಸ್ವಿ ಸೂರ್ಯ ಕರೆ

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಬೆಂಗಳೂರು: ದೇಶದಲ್ಲೇ ಉತ್ತಮ ಹವಾಮಾನ ಹೊಂದಿರುವ ಉದ್ಯಾನ ನಗರಿ ಬೆಂಗಳೂರಿನ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಎಂದು ಸಂಸದ ತೇಜಸ್ವಿ ಸೂರ್ಯ ಕರೆ ನೀಡಿದ್ದಾರೆ.

ಬಿಎನ್‌ಎಂ ತಾಂತ್ರಿಕ ಮಹಾವಿದ್ಯಾಲಯ ಮತ್ತು ವಿಕಸನ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗಿದ್ದ, ಬೆಂಗಳೂರು ಹೆರಿಟೇಜ್ ಹಬ್ಬಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಗಾಳಿ, ಮಳೆ, ಬಿಸಿಲು ಸೇರಿದಂತೆ ಎಲ್ಲಾ ರೀತಿಯ ಹವಾಮಾನ ಸಮತೋಲನವಿರುವ ಬೆಂಗಳೂರು ನಗರ ನಮ್ಮ ಹೆಮ್ಮೆಯ ಊರು. ಮುಂದಿನ ಪೀಳಿಗೆಗೆ ಶುದ್ಧ ಪರಿಸರ ಉಳಿಸಿ ಹೋಗುವುದು ನಮ್ಮ ಜವಾಬ್ದಾರಿ ಎಂದು ಅಭಿಪ್ರಾಯಪಟ್ಟರು.



ಪರಿಸರ ಮತ್ತು ಆರೋಗ್ಯ ಜಾಗೃತಿ ವಿಷಯದಲ್ಲಿ ಬಿಎನ್‌ಎಂ ತಾಂತ್ರಿಕ ಮಹಾವಿದ್ಯಾಲಯ ಸಂಸ್ಥೆಯ ಕಾಳಜಿಗೆ ತೇಜಸ್ವಿ ಸೂರ್ಯ ಮೆಚ್ಚುಗೆ ವ್ಯಕ್ತಪಡಿಸಿದರು. ಶಾಸಕರಾದ ಉದಯ ಗರುಡಾಚಾರ, ನಿವೃತ್ತ ಅಧಿಕಾರಿ ಭಾಸ್ಕರ್ ರಾವ್, ಕರ್ನಾಟಕ ಕ್ಯಾನ್ಸರ್ ಸೊಸೈಟಿ ಅಧ್ಯಕ್ಷ ಡಾ. ಸಿ.ಎ. ಕಿಶೋರ್, ಗರುಡ ಪ್ರತಿಷ್ಠಾನದ ಅಧ್ಯಕ್ಷೆ ಮೇದಿನಿ ಗರುಡಾಚಾರ ಸೇರಿದಂತೆ ಇತರರಿದ್ದರು.

ಸ್ವಾರ್ಥಕ್ಕಾಗಿ ರೈತರ ಭೂಮಿ ಲೂಟಿಗೆ ಯತ್ನ: ಎಚ್‌ಡಿಕೆ

ಟೌನ್‌ಶಿಪ್: ರೈತರಿಗೆ ನ್ಯಾಯ ಕೊಡಿಸುತ್ತೇವೆ

ಬೆಂಗಳೂರು: ಬಿಡದಿ ಟೌನ್‌ಶಿಪ್ ಕುರಿತು ಕಾನೂನಿನಲ್ಲಿ ಏನು ಹೋರಾಟ ಮಾಡಬೇಕೋ ಮಾಡುತ್ತೇವೆ. ರೈತರಿಗೆ ನ್ಯಾಯ ಕೊಡಿಸಲಿದ್ದೇವೆ. ರೈತರ ಪರ ನಿಲ್ಲುವುದು ಜನಪ್ರತಿನಿಧಿಗಳ ಕರ್ತವ್ಯ. ಆ ಕೆಲಸವನ್ನು ನಾವು ಮಾಡುತ್ತೇವೆ. ಯಾವುದೇ ಕಾರಣಕ್ಕೂ ರೈತರ ಭೂಮಿ ಕೊಳ್ಳೆ ಹೊಡೆಯಲು ಬಿಡುವುದಿಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.



ತಮ್ಮ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಬೆಂಗಳೂರು ಅಭಿವೃದ್ಧಿಗೆ ಎಳ್ಳಷ್ಟು ಉಪಯೋಗ ಆಗದ ಈ ಯೋಜನೆಯನ್ನು ತಮ್ಮ ಸ್ವಾರ್ಥಕ್ಕಾಗಿ, ರಿಯಲ್ ಎಸ್ಟೇಟ್ ಮಾಫಿಯಾದೊಂದಿಗೆ ಕೈಜೋಡಿಸಿ ರೈತರ ಭೂಮಿಯನ್ನು ಲೂಟಿ ಹೊಡೆಯಲು ಹೊರಟಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಪಕ್ಷ ರೈತರ ಪರವಾಗಿ ನಿಲ್ಲುತ್ತದೆ. ಅವರ ಜತೆ ನಿಂತು ಕಾನೂನು ಹೋರಾಟ ನಡೆಸುತ್ತದೆ ಎಂದು ಕೇಂದ್ರ ಸಚಿವರು ಹೇಳಿದರು.

2006ರಲ್ಲಿ ನಾನು ಐದು ಟೌನ್‌ಶಿಪ್‌ಗಳನ್ನು ಮಾಡಲು ಹೊರಟಾಗ ಇತ್ತೀಚಿನ ದಿನಗಳವರೆಗೂ ಕಾನೂನು ಮಂತ್ರಿಯಾಗಿದ್ದ ಎಚ್.ಕೆ. ಪಾಟೀಲ್ ಅಧ್ಯಕ್ಷತೆಯಲ್ಲಿ ರಚಿಸಿದ ಸತ್ಯಶೋಧನಾ ಸಮಿತಿ 5 ಸ್ಥಳಗಳಲ್ಲಿ ಸತ್ಯಶೋಧನೆ ಮಾಡಿದ್ದರು. ಯಾವ ಉದ್ದೇಶಕ್ಕೆ ಅಂದು ಈ ಯೋಜನೆಯನ್ನು ವಿರೋಧಿಸಲಾಯಿತು ಎಂಬುದನ್ನು ಸಾರ್ವಜನಿಕವಾಗಿ ಜನರ ಮುಂದೆ ಹೇಳಲಿ ಎಂದು ಒತ್ತಾಯಿಸಿದರು.

ಜನರಿಂದ, ರೈತರಿಂದ ತೀವ್ರ ವಿರೋಧ ಬಂದ ನಂತರ ಈಗ ಪ್ರಧಾನಿ ನರೇಂದ್ರ ಮೋದಿಯವರೇ ಈ ಯೋಜನೆಯನ್ನು ಮೆಚ್ಚಿಕೊಂಡಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ, ನರೇಂದ್ರ ಮೋದಿ ಅವರು ಟೌನ್‌ಶಿಪ್‌ಗಳನ್ನು ಹಾಗೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದು ಎಲ್ಲಿ, ಭೂಕಂಪದಿಂದ ಸಂಪೂರ್ಣವಾಗಿ ನಾಶವಾಗಿದ್ದ ಪ್ರದೇಶದಲ್ಲಿ ಅವರು ಇಂಥ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರು. ಆದರೆ, ಬಿಡದಿಯಲ್ಲಿ ಬೇರೆ ಪರಿಸ್ಥಿತಿ ಇದೆ. ಇಲ್ಲಿ ತೋಟಗಳಿವೆ, ಹೈನುಗಾರಿಕೆ ನಡೆಯುವ ಭೂಮಿಯಿದೆ. ಈ ವಿಚಾರವನ್ನು ಮುಖ್ಯಮಂತ್ರಿಗಳು ಪ್ರಧಾನಿಗಳಿಗೆ ಹೇಳಿದ್ದಾರಾ ಎಂದು ಕೇಂದ್ರ ಸಚಿವರು ಪ್ರಶ್ನಿಸಿದರು.

ಕಟ್ಟಕಡೆಯ ವ್ಯಕ್ತಿಗೂ ಸಿಗಲಿ ಸೌಕರ್ಯ

ಕೆಂಗೇರಿ: ಪ್ರತಿಯೊಬ್ಬ ಕಟ್ಟೆ ಕಡೆಯ ವ್ಯಕ್ತಿಗೂ, ಅನ್ನ, ಅಕ್ಷರ ದೊರಕುವಂತಹ ನಿಟ್ಟಿನಲ್ಲಿ ಸಮಾಜ ಸೇವೆಯಲ್ಲಿ ತೊಡಗಿಕೊಂಡು ಬಡವರು, ನಿರ್ಗತಿಕರು ಹಾಗೂ ಮಧ್ಯಮ ವರ್ಗದ ಜನರ ಏಳಿಗೆಗಾಗಿ ಹಗಲಿರುಳು ಶ್ರಮಿಸಲಾಗುತ್ತಿದೆ ಎಂದು ನಿಕಟಪೂರ್ವ ವಾರ್ಡ್ ಅಧ್ಯಕ್ಷ ಆರ್.ಪ್ರಸಾದ್ ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ದೊಡ್ಡಬಿದರಕಲ್ಲು ವಾರ್ಡಿನ ಚನ್ನನಾಯಕನ ಪಾಳ್ಯ ಗ್ರಾಮದಲ್ಲಿ ತಮ್ಮ ಹುಟ್ಟು ಹಬ್ಬವನ್ನು ಅಭಿಮಾನಿಗಳು ಬಹಳ ಅದ್ದೂರಿಯಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಹುಟ್ಟು ಹಬ್ಬ ಕೇವಲ ಆಚರಣೆ ಆಗಬಾರದು, ಸಾಮಾಜಿಕ ಕಳಕಳಿಯನ್ನು ಮೈಗೂಡಿಸಿಕೊಂಡು, ಜನಸೇವಕನಾಗಿ ಜನರ ಸೇವೆಗೆ ಹಗಲಿರುಳು ಶ್ರಮಿಸುವ ನಿಟ್ಟಿನಲ್ಲಿ ಜನರ ಕಷ್ಟ ಸುಖಗಳಿಗೆ ಸ್ಪಂದಿಸುವ ಮೂಲಕ ಜನರ ಏಳಿಗೆಗಾಗಿ ಶ್ರಮಿಸಬೇಕು, ಗ್ರಾಮೀಣ ಪ್ರದೇಶದ ಜನರಿಗೆ ಮೂಲಭೂತ ಸೌಕರ್ಯ ಒದಗಿಸಿ ನೀರಿನ ಅಭಾವವನ್ನು ನೀಗಿಸಲು ದೃಢಸಂಕಲ್ಪ ಮಾಡಲಾಗಿದೆ ಎಂದು ತಿಳಿಸಿದರು.

ಗಂಗರಾಜು, ಮಾರೇಗೌಡ, ರಘುಕುಮಾರ್ .ಆರ್. ಅಶ್ವಿನ್ ಕುಮಾರ್, ಜಗದೀಶ್, ಕಸ್ತೂರಿ ಮಂಜುನಾಥ್, ಹನುಮೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಅಭಿವೃದ್ಧಿಗಾಗಿ ಚರಂಡಿ ವ್ಯವಸ್ಥೆ

ಕೆ.ಆರ್.ಪುರ: ಹಲವು ದಿನಗಳ ಬೇಡಿಕೆಯಾದ ರಸ್ತೆ ಮತ್ತು ಚರಂಡಿ ವ್ಯವಸ್ಥೆ ಕಲ್ಪಿಸಲು ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದು ಶಾಸಕ ಬೈರತಿ ಬಸವರಾಜ ಹೇಳಿದರು.

ಕ್ಷೇತ್ರದ ರಾಮಮೂರ್ತಿನಗರದ ಹಳೆ ಪೋಸ್ಟ್ ಆಫೀಸ್ ಹತ್ತಿರ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಅನುದಾನದ ಕೊರತೆಯಿಂದ ಅಭಿವೃದ್ಧಿಗೆ ನಿಧಾನಗತಿಯಲ್ಲಿ ಚಾಲನೆ ದೊರೆತಿದೆ. ಅನುದಾನಕ್ಕೆ ಸರ್ಕಾರ ಮಟ್ಟದಲ್ಲಿ ಬೇಡಿಕೆ ಇದೆ. ಅನುದಾನ ಸಿಕ್ಕ ನಂತರ ಅಭಿವೃದ್ಧಿಗೆ ವೇಗ ದೊರೆಯಲಿದೆ. ಸಾರ್ವಜನಿಕರು ಅಭಿವೃದ್ಧಿ ಕಾಮಗಾರಿ ನಡೆಯುವ ಆಗುವ ತೊಂದರೆಗೆ ಸಹಕರಿಸಬೇಕು ಎಂದರು.

ಕ್ಷೇತ್ರದ ಅಭಿವೃದ್ಧಿಯೇ ನನ್ನ ಕನಸು. ಜನರ ಸೇವೆಯ ಮೂಲಕ ಇನ್ನಷ್ಟು ಅಭಿವೃದ್ಧಿಗೆ ಶ್ರಮಿಸಲಾಗುವುದು. ಕೆ.ಆರ್.ಪುರ ಕ್ಷೇತ್ರ ಅಭಿವೃದ್ಧಿಯ ಪಥದಲ್ಲಿ ಸಾಗಬೇಕು. ಕಾರ್ಯಕರ್ತರು ಮತ್ತು ಮುಖಂಡರು ಜನರ ನಡುವೆ ಸಮನ್ವಯತೆ ಸಾಧಿಸಿ ಒಟ್ಟಾರೆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಮುನೇಗೌಡ, ಮುಖಂಡರಾದ ಬಾಸ್ಕರ್ ನಾಗರಾಜ್, ರಾಮಮೂರ್ತಿನಗರ ವಾರ್ಡಿನ ಜಿಬಿಎ ಬಿಜೆಪಿ ಪ್ರಬಲ ಆಕಾಂಕ್ಷಿ ಹಿಟಾಚಿ ಮಂಜುನಾಥ್, ಶಿವಣ್ಣ ಮತ್ತಿತರರಿದ್ದರು.



ದೀಕ್ಷಿತ್ ಸ್ಮರಣಾರ್ಥ ದತ್ತಿ ಉಪನ್ಯಾಸ

ಬೆಂಗಳೂರು: ಮಧ್ಯಕಾಲೀನ ಕರ್ನಾಟಕದಲ್ಲಿ ಜ್ಞಾನ ಉತ್ಪಾದನೆ ಕೇವಲ ರಾಜದರ್ಬಾರಗಳು ಅಥವಾ ಧಾರ್ಮಿಕ ಕೇಂದ್ರಗಳಿಗೆ ಸೀಮಿತವಾಗಿರಲಿಲ್ಲ. ಕೃಷಿಕರು, ವೈದ್ಯರು, ಜ್ಯೋತಿಷಿಗಳು, ಜಲ ನಿರ್ವಹಣಾ ತಜ್ಞರು ಹಾಗೂ ಸ್ಥಳೀಯ ಸಮುದಾಯಗಳ ಅನುಭವಾಧಾರಿತ ಜ್ಞಾನವೂ ಶಾಸ್ತ್ರಗಳ ರೂಪದಲ್ಲಿ ದಾಖಲಾಗಿ ಸಮಾಜದ ಅಭಿವೃದ್ಧಿಗೆ ಪೂರಕವಾಗಿತ್ತು ಎಂದು ಹಾರ್ವರ್ಡ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಪ್ರೊ.ಎರಿಕ್ ಮೋಸೆಸ್ ತಿಳಿಸಿದರು.

ಮಿಥಿಕ್ ಸೊಸೈಟಿಯಲ್ಲಿ ಪ್ರೊ. ಜಿ.ಎಸ್. ದೀಕ್ಷಿತ್ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಧ್ಯಕಾಲೀನ ಕರ್ನಾಟಕದ ದೈನಂದಿನ ವಿಜ್ಞಾನಗಳು ಅಥವಾ ಲೌಕಿಕ ಶಾಸ್ತ್ರಗಳ ಕುರಿತು ಮಾತನಾಡಿದ ಅವರು, 11ನೇ ಮತ್ತು 12ನೇ ಶತಮಾನಗಳಲ್ಲಿ ವಿದ್ವಾಂಸರು ಸಂಸ್ಕೃತದ ಪಾಂಡಿತ್ಯಪರ ಪರಂಪರೆಯಿಂದ ಹೊರಬಂದು ಪ್ರಾಯೋಗಿಕ ಜ್ಞಾನವನ್ನು ದಾಖಲಿಸಲು ಹೊಸಗನ್ನಡ ಭಾಷೆಯನ್ನು ಬಳಸಿದ್ದರು. ಇದರ ಪರಿಣಾಮವಾಗಿ ವಿಜ್ಞಾನ, ಕೃಷಿ, ವೈದ್ಯಕೀಯ, ಜಲಸಂರಕ್ಷಣೆ ಮತ್ತು ಗೃಹ ಬಳಕೆಯ ಜ್ಞಾನ ಸಾಮಾನ್ಯ ಜನರಿಗೂ ತಲುಪುವಂತಾಯಿತು ಎಂದು ಹೇಳಿದರು.



ಪ್ರೊ. ಜಿ.ಎಸ್. ದೀಕ್ಷಿತ್ ಅವರ ಕೆರೆ ನೀರಾವರಿ ವ್ಯವಸ್ಥೆ, ಗ್ರಾಮೀಣ ಆಡಳಿತ ಮತ್ತು ಕರ್ನಾಟಕದ ಪರಿಸರ ಇತಿಹಾಸ ಕುರಿತು ಮಾಡಿದ ಸಂಶೋಧನೆಗಳು ಮಧ್ಯಕಾಲೀನ ಕರ್ನಾಟಕದ ಲೌಕಿಕ ಶಾಸ್ತ್ರಗಳು ಕೇವಲ ತಾಂತ್ರಿಕ ಮಾಹಿತಿಗಳ ಸಂಗ್ರಹವಲ್ಲ, ಅವು ಸಾಹಿತ್ಯದ ಸೊಗಡು, ಕಾವ್ಯದ ಸೌಂದರ್ಯ ಮತ್ತು ಜನಜೀವನದ ಅನುಭವಗಳ ಸಮನ್ವಯವಾಗಿದ್ದವು ಎಂದರು.

ವಿದ್ವಾಂಸರು ಕೇವಲ ಗ್ರಂಥಸ್ಥ ಜ್ಞಾನಕ್ಕೆ ಸೀಮಿತವಾಗಿರಲಿಲ್ಲ

ಈ ಕಾಲಘಟ್ಟದಲ್ಲಿ ವಿದ್ವಾಂಸರು ಕೇವಲ ಗ್ರಂಥಸ್ಥ ಜ್ಞಾನಕ್ಕೆ (ಆಗಮ) ಸೀಮಿತವಾಗದೆ, ದೈನಂದಿನ ಅನುಭವಗಳನ್ನು (ಲೌಕಿಕ) ಅಳವಡಿಸಿಕೊಂಡರು. ವೈದ್ಯ ಅಗಲನ ಶಸ್ತ್ರಚಿಕಿತ್ಸಾ ನೈಪುಣ್ಯ ಮತ್ತು ಚಾವುಂಡರಾಯನ ಲೋಕೋಪಕಾರಂ ಗ್ರಂಥದಲ್ಲಿರುವ ಅಡುಗೆ, ಬಾವಿ ತೋಡುವುದು ಹಾಗೂ ಜ್ಯೋತಿಷ್ಯದ ವಿಚಾರಗಳನ್ನು, ಅಂದಿನ ಸಮಾಜದ ವೈಜ್ಞಾನಿಕ ಮನೋಭಾವಕ್ಕೆ ಸಾಕ್ಷಿಯಾಗುವಂತೆ ದಾಖಲಿಸಿದ್ದರು. ತಮ್ಮ ಅನುಭವಗಳನ್ನು ದಾಖಲಿಸಿ ಮುಂದಿನ ಪೀಳಿಗೆಗಳಿಗೆ ಮಾರ್ಗದರ್ಶನ ನೀಡಿರುವುದು ಗಮನಾರ್ಹ ಸಂಗತಿ. ಅಂದಿನ ವಿದ್ವಾಂಸರು ತಮ್ಮ ಸಾಧನೆಗಳ ಬಗ್ಗೆ ಹೆಮ್ಮೆಯಿಂದ ಬರೆದುಕೊಳ್ಳುವ ಮೂಲಕ ವಿಜ್ಞಾನಕ್ಕೆ ಹೊಸ ಆಯಾಮ ನೀಡಿದ್ದರು ಎಂದು ಪ್ರೊ.ಎರಿಕ್ ಮೋಸೆಸ್ ಅಭಿಪ್ರಾಯಪಟ್ಟರು.

ಚಿತ್ರಕಲಾವಿದ ಚಂದ್ರನಾಥ ಆಚಾರ್ಯ ಅಭಿಮತ

ಕಲಾಪ್ರದರ್ಶನದಿಂದ ದೇಶೀಯ ಸಂಸ್ಕೃತಿ ಗಟ್ಟಿ

ಬೆಂಗಳೂರು: ಭಾರತೀಯ ಸಂಸ್ಕೃತಿಯ ನೆಲೆಗಳನ್ನು ಗಟ್ಟಿಗೊಳಿಸು ವಲ್ಲಿ ಈ ಕಲಾಪ್ರದರ್ಶನದ ಹಿಂದಿರುವ ಶ್ರಮ, ಉದ್ದೇಶ ಅತ್ಯಂತ ಶ್ಲಾಘನೀಯವಾದದ್ದು ಎಂದು ಚಿತ್ರಕಲಾವಿದ ಚಂದ್ರನಾಥ ಆಚಾರ್ಯ ಅಭಿಪ್ರಾಯ ಪಟ್ಟರು.

ಸಂಸ್ಕಾರ ಭಾರತೀ ಕರ್ನಾಟಕ ದಕ್ಷಿಣ ಪ್ರಾಂತ ದೃಶ್ಯ ಕಲಾ ವಿಭಾಗವು ಸ್ವಾಭಿಮಾನ ಭಾರತ್ ಮತ್ತು ಸಂವಿಧಾನ 75 ಶೀರ್ಷಿಕೆಯಲ್ಲಿ ಬಸವನಗುಡಿಯ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಆಯೋಜಿಸಿದ್ದ ಚಿತ್ರ ಕಲಾಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರೀಯತೆಗೆ ನಮ್ಮನ್ನು ಕೂಡ ಸ್ಪಂದಿಸು ವಂತೆ ಈ ಕಾರ್ಯಕ್ರಮಗಳು ಪ್ರೇರೇಪಿಸುತ್ತದೆ. ತನ್ನ 60 ವರ್ಷಗಳ ಕಲಾ ಪಯಣದಲ್ಲಿ ಇಷ್ಟೊಂದು ದೊಡ್ಡ ಮಟ್ಟದ ಪ್ರದರ್ಶನದ ಕಲಾಕೃತಿಗಳಲ್ಲಿ ಒಂದು ಗಟ್ಟಿತನ ಕಾಣುತ್ತಿತ್ತು. ನೈಪುಣ್ಯದ ಜತೆಯಲ್ಲಿ ಕಲಾ ವಿದರ ನಿಮ್ಮ ನಿಮ್ಮ ಒಳದನಿ, ಅರಿತುಕೊಂಡು ಕಲಾ ರಚನೆ ಮಾಡಿ ಕೊಂಡರೆ ಕೆಲವೇ ವರ್ಷಗಳಲ್ಲಿ ವರ್ಷಗಳಲ್ಲಿ ಪ್ರಬುದ್ಧ ಕಲಾವಿದರಾಗಿ ಹೊರಹೊಮ್ಮುವ ಭರವಸೆ ಕೂಡ ಇಲ್ಲಿ ಕಾಣಬಹುದು ಎಂದರು. ಯುವ ಕಲಾವಿದ ಹಾಗೂ ಪ್ರಾಂತ ಪ್ರಧಾನ ಕಾರ್ಯದರ್ಶಿ ಹೇಮಂತ್ ಜನಾರ್ದನ ರಾವ್ ಮಾತನಾಡಿ, ಸಂಸ್ಕಾರ ಭಾರತೀ ಕಳೆದ ನಲವತ್ತು ವರ್ಷಗಳಲ್ಲಿ ದೇಶದಾದ್ಯಂತ ಲಲಿತ ಕಲೆಗಳ ಸಂವರ್ಧನೆಗೆ ಶ್ರಮಿಸುತ್ತಿರುವ ರಾಷ್ಟ್ರೀಯ ಸಂಸ್ಥೆಯಾಗಿದೆ. ಸಾ ಕಲಾ ಯಾ ವಿಮುಕ್ತಯೇ ಎಂಬ ಧ್ಯೇಯ ವಾಕ್ಯದಂತೆ ಮಾನವನ ಜೀವನಕ್ಕೆ ಕಲೆ ಅತ್ಯಂತ ಪೂರಕ ಹಾಗೂ ಪೋಷಕ ಎಂಬುದನ್ನು ತಿಳಿಸುತ್ತದೆ ಎಂದರು.



ಸ್ವಾಭಿಮಾನವೊಂದಿದ್ದರೆ ಹೆಳವ ಕೂಡ ಪರ್ವತ ಏರಬಲ್ಲ

ಸಂಸ್ಕಾರ ಭಾರತೀ ಪ್ರಾಂತ ಅಧ್ಯಕ್ಷ ಸುಚೇಂದ್ರ ಪ್ರಸಾದ್ ಮಾತನಾಡಿ, ನಮ್ಮ ಚಿತ್ರಕಲೆಯಂತ ಬಲವಾದ ಅಭಿವ್ಯಕ್ತಿ ಕಲಾಮಾಧ್ಯಮ, ನಮ್ಮಲ್ಲಿರುವ ಕೆಲವು ತವಕ, ತಲ್ಲಣಗಳನ್ನು ತಾಕಲಾಟಗಳನ್ನ ತಹತಹಗಳನ್ನ, ಸಂವಾದಿಸುವ ಬಲವಾದ ಪ್ರಬಲ ಮಾಧ್ಯಮ. ಬಾಹ್ಯ ಪ್ರಚೋದನೆ ಎಷ್ಟಿದ್ದರೂ ನಮ್ಮ ಅಂತರಾತ್ಮದ ಎಚ್ಚರಿಕೆಯ ಅರಿವು ಇರಬೇಕು. ಇರುವೆಗಳ ಹಾಗೆ ನಿಧಾನವಾಗಿ ಹೆಜ್ಜೆ ಇಡುತ್ತಾ ದೂರ ಸಾಗಿ ಯೋಜನೆ ಸಾಧಿಸಬೇಕು. ಸ್ವಾಭಿಮಾನವೊಂದಿದ್ದರೆ ಹೆಳವ ಕೂಡ ಪರ್ವತ ಏರಬಲ್ಲ. ನಮ್ಮ ನೆಲದಲ್ಲಿ ನಾವು ಅನ್ಯರಾಗದೆ ಮಾನ್ಯರಾಗುವ ದಿನಗಳು ಕಾಣುವಂತಾಗಬೇಕು ಎಂದರು.

ಕೋಟ ಗ್ರಾ.ಪಂ.: ಮಳೆಗೆ ಹಲವು ಮನೆಗಳಿಗೆ ಹಾನಿ

ಕೋಟ: ಇಲ್ಲಿನ ಕೋಟ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿ ಭಾನುವಾರ ರಾತ್ರಿ ಸುರಿದ ಬಾರಿ ಗಾಳಿ ಮಳೆಗೆ ಹಲವು ಮನೆಗಳಿಗೆ ಭಾರೀ ಪ್ರಮಾಣದಲ್ಲಿ ಹಾನಿಯಾಗಿವೆ. ಇಲ್ಲಿನ ಅಕ್ಕಯ್ಯ ಮಡಿವಾಳ ಮನೆಯ ಮೇಲ್ಛಾವಣಿಯ ಸಿಮೆಂಟ್ ಶೀಟ್, ವೆಂಕಟೇಶ ಪೂಜಾರಿಯ ಮನೆ ಸಿಮೆಂಟ್ ಶೀಟ್ ಹಾಗೂ ಶಂಕರ ಇವರ ಮನೆಯ ಮೇಲ್ಛಾವಣಿ ಪೂರ್ಣ ಪ್ರಮಾಣದಲ್ಲಿ ಹಾನಿಯಾಗಿವೆ. ಸ್ಥಳಕ್ಕೆ ಕೋಟ ಗ್ರಾಮಪಂಚಾಯತ್ ವಾರ್ಡ್ ಮಾಜಿ ಸದಸ್ಯ ಚಂದ್ರ ಪೂಜಾರಿ, ಕೋಟ ಗ್ರಾಮ ಅಧಿಕಾರಿ ಚಲುವರಾಜು, ಸಹಾಯಕ ರಾಜು ಕುಂದರ್ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಕಿರುಸುದ್ದಿ

ಇಂದು ದುರ್ಗಾ ಹೋಮ

ಮಂಗಳೂರು: ನಗರದ ಕರಂಗಲಪಾಡಿ ಶ್ರೀ ಮಹಾಸತಿ ಶ್ರೀ ಭಗವತಿ ಅಮ್ಮನವರ ಸಾನಿಧ್ಯದಲ್ಲಿ ಜೂ.15ರಂದು ಮಿಥುನ ಸಂಕ್ರಮಣ ಹಾಗೂ ಅಮಾವಾಸ್ಯೆ ದಿನದಂದು ಲೋಕ ಕಲ್ಯಾಣಾರ್ಥವಾಗಿ ಬೆಳಗ್ಗೆ 9 ಘಂಟೆಗೆ ದುರ್ಗಾ ಹೋಮ ನಡೆಯಲಿದೆ. ಶ್ರೀ ಕ್ಷೇತ್ರ ಕದ್ರಿಯ ಅರ್ಚಕ ಕೃಷ್ಣ ಅಡಿಗ ಅವರ ನೇತೃತ್ವದಲ್ಲಿ ಈ ಪೂಜಾ ಕಾರ್ಯ ನಡೆಯಲಿದೆ. ರಾತ್ರಿ ಶ್ರೀ ಮಹಾಸತಿ ಶ್ರೀ ಭಗವತಿ ಅಮ್ಮನವರಿಗೆ ಅಮಾವಾಸ್ಯೆಯ ವಿಶೇಷ ಮಹಾ ಮಂಗಳಾರತಿ ಹಾಗೂ ಸಾಮೂಹಿಕ ಪ್ರಾರ್ಥನೆ ನೆರವೇರಲಿದೆ. ಭಕ್ತರು ಭಾಗವಹಿಸಬಹುದು ಎಂದು ಶ್ರೀ ಮಹಾಸತಿ ಶ್ರೀ ಭಗವತಿ ಅಮ್ಮನ ಭಕ್ತ ಸಮೂಹದ ಪ್ರಕಟಣೆ ತಿಳಿಸಿದೆ.

ಬಾಲಕೃಷ್ಣ ಗಟ್ಟಿ ನಿಧನಕ್ಕೆ ಸಾಹಿತ್ಯ ಪರಿಷತ್ತು ಸಂತಾಪ

ಮಂಗಳೂರು: ನಿವೃತ್ತ ಪ್ರಾಂಶುಪಾಲ, ಪತ್ರಕರ್ತ ಪ್ರೊ. ಕೆ. ಬಾಲಕೃಷ್ಣ ಗಟ್ಟಿ ಅವರ ನಿಧನಕ್ಕೆ ಕನ್ನಡ ಸಾಹಿತ್ಯ ಪರಿಷತ್ ಸಂತಾಪ ವ್ಯಕ್ತಪಡಿಸಿದೆ. ಬಾಲಕೃಷ್ಣ ಗಟ್ಟಿ ಅವರು ಬಂಟ್ವಾಳ ತಾಲೂಕಿನ ಅಮ್ಮುಂಜೆಯಲ್ಲಿ ನಡೆದ 22 ನೆಯ ಬಂಟ್ವಾಳ ತಾಲೂಕು ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯನ್ನು ವಹಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸುವಲ್ಲಿ ಪ್ರಮುಖರಾಗಿದ್ದರು. ಪತ್ರಕರ್ತರಾಗಿ ಮತ್ತು ಪ್ರಾಧ್ಯಾಪಕರಾಗಿ ಅಪಾರ ಅನುಭವ ಗಳಿಸಿದ್ದರು. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಮತ್ತು ಅವರ ಕುಟುಂಬಕ್ಕೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಎಂ. ಪಿ. ಶ್ರೀನಾಥ ಮತ್ತು ಬಂಟ್ವಾಳ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಶ್ವನಾಥ ಬಂಟ್ವಾಳ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಸಮುದ್ರದಲ್ಲಿ ಸ್ನಾನಕ್ಕಿಳಿದ ವಿದ್ಯಾರ್ಥಿಗಳು ನಾಪತ್ತೆ

ಕಾಸರಗೋಡು: ಅಂತಾರಾಷ್ಟ್ರೀಯ ಪ್ರವಾಸೋದ್ಯಮ ಕೇಂದ್ರವಾದ ಬೇಕಲಕೋಟೆ ಪರಿಸರದ ಸಮುದ್ರದಲ್ಲಿ ಸ್ನಾನಕ್ಕಿಳಿದ ಇಬ್ಬರು ವಿದ್ಯಾರ್ಥಿಗಳು ನಾಪತ್ತೆಯಾದ ಘಟನೆ ನಡೆದಿದ್ದು, ಇನ್ನಿಬ್ಬರು ಪಾರಾಗಿದ್ದಾರೆ.

ಕೋಟ್ಟಾಯಂ ಜಿಲ್ಲೆಯ ಚೆಂಗನಾಶ್ಶೇರಿ ನಿವಾಸಿಗಳಾದ ಅಂಕಿತ್ (20), ಅಪ್ಪು ಟಿ.ಅಬ್ರಹಾಂ (20) ನಾಪತ್ತೆಯಾದವರು. ಭಾನುವಾರ ಸಂಜೆ 6.30ರ ವೇಳೆ ಈ ಘಟನೆ ನಡೆದಿದೆ. ಕೋಟ್ಟಾಯಂ ಚೆಂಗಾನಾಶ್ಶೇರಿಯಿಂದ ಪ್ರವಾಸ ಬಂದಿದ್ದ ನಾಲ್ಕು ಮಂದಿಯ ತಂಡವು ಬೇಕಲಕೋಟೆಯ ಬಳಿಯ ಪಳ್ಳಿಕೆರೆ ಬೀಚ್‌ನಲ್ಲಿ ಸಮುದ್ರದಲ್ಲಿ ಸ್ನಾನಕ್ಕಿಳಿದಾಗ ದುರಂತ ಸಂಭವಿಸಿದೆ. ಮಾಹಿತಿ ತಿಳಿದು ಬೇಕಲ ಪೊಲೀಸರು, ಸ್ಥಳೀಯರು ಆಗಮಿಸಿ ಹುಡುಕಾಟ ಆರಂಭಿಸಿದ್ದಾರೆ.

ನಿಧನ ಸುದ್ದಿ

ವಿಠಲ ಕೊಟ್ಟಾರಿ



ಉಳ್ಳಾಲ: ಜನಸಂಘ ಹಾಗೂ ಭಾರತೀಯ ಜನತಾ ಪಕ್ಷದ ಹಿರಿಯ ನಿಷ್ಠಾವಂತ ಕಾರ್ಯಕರ್ತರಾದ ಮುನ್ನೂರು ಗ್ರಾಮದ ಸಂತೋಷನಗರದ ನಿವಾಸಿ ವಿಠಲ ಕೊಟ್ಟಾರಿ (68) ಅವರು ಹೃದಯಾಘಾತದಿಂದ ಶುಕ್ರವಾರ ನಿಧನರಾದರು. ವಿಠಲ್ ಅವರು ಜನಸಂಘದಲ್ಲೇ ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಿದ್ದು ಬಳಿಕ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರಾಗಿ ಗುರುತಿಸಿಕೊಂಡಿದ್ದರು. ವೃತ್ತಿಯಲ್ಲಿ ಕಾರ್ಪೆಂಟರ್ ಆಗಿದ್ದ ಅವರು ಮುನ್ನೂರಿನಲ್ಲಿ ಫರ್ನಿಚರ್ ಅಂಗಡಿಯನ್ನು ನಡೆಸುತ್ತಿದ್ದರು. ಮುನ್ನೂರು ಗ್ರಾಮ ಪಂಚಾಯತ್ ಚುನಾವಣೆಯಲ್ಲಿಯೂ ಸ್ಪರ್ಧಿಸಿದ್ದ ಅವರು ಸಾಮಾಜಿಕ ಹಾಗೂ ಸಂಘಟನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಕೆರೆಬೈಲ್ ನಿತ್ಯಾನಂದ ಯುವಕ ಮಂಡಲದ ದೀರ್ಘ ಕಾಲದ ಪ್ರಧಾನ ಕಾರ್ಯದರ್ಶಿಯಾಗಿ ಅವರು ಸೇವೆಯನ್ನು ಸಲ್ಲಿಸಿದ್ದರು. ಸರಳ, ಸಜ್ಜನರಾಗಿದ್ದ ಅವರು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಮೃತರು ಪತ್ನಿ, ಓರ್ವ ಪುತ್ರಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಅವರ ಅಕಾಲಿಕ ನಿಧನಕ್ಕೆ ಬಿಜೆಪಿ ಜಿಲ್ಲಾಧ್ಯಕ್ಷ ಸತೀಶ್ ಕುಂಪಲ, ಕ್ಷೇತ್ರಾಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲು, ಮುನ್ನೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷರಾದ ಸತೀಶ್ ಪೂಜಾರಿ ಸೇರಿದಂತೆ ಹಲವಾರು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸಂತಾಪ ವ್ಯಕ್ತಪಡಿಸಿದ್ದಾರೆ.

ಸುಂದರಿ ಪಾಲೇರ್



ಮಂಗಳೂರು: ಕಡಬ ತಾಲೂಕಿನ ಆಲಂತಾಯ ಗ್ರಾಮದ ಪಾಲೇರ್ ನಿವಾಸಿ ದಿ.ಕೊರಗಪ್ಪ ಪೂಜಾರಿ ಅವರ ಪತ್ನಿ ಸುಂದರಿ ಪಾಲೇರ್ (87) ಅವರು ಜೂ.13 ರಂದು ನಿಧನ ಹೊಂದಿದರು. ಅವರು ಕಾಂತಾವರ ಅಲ್ಲಮಪ್ರಭು ಪೀಠದ ಅಧ್ಯಕ್ಷ, ವಕೀಲ ಯಶೋಧರ್ ಪಿ. ಕರ್ಕೇರ ಸಹಿತ ನಾಲ್ವರು ಪುತ್ರರು ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಉದಯಕುಮಾರ್ ಇಂದ್ರ



ಕೈಕಂಬ: ಪುರೋಹಿತ ದಿವಂಗತ ಮಳಲಿ ನಾಭಿರಾಜ ಇಂದ್ರರ ಪುತ್ರ ಉದಯ ಕುಮಾರ್ ಮಳಲಿ ಅಲ್ಪ ಕಾಲದ ಅಸೌಖ್ಯದಿಂದ ಶನಿವಾರ ನಿಧನರಾದರು. ಕುಮಟಾ ,ಗೋಕರ್ಣದಲ್ಲಿ ಉಪತಹಶೀಲ್ದಾರರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಕರಾವಳಿ ಜೈನ್ ಮಿಲನ್ ಅಧ್ಯಕ್ಷರಾಗಿದ್ದ ಮೃತರು ಪತ್ನಿ, ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ.

ಸುನಿ ಯಾನೆ ಸುರೇಶ್ ರೈ



ಬದಿಯಡ್ಕ: ಬದಿಯಡ್ಕ ಪೇಟೆಯಲ್ಲಿ ಆಟೋ ಚಾಲಕರಾಗಿದ್ದ ವಳಮಲೆ ನಿವಾಸಿ ಸುನಿ ಯಾನೆ ಸುರೇಶ್ ರೈ (43) ನಿಧನ ಹೊಂದಿದರು. ಅವರು ಶನಿವಾರ ರಾತ್ರಿ ಊಟ ಮಾಡಿ ಮಲಗಿದ್ದರು. ಆದರೆ ಭಾನುವಾರ ಬೆಳಗ್ಗೆ ಎದ್ದೇಳದ ಹಿನ್ನೆಲೆಯಲ್ಲಿ ಮನೆಯವರು ಕೂಡಲೇ ಬದಿಯಡ್ಕದ ಖಾಸಗಿ ಆಸ್ಪತ್ರೆಗೆ ಕೊಂಡೊಯ್ದರೂ ಜೀವ ಉಳಿಸಲು ಸಾಧ್ಯವಾಗಲಿಲ್ಲ. ಸುರೇಶ್ ರೈ ಅವರು ಸಂಘ ಪರಿವಾರದ ಸಕ್ರಿಯ ಕಾರ್ಯಕರ್ತರಾಗಿದ್ದರು. ದಿ.ರಾಧಾಕೃಷ್ಣ ರೈ ಮತ್ತು ಚಂದ್ರಾವತಿ ದಂಪತಿಯ ಪುತ್ರನಾದ ಅವರು ಅವಿವಾಹಿತರಾಗಿದ್ದರು. ಮೃತರು ತಾಯಿ, ಸಹೋದರ ಪ್ರಸನ್ನ ಅವರನ್ನು ಅಗಲಿದ್ದಾರೆ.



ರಿಲಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಕೊಲ್ಲೂರು ಮೂಕಾಂಬಿಕೆ ದೇಗುಲಕ್ಕೆ ಭಾನುವಾರ ಭೇಟಿ ನೀಡಿ ಮೂಕಾಂಬಿಕೆ ದೇವಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದ್ದಾರೆ. ಈ ಸಂದರ್ಭ ದೇವಾಲಯದ ವತಿಯಿಂದ ಗೌರವಾರ್ಪಣೆ ಮಾಡಲಾಯಿತು.

ಅತ್ಯಂತ ಸಂಕೀರ್ಣ, ಮಹತ್ವದ ವಿಷಯದ ಮೇಲೆ ಸಂಶೋಧನೆ

ನಿತೀಶ್‌ಕುಮಾರ್‌ಗೆ ಪಿಎಚ್‌ಡಿ ಪದವಿ



ಮಂಜೇಶ್ವರ: ಪ್ರಸಿದ್ಧ ಮಣಿಪಾಲ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಎಂಐಟಿ) ಗಣಿತ ವಿಭಾಗದಲ್ಲಿ (ಸ್ಕೂಲ್ ಆಫ್ ಬೇಸಿಕ್ ಸಯನ್ಸ್) ಸಂಶೋಧನೆ ನಡೆಸುತ್ತಿದ್ದ ಮಂಗಲ್ಪಾಡಿ ಗ್ರಾಮ ಪಂಚಾಯತ್‌ಗೊಳಪಟ್ಟ ಮಂಗಲ್ಪಾಡಿ ಪ್ರತಾಪನಗರ ನಿವಾಸಿ ನಿತೀಶ್‌ಕುಮಾರ್ ಅವರು ತಮ್ಮ ಪಿಎಚ್‌ಡಿ ಮಹಾಪ್ರಬಂಧವನ್ನು ಯಶಸ್ವಿಯಾಗಿ ಮಂಡಿಸಿ ಡಾಕ್ಟರೇಟ್ ಪದವಿಗೆ ಭಾಜನರಾಗಿದ್ದಾರೆ.


ಅವರು ತಮ್ಮ ಈ ಮಹತ್ವದ ಸಂಶೋಧನಾ ಪ್ರಬಂಧವನ್ನು ಮಣಿಪಾಲ ಎಂಐಟಿಯ ಗಣಿತ ವಿಭಾಗದ ಪ್ರಾಧ್ಯಾಪಕ ಡಾ.ವಾದಿರಾಜ ಭಟ್ ಜಿ.ಆರ್. ಅವರ ಮುಖ್ಯ ಮಾರ್ಗದರ್ಶನದಲ್ಲಿ ಹಾಗೂ ಸಹ ಪ್ರಾಧ್ಯಾಪಕ ಡಾ.ಪ್ರಸನ್ನ ಪೂಜಾರಿ ಅವರ ಸಹ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಮಂಗಲ್ಪಾಡಿ ಪ್ರತಾಪನಗರ ನಿವಾಸಿಯಾದ ರಾಧಾಕೃಷ್ಣ ಆಚಾರ್ಯ ಮತ್ತು ದಿ.ಉಮಾವತಿ ಆಚಾರ್ಯ ಅವರ ಪುತ್ರನಾದ ನಿತೀಶ್‌ಕುಮಾರ್ ಅವರು ಗಣಿತ ವಿಭಾಗದಲ್ಲಿ ಆರ್ ಕ್ಲೋಸ್ಡ್ ಸೆಟ್ಸ್ ಆ್ಯಂಡ್ ವ್ಯಾಲ್ಯೂ ಸೆಟ್ಸ್ ಓವರ್ ಫಿನಿಟೆ ಫೀಲ್ಡ್ಸ್ ವಿತ್ ಅಪ್ಲಿಕೇಶನ್ಸ್ ಎಂಬ ಅತ್ಯಂತ ಸಂಕೀರ್ಣ ಹಾಗೂ ಮಹತ್ವದ ವಿಷಯದ ಮೇಲೆ ಸುದೀರ್ಘ ಸಂಶೋಧನೆ ನಡೆಸಿ ಈ ಸಾಧನೆಗೈದಿದ್ದಾರೆ.

ವರ್ಷಗಳ ನಿರಂತರ ಕಠಿಣ ಪರಿಶ್ರಮ ಹಾಗೂ ಗಣಿತ ಕ್ಷೇತ್ರದ ಮೇಲಿನ ಅಪಾರ ಆಸಕ್ತಿಯ ಪ್ರತಿಫಲವಾಗಿ ಅವರಿಗೆ ಈ ಉನ್ನತ ಗೌರವ ಲಭಿಸಿದೆ. ಅವರ ಈ ಶೈಕ್ಷಣಿಕ ಸಾಧನೆಯು ಯುವ ಪೀಳಿಗೆಗೆ ಪ್ರೇರಣೆಯಾಗಿದೆ. ಇದೇ ವೇಳೆ ಅವರ ಸಹೋದರ ಸುಜಿತ್‌ಪ್ರತಾಪ್ ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯದರ್ಶಿಯಾಗಿ, ಮಂಗಳೂರು ಕಂಬಳದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಾ.ನಿತೀಶ್‌ಕುಮಾರ್ ಅವರ ನಿರಂತರ ಶ್ರಮ ಮತ್ತು ಛಲವನ್ನು ಶ್ಲಾಘಿಸುತ್ತಾ ಅವರ ಮುಂದಿನ ಉಜ್ವಲ ಭವಿಷ್ಯ ಹಾಗೂ ಶೈಕ್ಷಣಿಕ ಜೀವನಕ್ಕೆ ಊರಿನ ಸಮಸ್ತ ನಾಗರಿಕರು, ಹಿತೈಷಿಗಳು ಮತ್ತು ಮಿತ್ರರು ಶುಭಹಾರೈಸಿದ್ದಾರೆ.

ಕೇಂದ್ರದಿಂದ 57 ಕೋ. ರೂ. ಅನುದಾನ ಬಿಡುಗಡೆ: ಕ್ಯಾ. ಚೌಟ

14 ಪ್ರಮುಖ ರಸ್ತೆ ಅಭಿವೃದ್ಧಿ





ಮಂಗಳೂರು: ಕೇಂದ್ರ ಸರ್ಕಾರವು ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳ ಸಂಪರ್ಕ ರಸ್ತೆಗಳ ಸುಧಾರಣೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿ (ಸಿಆರ್ ಐಎಫ್) ಅಡಿಯಲ್ಲಿ ಒಟ್ಟು 57 ಕೋ. ರೂ. ವೆಚ್ಚದ ಅಭಿವೃದ್ಧಿ ಯೋಜನೆಗೆ ಮಂಜೂರು ಮಾಡಿದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದ್ದಾರೆ.

ಈ ಯೋಜನೆಯಡಿ ಜಿಲ್ಲೆಯಾದ್ಯಂತ ಒಟ್ಟು 14 ಪ್ರಮುಖ ಕಾಮಗಾರಿ ಮೂಲಕ ವಿವಿಧೆಡೆ ಒಟ್ಟು 82.94 ಕಿ. ಮೀ. ಉದ್ದದ ರಸ್ತೆ ಅಭಿವೃದ್ಧಿಪಡಿಸಲಾಗುವುದು. ಜಿಲ್ಲೆಯ ಪ್ರಮುಖ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ರಸ್ತೆ ಈ ಅನುದಾನದ ಮೂಲಕ ಮೇಲ್ದರ್ಜೆಗೇರಿಸಲಾಗುವುದು. ಮಂಗಳೂರು, ಉಳ್ಳಾಲ, ಮೂಡುಬಿದ್ರೆ, ಪುತ್ತೂರು ಬಂಟ್ವಾಳ ಸೇರಿದಂತೆ ಎಲ್ಲಾ ತಾಲೂಕುಗಳಲ್ಲಿಯೂ ನಿಗದಿತ ರಸ್ತೆಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಸಂಸದರು ಮಾಹಿತಿ ನೀಡಿದ್ದಾರೆ.

ರಸ್ತೆಗಳ ಅಭಿವೃದ್ಧಿ ಕಾಮಗಾರಿ

ಉಳ್ಳಾಲ ತಾಲೂಕಿನ ಕಟಪಾಡಿ–ಅಬ್ಬಕ್ಕ ಸರ್ಕಲ್ ರಸ್ತೆಯ ಚೆಂಬುಗುಡ್ಡೆಯಿಂದ ಮಚಲಿ ಹೋಟೆಲ್ ಹಾಗೂ ಇನ್ಫೋಸಿಸ್ ಸಮೀಪದ ರಸ್ತೆ ಅಭಿವೃದ್ಧಿ ಒಟ್ಟು ರೂ. 4 ಕೋಟಿ. (2.66 ಕಿ.ಮೀ ಮತ್ತು 1 ಕಿ.ಮೀ) ಹಾಗೂ ಸಜಿಪನಡು–ಬೋಳ್ಯಾರ್ ರಸ್ತೆಯ ಆಯ್ದ ಭಾಗಗಳ ಸುಧಾರಣೆ ರೂ. 2 ಕೋಟಿ. (2.88 ಕಿ.ಮೀ)

ಮೂಡುಬಿದಿರೆಯ ಹೊಸಂಗಡಿ ಪುಚ್ಚಮೊಗರು ಸೇತುವೆಯಿಂದ ಬೆಳ್ತಂಗಡಿ–ಬಂಟ್ವಾಳ ಕ್ರಾಸ್‌ವರೆಗಿನ ರಾಜ್ಯ ಹೆದ್ದಾರಿ ರಸ್ತೆ ಅಭಿವೃದ್ಧಿ (8.90 ಕಿ.ಮೀ) ರೂ. 6 ಕೋಟಿ.

ಸುರತ್ಕಲ್–ಕಬಕ ರಸ್ತೆಯ ಬಜಪೆಯಿಂದ ಕೈಕಂಬದವರೆಗೆ ಹಾಗೂ ಪೊಳಲಿ ದ್ವಾರದಿಂದ ಅಡ್ಡೂರು ಸೇತುವೆಯವರೆಗಿನ ರಾಜ್ಯ ಹೆದ್ದಾರಿ ಅಭಿವೃದ್ಧಿ (10.50 ಕಿ.ಮೀ) ರೂ. 6 ಕೋಟಿ.

ಪುಂಜಾಲಕಟ್ಟೆಯ ಮೂರ್ಜೆ ಕುದ್ಕೋಳಿ ರಸ್ತೆಯ ಪಾಂಗಲ್ಪಾಡಿಯಿಂದ ಕುದ್ಕೋಳಿ ವರೆಗಿನ ರಾಜ್ಯ ಹೆದ್ದಾರಿ ಅಭಿವೃದ್ಧಿ (10.07 ಕಿ.ಮೀ) ರೂ. 6.ಕೋಟಿ.

ಉಪ್ಪಿನಂಗಡಿ–ಪೆರಿಯಡ್ಕ–ಕೊಯ್ಲ ಸೆಕ್ಷನ್ (ರೂ. 2 ಕೋಟಿ –3 ಕಿ.ಮೀ), ಹಂತ್ಯಾರು–ಬೆಟ್ಟಂಪಾಡಿ ರಸ್ತೆ (ರೂ. 3 ಕೋಟಿ –4.50 ಕಿ.ಮೀ), ಮತ್ತು ಕೇಪುಳು–ಪಾದಿಲ್ ರಸ್ತೆ (ರೂ. 1 ಕೋಟಿ – 0.65 ಕಿ.ಮೀ) ಅಭಿವೃದ್ಧಿ.

ಸುಬ್ರಹ್ಮಣ್ಯ–ಮಂಜೇಶ್ವರ ರಸ್ತೆಯ (ರಾಜ್ಯ ಹೆದ್ದಾರಿ) ಆಯ್ದ ಭಾಗಗಳ ಅಭಿವೃದ್ಧಿ (10.10 ಕಿ.ಮೀ) ರೂ. 6 ಕೋಟಿ.

ವೇಣೂರು–ಅಂಡಿಂಜೆ–ನಾರಾವಿ ಜಿಲ್ಲಾ ಮುಖ್ಯ ರಸ್ತೆ ಅಭಿವೃದ್ಧಿ (10.00 ಕಿ.ಮೀ) ರೂ. 6.ಕೋಟಿ.

ಒಟ್ಟಾರೆ ಈ ಯೋಜನೆಯಡಿ ಜಿಲ್ಲೆಯ ಪ್ರಮುಖ ಸಂಪರ್ಕ ರಸ್ತೆಗಳ ಬಲವರ್ಧನೆ, ಸುಗಮ ಸಂಚಾರ ಹಾಗೂ ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಈ ಬೃಹತ್ ಅನುದಾನವನ್ನು ಮಂಜೂರು ಮಾಡಿದೆ ಎಂದು ಸಂಸದರು ತಿಳಿಸಿದ್ದಾರೆ.

ರಸ್ತೆ ನವೀಕರಣ ಮತ್ತು ಅಗಲೀಕರಣ ಕಾಮಗಾರಿ

ಎಕ್ಸಲೆಂಟ್ ಕಾಲೇಜಿನಿಂದ ಮೂಡಬಿದ್ರೆ ಪೊಲೀಸ್ ಸ್ಟೇಷನ್ ರಸ್ತೆಯವರೆಗಿನ ಬೆಳ್ತಂಗಡಿ–ಮೂಡಬಿದಿರೆ–ಮುಲ್ಕಿ ರಾಜ್ಯ ಹೆದ್ದಾರಿ ನವೀಕರಣ (5ಕಿ. ಮೀ) ರೂ. 5 ಕೋಟಿ.

ಸೋಮಂತಡ್ಕದಿಂದ ಹೆಡ್ಯವರೆಗಿನ (ರಾಹೆ–275 ರಿಂದ ರಾಹೆ–276 ಸಂಪರ್ಕಿಸುವ) ಹೆದ್ದಾರಿ ಅಭಿವೃದ್ಧಿ (5.50 ಕಿ.ಮೀ) ರೂ. 5.00 ಕೋಟಿ.

ಬಂಟ್ವಾಳದ ಅನಂತಾಡಿ–ಮಂಗಿಲಪದವು–ಕೋಡಪದವು ಜಿಲ್ಲಾ ಮುಖ್ಯ ರಸ್ತೆಯ ಅಗಲೀಕರಣ ಮತ್ತು ಅಭಿವೃದ್ಧಿ (3ಕಿ.ಮೀ)ಗೆ ರೂ. 5ಕೋಟಿ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ

ಸಂಘಟನೆ ಬಲವಾಗಲಿ



ಮಡಿಕೇರಿ: ಪಕ್ಷದ ಸಂಘಟನೆಯಲ್ಲಿ ಕೊಡಗು ಜಿಲ್ಲೆ ರಾಜ್ಯಕ್ಕೆ ಮಾದರಿಯಾಗಿದೆ. ಈ ಹಿಂದೆ ಸಣ್ಣ ತಪ್ಪಿನಿಂದ ಎರಡು ಕ್ಷೇತ್ರವನ್ನು ನಾವು ಕಳೆದುಕೊಂಡಿದ್ದೇವೆ. ಮುಂದೆ ಹೀಗಾಗದಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಬಿಜೆಪಿ ಸಂಘಟನೆಯನ್ನು ಮತ್ತಷ್ಟು ಶಕ್ತಿದಾಯಕವಾಗಿ ಬೆಳೆಸಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಕರೆ ನೀಡಿದರು.

ಶನಿವಾರಸಂತೆ ಸಮೀಪದ ಖಾಸಗಿ ರೆಸಾರ್ಟ್ ಒಂದರಲ್ಲಿ ನಡೆದ ಕೊಡಗು ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಒಡೆಯರ್ ಮಾತನಾಡಿ, ಜಿಲ್ಲೆಯಲ್ಲಿ ವನ್ಯಜೀವಿ ಮಾನವ ಸಂಘರ್ಷ ಸೇರಿದಂತೆ ಅನೇಕ ಸಮಸ್ಯೆಗಳಿವೆ. ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವಲ್ಲಿ ಕಾಂಗ್ರೆಸ್ ಸರಕಾರ ವಿಫಲವಾಗಿದೆ. ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಸರಕಾರದ ವಿರುದ್ಧ ವ್ಯವಸ್ಥಿತ ಹೋರಾಟಕ್ಕೆ ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಮುಂದಿನ ಎಲ್ಲಾ ಚುನಾವಣೆಗಳಲ್ಲೂ ಬಿಜೆಪಿ ಹೆಚ್ಚು ಸ್ಥಾನ ಪಡೆಯಲು ಎಲ್ಲರೂ ಪ್ರಾಮಾಣಿಕವಾಗಿ ಕೆಲಸ ಮಾಡೋಣ ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ಎಂಎಲ್‌ಸಿ ಸುಜಾ ಕುಶಾಲಪ್ಪ, ಪಕ್ಷದ ಪ್ರಮುಖರಾದ ಡಾ.ನವೀನ್ ಕುಮಾರ್, ಎಸ್.ಜಿ.ಮೇದಪ್ಪ, ಬಿ.ಬಿ.ಭಾರತೀಶ್, ರೀನಾ ಪ್ರಕಾಶ್, ಲೋಕೇಶ್ ಮುಂತಾದವರಿದ್ದರು.

ಪತ್ನಿ, ಇಬ್ಬರು ಪುಟ್ಟ ಮಕ್ಕಳೊಂದಿಗೆ ಬಾಡಿಗೆ ಮನೆಯಲ್ಲಿ ವಾಸ

ಕಿಡ್ನಿಗಳೆರಡು ವೈಫಲ್ಯ: ನೆರವು ಯಾಚನೆ



ಮಂಜೇಶ್ವರ: ಎರಡು ಕಿಡ್ನಿಗಳು ವೈಫಲ್ಯಗೊಂಡ ವ್ಯಕ್ತಿಯೋರ್ವರು ಚಿಕಿತ್ಸೆಗಾಗಿ ದಾನಿಗಳ ನೆರವನ್ನು ಯಾಚಿಸಿದ್ದಾರೆ. ಮೀಂಜ ಗ್ರಾಮ ಪಂಚಾಯತ್‌ಗೊಳಪಟ್ಟ ಮಜಿಬೈಲು ಜಿಎಲ್‌ಪಿ ಶಾಲಾ ಬಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿರುವ ಮೂಲತಃ ಕುಂಬಳೆ ಶಾಂತಿಪಳ್ಳ ನಿವಾಸಿಯಾಗಿರುವ ಕೂಲಿ ಕಾರ್ಮಿಕ ಅನಿಲ್‌ಕುಮಾರ್ (42) ಎಂಬವರು ತನ್ನೆರಡು ಕಿಡ್ನಿಗಳು ವೈಫಲ್ಯಗೊಂಡು ಪತ್ನಿ ಹಾಗೂ ಎರಡು ಪುಟ್ಟ ಮಕ್ಕಳೊಂದಿಗೆ ಸಂಕಷ್ಟಮಯ ಜೀವನ ನಡೆಸುತ್ತಿದ್ದಾರೆ.

ದಿವಂಗತರಾದ ಗೋಪಾಲ ಮತ್ತು ಶಾಂತಾ ದಂಪತಿಯ ಪುತ್ರನಾದ ಅನಿಲ್ ಕುಮಾರ್ ಅವರು ಪತ್ನಿ ಶ್ರಾವಣಿ ಹಾಗೂ ಮಕ್ಕಳಾದ ಶಾನಿಕ (5ನೇ ತರಗತಿ), ಅನೀಶ್ (1ನೇ ತರಗತಿ) ಜೊತೆ ಕೂಲಿ ಕಾರ್ಮಿಕನಾಗಿ ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದಾರೆ.

ಕುಂಬಳೆ ಶಾಂತಿಪಳ್ಳದಲ್ಲಿರುವ ವೇಳೆ ತಂದೆ, ತಾಯಿ, ಸಹೋದರರ ಜೊತೆ ವಾಸಿಸುತ್ತಿದ್ದು ಅವರನ್ನು ಅಗಲಿದ ಬಳಿಕ ಪತ್ನಿ ಹಾಗೂ ಪುಟ್ಟ ಮಕ್ಕಳ ಜೊತೆ ಮಜಿಬೈಲಿಗೆ ಬಂದು ನೆಲೆಸಿದ ಅನಿಲ್ ಕುಮಾರ್‌ರವರು ಊರಿನಲ್ಲಿ ಕೂಲಿ ಕೆಲಸ ನಿರ್ವಹಿಸಿ ಬದುಕು ಸಾಗಿಸುತ್ತಿದ್ದಾರೆ.

ದಿನಗೂಲಿ ಮೂಲಕ ಲಭಿಸುವ ಅಲ್ಪ ಮೊತ್ತದಲ್ಲಿ ಸಂತೃಪ್ತ ಜೀವನ ನಡೆಸುತ್ತಿದ್ದ ವೇಳೆ ಅನಿಲ್‌ಕುಮಾರ್‌ರ ಜೀವನದಲ್ಲಿ ಸಿಡಿಲೆರಗಿದಂತಹ ಆಘಾತವೊಂದು ಎದುರಾಯಿತು. ಕಳೆದ ಕೆಲವು ದಿನದ ಹಿಂದೆ ಅವರಿಗೆ ತಲೆ ಸುತ್ತು ಬಂದ ಕಾರಣ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ತೆರಳಿದರು. ಈ ಸಂದರ್ಭ ಸ್ಕ್ಯಾನಿಂಗ್ ನಡೆಸಿದಾಗ ಕಿಡ್ನಿಗಳೆರಡು ವೈಫಲ್ಯಗೊಂಡ ಬಗ್ಗೆ ತಿಳಿಯಿತು.

ಕೂಡಲೇ ವೈದ್ಯರು ಎರಡು ಕಿಡ್ನಿಗಳನ್ನು ಬದಲಿಸಲು ತಿಳಿಸಿದ್ದು, ಇದಕ್ಕಾಗಿ 40 ಲಕ್ಷ ರೂಪಾಯಿಯಷ್ಟು ಹಣ ಬೇಕಾಗಿ ಬರಬಹುದೆಂದು ಹೇಳಿದ್ದಾರೆ. ದಿಕ್ಕೇ ತೋಚದ ಅವರು ಇಬ್ಬರು ಮಕ್ಕಳು ಹಾಗೂ ಪತ್ನಿಯ ಬಗ್ಗೆ ಯೋಚಿಸಿ ಇದೀಗ ಕಣ್ಣೀರು ಸುರಿಸುತ್ತಿದ್ದಾರೆ. ದೊರಕುವ ದಿನಗೂಲಿಯಲ್ಲಿ ಮನೆಯ ಖರ್ಚು, ಇಬ್ಬರು ಮಕ್ಕಳ ಶಾಲಾ ಖರ್ಚು ವೆಚ್ಚಗಳನ್ನು ಭರಿಸಲು ಅಸಾಧ್ಯವಾಗಿದ್ದು, ಈ ನಡುವೆ ಮುಂದೆ ನಡೆಯುವ ಡಯಾಲಿಸಿಸ್ ಚಿಕಿತ್ಸೆಗೆ ಪ್ರಾರಂಭದಲ್ಲಿ ಒಂದು ಲಕ್ಷ ರೂಪಾಯಿಯಷ್ಟು ಮೊತ್ತ ಹೊಂದಿಸುವ ಬಗ್ಗೆ ಚಿಂತಿತರಾಗಿದ್ದಾರೆ.

ಅಲ್ಲದೆ ಮುಂದೆ ಪ್ರತೀ ವಾರ ನಡೆಯುವ ಡಯಾಲಿಸಿಸ್ ಚಿಕಿತ್ಸೆಗೆ ಸಾವಿರಾರು ರೂಪಾಯಿ ಮೊತ್ತ ಬೇಕಾಗಲಿದೆ. ಈ ಚಿಕಿತ್ಸೆಗೆ ಅಗತ್ಯದ ಹಣ ಭರಿಸಲು ಅವರಿಗೆ ಅಸಾಧ್ಯವಾಗಿದೆ. ಆದ್ದರಿಂದ ಇದೀಗ ಕೊನೆಯದಾಗಿ ಅನಿಲ್ ಕುಮಾರ್ ಅವರು ಹೃದಯವಂತರ ನೆರವನ್ನು ಯಾಚಿಸುತ್ತಿದ್ದಾರೆ. ಇವರ ಮುಂದಿನ ಚಿಕಿತ್ಸೆಗೆ ಸಹೃದಯಿಗಳು, ಸಮಾಜ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ನೆರವನ್ನು ನೀಡಬೇಕಾಗಿದೆ.

ಸಹಾಯ ಹಸ್ತ ಒದಗಿಸುವವರು ಅನಿಲ್‌ಕುಮಾರ್‌ರವರ ಹೆಸರಿನಲ್ಲಿರುವ ಕೆನರಾ ಬ್ಯಾಂಕ್ ಮಂಜೇಶ್ವರ ಶಾಖೆಯ ಖಾತೆ ಸಂಖ್ಯೆ 110059960594 (ಐಎಫ್‌ಎಸ್‌ಸಿ ಕೋಡ್: ಸಿಎನ್‌ಆರ್ ಬಿ0014212) ಮೂಲಕ ಕಳುಹಿಸಲು ಕೋರಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಅನಿಲ್‌ಕುಮಾರ್‌ರವರ 8129124042 ಮೊಬೈಲ್ ಸಂಖ್ಯೆಗೆ ಕರೆಮಾಡಲು ವಿನಂತಿಸಲಾಗಿದೆ.

ಗಂಗೊಳ್ಳಿ : ಮುಂಬೈ ಉದ್ಯಮಿಯಿಂದ ನಿರ್ಮಾಣ

ಪಿಯು ವಿದ್ಯಾರ್ಥಿನಿಗೆ ಮನೆ ಕೊಡುಗೆ



ಕುಂದಾಪುರ : ಯಕ್ಷಗಾನ ಕಲಾರಂಗ ವಿದ್ಯಾಪೋಷಕ್‌ನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಗಂಗೊಳ್ಳಿಯ ಅನಿತಾ ಮತ್ತು ಮಂಜುನಾಥ ಖಾರ್ವಿ ದಂಪತಿಯ ಪುತ್ರಿ ಮನೀಷಾ ಖಾರ್ವಿ ಅವರಿಗೆ ಗಂಗೊಳ್ಳಿಯಲ್ಲಿ ತನ್ನ ಮಾತಾಪಿತೃಗಳಾದ ಜಲಜಾಕ್ಷಿ ಮತ್ತು ರಾಘವೇಂದ್ರ ರಾವ್ ಇವರ ಸ್ಮರಣೆಯಲ್ಲಿ ಅವರ ಪುತ್ರ ಮುಂಬೈಯ ಆರ್. ಸುಂದರ ರಾವ್ ಮತ್ತು ಪ್ರೇಮಾ ಇವರ ಪ್ರಾಯೋಜಕತ್ವದಲ್ಲಿ ನಿರ್ಮಿಸಿದ ನೂತನ ಮನೆ 'ಶ್ರೀ ರಾಘವೇಂದ್ರ ನಿಲಯ' ಉದ್ಘಾಟನೆ ಕಾರ್ಯಕ್ರಮ ಶುಕ್ರವಾರ ನಡೆಯಿತು.

ಜ್ಯೋತಿ ಬೆಳಗಿಸಿದ ಸುಂದರ ರಾವ್ ಮಾತನಾಡಿ, ನನ್ನ ತಂದೆ ಕಡು ಬಡತನದಲ್ಲಿ ಮುಂಬೈಗೆ ಹೋಗಿ ಹೋಟೆಲ್ ಆರಂಭಿಸಿದ್ದನ್ನು ಸ್ಮರಿಸಿಕೊಂಡರು. ಪರೋಪಕಾರಿಯಾಗಿದ್ದ ಅವರ ಸ್ಮರಣೆಯಲ್ಲಿ ಬಡವರಿಗೆ ಸಹಾಯ ಮಾಡಬೇಕೆಂಬ ಅಪೇಕ್ಷೆಯನ್ನು ನನ್ನ ಮಡದಿ ವ್ಯಕ್ತಪಡಿಸಿದಳು. ರಘುರಾಮ ಆಚಾರ್ಯರು ವಿದ್ಯಾಪೋಷಕ್ ವಿದ್ಯಾರ್ಥಿಗಳಿಗೆ ಈ ಸಂಸ್ಥೆ ಮನೆಕಟ್ಟಿಸಿ ಕೊಡುವ ವಿಷಯ ಹೇಳಿದರು. ಎರಡೂ ಕೂಡಿ ಬಂತು ಸತ್ಪಾತ್ರಕ್ಕೆ ಸಂದಾಯವಾದುದಕ್ಕೆ ಈಗ ನಾವು ಅತ್ಯಂತ ಸಂತೋಷಗೊಂಡಿದ್ದೇವೆ ಎಂದರು.

ಕೊಲೆಕಾಡಿಯ ವಾದಿರಾಜ ಉಪಾಧ್ಯಾಯರು ಶುಭಾಶಂಸನೆಗೈದರು. ಶ್ರೀ ಪೇಜಾವರ ಮಠದ ದಿವಾನ ರಘುರಾಮ ಆಚಾರ್ಯ ಶುಭ ಹಾರೈಸಿದರು. ಕುಂದಾಪುರದ ಉದ್ಯಮಿ ಸೀತಾರಾಮ ನಕ್ಕತ್ತಾಯ, ಸುಶೀಲ ಮುಗೆರಾಯ, ಎಚ್.ವಿ. ರಮಾದೇವಿ, ಗೀತಾ ಆರ್. ಆಚಾರ್ಯ ಹಾಗೂ ಗಂಗೊಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಜಯಂತಿ ಖಾರ್ವಿ, ಪೇಜಾವರ ಮಠದ ವಿಷ್ಣುಮೂರ್ತಿ ಆಚಾರ್ಯ, ಸ್ನೇಹಾ ವಿ. ಆಚಾರ್ಯ, ಸಂಸ್ಥೆಯ ಉಪಾಧ್ಯಕ್ಷ ಪಿ. ಕಿಶನ್ ಹೆಗ್ಡೆ, ಕೋಶಾಧಿಕಾರಿ ಕೆ. ಸದಾಶಿವ ರಾವ್, ಸದಸ್ಯರುಗಳಾದ ಯು. ವಿಶ್ವನಾಥ ಶೆಣೈ, ಯು.ಎಸ್. ರಾಜಗೋಪಾಲ ಆಚಾರ್ಯ, ವಿಜಯ ಕುಮಾರ್ ಮುದ್ರಾಡಿ, ಭುವನಪ್ರಸಾದ್ ಹೆಗ್ಡೆ, ಹಿರಿಯಣ್ಣ ಕಿದಿಯೂರ್, ಸುಜಯೀಂದ್ರ ಹಂದೆ, ಜಯರಾಮ ಪಡಿಯಾರ್, ವಿದ್ಯಾಪೋಷಕ್ ಫಲಾನುಭವಿಗಳಾದ ಡಾ. ದೀಪಿಕಾ ಶಾನುಭಾಗ್, ನಿಶಾ, ಶ್ರಾವ್ಯ, ನಿಸರ್ಗ ಉಪಸ್ಥಿತರಿದ್ದರು.

ಅಧ್ಯಕ್ಷ ಎಂ. ಗಂಗಾಧರ ರಾವ್ ಸ್ವಾಗತಿಸಿದರು. ನಾರಾಯಣ ಎಂ. ಹೆಗಡೆ ವಂದಿಸಿದರು. ಕಾರ್ಯದರ್ಶಿ ಮುರಲಿ ಕಡೆಕಾರ್ ಪ್ರಸ್ತಾವನೆಯ ಮಾತುಗಳೊಂದಿಗೆ ಕಾರ್ಯಕ್ರಮ ನಿರೂಪಿಸಿದರು.

ಮಾಣಿಲ ಶ್ರೀಧಾಮ ಕ್ಷೇತ್ರದಲ್ಲಿ 27ನೇ ವರ್ಷದ 48 ದಿನಗಳ ಕಾಲ ನಡೆಯುವ ವರಮಹಾಲಕ್ಷ್ಮೀ ವ್ರತಾಚರಣೆ ಪೂರ್ವಭಾವಿ ಸಭೆ

ಕ್ಷೇತ್ರದಲ್ಲಿ ಸೇವೆ ಮಾಡುವ ಭಕ್ತರು ನಿಜವಾದ ದೇವರು



ವಿಟ್ಲ: ಭಕ್ತಿ ಮಾರ್ಗವನ್ನು ಅನುಭವಿಸಬೇಕು. ದೇಹ ಹಾಗೂ ಆಲಯದ ಸಂಬಂಧ ಸರಿಯಾಗಿರಬೇಕು. ನಿಷ್ಕಾಮ ಭಕ್ತಿಯಿಂದ ಸೇವೆ ನಡೆಯಬೇಕು. ಕ್ಷೇತ್ರದಲ್ಲಿ ಸೇವೆ ಮಾಡುವ ಭಕ್ತರು ನಿಜವಾದ ದೇವರು. ಜಗತ್ತಿನಲ್ಲಿ ಮತಿಭ್ರಮಣೆಯಾಗುತ್ತಿದ್ದು, ವ್ಯವಹಾರ ಹದಗೆಟ್ಟು ಹೋಗುತ್ತಿದೆ. ಭಗವಂತನ ಸಂಕಲ್ಪವನ್ನು ಈಡೇರಿಸುವ ಕಾರ್ಯ ನಡೆಬೇಕು ಎಂದು ಶ್ರೀಧಾಮ ಶ್ರೀ ದುರ್ಗಾಮಹಾಲಕ್ಷ್ಮೀ ಕ್ಷೇತ್ರದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಹೇಳಿದರು.

ಮಾಣಿಲ ಶ್ರೀಧಾಮ ಶ್ರೀ ದುರ್ಗಾಮಹಾಲಕ್ಷ್ಮೀ ಕ್ಷೇತ್ರದಲ್ಲಿ 27ನೇ ವರ್ಷದ 48 ದಿನಗಳ ಕಾಲ ನಡೆಯುವ ವರಮಹಾಲಕ್ಷ್ಮೀ ವ್ರತಾಚರಣೆ ಪೂರ್ವಭಾವಿ ಸಭೆಯಲ್ಲಿ ಆಶೀರ್ವಚನ ನೀಡಿದರು.

ಪ್ರಮುಖರಾದ ವಿ. ಜಿ. ಕಾಸರಗೋಡು, ಶ್ರೀಧರ ಬಾಳೆಕಲ್ಲು, ಕಲ್ಲಟೆ ವೆಂಕಟ್ರಮಣ ಭಟ್, ಹರೀಶ್ ಬೊಟ್ಟಾರಿ, ಮುರಳಿ ಮಧೂರು, ನವೀನ್ ಪುತ್ತಿಗೆ, ಸುರೇಶ್ ರೈ, ದೇವಪ್ಪ ಕುಲಾಲ್, ವನಿತಾ ಶೆಟ್ಟಿ ರೇವತಿ ಪೆರ್ನೆ, ಕೆಯ್ಯೂರು ನಾರಾಯಣ ಭಟ್, ಹೇಮಲತಾ ಶರ್ಮ, ರಮ್ಯಾ ಎಸ್, ಹೇಮಲತಾ ಶರ್ಮ, ಸತೀಶ್ ಪೆರ್ಲ, ರಮೇಶ್, ಬಾಲಕೃಷ್ಣ ಶೆಟ್ಟಿ, ನವೀನ್ ಕುಲಾಲ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೇಯಾ ಮತ್ತು ಶಾರ್ವಿ ಪ್ರಾರ್ಥಿಸಿದರು. ಟ್ರಸ್ಟಿ ದೇವಪ್ಪ ಕುಲಾಲ್ ಸ್ವಾಗತಿಸಿದರು. ಮಚ್ಚೇಂದ್ರ ಸಾಲ್ಯಾನ್ ವಂದಿಸಿದರು. ಎಚ್. ಕೆ. ನಯನಾಡು ಕಾರ್ಯಕ್ರಮ ನಿರೂಪಿಸಿದರು.

ವರಮಹಾಲಕ್ಷ್ಮೀ ಕಾರ್ಯಕ್ರಮ ಸಮಿತಿ ರಚನೆ

ಅಧ್ಯಕ್ಷರಾಗಿ ಹರಿಶ್ ಕೊಟ್ಟಾರಿ, ಕಾರ್ಯಾಧ್ಯಕ್ಷರಾಗಿ ಸತೀಶ್ ಪುಣ್ಚಿತ್ತಾಯ ಅವರನ್ನು ಆಯ್ಕೆ ಮಾಡಲಾಯಿತು. ಪ್ರಧಾನ ಕಾರ್ಯದರ್ಶಿಯಾಗಿ ರೇವತಿ ಪೆರ್ನೆ, ಕೋಶಾಧಿಕಾರಿ ಪ್ರಕಾಶ್ ಪುತ್ತೂರು ಅವರನ್ನು ಆಯ್ಕೆ ಮಾಡಲಾಯಿತು. ಗೌರವ ಮಾರ್ಗದರ್ಶಕರು, ಗೌರವಾಧ್ಯಕ್ಷರು, ಉಪಾಧ್ಯಕ್ಷರನ್ನು ಈ ಸಂದರ್ಭ ಘೋಷಿಸಲಾಯಿತು.

> ಕ್ಷೇತ್ರದಲ್ಲಿ ನಿರಂತರ ಅನುಷ್ಠಾನಕ್ಕೆ ಮುಂದಾಗುವ ದಿನ ಹತ್ತಿರದಲ್ಲಿದ್ದು, ಭಕ್ತರ ಸಾಗರ ಕ್ಷೇತ್ರಕ್ಕೆ ಹರಿದು ಬರಲಿದೆ. ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರ ಭಾಗವಹಿಸುವಿಕೆ ಮುಖ್ಯವಾಗಿದೆ. ಸೇವೆ ಮಾಡಿದವರಿಗೆ ವಾಯನ ದಾನ ಇರಲಿದೆ. ಗುರು ಸೇವೆ ನಿರಂತರವಾಗಿ ನಡೆಯಬೇಕು. ಹೃದಯದಲ್ಲಿ ನೆಲೆಯಾದ ಮಹಾಲಕ್ಷ್ಮಿಯ ಆರಾಧನೆಯಿಂದ ಒತ್ತಡ ನಿವಾರಣೆ ಸಾಧ್ಯವಾಗುತ್ತದೆ.
>
> ■ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ

ಸೋಮವಾರದ ಪಂದ್ಯಗಳು

- ಸ್ವೀಡನ್-ಟುನೀಶಿಯಾ, (ಬೆಳಗ್ಗೆ: 7:30)
- ಸ್ಪೇನ್-ಕಾಬೋವರ್ಡೆ,(ಬೆಳಗ್ಗೆ 9:30), ಸೋಮವಾರ-ಮಂಗಳವಾರ ತಡರಾತ್ರಿ
- ಬೆಲ್ಜಿಯಂ-ಇಜಿಪ್ಟ್, (ಮಧ್ಯರಾತ್ರಿ 12:30)
- ಸೌದಿ ಅರೇಬಿಯಾ-ಉರುಗ್ವೆ, (ಮಧ್ಯರಾತ್ರಿ 3:30)

ಕಿರುಸುದ್ದಿ

ಸ್ವಂತ ಖರ್ಚಿನಲ್ಲೇ ಏಷ್ಯನ್ ಗೇಮ್ಸ್ ಆಡಿ: ಪಾಕ್

ರಾವಲ್ಪಿಂಡಿ: ಒಂದು ವೇಳೆ ನಿಮಗೆ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಬೇಕೆಂಬ ಆಸೆ ಏನಾದರೂ ಇದ್ದರೆ ನಿಮ್ಮ ಖರ್ಚಿನಿಂದಲೇ ಜಪಾನ್‌ಗೆ ಹೋಗಿ. ಆಡುವಾಗ ಮಾತ್ರ ದೇಶದ ಹೆಸರಲ್ಲಿ ಆಡಿ ಎಂದು ಪಾಕ್ ತನ್ನ ಟೇಬಲ್ ಟೆನಿಸ್ ಆಟಗಾರರಿಗೆ ಸೂಚನೆ ನೀಡಿದೆ.

ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಕೂಟಕ್ಕಾಗಿ ಪಾಕಿಸ್ತಾನ ಟೇಬಲ್ ಟೆನಿಸ್ ತನ್ನ ಭಾಗವಹಿಸುವ ಆಟಗಾರರ ಆಯ್ಕೆ ಪ್ರಕ್ರಿಯೆಯನ್ನು ಲಾಹೋರ್‌ನಲ್ಲಿ ನಡೆಸಿತು. ಅದರಂತೆ ಸಾವಿರಾರು ಪೆಡ್ಲರ್‌ಗಳು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಏಷ್ಯನ್ ಗೇಮ್ಸ್‌ನಲ್ಲಿ ಭಾಗವಹಿಸಲು ಸಿದ್ಧರಾಗಿದ್ದಾರೆ. ಈ ನಡುವೆ ಆಯ್ಕೆಯಾದ ಆಟಗಾರರಿಗೆ ಅಲ್ಲಿನ ಟಿಟಿ ಸಂಸ್ಥೆ ಸೂಚನೆ ನೀಡಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಆಟಗಾರರಿಗೆ ಹಣ ಪಾವತಿಸುವ ಅಗತ್ಯವಿಲ್ಲ. ಆದರೆ ಜಪಾನ್‌ಗೆ ಪ್ರಯಾಣಿಸುವ ವೆಚ್ಚವನ್ನು ಆಟಗಾರರು ತಾವೇ ನೋಡಿಕೊಳ್ಳಬೇಕು. ಹಾಗೇ ಅಲ್ಲಿ ಇರಲು ಬೇಕಿರುವ ದಿನಕ್ಕೆ ವಸತಿ ವ್ಯವಸ್ಥೆಗಾಗಿ 50 ಡಾಲರ್ ಕೂಡ ನೀವೇ ಭರಿಸಬೇಕೆಂದು ಹೇಳಿದೆ. ಈ ಬಗ್ಗೆ ಆಟಗಾರರೊಬ್ಬರು ಮಾಧ್ಯಮದ ಮುಂದೆ ಹೇಳಿದ್ದಲ್ಲದೆ, ಮೇಲಾಧಿಕಾರಿಗಳಿಗೂ ದೂರು ಕೊಟ್ಟಿದ್ದಾರೆ. ಆದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ.

ಆರ್ಚರಿ: ಧೀರಜ್‌ಗೆ ಐತಿಹಾಸಿಕ ಚಿನ್ನ

ಹೊಸದಿಲ್ಲಿ: ಭಾರತದ ಬಿಲ್ಲುಗಾರ ಧೀರಜ್ ಬೊಮ್ಮದೇವರ ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್ ಕೂಟದಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಕೊರಿಯಾದ ಲೀ ವೂ ಅವರನ್ನು ಎದುರಿಸಿದ್ದ ಅವರು, ಫೈನಲ್‌ನಲ್ಲಿ 7-3ರಿಂದ ಗೆಲುವು ಸಾಧಿಸಿದರು.



ಇದಕ್ಕೂ ಮೊದಲೇ ಅವರು ಭಾರತೀಯ ಕುಂಕುಮ್ ಮೊಹೊದ್ ಅವರೊಂದಿಗೆ ಮಿಶ್ರ ಡಬಲ್ಸ್ ವಿಭಾಗದಲ್ಲೂ ಚಿನ್ನದ ಪದಕ ಗೆದ್ದಿದ್ದು ವಿಶ್ವಕಪ್‌ನಲ್ಲಿ ಭಾರತೀಯ ಬಿಲ್ಲುಗಾರರು ಪಾರುಪತ್ಯ ಸಾಧಿಸಿದ್ದಾರೆ. ವೈಯಕ್ತಿಕ ವಿಭಾಗದಲ್ಲಿ ಧೀರಜ್ 5-1ರ ಮುನ್ನಡೆ ಸಾಧಿಸಿದರು. ಮೊದಲನೇ ಸೆಟ್‌ಗಳಲ್ಲಿ 30-29 ಅಂಕಗಳಿಂದ ಗೆದ್ದ ಅವರು, ಎರಡನೇ ಸೆಟ್ ಅನ್ನು 29-28, ಮೂರನೇ ಸೆಟ್ ಅನ್ನು 27-27ರಿಂದ ಟೈಗೊಂಡಿತು. ಪರಿಣಾಮ ಶೂಟೌಟ್ ಮೊರೆಗೆ ಹೋಗಬೇಕಾಯಿತು. ಶೂಟೌಟ್‌ನಲ್ಲಿ ಭಾರತೀಯ ಬಿಲ್ಲುಗಾರ ಅಲ್ಪ ಹಿನ್ನಡೆ ಅನುಭವಿಸಿದರು. ಆದಾಗ್ಯೂ ಮುಂದಿನ ಎರಡೂ ಸೆಟ್‌ಗಳಲ್ಲಿ ಗೆಲುವು ಸಾಧಿಸಿ ಚಿನ್ನ ಖಚಿತ ಪಡಿಸಿಕೊಂಡರು. ಡಬಲ್ಸ್ ವಿಭಾಗದಲ್ಲೂ ಭಾರತೀಯರಿಬ್ಬರೂ ಮಿಂಚಿದರು. ಧೀರಜ್‌ಗೆ ಇದು ಐತಿಹಾಸಿಕ ಮೊದಲನೇ ಚಿನ್ನದ ಪದಕವಾಗಿದೆ.

ಫಿಫಾ ವಿಶ್ವಕಪ್: ಆಸ್ಟ್ರೇಲಿಯಾ, ಸ್ಕಾಟ್ಲೆಂಡ್‌ಗೆ ಗೆಲುವು | ಎರಡು ಪಂದ್ಯಗಳು ಡ್ರಾ!

ಸೊಕ್ಕೆರೂಸ್‌ಗಳ ವಿಜಯಘೋಷ

ವ್ಯಾಂಕೋವರ್: ಫಿಫಾ ವಿಶ್ವಕಪ್ ಪಂದ್ಯಾವಳಿಯಲ್ಲಿ ಸ್ಟಾರ್‌ಗಳ ಮಿಂಚಿನಾಟ ಮತ್ತು ಕೊನೆ ಕ್ಷಣದ ರೋಚಕ ಕಾದಾಟಗಳು ಮುಂದುವರಿದಿವೆ. ಭಾನುವಾರದ ನಡೆದ 4 ಪಂದ್ಯಗಳಲ್ಲಿ 2 ಡ್ರಾಗೊಂಡರೆ, 2 ಪಂದ್ಯಗಳಿಂ ಸ್ಪಷ್ಟ ಫಲಿತಾಂಶ ಹೊರಬಂದಿದೆ.

ಸಿ' ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ 1-0 ಗೋಲುಗಳಿಂದ ಹೈಟಿಯನ್ನು ಮಣಿಸಿ ಮಹತ್ವದ ಗೆಲುವು ದಾಖಲಿಸಿದೆ. ಡಿ ಗುಂಪಿನಲ್ಲಿ ಆಸ್ಟ್ರೇಲಿಯಾ ತಂಡವು ಟರ್ಕಿ ತಂಡವನ್ನು 2-0ರಿಂದ ಮಣಿಸಿದೆ. ಕತಾರ್ ತಂಡವು ಸ್ವಿಟ್ಜರ್ಲೆಂಡ್ ವಿರುದ್ಧ 1-1ರಿಂದ ಡ್ರಾ ಸಾಧಿಸಿದರೆ, ಬ್ರೆಜಿಲ್ ಮತ್ತು ಮೊರೊಕ್ಕೊ ತಂಡಗಳ ಪಂದ್ಯವೂ 1-1ರಿಂದ ಡ್ರಾಗೊಂಡಿತು.

ಆಸ್ಟ್ರೇಲಿಯಾಗೆ ಗೆಲುವಿನ ಆರಂಭ: ಟರ್ಕಿ ವಿರುದ್ಧ 2-0 ಜಯ । ಇರನ್‌ಕುಂಡಾ, ಮೆಟ್‌ಕಾಲ್ಫ್ ಮಿಂಚು 2026ರ ಫಿಫಾ

ಟರ್ಕಿಗೆ ಆಘಾತ

ವಿಶ್ವಕಪ್‌ನಲ್ಲಿ ಆಸ್ಟ್ರೇಲಿಯಾ ತನ್ನ ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿದೆ. ವ್ಯಾಂಕೂವರ್‌ನಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಟರ್ಕಿಯನ್ನು 2-0 ಗೋಲುಗಳಿಂದ ಮಣಿಸಿದ ಸೊಕ್ಕೆರೂಸ್, ಅಮೂಲ್ಯ ಮೂರು ಅಂಕಗಳನ್ನು ತಮ್ಮದಾಗಿಸಿಕೊಂಡರು. 24 ವರ್ಷಗಳ ಬಳಿಕ ವಿಶ್ವಕಪ್‌ಗೆ ಮರಳಿದ್ದ ಟರ್ಕಿಗೆ ಆಸ್ಟ್ರೇಲಿಯಾ ಆರಂಭದಲ್ಲೇ ಆಘಾತ ನೀಡಿತು. 27ನೇ ನಿಮಿಷದಲ್ಲಿ ನೆಸ್ಟೋರಿ ಇರನ್‌ಕುಂಡಾ ಮೂವರು ರಕ್ಷಣಾ ಆಟಗಾರರ ನಡುವೆ ಅದ್ಭುತವಾಗಿ ಮುನ್ನುಗ್ಗಿ ಕೆಳಮಟ್ಟದ ಶಾಟ್ ಮೂಲಕ ಗೋಲು ಬಾರಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. 75ನೇ ನಿಮಿಷದಲ್ಲಿ ಇಸ್ಮಾಯಿಲ್ ಯುಕ್ಸೆಕ್ ಮಾಡಿದ ತಪ್ಪನ್ನು ಸದುಪಯೋಗಪಡಿಸಿಕೊಂಡ ಕಾನರ್ ಮೆಟ್‌ಕಾಲ್ಫ್ ಗೋಲು ಬಾರಿಸಿ ಆಸ್ಟ್ರೇಲಿಯಾದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಅಂತಿಮವಾಗಿ ಇದೇ ಅಂತರದಲ್ಲಿ ಪಂದ್ಯ ಮುಕ್ತಾಯಗೊಂಡಿತು.

ಇರನ್‌ಕುಂಡಾ ದಾಖಲೆ: 20 ವರ್ಷದ ಇರನ್‌ಕುಂಡಾ ವಿಶ್ವಕಪ್‌ನಲ್ಲಿ ಗೋಲು ದಾಖಲಿಸಿದ ಆಸ್ಟ್ರೇಲಿಯಾದ ಅತಿ ಕಿರಿಯ ಆಟಗಾರ ಎಂಬ ದಾಖಲೆ ನಿರ್ಮಿಸಿದರು. ಗೋಲು ಬಳಿಕ ಆಸ್ಟ್ರೇಲಿಯಾ ಫುಟ್‌ಬಾಲ್ ದಂತಕಥೆ ಟಿಮ್ ಕಾಹಿಲ್ ಅವರಿಗೆ ಗೌರವ ಸೂಚಿಸುವ ರೀತಿಯಲ್ಲಿ ಕಾರ್ನರ್ ಧ್ವಜವನ್ನು ಹೊಡೆದು ಸಂಭ್ರಮಿಸಿದರು.

ಬೀಚ್‌ನಿಂದ 8 ಸೇವ್‌!: ಎರಡನೇಾರ್ಧದಲ್ಲಿ ಟರ್ಕಿ ಸಮಬಲಕ್ಕಾಗಿ ಹಲವು ಪ್ರಯತ್ನಗಳನ್ನು ನಡೆಸಿತು. ಆದರೆ ಗೋಲ್ ಕೀಪರ್ ಪ್ಯಾಟ್ರಿಕ್ ಬೀಚ್ ಅದ್ಭುತ ಪ್ರದರ್ಶನ ನೀಡಿ ಎಂಟು ಪ್ರಮುಖ ಸೇವ್‌ಗಳನ್ನು ಮಾಡಿದರು. 57ನೇ ನಿಮಿಷದಲ್ಲಿ ಅರ್ದಾ ಗುಲರ್ ಅವರ ಫ್ರೀ ಕಿಕ್ ಪ್ರಯತ್ನವನ್ನೂ ತಡೆದರು.



ಪಂದ್ಯದ ಮುಖ್ಯಾಂಶಗಳು

- ಆಸ್ಟ್ರೇಲಿಯಾ 2-0 ಟರ್ಕಿ
- 27ನೇ ನಿಮಿಷ ನೆಸ್ಟೋರಿ ಇರಂಕುಂಡಾ ಗೋಲು
- 75ನೇ ನಿಮಿಷ ಕಾನರ್ ಮೆಟ್‌ಕಾಲ್ಫ್ ಗೋಲು
- ಗೋಲ್‌ಕೀಪರ್ ಪ್ಯಾಟ್ರಿಕ್ ಬೀಚ್‌ನಿಂದ 8 ಸೇವ್‌ಗಳು
- 24 ವರ್ಷಗಳ ಬಳಿಕ ವಿಶ್ವಕಪ್‌ಗೆ ಮರಳಿದ ಟರ್ಕಿಗೆ ಸೋಲು

ಸೂಪರ್ ಸ್ಕಾಟ್ಲೆಂಡ್

ಹೈಟಿ ವಿರುದ್ಧ 1-0 ಜಯ, ಸಿ ಗುಂಪಿನಲ್ಲಿ ಅಗ್ರಸ್ಥಾನ

ಹೈಟಿ ವಿರುದ್ಧ ನಡೆದ ಪಂದ್ಯದಲ್ಲಿ ಸ್ಕಾಟ್ಲೆಂಡ್ ಭರ್ಜರಿ ಗೆಲುವು ಸಾಧಿಸಿದೆ. ಇದು 1990ರ ಬಳಿಕ ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್‌ಗೆ ದೊರೆತ ಮೊದಲ ಜಯ. ಮ್ಯಾಸಚೂಸೆಟ್ಸ್‌ನ ಫಾಕ್ಸ್‌ಬರೋದಲ್ಲಿರುವ ಜಿಲೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಜಾನ್ ಮ್ಯಾಕ್‌ಗಿನ್ 28ನೇ ನಿಮಿಷದಲ್ಲಿ ಗಳಿಸಿದ ಏಕೈಕ ಗೋಲು ಸ್ಕಾಟ್ಲೆಂಡ್‌ಗೆ ಗೆಲುವು ತಂದುಕೊಟ್ಟಿತು.

ಚೆ ಆಡಮ್ಸ್ ಅವರ ಪ್ರಯತ್ನವನ್ನು ಹೈಟಿ ಗೋಲ್‌ಕೀಪರ್ ಜಾನಿ ಪ್ಲಾಸಿಡ್ ತಡೆದರು. ಆದರೆ ಬಾಲ್ ತೆರವಾದ ಜಾಗಕ್ಕೆ ಬಿದ್ದಿತು. ಅದನ್ನು ಬಳಸಿಕೊಂಡ ಮ್ಯಾಕ್‌ಗಿನ್ ಹೊಡೆದ ಶಾಟ್ ರಕ್ಷಣಾ ಆಟಗಾರನಿಗೆ ತಾಗಿ ಗೋಲುಪೆಟ್ಟಿಗೆ ಸೇರಿತು. 17ನೇ ನಿಮಿಷದಲ್ಲೇ ನಾಯಕ ಸ್ಕಾಟ್ ಮೆಕ್ಟೊಮಿನೇ ಅವರ ಪ್ರಯತ್ನ ಗೋಲ್‌ಪೋಸ್ಟ್‌ಗೆ ತಾಗಿ ಹೊರಬಿದ್ದಿದ್ದರಿಂದ ಸ್ಕಾಟ್ಲೆಂಡ್ ಮತ್ತೊಂದು ಗೋಲು ಅವಕಾಶ ಕಳೆದುಕೊಂಡಿತು.

ದ್ವಿತೀಯಾರ್ಧದಲ್ಲಿ ಹೈಟಿ ತಿರುಗೇಟು ನೀಡಲು ಯತ್ನಿಸಿತು. 74ನೇ ನಿಮಿಷದಲ್ಲಿ ವಿಲ್ಸನ್ ಇಸಿಡೋರ್‌ಗೆ ದೊರೆತ ಅವಕಾಶ ಕೈ ತಪ್ಪಿದರೆ, 84ನೇ ನಿಮಿಷದಲ್ಲಿ ಫ್ರಾಂಟ್‌ಜ್ಡಿ ಪಿಯೆರೋಟ್ ಅವರ ಹೆಡರ್ ಗುರಿಯಿಂದ ಹೊರಹೋಯಿತು.



ಪಂದ್ಯದ ಮುಖ್ಯಾಂಶಗಳು

- ಸ್ಕಾಟ್ಲೆಂಡ್ 1-0 ಹೈಟಿ
- 28ನೇ ನಿಮಿಷ: ಜಾನ್ ಮ್ಯಾಕ್‌ಗಿನ್ ಗೋಲು
- 1990ರ ಬಳಿಕ ಸ್ಕಾಟ್ಲೆಂಡ್‌ನ ಮೊದಲ ವಿಶ್ವಕಪ್ ಗೆಲುವು
- 1998ರ ಬಳಿಕ ಸ್ಕಾಟ್ಲೆಂಡ್‌ನ ಮೊದಲ ವಿಶ್ವಕಪ್ ಭಾಗವಹಿಸುವಿಕೆ
- ಹೈಟಿಗೆ ಇನ್ನೂ ವಿಶ್ವಕಪ್‌ನಲ್ಲಿ ಮೊದಲ ಅಂಕದ ನಿರೀಕ್ಷೆ

ಕತಾರ್ ಕಿಕ್, ಪಂದ್ಯ ಸಮಬಲ

ಬಿ ಗುಂಪಿನ ಪಂದ್ಯದಲ್ಲಿ ಕತಾರ್ ಕೊನೆಯ ಕ್ಷಣದಲ್ಲಿ ಗೋಲು ಗಳಿಸಿ ಸ್ವಿಟ್ಜರ್ಲೆಂಡ್ ವಿರುದ್ಧ 1-1 ಸಮಬಲ ಸಾಧಿಸಿತು. ಸಾಂಟಾ ಕ್ಲಾರಾದ ಲೆವಿಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಹುತೇಕ ಸಮಯ ಮೇಲುಗೈ ಸಾಧಿಸಿದ್ದ ಸ್ವಿಟ್ಜರ್ಲೆಂಡ್‌ಗೆ ಹೆಚ್ಚುವರಿ ವೇಳೆಯ ಗೋಲು ಆಘಾತ ನೀಡಿತು.

ಸ್ವಿಟ್ಜರ್ಲೆಂಡ್ ಆರಂಭದಿಂದಲೇ ಪಂದ್ಯದ ಮೇಲೆ ಹಿಡಿತ ಸಾಧಿಸಿತ್ತು. 13ನೇ ನಿಮಿಷದಲ್ಲಿ ಸ್ವಿಸ್ ಆಟಗಾರ ಬ್ರೀಲ್ ಎಂಬೋಲೊ ಅವರನ್ನು ಕತಾರ್ ಗೋಲ್‌ಕೀಪರ್ ಮಹ್ಮೂದ್ ಅಬುನಾದಾ ಫೌಲ್ ಮಾಡಿದ ಪರಿಣಾಮ ಪೆನಾಲ್ಟಿ ದೊರೆಯಿತು. 17ನೇ ನಿಮಿಷದಲ್ಲಿ ಪೆನಾಲ್ಟಿಯನ್ನು ಗೋಲಾಗಿ ಪರಿವರ್ತಿಸಿದ ಎಂಬೋಲೊ, ಸ್ವಿಟ್ಜರ್ಲೆಂಡ್‌ಗೆ 1-0 ಮುನ್ನಡೆ ತಂದುಕೊಟ್ಟರು. ಬಳಿಕವೂ ಸ್ವಿಸ್ ತಂಡಕ್ಕೆ ಹಲವು ಅವಕಾಶಗಳು ದೊರೆತರೂ ಮುನ್ನಡೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಕತಾರ್ ಕಂಬ್ಯಾಕ್: ಪಂದ್ಯ ಅಂತ್ಯದತ್ತ ಸಾಗುತ್ತಿದ್ದಂತೆ ಕತಾರ್ ಹೋರಾಟ ತೀವ್ರಗೊಳಿಸಿತು. ಹೆಚ್ಚುವರಿ ವೇಳೆಯ ನಾಲ್ಕನೇ ನಿಮಿಷದಲ್ಲಿ ಬೌಲೆಮ್ ಖೌಖಿ ಹೆಡರ್ ಮೂಲಕ ಚೆಂಡನ್ನು ಗೋಲುಪೆಟ್ಟಿಗೆಯೊಳಗೆ ಸೇರಿಸಿ ಕತಾರ್‌ಗೆ ಅಮೂಲ್ಯ ಸಮಬಲ ತಂದುಕೊಟ್ಟರು. ಕೊನೆಯ ಕ್ಷಣದ ಗೋಲಿನ ಬಳಿಕ ಕತಾರ್ ಆಟಗಾರರು ಸಂಭ್ರಮಾಚರಣೆಯಲ್ಲಿ ತೊಡಗಿದರೆ, ಗೆಲುವಿನ ಅಂಚಿನಲ್ಲಿದ್ದ ಸ್ವಿಟ್ಜರ್ಲೆಂಡ್ ನಿರಾಸೆ ಅನುಭವಿಸಿತು.



ಸ್ವಿಟ್ಜರ್ಲೆಂಡ್ ವಿರುದ್ಧ 1-1 ಡ್ರಾ

ಪಂದ್ಯದ ಮುಖ್ಯಾಂಶಗಳು

- ಕತಾರ್ 1-1 ಸ್ವಿಟ್ಜರ್ಲೆಂಡ್
- 17ನೇ ನಿಮಿಷ: ಬ್ರೀಲ್ ಎಂಬೋಲೊ (ಪೆನಾಲ್ಟಿ)
- 90+4ನೇ ನಿಮಿಷ: ಬೌಲೆಮ್ ಖೌಖಿ (ಹೆಡರ್)
- ಹೆಚ್ಚುವರಿ ವೇಳೆಯಲ್ಲಿ ಕತಾರ್ ಸಮಬಲ

ಮೊರಾಕ್ಕೊ ವಿರುದ್ಧ ಬ್ರೆಜಿಲ್‌ಗೆ ಡ್ರಾ

ಸಿ ಗುಂಪಿನ ಬಹುನಿರೀಕ್ಷಿತ ಪಂದ್ಯದಲ್ಲಿ ಐದು ಬಾರಿಯ ಚಾಂಪಿಯನ್ ಬ್ರೆಜಿಲ್, ಮೊರಾಕ್ಕೊ ವಿರುದ್ಧ 1-1 ಗೋಲುಗಳ ಸಮಬಲ ಸಾಧಿಸಿದೆ. ಈಸ್ಟ್ ರುದರ್‌ಫೋರ್ಡ್‌ನ ಮೆಟ್‌ಲೈಫ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಆಕ್ರಮಣಕಾರಿ ಆಟವಾಡಿ ಪ್ರೇಕ್ಷಕರಿಗೆ ರಂಜಿಸಿದವು.

ಕಳೆದ ವಿಶ್ವಕಪ್‌ನ ಸೆಮಿಫೈನಲಿಸ್ಟ್ ಮೊರಾಕ್ಕೊ ಆರಂಭದಲ್ಲೇ ಮೇಲುಗೈ ಸಾಧಿಸಿತು. 21ನೇ ನಿಮಿಷದಲ್ಲಿ ಇಸ್ಮಾಯಿಲ್ ಸೈಬಾರಿ ಗೋಲು ಬಾರಿಸಿ ಆಫ್ರಿಕಾ ಚಾಂಪಿಯನ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಹಿನ್ನಡೆಯಲ್ಲಿದ್ದ ಬ್ರೆಜಿಲ್ 32ನೇ ನಿಮಿಷದಲ್ಲಿ ತಿರುಗೇಟು ನೀಡಿತು. ಬ್ರುನೋ ಗಿಮರಾಯಿಸ್ ಅವರೊಂದಿಗೆ ಸುಂದರ ಪಾಸ್ ವಿನಿಮಯ ನಡೆಸಿದ ವಿನಿಸಿಯಸ್ ಜೂನಿಯರ್, ರಕ್ಷಣಾ ಆಟಗಾರರನ್ನು ಮಣಿಸಿ ಬಲ ಕಾಲಿನ ಸಿಡಿಲಿನಂತಹ ಶಾಟ್ ಮೂಲಕ ಗೋಲು ಬಾರಿಸಿ ಸಮಬಲ ಸಾಧಿಸಿದರು. ಇದು ವಿನಿಸಿಯಸ್ ಅವರ ಅಂತಾರಾಷ್ಟ್ರೀಯ ವೃತ್ತಿಜೀವನದ 10ನೇ ಗೋಲಾಗಿತ್ತು. ಬಳಿಕ ಎರಡೂ ತಂಡಗಳಿಗೆ ಅವಕಾಶಗಳು ದೊರಕಿದರೂ ಗೋಲುಗಳಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಪಂದ್ಯ 1-1 ಡ್ರಾದಲ್ಲಿ ಅಂತ್ಯವಾಯಿತು.



ಪಂದ್ಯದ ಮುಖ್ಯಾಂಶಗಳು

- 21ನೇ ನಿಮಿಷ: ಇಸ್ಮಾಯಿಲ್ ಸೈಬಾರಿ (ಮೊರಾಕ್ಕೊ)
- 32ನೇ ನಿಮಿಷ: ವಿನಿಸಿಯಸ್ ಜೂನಿಯರ್ (ಬ್ರೆಜಿಲ್)
- ವಿನಿಸಿಯಸ್ ಜೂನಿಯರ್‌ಗೆ 10ನೇ ಗೋಲು
- ವಿಶ್ವಕಪ್ ಉದ್ಘಾಟನಾ ಪಂದ್ಯಗಳಲ್ಲಿ ಬ್ರೆಜಿಲ್‌ನ ಅಜೇಯ ಸರಣಿ 21ಕ್ಕೆ ವಿಸ್ತರಣೆ

ಮಂಧಾನ, ಘೋಷ್ ಬ್ಯಾಟಿಂಗ್‌ಗೆ ಜಯ | ದೀಪ್ತಿಗೆ 5, ಚಾರಣಿಗೆ 3 ವಿಕೆಟ್

ದೀಪ್ತಿ ಧಮಾಕಾ, ಪಾಕ್ ಪಂಚರ್

ಬರ್ಮಿಂಗ್ಹ್ಯಾಮ್: ಸ್ಮೃತಿ ಮಂಧಾನ, ರಿಚಾ ಘೋಷ್ ಮಾಡಿದ ಬ್ಯಾಟಿಂಗ್ ಮತ್ತು ದೀಪ್ತಿ ಶರ್ಮ, ಶ್ರೀ ಚಾರಣಿ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಮಿಂಚಿದ ಭಾರತ ತಂಡವು ಪಾಕ್ ಬೇಟೆಯಾಡಿದ್ದು, ಪ್ರತಿಷ್ಠಿತ ಮಹಿಳೆಯರ ವಿಶ್ವಕಪ್ ಪಂದ್ಯಾವಳಿಯಲ್ಲಿ ಗೆಲುವಿನ ಆರಂಭ ಮಾಡಿದೆ.

ಟಿ20 ವಿಶ್ವಕಪ್‌ನ ಮೊದಲನೇ ಪಂದ್ಯದಲ್ಲೇ ಪಾಕಿಸ್ತಾನವನ್ನು ಎದುರಿಸಿದ್ದ ಭಾರತ ತಂಡವು 64ರನ್‌ಗಳ ಭರ್ಜರಿ ಗೆಲುವು ಸಾಧಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 170 ರನ್ ಗಳಿಸಿತು. ಮಂಧಾನ 68, ಕೌರ್ 36 ರನ್ ಗಳಿಸಿದರೆ, ರಿಚಾ ಘೋಷ್ 34 ರನ್‌ನೊಂದಿಗೆ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ಪಾಕಿಸ್ತಾನ 17 ಓವರ್‌ಗಳಲ್ಲಿ 106 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಮುಬೀನಾ ಅಲಿ 41 ರನ್ ಗಳಿಸಿದರು. ಭಾರತ ಪರ ದೀಪ್ತಿ ಶರ್ಮ ಹಾಗೂ ಶ್ರೀ ಚಾರಣಿ ಕರಾರುವಾಕ್ ದಾಳಿಯೊಂದಿಗೆ ಮಿಂಚಿದರು.

ಮಂಧಾನ ಮ್ಯಾಚ್ ವಿನ್ನರ್ ಅನಿಸಿಕೊಂಡರೆ, ರಿಚಾ ಘೋಷ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಬೆಸ್ಟ್ ಬ್ಯಾಟರ್ ಅನಿಸಿಕೊಂಡರು. ದೀಪ್ತಿ ಶರ್ಮ ತಮ್ಮ ಅನುಭವದಿಂದಾಗಿ ಮಿಂಚಿದರು. ಶ್ರೀ ಚಾರಣಿ ತಮ್ಮ ಸ್ಕಿಲ್‌ನೊಂದಿಗೆ ಅಬ್ಬರಿಸಿದರು.

ಪಾಕ್ ತತ್ತರ: ಗುರಿ ಬೆನ್ನತ್ತಿದ ಪಾಕಿಸ್ತಾನಕ್ಕೆ ಉತ್ತಮ ಆರಂಭವೇ ಸಿಕ್ಕಿತು. ಆದರೆ ದೀಪ್ತಿ ಶರ್ಮ ಎಲ್ಲಾ ಯೋಜನೆಗಳಿಗೂ ತೆರೆ ಎಳೆದರು. ಮುಬಿನಾ ಅಲಿ ನಿಧಾನವಾಗಿ ಬ್ಯಾಟಿಂಗ್ ಮಾಡಿದರೆ, ಗುಲ್ 9 ರನ್‌ಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಜಾಫರ್ 12 ರನ್‌ಗಳಿಸಿದ್ದಾಗ ದೀಪ್ತಿ ಶರ್ಮಗೆ ವಿಕೆಟ್ ಒಪ್ಪಿಸಿದರು. ಅಲ್ಲಿಗೆ ಗೆಲುವಿಗೆ ನಾಂದಿ ಹಾಡಲಾರಂಭಿಸಿದ ದೀಪ್ತಿ ಪಾಕ್ ಪಾಲಿಗೆ ದುಃಸ್ವಪ್ನವಾದರು. ಶ್ರೀಚಾರಣಿ ಸೈರಾ ವಿಕೆಟ್ ಕಿತ್ತ ನಂತರ ಭಾರತದ ಗೆಲುವು ಬಹುತೇಕ ಖಚಿತವಾಗಿತ್ತು. ಮುಂದಿನ ಓವರ್‌ಗಳಲ್ಲಿ ಪಾಕ್ ಪೆಚ್ಚಾಯಿತು. ಆದಾಗ್ಯೂ ಮುಬೀನಾ 41 ರನ್ ಗಳಿಸಿ ಪಂದ್ಯವನ್ನು ಗೆಲ್ಲಿಸುವತ್ತ ಸಾಗಿದ್ದರು. ಆದರೆ ದೀಪ್ತಿ ಶರ್ಮ ಈ ಬಾರಿ ಫೀಲ್ಡಿಂಗ್‌ನಲ್ಲಿ ಚಮತ್ಕಾರ ಮಾಡಿದರು. ನೇರ ಹಿಟ್‌ನೊಂದಿಗೆ ರನ್‌ಔಟ್‌ಗೆ ಬಲಿಯಾದ ನಂತರ ಭಾರತ ಪಂದ್ಯ ಗೆದ್ದಾಗಿತ್ತು.





ಸಂಕ್ಷಿಪ್ತ ಸ್ಕೋರ್

ಭಾರತ 20 ಓವರ್‌ಗಳಲ್ಲಿ 170/6: ಮಂಧಾನ 68, ಕೌರ್ 36, ಘೋಷ್ 34; ಫಾತೀಮಾ 33/2, ಸಾದೀಯಾ 41/2
ಪಾಕಿಸ್ತಾನ 18 ಓವರ್‌ಗಳಲ್ಲಿ 120/10: ಮುಬೀನಾ 41; ಚಾರಣಿ21/3, ದೀಪ್ತಿ 10/5

ಉಳಿದ ಔಪಚಾರಿಕತೆಯನ್ನು 17 ಓವರ್‌ಗಳಲ್ಲಿ ಮುಗಿಸಿತು. ದೀಪ್ತಿ ದಾಳಿಗೆ ಪಾಕ್ ತತ್ತರಿಸಿದ್ದು ಮುಬೀನಾ ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್ 20 ರ ಗಡಿ ದಾಟಲಿಲ್ಲ. ಭಾರತ ಪರ ದೀಪ್ತಿ 5, ಚಾರಣಿ 3, ಶೆಫಾಲಿ 1 ವಿಕೆಟ್ ಪಡೆದರು.

ಆರಂಭಿಕ ಆಘಾತ: ಟಾಸ್ ಸೋತ ಭಾರತ ಬ್ಯಾಟಿಂಗ್‌ಗಿಳಿಯಿತು. ಬ್ಯಾಟರ್ ಶೆಫಾಲಿ ವರ್ಮಾ ಬರುತ್ತಲೇ ಸಿಕ್ಸರ್ ಒಂದನ್ನು ಬಾರಿಸಿ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ಜೆಮೀಮಾ ರಾಡ್ರಿಗ್ಸ್ ಬಂದು ಹೋಗುವ ಸಂಪ್ರದಾಯ ಮುಗಿಸಿಕೊಂಡರು. ಆದಾಗ್ಯೂ ಒಂದು ಬದಿಯಲ್ಲಿ ಮಾತ್ರ ಸ್ಮೃತಿ ಮಂಧಾನ ಉತ್ತಮ ಬ್ಯಾಟಿಂಗ್ ಮಾಡುತ್ತಿದ್ದರು. ಮಧ್ಯಮ ಕ್ರಮಾಂಕದಲ್ಲಿ ನಾಯಕಿ ಹರ್ಮನ್‌ಪ್ರೀತ್ ಜತೆಗೂಡಿದ ನಂತರ ಭಾರತ ಲಯಕ್ಕೆ ಮರಳಿತು. ಪವರ್‌ಪ್ಲೇ ಉದ್ದಕ್ಕೂ ಇವರಿಬ್ಬರು ಉತ್ತಮ ಬ್ಯಾಟಿಂಗ್ ಮಾಡಿದರು. ಪರಿಣಾಮ ಭಾರತ 38 ರನ್ ಗಳಿಸಿತು.

ಮಂಧಾನ ಮಿಂಚಿನಾಟ: ಮಧ್ಯಮ ಓವರ್‌ಗಳಲ್ಲಿ ಮಂಧಾನ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡಿದ್ದೇ ತಡ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಪಾಕಿಗಳನ್ನು ದಂಡಿಸುತ್ತಾ ಲೀಲಾ ಜಾಲವಾಗಿ ಬ್ಯಾಟ್ ಬೀಸಿದ ಅವರು 34 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಅತ್ತ ಕೌರ್ ಕೇವಲ ಸಿಂಗಲ್‌ಗಳ ಮೂಲಕ ವಿಕೆಟ್ ಉಳಿಸಿದರು. 91 ರನ್‌ಗಳ ದೊಡ್ಡ ಜೊತೆಯಾಟ ನಿರ್ಮಿಸಿತು. ಆದರೆ 44 ಬಾಲ್‌ಗಳಲ್ಲಿ 9 ಬೌಂಡರಿ ಮತ್ತು 2 ಸಿಕ್ಸರ್‌ಗಳೊಂದಿಗೆ ಬ್ಯಾಟಿಂಗ್ ಮಾಡುತ್ತಿದ್ದ ಮಂಧಾನ ವಿಕೆಟ್ ಒಪ್ಪಿಸಿದರು. 36 ರನ್ ಗಳಿಸಿದ್ದ ಕೌರ್ ಕೂಡ ಪೆವಿಲಿಯನ್ ಸೇರಿದರು. ಮಧ್ಯಮ ಓವರ್‌ಗಳಲ್ಲಿ ಭಾರತ 84 ರನ್ ಗಳಿಸಿತು.

ರಿಚಾ ಘೋಷ್ ಅಬ್ಬರ: ಅಂತಿಮ ಓವರ್‌ಗಳಲ್ಲಿ ರಿಚಾ ಘೋಷ್ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. ಬರುತ್ತಲೇ ಬೌಂಡರಿಗಳಿಂದ ಅಬ್ಬರಿಸಿದ ಅವರು, ಡೆತ್ ಓವರ್‌ನಲ್ಲಿ ತೀರಾ ಬಿರುಸಿನ ಬ್ಯಾಟಿಂಗ್‌ನೊಂದಿಗೆ ಭಾರತಕ್ಕೆ ಮತ್ತೊಮ್ಮೆ ಆಸರೆಯಾದರು. ದೀಪ್ತಿ ಶರ್ಮ ಅವರ ಸಾಥ್ ಸಿಕ್ಕಂತೆ 18 ಓವರ್‌ಗಳಲ್ಲಿ ಭಾರತ 132 ರನ್ ಗಳಿಸಿತ್ತು. ಕೊನೆಯ ಎರಡು ಓವರ್‌ಗಳಲ್ಲಿ ಘೋಷ್ ಪಂದ್ಯದ ದಿಕ್ಕನ್ನೇ ಬದಲಾಯಿಸಿಬಿಟ್ಟರು. 5 ಬೌಂಡರಿ 1 ಸಿಕ್ಸರ್ ಬಾರಿಸಿದ ಅವರು, 17 ಬಾಲ್‌ಗಳಲ್ಲಿ ಮಾತ್ರ 34 ರನ್ ಬಾರಿಸಿದರು.

ಹಾಲಿ ಚಾಂಪಿಯನ್ಸ್ ಕಿವೀಸ್‌ಗೆ ಆಘಾತ

ಸೌತಾಂಪ್ಟನ್: ಟಿ20 ವಿಶ್ವಕಪ್‌ನ ಹಾಲಿ ಚಾಂಪಿಯನ್ಸ್ ನ್ಯೂಜಿಲೆಂಡ್ ತಂಡಕ್ಕೆ ಮಹಿಳಾ ವಿಶ್ವಕಪ್ ಪಂದ್ಯಾವಳಿಯ ಆರಂಭಿಕ ಪಂದ್ಯದಲ್ಲೇ ಭಾರೀ ಆಘಾತ ಎದುರಾಗಿದೆ. ವಿಂಡೀಸ್ ವಿರುದ್ಧ ನಡೆದ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಭಾರೀ ಸೋಲನುಭವಿಸಿದೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು. ಇಸ್ಬೆಲ್ಲಾ ಗಾಜ್ 39, ಬ್ರೋಕ್ ಹಾಲಿಡೆ 40, ಮ್ಯಾಡಿ ಗ್ರೀನ್ 35★ ರನ್ ಗಳಿಸಿದರು. ವಿಂಡೀಸ್ ಪರ ಆಲಿಯ್ಹ ಅಲಾನೆ 4 ವಿಕೆಟ್ ಪಡೆದು ಮಿಂಚಿದರು. ಗುರಿ ಬೆನ್ನತ್ತಿದ ವಿಂಡೀಸ್ 19.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 165 ರನ್ ಗಳಿಸಿ ಪಂದ್ಯ ಗೆದ್ದಿತು. ಶಿಮೈನ್ ಕ್ಯಾಂಪ್‌ಬೆಲ್ ಅಜೇಯ 90 ರನ್ ಗಳಿಸಿದರು. ನಾಯಕಿ ಹೈಲೀ ಮ್ಯಾಥೀವ್ಸ್ 48 ರನ್ ಗಳಿಸಿದರು. ಕಿವೀಸ್ ಪರ ಜೆಸ್ ಕೇರ್ 2 ವಿಕೆಟ್ ಕಿತ್ತರು.


ಆಸ್ಟ್ರೇಲಿಯಾ ಶುಭಾರಂಭ: ಬೇಗನೇ ವಿಕೆಟ್‌ಗಳನ್ನು ಕಳೆದುಕೊಂಡರೂ ಲಿಚ್‌ಫೀಲ್ಡ್ 50, ಎಲ್ಲಿಸ್ ಪೆರ್ರಿ 36 ಮತ್ತು ವಾರೇಹಮ್ 32 ರನ್ ಬ್ಯಾಟಿಂಗ್‌ನೊಂದಿಗೆ 172 ರನ್ ಗಳಿಸಿದ್ದ ಆಸ್ಟ್ರೇಲಿಯಾ ಆಫ್ರಿಕಾ ತಂಡವನ್ನು 107 ರನ್‌ಗೆ ಆಲೌಟ್ ಮಾಡಿ ಪಂದ್ಯವನ್ನು ಗೆದ್ದಿದೆ.

ವಿಶ್ವಕಪ್‌ನ ಮತ್ತೊಂದು ಪಂದ್ಯದಲ್ಲಿ ಬಾಂಗ್ಲಾದೇಶ ಮಹಿಳಾ ತಂಡವು ನೆದರ್ಲೆಂಡ್ಸ್ ವಿರುದ್ಧ 6 ವಿಕೆಟ್‌ಗಳ ಗೆಲುವು ದಾಖಲಿಸಿದೆ. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 139 ರನ್ ಗಳಿಸಿದರೆ, ಬಾಂಗ್ಲಾ 19.1 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 141 ರನ್‌ಗಳಿಸಿ ಪಂದ್ಯ ಗೆದ್ದುಕೊಂಡಿತು.



ಪದಬಂಧ

ರಾಜಾ ಸಂಗಮೇಶ ಹಿರೇಮಠ



6015

ಎಡದಿಂದ ಬಲಕ್ಕೆ

1.ಕಾಣದಾಗುವಿಕೆ-ಮರೆಯಾದುದು (2)
2.ನಾಲ್ಕು ಆಶ್ರಮಗಳಲ್ಲಿ ಕಡೆಯದು (3)
4.ತಣ್ಣಗಿರುವ ಅವಸ್ಥೆ-ಶೈತ್ಯ (2)
6.ಅರಸನ ಆಡಳಿತಕ್ಕೆ ವಂಚನೆ ಬಗೆಯುವಿಕೆ (4)
8.ಎಡಗಡೆಯ ವಿರುದ್ಧ ಅಂಶ (4)
11.ಕಂಡವರ ಕಣ್ಣಿಗೆ ಬೀಳದ ಚಿನ್ನ (4)
13.ನ್ಯಾಯ ಬೆಲೆ ಅಂಗಡಿಯಲ್ಲಿ ಸಿಗುವ ದಿನಸಿ (4)
15.ತೆಪ್ಪಗೆ ಏರಿ ಕುಳಿತದ್ದು ಈ ನಾವೆಯಲ್ಲಿ (2)
16.ಟಿಸಿಲು-ಕುಲದ ಶಾಖೆಯಿದು (3)
17.ಬಂದವರು ಕಂಡಿರದ ಗಾಡಿ (2)

ಮೇಲಿನಿಂದ ಕೆಳಕ್ಕೆ

1.ಕೃಶವಾದುದು ತಲೆಕೆಳಗಾಗಿದೆ (4)
2.ಸಂಜೆಗೆಂಪು ಒಂದು ಚಲನಚಿತ್ರವಾಗಿದೆ (4)
3.ವಿಶ್ವದ ಅತಿದೊಡ್ಡ ಮರುಭೂಮಿಯ ಹೆಸರು (3)
5.ಮೂರು ಊರುಗಳನ್ನು ನಾಶ ಮಾಡಿದವನು-ಶಿವ (4)
7.ಚೇತನವಿಲ್ಲದ ಭೌತಿಕ ಶರೀರ (4)
9.ಅದೃಷ್ಟಶಾಲಿಯನ್ನು ಹೀಗೂ ಹೇಳಬಹುದು (4)
10.ಶ್ರೀಮಂತಿಕೆ-ಸಮೃದ್ಧಿಯ ಸಮಾನಪದ (4)
11.ಕಪ್ಪುಬಂಗಾರ ಎಂದು ಕರೆಯುವ ಸಂಪನ್ಮೂಲ (4)
12.ಉಗ್ರರೂಪದ ಚಾಮುಂಡಿ-ಕಾಳಿಯೀಕೆ (4)
14.ಕಲೆ-ಸಾಹಿತ್ಯ-ಸೌಂದರ್ಯ ಆಸ್ವಾದಿಸುವವನು (3)

6014 ಉತ್ತರ

ಎಡದಿಂದ ಬಲಕ್ಕೆ:
1.ಪೂರ್ವಜ 3.ಧವಳಗಿರಿ
5.ಕಟ್ಟಾಣಿ 6.ಪ್ರಭಾರಿ
7.ಮದಕರಿ 9.ರಥಬೀದಿ
12.ತಪ್ಪಲೆ 13.ಸುಜ್ಞಾನ
15.ಕಲಾಕೋವಿದ
16.ಕುಮಾರಿ

ಮೇಲಿನಿಂದ ಕೆಳಕ್ಕೆ :
1.ಪೂರ್ಣವಿರಾಮ
2.ಜನಕ 3.ಧರಣಿಜ
4.ರಿಪೇರಿ 6.ಪ್ರಮಥ
8.ಕಟ್ಟೋಲೆ
10.ದಿವಾನಗಿರಿ
11.ಹಸುಕಂದ 12.ತವಕ
14.ನರಕು

ಕಿರುಸುದ್ದಿ

ಧರ್ಮಸ್ಥಳ ಬಗ್ಗೆ ಷಡ್ಯಂತ್ರ: ಶೀರೂರು ಶ್ರೀಗಳ ಆತಂಕ

• ಉಡುಪಿ: ಧರ್ಮಸ್ಥಳ ಕ್ಷೇತ್ರದ ಮೇಲೆ ಷಡ್ಯಂತ್ರದ ಬಗ್ಗೆ ಪರ್ಯಾಯ ಶ್ರೀ ಶೀರೂರು ಮಠಾಧೀಶರಾದ ಶ್ರೀ ವೇದವರ್ಧನತೀರ್ಥ ಶ್ರೀಪಾದರು ಕಳವಳ ವ್ಯಕ್ತಪಡಿಸಿದರು. ಶ್ರೀ ಕ್ಷೇತ್ರ ಧರ್ಮಸ್ಥಳದ ಬಗ್ಗೆ ಷಡ್ಯಂತ್ರ ನಡೆಸಲು ನೂರಾರು ಕೋಟಿ ರೂಗಳ ಅವ್ಯವಹಾರವು ನಡೆದಿದೆ ಎನ್ನುವುದು ಆತಂಕಕಾರಿ ವಿಷಯ. ಧಾರ್ಮಿಕ ಕ್ಷೇತ್ರದ ಬಗ್ಗೆ ಇಂತಹ ಅವಹೇಳನವಾದ ಷಡ್ಯಂತ್ರವನ್ನು ಸಂಚು ಮಾಡಿದವರನ್ನು ಬಯಲಿಗೆ ಎಳೆಯಬೇಕು. ಇದರ ಬಗ್ಗೆ ಸಮಸ್ತ ಹಿಂದೂ ಸಮಾಜ ಉಗ್ರವಾಗಿ ಪ್ರತಿಭಟಿಸಬೇಕು ಎಂದು ಶೀರೂರು ಶ್ರೀಗಳು ಕರೆ ನೀಡಿದರು.

ಮನೆ, ಬೈಕ್ ಕಳವು: ಆರೋಪಿ ಸೆರೆ

• ಕುಂದಾಪುರ : ಕುಂದಾಪುರದಲ್ಲಿ ಮನೆ ಮತ್ತು ಬೈಕ್ ಕಳವು ಪ್ರಕರಣವನ್ನು ಬೇಧಿಸಿರುವ ಕುಂದಾಪುರ ಪೊಲೀಸರು, ಉತ್ತರ ಕನ್ನಡ ಜಿಲ್ಲೆಯ ಮುರಡೇಶ್ವರದಲ್ಲಿ ಆರೋಪಿಯನ್ನು ಬಂಧಿಸಿ, ಕಳವು ಮಾಡಿದ ಬೈಕ್‌ನ್ನು ವಶಪಡಿಸಿಕೊಂಡಿದ್ದಾರೆ.



ಗುಜರಾತ್‌ನ ಅಮ್ರೇಲಿ ಜಿಲ್ಲೆಯ ಸಾವರ್ ಕುಂಡ್ಲದ ಲಾಲಾಜಿಬಾಯ್ ಬುದಾಬಾಯಿ ಸೋಲಂಕಿ (37) ಬಂಧಿತ ಆರೋಪಿ. ಮಾ.18ರಂದು ಕುಂದಾಪುರ ತಾಲೂಕು ಸಂಗಮ್ ಜಂಕ್ಷನ್ ಹತ್ತಿರವಿರುವ ಜೆಎಂಜೆ ವಿಲ್ಲಾ ಎಂಬ ಮನೆಯಲ್ಲಿ ಮನೆಯ ಎದುರಿನ ಬಾಗಿಲಿನ ಚೀಲಕವನ್ನು ಮುರಿದು ಮನೆಯ ಕಪಾಟಿನಲ್ಲಿಟ್ಟಿದ್ದ 10000 ನಗದನ್ನು ಕಳವು ಮಾಡಲಾಗಿತ್ತು. ಮಾ.19ರಂದು ಕುಂದಾಪುರದ ವಿನಯ ಆಸ್ಪತ್ರೆಯ ಸಮೀಪದ ಪಾರ್ಕಿಂಗ್ ಸ್ಥಳದಲ್ಲಿ ನಿಲ್ಲಿಸಿ ಹೋಗಿದ್ದ ಬೈಕ್‌ನ್ನು ಕಳವು ಮಾಡಲಾಗಿತ್ತು. ಈ ಬಗ್ಗೆ ಎರಡು ಪ್ರತ್ಯೇಕ ಪ್ರಕರಣಗಳು ಕುಂದಾಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ಪ್ರಕರಣದ ತನಿಖೆ ಕೈಗೆತ್ತಿಕೊಂಡ ಕುಂದಾಪುರ ಪೊಲೀಸರು, ಕುಂದಾಪುರ ಪೊಲೀಸ್ ಉಪಾಧೀಕ್ಷಕ ಎಚ್.ಡಿ. ಕುಲಕರ್ಣಿ ಮತ್ತು ಕುಂದಾಪುರ ಪೊಲೀಸ್ ಠಾಣಾ ನಿರೀಕ್ಷಕ ಜಯರಾಮ್ ಡಿ. ಗೌಡ ನಿರ್ದೇಶನದಂತೆ ಪಿ.ಎಸ್.ಐ ನಂಜಾ ನಾಯ್ಕ್ ಎನ್., ಪಿ.ಎಸ್.ಐ. ಪುಷ್ಪ ಹಾಗೂ ಸಿಬ್ಬಂದಿಗಳಾದ ಮೋಹನ, ಸಂತೋಷ, ಪ್ರಿನ್ಸ್, ಮಹಾಬಲ ಶೆಟ್ಟಿಗಾರ, ಸಂತೋಷ ದೇವಾಡಿಗ, ಘನಶ್ಯಾಮ್ ಅವರ ತಂಡ ಕಾರ್ಯಚರಣೆ ನಡೆಸಿತ್ತು.

ಕುಶಾಲನಗರ ಬಳಿ ಜಲಸಮಾಧಿಯಾಗಿದ್ದ ಯುವಕನ ಮೃತದೇಹ ಪತ್ತೆ

• ಮಡಿಕೇರಿ: ಕಳೆದ ಬುಧವಾರ ಕುಶಾಲನಗರದ ರಸೂಲ್ ಲೇಔಟ್ ಬಳಿ ಕಾವೇರಿ ನದಿಯಲ್ಲಿ ಸ್ನಾನಕ್ಕೆ ತೆರಳಿ ಜಲ ಸಮಾಧಿಯಾಗಿದ್ದ ನಾಗಾಲ್ಯಾಂಡ್ ಮೂಲದ ಯುವಕನ ಮೃತ ದೇಹ ಶನಿವಾರ ಪತ್ತೆಯಾಗಿದೆ. ಕುಶಾಲನಗರದ ಹೋಟೆಲ್ ಒಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ನಾಗಾಲಾಂಡ್ ರಾಜ್ಯದ ಲಾಂಗ್ ಟಕ್ ಕೊನ್ಯಕ್ ಮತ್ತು ಹಾಂಗ್ ಕಪ್ ಕೊನ್ಯಕ್ ಎಂಬ ಇಬ್ಬರು ಯುವಕರು ಹಾಗೂ ಓರ್ವ ಯುವತಿ ಬುಧವಾರ ಸಂಜೆ ಕುಶಾಲನಗರ ರಸೂಲ್ ಲೇಔಟ್ ಬಳಿ ನದಿಯತ್ತ ತೆರಳಿದ್ದರು. ಇವರ ಪೈಕಿ ಇಬ್ಬರು ಯುವಕರು ಸ್ನಾನಕ್ಕೆಂದು ನದಿಗಿಳಿದ ಸಂದರ್ಭ ಆಳವಾದ ಗುಂಡಿಯಲ್ಲಿ ಮುಳುಗಿ ಇಬ್ಬರೂ ಜಲ ಸಮಾಧಿಯಾಗಿದ್ದರು. ಗುರುವಾರ ಕುಶಾಲನಗರ ಅಗ್ನಿ ಶಾಮಕ ದಳದ ಸಿಬ್ಬಂದಿಗಳು ಮತ್ತು ಮುಳುಗು ತಜ್ಞರು ಕಾರ್ಯಾಚರಣೆ ನಡೆಸಿ ಓರ್ವನ ಶವವನ್ನು ಪತ್ತೆಹಚ್ಚಿದ್ದರು. ಮತ್ತೋರ್ವನ ಮೃತದೇಹಕ್ಕಾಗಿ ಶನಿವಾರವೂ ಕಾರ್ಯಾಚರಣೆ ಮುಂದುವರೆಸಿದ ಪರಿಣಾಮವಾಗಿ ಮುತ್ತಿನ ಮುಳ್ಳುಸೋಗೆ ಬಳಿ ಹರಿಯುತ್ತಿರುವ ಕಾವೇರಿ ನದಿಯಲ್ಲಿ ಗಿಡಗಳ ನಡುವೆ ಸಿಲುಕಿಕೊಂಡಿದ್ದ ಯುವಕನ ಮೃತ ದೇಹ ಪತ್ತೆಯಾಗಿದೆ. ಈ ಸಂಬಂಧ ಕುಶಾಲನಗರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂಡಿಎಂಎ ಸಹಿತ ಆರೋಪಿ ಸೆರೆ

• ಕಾಸರಗೋಡು: ಮಾದಕವಸ್ತು ಮಾರಾಟ ಜಾಲವನ್ನು ಮಟ್ಟಹಾಕಲು ಕೇರಳ ಗೃಹ ಇಲಾಖೆಯು ಆರಂಭಿಸಿರುವ ಆಪರೇಷನ್ ತೂಫಾನ್ ಕಾರ್ಯಾಚರಣೆಯಂತೆ ಬೇಕಲ ಪೊಲೀಸರು ನಡೆಸಿದ ಕ್ಷಿಪ್ರ ದಾಳಿಯಲ್ಲಿ 10.72 ಗ್ರಾಂ ಎಂಡಿಎಂಎ ಸಹಿತ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವೀರಕಂಬ ಬೊಣ್ಯಕುಕ್ಕು ಹೌಸ್‌ನ ಶಂಸುದ್ದೀನ್ (38) ಎಂಬಾತನನ್ನು ಬಂಧಿಸಲಾಗಿದೆ. ಉದುಮ ಸಾರ್ವಜನಿಕ ಶೌಚಾಲಯ ಪರಿಸರದಿಂದ ಬೇಕಲ ಪೊಲೀಸರು ಆರೋಪಿಯನ್ನು ಸೆರೆಹಿಡಿದಿದ್ದಾರೆ. ಬಂಧಿತನ ಮೊಬೈಲ್ ಫೋನ್, ಪರ್ಸ್, ಪಾನ್ ಕಾರ್ಡ್ ಮತ್ತು 2190 ರೂಪಾಯಿ ನಗದು ಹಣವನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ಬೇಳೂರು ಹಿರೇಹೊಳೆಯಲ್ಲಿ ಮುಳುಗಿದ್ದ ವಿದ್ಯಾರ್ಥಿಯ ಶವ ಪತ್ತೆ

• ಕೋಟ: ಕುಂದಾಪುರ ತಾಲೂಕಿನ ಬೇಳೂರು ಗ್ರಾ.ಪಂ. ವ್ಯಾಪ್ತಿಯ ಆರ್ಬೆಟ್ಟು ಸುಳಿಗುಂಡಿ ಹಿರೇಹೊಳೆಗೆ ಈಜಲು ತೆರಳಿ ನೀರಿನಲ್ಲಿ ಮುಳುಗಿ ನಾಪತ್ತೆಯಾಗಿದ್ದ ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿಯ ಮೃತದೇಹ ಭಾನುವಾರ ಬೆಳಗ್ಗೆ ಪತ್ತೆಯಾಗಿದೆ.



ಸಾಹೇಬರಕಟ್ಟೆ ಗರಿಕೆಮಠ ಮೂಲದ ಸಾಮರಾಜ್ (21) ಮೃತಪಟ್ಟ ದುರ್ದೈವಿಯಾಗಿದ್ದಾನೆ. ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದ ಸಾಮರಾಜ್, ಜೂ. 13ರ ಸಂಜೆ ಆರ್ಬೆಟ್ಟು ಸುಳಿಗುಂಡಿ ಹಿರೇಹೊಳೆಗೆ ಈಜಲು ತೆರಳಿದ್ದರು. ಈ ವೇಳೆ ನೀರಿನ ತೀವ್ರ ಸೆಳೆತಕ್ಕೆ ಸಿಲುಕಿ ಅವರು ಮುಳುಗಿ ನಾಪತ್ತೆಯಾಗಿದ್ದರು.

ಈಶ್ವರ್ ಮಲ್ಪೆ ತಂಡದಿಂದ ಸಾಹಸಿಕ ಶೋಧ ಕಾರ್ಯ

ವಿದ್ಯಾರ್ಥಿ ನಾಪತ್ತೆಯಾದ ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಮುಳುಗುತಜ್ಞ ಈಶ್ವರ್ ಮಲ್ಪೆ ಹಾಗೂ ಅವರ ತಂಡ ತಕ್ಷಣವೇ ಶೋಧ ಕಾರ್ಯಾಚರಣೆಗೆ ಇಳಿಯಿತು. ಭಾನುವಾರ ಬೆಳಗ್ಗಿನಿಂದಲೇ ಭಾರೀ ಮಳೆ ಸುರಿಯುತ್ತಿದ್ದರೂ ಲೆಕ್ಕಿಸದ ತಂಡ, ಆಕ್ಸಿಜನ್ ಸಿಲಿಂಡರ್ ಬಳಸಿ ಹೊಳೆಯ ಆಳಕ್ಕೆ ಇಳಿದು ತೀವ್ರ ಹುಡುಕಾಟ ಮುಂದುವರಿಸಿತು. ಕಾರ್ಯಾಚರಣೆಯ ಫಲವಾಗಿ ಭಾನುವಾರ ಮುಂಜಾನೆ ಹೊಳೆಯ ಮಧ್ಯಭಾಗದಲ್ಲಿ ಸಾಮರಾಜ್ ಅವರ ಮೃತದೇಹ ಪತ್ತೆಯಾಗಿದೆ.

ಬಿಜೆಪಿ ಉಡುಪಿ ಜಿಲ್ಲಾ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭ | ಸಂಸದ ಕ್ಯಾ. ಬ್ರಿಜೇಶ ಚೌಟ ಅಭಿಮತ

ಬಿಜೆಪಿಯಿಂದ ಮಾತ್ರ ರಾಷ್ಟ್ರ ನಿರ್ಮಾಣ ಕಾರ್ಯ

• ಉಡುಪಿ: ಉಚ್ಚಿಲದ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಸಭಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ ಬಿಜೆಪಿ ಜಿಲ್ಲಾ ಪ್ರಶಿಕ್ಷಣ ವರ್ಗದ ಸಮಾರೋಪ ಸಮಾರಂಭವು ಭಾನುವಾರ ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು.



ಸಮಾರೋಪ ಸಮಾರಂಭದಲ್ಲಿ ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಮಾತನಾಡಿ, ಜನಸಂಘದಿಂದ ಹಿಡಿದು ಇಂದಿನ ಬಿಜೆಪಿಯವರೆಗಿನ ಸುದೀರ್ಘ ಪಯಣದಲ್ಲಿ ನಮ್ಮ ಪಕ್ಷ ಇಷ್ಟೊಂದು ಬಲಿಷ್ಠವಾಗಿ ಬೆಳೆದು, ನರೇಂದ್ರ ಮೋದಿ ಅವರು ಸುದೀರ್ಘ ಅವಧಿಗೆ ಪ್ರಧಾನಿಯಾಗುತ್ತಾರೆ ಎಂದು ಆರಂಭದಲ್ಲಿ ಯಾರೂ ಕಲ್ಪಿಸಿರಲಿಲ್ಲ. ರಾಷ್ಟ್ರೀಯತೆಯ ಪರವಾಗಿ ಧ್ವನಿ ಎತ್ತುವ ಹಾಗೂ ರಾಷ್ಟ್ರ ಕಟ್ಟುವ ಕೆಲಸ ಮಾಡುವ ಏಕೈಕ ಪಕ್ಷ ಬಿಜೆಪಿ ಮಾತ್ರ. ಮೋದಿ ಸರ್ಕಾರವು ಇಂದು ಇಡೀ ಜಗತ್ತಿಗೆ ಮಾದರಿಯಾಗಿದ್ದು, ಅವರ ವಿಶ್ವಾಸ ಮತ್ತು ವಿಕಾಸದ ಜನಪರ ಕೆಲಸಗಳಿಂದಾಗಿ 2014ರ ನಂತರ ಬಿಜೆಪಿಯನ್ನು ನೋಡುವ ಜನರ ಮನಸ್ಥಿತಿಯೇ ಬದಲಾಗಿದೆ. ಪ್ರಶಿಕ್ಷಣ ಪಡೆದ ಕಾರ್ಯಕರ್ತರು ಮುಂಬರುವ ಎರಡು ವರ್ಷಗಳ ಕಾಲ ಸವಾಲಾಗಿ ಸ್ವೀಕರಿಸಿ ಹೊಸ ಜನರನ್ನು ತಲುಪುವ ಕೆಲಸ ಮಾಡಬೇಕು ಎಂದರು.

ಇದೇ ವೇಳೆ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಸಂಸದರು, ಕರ್ನಾಟಕಕ್ಕೆ ಕೇಂದ್ರದಿಂದ ಅನ್ಯಾಯವಾಗುತ್ತಿದೆ ಎಂದು ಕಾಂಗ್ರೆಸ್ ವ್ಯವಸ್ಥಿತ ಸಂಚು ಮಾಡುತ್ತಿದೆ. ಆದರೆ ವಾಸ್ತವದಲ್ಲಿ ಯುಪಿಎ ಆಡಳಿತದ ಅವಧಿಗೆ ಹೋಲಿಸಿದರೆ ಮೋದಿ ಸರ್ಕಾರದಲ್ಲಿ ಕರ್ನಾಟಕಕ್ಕೆ ಸಿಗುತ್ತಿರುವ ಅನುದಾನ ಮತ್ತು ಗ್ರಾಂಟ್‌ಗಳ ಪ್ರಮಾಣ ದುಪ್ಪಟ್ಟಾಗಿದೆ. ರಾಜ್ಯದ ಕಾಂಗ್ರೆಸ್ ಸರ್ಕಾರ ರಾಜಕೀಯ ದ್ವೇಷಕ್ಕಾಗಿ ಕೇಂದ್ರದ ಯೋಜನೆಗಳಿಗೆ ಅಸಹಕಾರ ನೀಡುತ್ತಿದ್ದು, ಖೇಲೋ ಇಂಡಿಯಾ ಪ್ರಸ್ತಾವನೆಗೆ ಎರಡು ವರ್ಷಗಳ ಬಳಿಕ ಈಗ ಅನುಮೋದನೆ ಕಳುಹಿಸಿದೆ. ಆಯುಷ್ಮಾನ್ ಭಾರತ್ ಮತ್ತು ಪ್ರಧಾನ್ ಮಂತ್ರಿ ಆವಾಸ್ 2.0 ಯೋಜನೆಗಳ ಅನುಷ್ಠಾನಕ್ಕೆ ಹಿನ್ನಡೆ ಉಂಟುಮಾಡುತ್ತಿದೆ. ಜನರ ವಿರುದ್ಧ ಆಡಳಿತ ನಡೆಸಿದರೆ ಏನಾಗುತ್ತದೆ ಎಂಬುದಕ್ಕೆ ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್‌ನ ಅಹಂಕಾರ ಮತ್ತು ತುಷ್ಟೀಕರಣದ ರಾಜಕಾರಣವೇ ಸಾಕ್ಷಿ. ಮಹಿಳೆಯರಿಗೆ ಶೇ. 33 ಮೀಸಲಾತಿ ನೀಡುವ ಮೂಲಕ ನಾರಿಶಕ್ತಿಗೆ ಗೌರವ ನೀಡಿದ ಹೆಮ್ಮೆ ಬಿಜೆಪಿಯದ್ದಾಗಿದ್ದು, ಯುವಕರು ಮತ್ತು ಮಹಿಳೆಯರ ಮಧ್ಯೆ ನಮ್ಮ ಸಂಘಟನೆ ಇನ್ನಷ್ಟು ಬಲಗೊಳ್ಳಬೇಕಿದೆ ಎಂದು ತಿಳಿಸಿದರು.

ವಿಭಾಗ ಪ್ರಭಾರಿ ಭಾರತೀಶ್, ಜಿ.ಬಿ. ಶೆಟ್ಟಿ, ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ, ಶಾಸಕರುಗಳಾದ ಸುರೇಶ್ ಶೆಟ್ಟಿ ಗುರ್ಮೆ, ಯಶ್‌ಪಾಲ್ ಸುವರ್ಣ, ವಿ. ಸುನೀಲ್ ಕುಮಾರ್, ಕಿರಣ್ ಕುಮಾರ್ ಕೊಡ್ಗಿ ಹಾಗೂ ಗುರುರಾಜ ಗಂಟಿಹೊಳೆ, ಪ್ರಮುಖರಾದ ನವೀನ್ ನಾಯಕ್, ದಿನೇಶ್ ಅಮೀನ್ ನಗರ, ಜಿತೇಂದ್ರ ಶೆಟ್ಟಿ , ರಾಜೀವ್ ಕುಲಾಲ್, ಅನಿತಾ ಮರವಂತೆ, ಲೋಕೇಶ್ ಅಂಬೆಕಲ್ಲು, ರತ್ನಾಕರ ಇಂದ್ರಾಳಿ ಹಾಗೂ ಸುರೇಶ್ ಶೆಟ್ಟಿ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಉಷಾ ಪ್ರಕಾಶ್ ಶೆಟ್ಟಿ ಹಾಗೂ ಜಿಲ್ಲಾ ಶಿಕ್ಷಣ ಮೋರ್ಚಾದ ಕಾರ್ಯದರ್ಶಿ ಮಹೇಶ್ ಕುಮಾರ್ ಅವರು ಪ್ರಶಿಕ್ಷಣ ವರ್ಗದ ಕುರಿತು ತಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಂಡರು.

ದಿನಕರ ಶೆಟ್ಟಿ ಹೆರ್ಗ ಅವರು ಸ್ವಾಗತಿಸಿದರು. ಪ್ರಶಿಕ್ಷಣ ಜಿಲ್ಲಾ ಸಂಚಾಲಕಕೆ.ಪಿ. ಶೆಟ್ಟಿ ಅವರು ಧನ್ಯವಾದ ಸಮರ್ಪಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್ ನಿರೂಪಿಸಿದರು.

ಇದು ಸಂಘಟಿತ ಪರಿಶ್ರಮದ ಯಶಸ್ಸು: ಕುತ್ಯಾರು ನವೀನ್ ಶೆಟ್ಟಿ

ಬಿಜೆಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಅವರು ಮಾತನಾಡಿ, ಈ ಪ್ರಶಿಕ್ಷಣ ವರ್ಗವು ಒಬ್ಬ ವ್ಯಕ್ತಿಯಿಂದ ಯಶಸ್ವಿಯಾದದ್ದಲ್ಲ, ಇದು ನಮ್ಮ ಇಡೀ ತಂಡದ ಸಂಘಟಿತ ಪರಿಶ್ರಮದ ವ್ಯವಸ್ಥೆಯಾಗಿದೆ. ವರ್ಗದಲ್ಲಿ ಶೇ. 92 ರಷ್ಟು ಮಂದಿ ಅತ್ಯಂತ ಸಕ್ರಿಯವಾಗಿ ಸಹಕರಿಸಿದ್ದು, ಭಾಗವಹಿಸಿದ ಎಲ್ಲಾ 154 ಪ್ರಮುಖರಲ್ಲೂ ಒಂದೇ ರೀತಿಯ ಉತ್ಸಾಹ ಕಂಡುಬಂದಿರುವುದು ಹೆಮ್ಮೆಯ ವಿಚಾರ ಎಂದು ಶ್ಲಾಘಿಸಿದರು.

ಬಿರುಸು ಪಡೆದ ಮಳೆ: ದಕ್ಷಿಣ ಕನ್ನಡ, ಉಡುಪಿಗೆ ಇಂದು ಯೆಲ್ಲೋ ಅಲರ್ಟ್!

• ಮಂಗಳೂರು/ಉಡುಪಿ: ಕರಾವಳಿಯಲ್ಲಿ ಮುಂಗಾರು ಮತ್ತಷ್ಟು ವೇಗ ಪಡೆದಿದೆ. ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಭಾನುವಾರ ಭಾರೀ ಮಳೆಯಾಗಿದ್ದು, ಮಲೆನಾಡಿನ ವಾತಾವರಣ ಸೃಷ್ಟಿಯಾಗಿತ್ತು. ಇದೇ ರೀತಿ ಮಳೆ ಮುಂದುವರಿಯುವ ಸಾಧ್ಯತೆ ಹಿನ್ನೆಲೆಯಲ್ಲಿ ಸೋಮವಾರ ದ.ಕ ಮತ್ತು ಉಡುಪಿ ಜಿಲ್ಲೆಯಲ್ಲಿ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ.



ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ, ಮಂಗಳೂರು, ಕೊಣಾಜೆ, ಉಳ್ಳಾಲ, ಬಂಟ್ವಾಳ, ಬೆಳ್ತಂಗಡಿ, ಸುಳ್ಯ, ಪುತ್ತೂರು ತಾಲೂಕುಗಳಲ್ಲಿ ಉತ್ತಮ ಮಳೆಯಾಗಿದೆ.

ಭಾನುವಾರ ಬೆಳಗ್ಗೆ 8.30ರಿಂದ ಮೊದಲ್ಗೊಂಡು ಹಿಂದಿನ 24 ಗಂಟೆಗಳ ಅವಧಿಯಲ್ಲಿ ದ.ಕ.ಜಿಲ್ಲೆಯಲ್ಲಿ ಸರಾಸರಿ 14.8 ಮಿ.ಮೀ ಮಳೆಯಾಗಿದೆ. ಮೂಡುಬಿದಿರೆ 11.5 ಮಿ.ಮೀ ಹಾಗೂ ಸುಳ್ಯದಲ್ಲಿ 12.6 ಮಿ.ಮೀ, ಪುತ್ತೂರಿನಲ್ಲಿ 14.9 ಮಿ.ಮೀ, ಮಂಗಳೂರು 18.6 ಮಿ.ಮೀ, ಬೆಳ್ತಂಗಡಿ 10.6 ಮಿ.ಮಿ, ಕಡಬ 8.1 ಮಿ.ಮಿ, ಬಂಟ್ವಾಳ 9.3 ಮಿ.ಮೀ ಮಳೆಯಾಗಿದೆ.

ಹವಾಮಾನ ಇಲಾಖೆಯ ವರದಿಯ ಪ್ರಕಾರ, ಮುಂದಿನ ಒಂದೆರಡು ದಿನಗಳ ಕಾಲ ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣ 32.9 ಮಿಲಿ ಮೀಟರ್ ದಾಖಲಾಗಿದೆ. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಬಿದ್ದಿರುವ ಮಳೆಯ ವಿವರ ಹೀಗಿದೆ: ಕಾಪು ತಾಲ್ಲೂಕಿನಲ್ಲಿ ಅತ್ಯಧಿಕ 57.8 ಮಿಲಿ ಮೀಟರ್ ಮಳೆಯಾಗಿದ್ದರೆ, ಉಡುಪಿಯಲ್ಲಿ 53.2 ಮಿಲಿ ಮೀಟರ್‌ನಷ್ಟು ಉತ್ತಮ ಮಳೆ ಸುರಿದಿದೆ. ಉಳಿದಂತೆ ಬೈಂದೂರಿನಲ್ಲಿ 38.9 ಮಿ.ಮೀ., ಕುಂದಾಪುರದಲ್ಲಿ 36.1 ಮಿ.ಮೀ., ಬ್ರಹ್ಮಾವರದಲ್ಲಿ 36.6 ಮಿ.ಮೀ., ಹೆಬ್ರಿಯಲ್ಲಿ 18.6 ಮಿ.ಮೀ. ಹಾಗೂ ಕಾರ್ಕಳ ತಾಲೂಕಿನಲ್ಲಿ 14.3 ಮಿ.ಮೀ. ಮಳೆಯಾಗಿರುವುದು ದಾಖಲಾಗಿದೆ.

ಉಡುಪಿಯಲ್ಲಿ 32.9 ಮಿ.ಮೀ ಮಳೆ

ಭಾನುವಾರ ಸುರಿದ ಈ ಉತ್ತಮ ಮಳೆಯಿಂದಾಗಿ ಕೃಷಿ ಚಟುವಟಿಕೆಗಳು ಚುರುಕು ಪಡೆದಿವೆ. ಮಳೆಯ ನಡುವೆಯೇ ರೈತರು ಗದ್ದೆಗಿಳಿದು ಗದ್ದೆ ಹಸನುಗೊಳಿಸುವ ಕಾರ್ಯದಲ್ಲಿ ತೊಡಗಿದ್ದುದು ಭಾನುವಾರ ಎಲ್ಲೆಡೆ ಕಂಡುಬಂತು.

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

50 ಸಾವಿರಕ್ಕೂ ಅಧಿಕ ಭಕ್ತರ ಆಗಮನ

• ಸುಬ್ರಹ್ಮಣ್ಯ: ದಕ್ಷಿಣ ಭಾರತದ ಪ್ರಸಿದ್ಧ ನಾಗಾರಾಧನಾ ಪುಣ್ಯ ಕ್ಷೇತ್ರ ಸುಬ್ರಹ್ಮಣ್ಯದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭಾನುವಾರ 50 ಸಾವಿರಕ್ಕೂ ಅಧಿಕ ಭಕ್ತರು ಆಗಮಿಸಿ ಶ್ರೀ ದೇವರ ದರುಶನ ಮಾಡಿ ಸೇವಾದಿಗಳನ್ನು ನೆರವೇರಿಸಿದರು. ವಾರಾಂತ್ಯದ ರಜಾದಿನ ಕ್ಷೇತ್ರದಲ್ಲಿ ಭಕ್ತರ ಸಾಗರವೇ ಹರಿದು ಬಂದಿತ್ತು.



ಆಶ್ಲೇಷ ಬಲಿ, ಶೇಷ ಸೇವೆ, ಮಹಾ ಪೂಜೆ, ತುಲಾಭಾರ, ಪಂಚಾಮೃತ ಮಹಾಭಿಷೇಕ, ಕಾರ್ತಿಕ ಪೂಜೆ ಸೇರಿದಂತೆ ಇತರ ಸೇವೆಗಳು ಅಧಿಕವಾಗಿ ನೆರವೇರಿತು.

ಮಿಥುನ ಮಾಸ ಆರಂಭಗೊಂಡಿರುವುದು ಹಾಗೂ ಈ ವರ್ಷ ಮಳೆ ಪ್ರಮಾಣಕಡಿಮೆಯಿರುವಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ಹೊರರಾಜ್ಯಗಳಿಂದ ಸಾವಿರಾರು ಭಕ್ತರು ಶನಿವಾರ ರಾತ್ರಿಯಿಂದಲೇ ಕ್ಷೇತ್ರಕ್ಕೆ ಆಗಮಿಸಿದ್ದರು. ದೇವಸ್ಥಾನ ಪರಿಸರ, ರಥಬೀದಿ, ಆದಿಸುಬ್ರಹ್ಮಣ್ಯ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಜನಸಂದಣಿ ಕಂಡುಬಂತು. ಜೂನ್ ತಿಂಗಳಲ್ಲಿ ಶಾಲಾ-ಕಾಲೇಜುಗಳು ಆರಂಭಗೊಂಡಿದ್ದರೂ ಭಕ್ತರ ಸಂಖ್ಯೆ ಹೆಚ್ಚಾಗಿತ್ತು.

ದೇವರ ದರ್ಶನಕ್ಕಾಗಿ ಭಕ್ತರು ರಥಬೀದಿಯವರೆಗೂ ಸರತಿ ಸಾಲಿನಲ್ಲಿ ನಿಂತಿದ್ದು, ಮಳೆಯ ಅಡಚಣೆ ಇಲ್ಲದ ಕಾರಣ ಭಕ್ತರು ಸುಗಮವಾಗಿ ದರ್ಶನ ಪಡೆಯಲು ಸಾಧ್ಯವಾಯಿತು.

ಅಗತ್ಯ ವ್ಯವಸ್ಥೆ

ಭಕ್ತರ ಸುಗಮ ದರ್ಶನ, ತೀರ್ಥ ಪ್ರಸಾದ ಹಾಗೂ ಅನ್ನಪ್ರಸಾದ ವಿತರಣೆಗೆ ಅಗತ್ಯ ವ್ಯವಸ್ಥೆಗಳನ್ನು ದೇವಳದಿಂದ ಕಲ್ಪಿಸಲಾಗಿತ್ತು. ಆದಿ ಸುಬ್ರಹ್ಮಣ್ಯ ಭೋಜನ ಶಾಲೆಯಲ್ಲಿ ಭಕ್ತರಿಗೆ ವಿಶೇಷವಾಗಿ ಬಫೆ ಮಾದರಿಯಲ್ಲಿ ಬೋಜನ ಪ್ರಸಾದ ವಿತರಿಸಲಾಯಿತು.

ದೇವಸ್ಥಾನದ ವಸತಿಗೃಹಗಳು ವಾರದ ಹಿಂದೆಯೇ ಭರ್ತಿಯಾಗಿದ್ದರೆ, ಖಾಸಗಿ ವಸತಿಗೃಹಗಳೂ ಶನಿವಾರದಿಂದಲೇ ಸಂಪೂರ್ಣ ಭರ್ತಿಯಾಗಿದ್ದವು.

ಇದೇ ವೇಳೆ ಭಕ್ತರ ವಾಹನಗಳ ಸಂಖ್ಯೆಯೂ ಹೆಚ್ಚಾಗಿದ್ದರಿಂದ ಸುಬ್ರಹ್ಮಣ್ಯ ಪೊಲೀಸ್ ಠಾಣೆ ಬಳಿಯಿಂದ ಮುಖ್ಯ ಪೇಟೆಯವರೆಗೆ, ಕಾಶಿಕಟ್ಟೆಯಿಂದ ಆದಿ ಸುಬ್ರಹ್ಮಣ್ಯ ರಸ್ತೆ ಎರಡೂ ಬದಿಗಳಲ್ಲಿ ಹಾಗೂ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆಯಲ್ಲಿ ವಾಹನಗಳನ್ನು ಸಾಲಾಗಿ ನಿಲ್ಲಿಸಲಾಗಿತ್ತು. ಇದರಿಂದ ವಾಹನ ಸಂಚಾರ ಮತ್ತು ಪಾದಚಾರಿಗಳ ಓಡಾಟಕ್ಕೆ ಸಂಕಷ್ಟವಾಯಿತು.

ಇಂದಿನಿಂದ ಕೇರಳ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ

• ಕಾಸರಗೋಡು: ಯುಡಿಎಫ್‌ನ ಚುನಾವಣಾ ಭರವಸೆಯಾದ ಕೆಎಸ್ ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ವ್ಯವಸ್ಥೆಯಾದ ಪ್ರಿಯದರ್ಶಿನಿ ಯೋಜನೆಯಲ್ಲಿ ಕಾಸರಗೋಡು ಜಿಲ್ಲೆ ಕೂಡಾ ಸೌಲಭ್ಯಕ್ಕೆ ಅರ್ಹವಾಗಿದೆ. ಜಿಲ್ಲೆಯ 75 ಬಸ್ ಸರ್ವೀಸ್‌ಗಳಲ್ಲಿ ಜೂ.15ರಂದು ಬೆಳಗ್ಗೆ 9 ರಿಂದ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ದೊರೆಯಲಿದೆ.

ಅದರಂತೆ ಕಾಸರಗೋಡು – ಮಂಗಳೂರು, ಕಾಸರಗೋಡು – ಸುಳ್ಯ ಮತ್ತು ಕಾಸರಗೋಡು – ಪುತ್ತೂರು ಅಂತಾರಾಜ್ಯ ರೂಟ್‌ನ ಕೇರಳ ಕೆಎಸ್ ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಸೌಲಭ್ಯ ಲಭಿಸಲಿದೆ ಎಂದು ಕಾಸರಗೋಡು ಡಿಪ್ಪೋ ಅಧಿಕಾರಿಗಳು ತಿಳಿಸಿದ್ದಾರೆ.

ಯೋಜನೆಯನ್ನು ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿ ವಿ.ಡಿ.ಸತೀಶನ್ ಉದ್ಘಾಟಿಸುವರು. ಕಾಸರಗೋಡಿನಲ್ಲಿ ಬೆಳಗ್ಗೆ 9ಕ್ಕೆ ಶಾಸಕ ಕಲ್ಲಟ್ರ ಮಾಹಿನ್ ಹಾಗೂ ಉಪ್ಪಳದಲ್ಲಿ ಶಾಸಕ ಎ.ಕೆ. ಎಂ.ಅಶ್ರಫ್ ಉದ್ಘಾಟಿಸುವರು.

ಕೆಎಸ್‌ಆರ್‌ಟಿಸಿ ಬಸ್‌ಗಳ ಚಾಲಕರು ಮತ್ತು ನಿರ್ವಾಹಕರು ಪಾಲ್ಗೊಳ್ಳುವರು.

ಕಾಸರಗೋಡಿನ ಟೌನ್ ಟು ಟೌನ್, ಲಿಮಿಟೆಡ್, ಆರ್ಡಿನರಿ ಬಸ್‌ಗಳಿಗೆ ಪ್ರಿಯದರ್ಶಿನಿ ಯೋಜನೆ ವಿಸ್ತರಿಸಲ್ಪಟ್ಟ ಕಾರಣ ಈ ಸೌಲಭ್ಯ ಉಂಟಾಗಿದೆ. ಕಾಸರಗೋಡು – ಮಂಗಳೂರು ರೂಟ್‌ನಲ್ಲಿ ಬೆಳಗ್ಗೆ 4 ರಿಂದ ಒಟ್ಟು 139 ಬಾರಿ ಕೇರಳ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ನಡೆಸುತ್ತಿದೆ. ಮಂಗಳೂರು, ಪುತ್ತೂರು, ಸುಳ್ಯ ಕಡೆಗೆ ಅಂತಾರಾಜ್ಯ ಪ್ರಯಾಣ ದೈನಂದಿನ ನಡೆಸುವ ವಿದ್ಯಾರ್ಥಿಗಳಿಗೆ ಸಹಿತ ಮಹಿಳೆಯರಿಗೆ ಈ ಯೋಜನೆ ಅತ್ಯಂತ ವರದಾನವಾಗಿದೆ.

ಕಾಸರಗೋಡು ಜಿಲ್ಲೆಯೂ ಸಹಿತ ಕೇರಳದಲ್ಲಿ ಪ್ರಯಾಣಿಸುವ ಎಲ್ಲಾ ಮಹಿಳೆಯರಿಗೂ ಉಚಿತ ಟಿಕೆಟ್ ಸೌಲಭ್ಯವಿರುವುದರಿಂದ ಕೆಎಸ್‌ಆರ್ ಟಿಸಿ ಬಸ್‌ಗಳಲ್ಲಿ ಇನ್ನು ಮುಂದೆ ವಿದ್ಯಾರ್ಥಿನಿಯರಿಗೆ ರಿಯಾಯಿತಿ ಸೌಲಭ್ಯದ ಅಗತ್ಯವಿಲ್ಲ. ಮಹಿಳೆಯರು, ವಿದ್ಯಾರ್ಥಿನಿಯರು ಹಾಗೂ ಮಂಗಳಮುಖಿಯರು ಗುರುತು ಚೀಟಿಯಾಗಲಿ, ನೋಂದಣಿಯಾಗಲಿ, ವಯೋಮಿತಿಯನ್ನಾಗಲಿ ಸಲ್ಲಿಸುವ ಆವಶ್ಯಕತೆಯಿಲ್ಲ. ಕಾಸರಗೋಡು ಜಿಲ್ಲೆಯಲ್ಲಿ ಸಂಚರಿಸುವ ಗ್ರಾಮಬಂಡಿ ಬಸ್‌ಗಳಲ್ಲಿ ಕೂಡಾ ಈ ಸೌಲಭ್ಯ ಲಭ್ಯವಿದೆ.

ಮಂಗಳೂರು ತಂಡಕ್ಕೆ ಕರುಣ್ ನಾಯಕ

• ಮಂಗಳೂರು: ನಗರದ ತಾಜ್ ವಿವಂತ ಹೋಟೇಲ್ ಸಭಾಂಗಣದಲ್ಲಿ ಕೆಎಸ್‌ಸಿಎ ಆಶ್ರಯದಲ್ಲಿ ಭಾನುವಾರ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡದ ಜರ್ಸಿ ಅನಾವರಣ ಮತ್ತು ಟೀಂ ಆಂತಮ್ ಬಿಡುಗಡೆ ಕಾರ್ಯಕ್ರಮ ನೆರವೇರಿತು.



ಈ ವೇಳೆ ತಂಡದ ನಾಯಕ ಮತ್ತು ಉಪನಾಯಕರ ಹೆಸರು ಘೋಷಿಸಲಾಯಿತು. ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಆಶ್ರಯದಲ್ಲಿ ನಡೆಯುವ ಪ್ರೀಮಿಯರ್ ಟಿ20 ಕ್ರಿಕೆಟ್ ಟೂರ್ನಮೆಂಟ್ 'ಮಹಾರಾಜ ಟ್ರೋಫಿ'ಯಲ್ಲಿ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡದ ನಾಯಕನಾಗಿ ಕರುಣ್ ನಾಯರ್ ಮತ್ತು ಉಪನಾಯಕನಾಗಿ ಶ್ರೇಯಸ್ ಗೋಪಾಲ್ ಆಯ್ಕೆಯಾಗಿದ್ದಾರೆ.

» ಕರುಣ್ ನಾಯರ್ ಅವರು ಈ ಬಾರಿಯ ಹರಾಜು ಪ್ರಕ್ರಿಯೆಯಲ್ಲಿ 18 ಲಕ್ಷ ರೂ.ಗೆ ಆಯ್ಕೆಯಾಗುವ ಮೂಲಕ ದುಬಾರಿ ಆಟಗಾರ

ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡದ ನಾಯಕನಾಗಿರುವ ಕರುಣ್ ನಾಯರ್ ಅವರು ಈ ಬಾರಿಯ ಹರಾಜು ಪ್ರಕ್ರಿಯೆಯಲ್ಲಿ 18 ಲಕ್ಷ ರೂ.ಗೆ ತಂಡಕ್ಕೆ ಆಯ್ಕೆಯಾಗುವ ಮೂಲಕ ದುಬಾರಿ ಆಟಗಾರರಾಗಿದ್ದಾರೆ. ಜೂ.20ರಿಂದ ಜು.12ರವರೆಗೆ ಮಹಾರಾಜ ಟ್ರೋಫಿ ಪಂದ್ಯಗಳುಬೆಂಗಳೂರು,ಮೈಸೂರುಮತ್ತು ಹುಬ್ಬಳ್ಳಿಯ ಮೈದಾನಗಳಲ್ಲಿ ನಡೆಯಲಿದೆ. ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡದ ಮಾಲಕತ್ವವನ್ನು ಮಾನ್ಯತಾ ಡೆವಲಪರ್ಸ್ ಪಡೆದುಕೊಂಡಿದೆ.

ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಶನ್ (ಕೆಎಸ್‌ಸಿಎ) ಮಂಗಳೂರು ವಲಯದ ಅಧ್ಯಕ್ಷ ಡಾ.ಶ್ರೀಕಾಂತ್ ರೈ, ನಟ, ನಿರ್ದೇಶಕ ರೂಪೇಶ್ ಶೆಟ್ಟಿ, ಕರುಣ್ ನಾಯರ್, ಶ್ರೇಯಸ್ ಗೋಪಾಲ್, ಕೆಎಸ್‌ಸಿಎ ಖಜಾಂಜಿ ಬಿಎನ್ ಮಧುಕರ್, ಕೆಎಸ್ ಸಿಎ ಅವಿನಾಶ್ ವೈದ್ಯ, ಕೋಸ್ಟಲ್ ಕಿಂಗ್ಸ್ ಮಂಗಳೂರು ಟೀಮ್ ಓನರ್ ವಿನೋದ್ ನಾಯ್ಡು ಮತ್ತಿತರರು ಇದ್ದರು.

ಆಯುರ್ವೇದ ಹಸ್ತಪ್ರತಿಗಳ ಲಿಪ್ಯಂತರ ಕಾರ್ಯಾಗಾರಕ್ಕೆ ಚಾಲನೆ

• ಉಡುಪಿ: ಭಾರತ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ 'ಜ್ಞಾನ ಭಾರತಂ ಮಿಷನ್' ಹಿನ್ನೆಲೆಯಲ್ಲಿ ದೇಶದಾದ್ಯಂತ ಈಗಾಗಲೇ 1 ಕೋಟಿಗೂ ಅಧಿಕ ಹಸ್ತಪ್ರತಿಗಳನ್ನು ಸರ್ವೆ ಮಾಡಲಾಗಿದೆ. ಇದರ ಭಾಗವಾಗಿ ವಿವಿಧ ಭಾಷೆ ಹಾಗೂ ವಿಷಯಗಳ ಹಸ್ತಪ್ರತಿಗಳ ಲಿಪ್ಯಂತರ ಕಾರ್ಯಕ್ರಮದ ಅಡಿಯಲ್ಲಿ, ಉಡುಪಿಯ ಗೀತಾ ಮಂದಿರದ ಶ್ರೀ ಪುತ್ತಿಗೆ ನೃಸಿಂಹ ಸಭಾಭವನದಲ್ಲಿ 'ತಿಗಳಾರಿ ಲಿಪಿ ಮತ್ತು ಮೋಡಿ ಕನ್ನಡ ಲಿಪಿಯಲ್ಲಿರುವ ಆಯುರ್ವೇದ ಹಸ್ತಪ್ರತಿಗಳ ಲಿಪ್ಯಂತರ ಕಲಿಕಾ ಕಾರ್ಯಾಗಾರ'ಕ್ಕೆ ಚಾಲನೆ ನೀಡಲಾಯಿತು.



ಹೊಸದಿಲ್ಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಕೇಂದ್ರೀಯ ಆಯುರ್ವೇದೀಯ ವಿಜ್ಞಾನ ಅನುಸಂಧಾನ ಪರಿಷತ್ ಸಂಸ್ಥೆಗಳ ಮಾರ್ಗದರ್ಶನ ಹಾಗೂ ಆರ್ಥಿಕ ಸಹಭಾಗಿತ್ವದಲ್ಲಿ, ಶ್ರೀ ಪುತ್ತಿಗೆ ಮಠಾಧೀಶರಾದ ಪರಮಪೂಜ್ಯಶ್ರೀಸುಗುಣೇಂದ್ರತೀರ್ಥಶ್ರೀಪಾದರ ಹಾಗೂ ಕಿರಿಯ ಪಟ್ಟದ ಪರಮಪೂಜ್ಯ ಶ್ರೀ ಸುಶೀಂದ್ರತೀರ್ಥಶ್ರೀಪಾದರ ಪರಮ ಅನುಗ್ರಹದೊಂದಿಗೆ ಶ್ರೀ ವಾದಿರಾಜ ಸಂಶೋಧನ ಪ್ರತಿಷ್ಠಾನವು ಈ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಭಾರತ ಸರ್ಕಾರದ ಆಯುಷ್ ಸಚಿವಾಲಯದ ಕೇಂದ್ರೀಯ ಆಯುರ್ವೇದ ವಿಜ್ಞಾನ ಸಂಶೋಧನಾ ಮಂಡಳಿಯ ಮಹಾನಿರ್ದೇಶಕರಾದ ಪ್ರೊ. ವೈದ್ಯ ರಬಿನಾರಾಯಣ ಆಚಾರ್ಯ ಅವರುಕಾರ್ಯಕ್ರಮವನ್ನು ಅಧಿಕೃತವಾಗಿ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ತೆಲಂಗಾಣ ಹೈದರಾಬಾದ್‌ನ ರಾಷ್ಟ್ರೀಯ ಭಾರತೀಯ ವೈದ್ಯಕೀಯ ಪರಂಪರೆ ಸಂಸ್ಥೆಯ ಸಹಾಯಕ ನಿರ್ದೇಶಕರಾದ ಡಾ. ಜಿ. ಪಿ. ಪ್ರಸಾದ್ ಹಾಗೂ ನಿಟ್ಟೆ ವಿಶ್ವವಿದ್ಯಾಲಯದ ಐಕೆಎಸ್ ಕೇಂದ್ರದ ನಿರ್ದೇಶಕರಾದ ಡಾ. ಸುಧೀರ್ ರಾಜ್ ಕೆ. ಭಾಗವಹಿಸಿದ್ದರು.

» 'ಜ್ಞಾನ ಭಾರತಂ ಮಿಷನ್' ಹಿನ್ನೆಲೆಯಲ್ಲಿ ದೇಶದಾದ್ಯಂತ ಈಗಾಗಲೇ 1 ಕೋಟಿಗೂ ಅಧಿಕ ಹಸ್ತಪ್ರತಿಗಳನ್ನು ಸರ್ವೆ ಮಾಡಲಾಗಿದೆ.

» ವಿವಿಧ ಭಾಷೆ ಹಾಗೂ ವಿಷಯಗಳ ಹಸ್ತಪ್ರತಿಗಳ ಲಿಪ್ಯಂತರ ಕಾರ್ಯಕ್ರಮದ ಅಡಿಯಲ್ಲಿ ಕಾರ್ಯಾಗಾರಕ್ಕೆ ಚಾಲನೆ

ವೇದಿಕೆಯಲ್ಲಿ ಶ್ರೀ ಪುತ್ತಿಗೆ ಮಠದ ಆಡಳಿತಾಧಿಕಾರಿ ಹಾಗೂ ದಿವಾನರಾದ ನಾಗರಾಜ ಆಚಾರ್ಯ, ಬೆಂಗಳೂರಿನ ಕೇಂದ್ರೀಯ ಆಯುರ್ವೇದೀಯ ಅನುಸಂಧಾನ ಸಂಸ್ಥಾನದ ಸಹಾಯಕ ನಿರ್ದೇಶಕರಾದ ಡಾ. ಮಹೇಶ್ವರ ಟಿ., ರಾಜಸ್ಥಾನದ ಎಂ.ಎಸ್. ಪ್ರಾದೇಶಿಕ ಆಯುರ್ವೇದ ಸಂಶೋಧನಾ ಸಂಸ್ಥೆಯ ಸಂಶೋಧನಾ ಅಧಿಕಾರಿ ಡಾ. ವಿನೋದ್ ಕುಮಾರ್ ಲಾವಣಿಯಾ ಹಾಗೂ ನವದೆಹಲಿಯ ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಭಾಷಾ ವಿದ್ವಾಂಸರಾದ ಡಾ. ಕೀರ್ತಿಕಾಂತ್ ಶರ್ಮಾ ಉಪಸ್ಥಿತರಿದ್ದರು.

ಇವರೊಂದಿಗೆ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಡಾ. ಆರ್. ಎಲ್. ನಾರಾಯಣ ಸಿಂಹ, ಡಾ. ದಿಲೀಪ್ ಕುಮಾರ್ ಕಾರ್, ಉದ್ಯಾವರ ಎಸ್‌ಡಿಎಂ ಆಯುರ್ವೇದ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ಮಹಾಲಕ್ಷ್ಮಿ ಎಂ. ಎಸ್., ಡಾ. ದೀಕ್ಷಿತಾ ಹೆಬ್ಬಾರ್, ಡಾ. ಸುದರ್ಶನ್, ಶ್ರೀ ಪುತ್ತಿಗೆ ವಿದ್ಯಾಪೀಠದ ವಿದ್ವಾಂಸರಾದ ಡಾ. ಸುನಿಲ್ ಆಚಾರ್ಯ, ಸುಗುಣ ಮಾಲಾ ಪತ್ರಿಕೆಯ ಸಂಪಾದಕ ವಿದ್ವಾನ್ ಮಹಿತೋಷ ಆಚಾರ್ಯ ಹಾಗೂ ಉಡುಪಿ ಪ್ರಾಚ್ಯ ಸಂಚಯ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ.ಎಸ್.ಎ. ಕೃಷ್ಣಯ್ಯ ಸೇರಿದಂತೆ ಹಲವು ಪ್ರಸಿದ್ಧ ವಿದ್ವಾಂಸರು ಭಾಗವಹಿಸಿದ್ದರು. ವಿದ್ವಾನ್ ಗೋಪಾಲಾಚಾರ್ಯ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 32° 26°
ಉಡುಪಿ 32° 27°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 15, ಜೂನ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 3
ಗದ್ದೆಯಂತಾದ ಗ್ರಾಮ ಪಂಚಾಯತ್ ಸಂಪರ್ಕಿಸುವ ರಸ್ತೆ!


ಪುಟ 6
ಅಂಬಲಪಾಡಿ ಮೇಲ್ಸೇತುವೆ ಒಂದು ಪಾರ್ಶ್ವ ಸಾರ್ವಜನಿಕ ಸಂಚಾರಕ್ಕೆ ಮುಕ್ತ

ವಿಭಿನ್ನ ಶೈಲಿಯ 'ಬಸ್ಸು' ಮಾದರಿಯ ಪ್ರಯಾಣಿಕರ ತಂಗುದಾಣ ಲೋಕಾರ್ಪಣೆ






ಮಂಗಳೂರು-ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯ ಗುರುಪುರ ಬಂಡಸಾಲೆಯಲ್ಲಿ 'ವಿ2 ಗೈಸ್' ಸಂಘಟನೆಯು ದಾನಿಗಳ ನೆರವಿನಿಂದ, ಸುಮಾರು 7 ಲ.ರೂ ವೆಚ್ಚದಲ್ಲಿ ನಿರ್ಮಾಣವಾಗಿರುವ ವಿಭಿನ್ನ ಶೈಲಿಯ 'ಬಸು' ಮಾದರಿಯ ಪ್ರಯಾಣಿಕರ ತಂಗುದಾಣ ಭಾನುವಾರ ಲೋಕಾರ್ಪಣೆಗೊಂಡಿತು. ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಸ್ವಾಮೀಜಿ ಉದ್ಘಾಟಿಸಿದರು. ಶಾಸಕ ಡಾ.ಭರತ್ ಶೆಟ್ಟಿ ಮತ್ತಿತರರಿದ್ದರು. (ವರದಿ ಪುಟ 2)

ತ್ಯಾಜ್ಯ ಎಸೆದವರಿಂದಲೇ ಹೆಕ್ಕಿಸಿ 1000 ರೂ. ದಂಡ ವಿಧಿಸಿದ ವಾರ್ಡ್ ಸದಸ್ಯ



ಕುಂಬಳೆ: ತ್ಯಾಜ್ಯ ಎಸೆದವರಿಂದಲೇ ಹೆಕ್ಕಿಸಿ ದಂಡ ವಿಧಿಸಿದ ಘಟನೆ ಪುತ್ತಿಗೆ ಗ್ರಾ.ಪಂ.ನ 11ನೇ ವಾರ್ಡ್‌ನಲ್ಲಿ ನಡೆದಿದೆ. ತ್ಯಾಜ್ಯ ಎಸೆದಿರುವ ಬಗ್ಗೆ ಊರವರಿಂದ ಮಾಹಿತಿ ಲಭಿಸಿದ ತಕ್ಷಣ ಕಾರ್ಯಪ್ರವೃತ್ತರಾದ ವಾರ್ಡ್ ಸದಸ್ಯ ಸತೀಶ್ ಪೆರ್ಣೆ ಅವರು ಪುತ್ತಿಗೆ ಗ್ರಾಪಂ ಹಸಿರು ಕ್ರಿಯಾಸೇನಾ ಕಾರ್ಯಕರ್ತರ ಜೊತೆಗೂಡಿ ಸ್ಥಳಕ್ಕೆ ತೆರಳಿ ಕಟ್ಟಿ ಎಸೆದ ತ್ಯಾಜ್ಯ ರಾಶಿಯ ಕಟ್ಟ ಬಿಚ್ಚಿದಾಗ ಕಾಸರಗೋಡಿನಲ್ಲಿ ಕಾರ್ಯಾಚರಿಸುತ್ತಿರುವ ಆಹಾರ ಸಂಸ್ಥೆ ವಿಳಾಸ ಲಭಿಸಿದ್ದು ಆದರಲ್ಲಿದ್ದ ಸಂಪರ್ಕ ಸಂಖ್ಯೆಗೆ ಕರೆಮಾಡಿ ತ್ಯಾಜ್ಯ ಎಸೆದವರ ಮಾಹಿತಿ ಕೋರಲಾಯಿತು. ಕೂಡಲೇ ತ್ಯಾಜ್ಯ ಎಸೆದ ವ್ಯಕ್ತಿ ಸ್ಥಳಕ್ಕಾಗಮಿಸಿದ್ದು ತ್ಯಾಜ್ಯ ಎಸೆದಾತನಿಂದಲೇ ತೆರವುಗೊಳಿಸಿದಲ್ಲದೆ ಸಾರ್ವಜನಿಕ ಸ್ಥಳದಲ್ಲಿ ತ್ಯಾಜ್ಯ ಎಸೆದ ಆರೋಪದಡಿ ವಾಹನ ಮಾಲಕನಿಗೆ ಘಟನಾ ಸ್ಥಳದಲ್ಲಿ ಹಾಜರಿದ್ದ ಆರೋಗ್ಯಾಧಿಕಾರಿ ನಿಮಿಷ ಅವರು 10,000 ರೂ.ದಂಡ ವಿಧಿಸಿದ್ದಾರೆ.

ಗಾಳಿ ಮಳೆಯಿಂದ 315 ಮನೆಗಳಿಗೆ ಹಾನಿ
ಅಪಾರ ಆಸ್ತಿಪಾಸ್ತಿ ನಷ್ಟ
ಜೀವ ಸೆಲೆ ಪಡೆದುಕೊಂಡ ಜೀವನದಿಗಳು

ಮಂಗಳೂರು: ಕರಾವಳಿಗೆ ಮುಂಗಾರಿನ ಆಗಮನವಾದಾಗಿನಿಂದ ಸತತವಾಗಿ ಮಳೆಯಾಗುತ್ತಿದೆ. ಕೆಲವೆಡೆ ಭಾರೀ ಗಾಳಿ ಸಹಿತ ಮಳೆಯಾಗುತ್ತಿದ್ದು, ಇದರಿಂದ ಅಪಾರ ಹಾನಿಯೂ ಉಂಟಾಗಿದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಮುಂತಾದೆಡೆ ಮುಂಗಾರು ಉತ್ತಮ ಆರಂಭ ಪಡೆದಿದೆ. ಮಳೆಯ ಆಗಮನದಿಂದ ಬತ್ತಿ ಬರಿದಾಗಿ ಹೋಗಿದ್ದ ನದಿಗಳಲ್ಲಿ ಜೀವಸೆಳೆ ಮತ್ತೆ ಪುಟಿದೆದ್ದಿದೆ. ನದಿಗಳಲ್ಲಿ ನಿಧಾನವಾಗಿ ನೀರು ತುಂಬಿಕೊಳ್ಳಲಾರಂಭಿಸಿದೆ.

ನದಿಗಳಲ್ಲಿ ನೀರಿನ ಸೆಲೆ

ದಕ್ಷಿಣ ಜಿಲ್ಲೆಯ ಜೀವನದಿಗಳಾದ ನೇತ್ರಾವತಿ, ಕುಮಾರಧಾರಾ, ಫಲ್ಗುಣಿ, ಶಾಂಭವಿ, ಉಡುಪಿ ಜಿಲ್ಲೆಯಲ್ಲಿ ಹರಿಯುವ ಸ್ವರ್ಣಾ, ಸೀತಾ, ಚಕ್ರ, ವಾರಾಹಿ, ಸೌಪರ್ಣಿಕಾ ನದಿಗಳಲ್ಲಿಯೂ ನೀರಿನ ಸೆಳೆ ಕಾಣಿಸಿಕೊಂಡಿದೆ. ಕಾಸರಗೋಡು ಜಿಲ್ಲೆಯ ಚಂದ್ರಗಿರಿ, ಮಧುವಾಹಿನಿಯೂ ಜೀವ ಪಡೆದುಕೊಂಡಿದೆ.



315 ಮನೆಗಳಿಗೆ ಹಾನಿ

ಪ್ರಾಕೃತಿಕ ವಿಕೋಪದಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲಿಯೇ ಒಟ್ಟು 314 ಮನೆಗಳಿಗೆ ಹಾನಿ ಉಂಟಾಗಿದೆ. ಈ ಪೈಕಿ 311 ಮನೆಗಳು ಭಾಗಶ ಹಾಗೂ 4 ಮನೆಗಳು ಸಂಪೂರ್ಣ ಹಾನಿಗೊಳಗಾಗಿವೆ.

2715 ವಿದ್ಯುತ್ ಕಂಬ ಧರಾಶಾಹಿ

ಭಾರೀ ಗಾಳಿ ಮಳೆಯ ಹಿನ್ನೆಲೆಯಲ್ಲಿ ದ.ಕ. ಜಿಲ್ಲೆಯಲ್ಲಿ ಏ.1ರಿಂದ ಇದುವರೆಗೆ ಒಟ್ಟು 2,715 ವಿದ್ಯುತ್ ಕಂಬಗಳು ಧರೆಗುರುಳಿವೆ. 13 ಟ್ರಾನ್ಸ್‌ಫಾರ್ಮರ್‌ಗಳು ಹಾನಿಗೊಳಗಾಗಿದ್ದು 136 ಕಿ.ಮೀ ಉದ್ದದ ವಿದ್ಯುತ್ ಲೈನ್‌ಗಳು ತುಂಡಾಗಿವೆ. ಅಲ್ಲದೆ 1.21 ಕಿ.ಮೀ. ಉದ್ದದ ರಸ್ತೆಗಳು ಹಾನಿಗೊಳಗಾಗಿವೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ಮುಂಜಾಗ್ರತೆ ವಹಿಸಲು ಸೂಚನೆ

ಭಾರೀ ಗಾಳಿ ಮಳೆಯ ವೇಳೆ ಸಾರ್ವಜನಿಕರು ಅಗತ್ಯ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳುವಂತೆ ಹವಾಮಾನ ಇಲಾಖೆಯು ಸೂಚನೆಯನ್ನು ನೀಡಿದೆ. ಗಾಳಿ ಮಳೆಯ ವೇಳೆ ಪ್ರಯಾಣ ಮಾಡದಿರುವುದು, ಮನೆಯ ಕಿಟಿಕಿ ಬಾಗಿಲುಗಳನ್ನು ಮುಚ್ಚುವುದು, ಮರಗಳ ಅಡಿ ಆಶ್ರಯ ಪಡೆಯದೇ ಇರುವುದು, ಗುಡುಗು ಸಿಡಿಲಿನ ಸಂದರ್ಭ ಎಲೆಕ್ಟ್ರಾನಿಕ್ ಉಪಕರಣಗಳಿಂದ ದೂರವಿರುವಂತೆ ಎಚ್ಚರಿಕೆಯನ್ನು ನೀಡಿದೆ.

ಉಪ್ಪಿನಂಗಡಿ-ಬೆಳ್ತಂಗಡಿ ರಾಜ್ಯ ಹೆದ್ದಾರಿ ಅವ್ಯವಸ್ಥೆ
ಕೃತಕ ನೆರೆಯಿಂದಾಗಿ ಪಲ್ಟಿಯಾದ ಆಟೋ
ಇಳಂತಿಲ ಗ್ರಾಮದ ಪೆದಮಲೆಯಲ್ಲಿ ನಡೆದ ಘಟನೆ

ಉಪ್ಪಿನಂಗಡಿ: ನಾದುರಸ್ತಿಯಲ್ಲಿರುವ ಉಪ್ಪಿನಂಗಡಿ – ಬೆಳ್ತಂಗಡಿ ರಾಜ್ಯ ಹೆದ್ದಾರಿಯಲ್ಲಿ ಮಳೆ ನೀರಿನಿಂದ ರಸ್ತೆಯಲ್ಲಿ ಕೃತಕ ಕೆರೆ ನಿರ್ಮಾಣವಾಗಿ ಚಲಿಸುತ್ತಿದ್ದ ರಿಕ್ಷಾ ಮಗುಚಿ ಓರ್ವ ಗಾಯಗೊಂಡ ಘಟನೆ ಇಳಂತಿಲ ಗ್ರಾಮದ ಪೆದಮಲೆಯಲ್ಲಿ ನಡೆದಿದೆ.

ನೀರು ತುಂಬಿ ಕೆರೆಯಂತಾಗಿದೆ

ಇಳಿಜಾರು ರಸ್ತೆಯಲ್ಲಿ ಈ ಹಿಂದೆಯೇ ಹೊಂಡ ಗುಂಡಿಗಳು ಉಂಟಾಗಿದ್ದು ಇದೀಗ ಮಳೆಯ ನೀರು ತುಂಬಿ ಅಕ್ಷರಶಃ ಕೆರೆಯಂತಾಗಿದೆ. ಇದರ ಅರಿವಿಲ್ಲದೆ ಈ ಭಾಗದಲ್ಲಿ ಸಂಚರಿಸಿದ ಗೂಡ್ಸ್ ರಿಕ್ಷಾವೊಂದು ಆಯತಪ್ಪಿ ರಸ್ತೆ ನಡುವಿನ ಹೊಂಡಕ್ಕೆ ಬಿದ್ದಿದ್ದು, ರಿಕ್ಷಾದಲ್ಲಿದ್ದ ವ್ಯಕ್ತಿಯು ಗಾಯಗೊಂಡು ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಘಟನೆ ಸಂಭವಿಸಿದಾಕ್ಷಣ ಸಾರ್ವಜನಿಕರು ತಕ್ಷಣ ನೆರವಿಗೆ ಧಾವಿಸಿ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಲು ನೆರವಾದರು.

ಅನುದಾನ ಬಿಡುಗಡೆಯೇ ಆಗಿಲ್ಲ

ಈ ರಸ್ತೆಯ ದುಃಸ್ಥಿತಿಯನ್ನು ತಿಳಿಯಲು ಸ್ಥಳಕ್ಕೆ ಲೋಕೋಪಯೋಗಿ ಇಲಾಖೆಯ ಸಚಿವರೇ ಖುದ್ದು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದ್ದರೂ, ಆಡಳಿತ ಪಕ್ಷದ ಮುಖಂಡರು ಕೂಡಾ ರಸ್ತೆ ಅಭಿವೃದ್ಧಿಗೆ ಅನುದಾನ ಒದಗಿಸುವಂತೆ ಕೇಳಿಕೊಂಡಿದ್ದರೂ ಸರಕಾರದಿಂದ ಅನುದಾನ ಬಿಡುಗಡೆಗೊಳ್ಳದೇ ಇರುವುದರಿಂದ ಈ ಬಾರಿಯ ಮಳೆಗಾಲ ಈ ರಸ್ತೆಯಲ್ಲಿ ಸಂಚರಿಸುವ ಜನರ ಪಾಲಿಗೆ ಅಪಾಯಕಾರಿಯಾಗುವ ಭೀತಿ ಕಾಡಿದೆ.



- ಉಪ್ಪಿನಂಗಡಿ – ಬೆಳ್ತಂಗಡಿ ರಾಜ್ಯ ಹೆದ್ದಾರಿಯಲ್ಲಿ ಮಳೆ ನೀರಿನಿಂದ ರಸ್ತೆಯಲ್ಲಿ ಕೃತಕ ಕೆರೆ ನಿರ್ಮಾಣ
- ಗೂಡ್ಸ್ ರಿಕ್ಷಾ ಆಯತಪ್ಪಿ ರಸ್ತೆ ನಡುವಿನ ಹೊಂಡಕ್ಕೆ ಬಿದ್ದಿದ್ದು, ವ್ಯಕ್ತಿಗೆ ಗಾಯ, ಆಸ್ಪತ್ರೆಗೆ ದಾಖಲು

ಸುತ್ತಮುತ್ತ

ಏರುಗತಿಯತ್ತ ಸಾಗಿದ ರಬ್ಬರ್ ಧಾರಣೆ: ಬೆಳೆಗಾರರು ಖುಷ್!

ಮಂಗಳೂರು: ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ರಬ್ಬರ್‌ಗೆ ಬೇಡಿಕೆ ಹೆಚ್ಚಿದ ಪರಿಣಾಮ ಧಾರಣೆ ಏರುಮುಖದತ್ತ ಸಾಗಿದೆ. ಯುದ್ಧದ ಮೊದಲು ಆರ್‌ಎಸ್‌ಎಸ್ 1, ಆರ್‌ಎಸ್‌ಎಸ್ 2 200 ರೂ. ಇದ್ದ ಧಾರಣೆ ಇದೀಗ ಆರ್‌ಎಸ್‌ಎಸ್ 1 – 266 ರೂ. ಹಾಗೂ ಆರ್‌ಎಸ್‌ಎಸ್ 2 224 ರೂ.ಗೆ ಏರಿಕೆ ಕಂಡಿದೆ. ರಬ್ಬರ್ ಧಾರಣೆ ಏರಿಕೆ ಹಿನ್ನಲೆ ಬೆಳೆಗಾರರು ಸಂತಸಗೊಂಡಿದ್ದು, ಈ ಹಿಂದೆ ರಬ್ಬರ್ ತೋಟಗಳನ್ನು ಲೀಸ್ ನೀಡಿದ್ದ ಕೃಷಿಕರು ಇದೀಗ ತಾವೇ ನಿರ್ವಹಣೆ ಮಾಡುವತ್ತ ಒಲವು ತೋರುತ್ತಿದ್ದಾರೆ. ಉಳಿದಂತೆ ಸ್ಕ್ರಾಪ್ 1 154 ರೂ. ಹಾಗೂ ಸ್ಕ್ರಾಪ್ 2 – 145 ರೂ.ವಿನಲ್ಲಿ ಸ್ಥಿರವಾಗಿದೆ.

ಮೆಣಸಿನಪಾರೆಯಲ್ಲಿ ಮಳೆಗೆ ಮನೆ ಕುಸಿತ: ಮನೆ ಮಂದಿ ಪಾರು

ಬದಿಯಡ್ಕ: ನೀರ್ಚಾಲು ಸಮೀಪದ ಮೆಣಸಿನಪಾರೆಯಲ್ಲಿ ಭಾರೀ ಗಾಳಿ ಮಳೆಗೆ ಮನೆಯೊಂದು ಭಾಗಶಃ ಕುಸಿದಿದೆ. ಕುಟುಂಬದವರು ಪವಾಡ ಸದೃಶ ರೀತಿಯಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮೆಣಸಿನಪಾರೆ ಶಶಿಕಲಾ ಅವರ ಮನೆ ಇದಾಗಿದ್ದು ಮನೆಯ ಒಂದು ಭಾಗ ಸಂಪೂರ್ಣ ನಾಶವಾಗಿದೆ.

ಕಣ್ಮುಚ್ಚಿ ಕುಳಿತ ಅಧಿಕಾರಿಗಳ ವಿರುದ್ಧ ಸಾರ್ವಜನಿಕರ ಆಕ್ರೋಶ
ಅಪಾಯ ಆಹ್ವಾನಿಸುತ್ತಿದೆ ಕಾಸರಗೋಡು ಬೀಚ್ ರಸ್ತೆ

ಕಾಸರಗೋಡು: ಕಾಸರಗೋಡು ನಗರಕ್ಕೆ ಹೊಂದಿಕೊಂಡಿರುವ ಪ್ರಮುಖ ರಸ್ತೆಗಳಲ್ಲಿ ಒಂದಾಗಿರುವ ಬೀಚ್ ರೋಡ್ ಸಂಪೂರ್ಣವಾಗಿ ಹೊಂಡಗುಂಡಿಗಳಿಂದ ತುಂಬಿದ್ದು ಅತ್ಯಂತ ಶೋಚನೀಯ ಸ್ಥಿತಿಗೆ ತಲುಪಿದೆ. ಮಳೆಗಾಲ ಆರಂಭವಾಗಿದ್ದು, ಈ ರಸ್ತೆಯಲ್ಲಿ ವಾಹನ ಸವಾರರು ಮತ್ತು ಸಾರ್ವಜನಿಕರು ಸಂಚರಿಸುವುದೇ ಕಷ್ಟಕರವಾಗಿ ಪರಿಣಮಿಸಿದೆ. ಈ ಅವ್ಯವಸ್ಥೆಯನ್ನು ಆಡಳಿತ ವ್ಯವಸ್ಥೆ ಇನ್ನೂ ಕೂಡ ಸರಿಪಡಿಸದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಬೃಹದಾಕಾರದ ಹೊಂಡ

ರಸ್ತೆಯ ಹಲವೆಡೆ ಬೃಹದಾಕಾರದ ಹೊಂಡಗಳಿದ್ದು ಅಪಾಯ ಆಹ್ವಾನಿಸುವಂತಿವೆ. ಹೊಂಡದಲ್ಲಿ ಮಳೆನೀರು ಸಂಗ್ರಹಗೊಳ್ಳುತ್ತಿರುವುದರಿಂದ ವಾಹನ ಚಾಲಕರು ಅರಿವಿಲ್ಲದೆ ಹೊಂಡಗಳಿಗೆ ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಹಲವು ವಿದ್ಯಾಸಂಸ್ಥೆಗಳು ಇಲ್ಲಿವೆ

ಕಾಸರಗೋಡು ಸರಕಾರಿ ಹೆಣ್ಮಕ್ಕಳ ಶಾಲೆ, ಅನ್ವರುಲ್ ಉಲೂಂ ಎಯುಪಿ ಶಾಲೆ ಮೊದಲಾದ ವಿದ್ಯಾಸಂಸ್ಥೆಗಳಿಗೆ ಹಲವು ಮಂದಿ ವಿದ್ಯಾರ್ಥಿಗಳು ನಡೆದು ಕೊಂಡೇ ಸಾಗುತ್ತಾರೆ. ಶಾಲಾ ವಾಹನ ಗಳು ಈ ರೂಟ್‌ನಲ್ಲಿ ಸಂಚರಿಸುತ್ತಿದ್ದು, ಆದ್ದರಿಂದ ಪ್ರಸ್ತುತ ರಸ್ತೆಯನ್ನು ಶೀಘ್ರ ಅತ್ಯಾಧುನಿಕ ಮಾದರಿಯಲ್ಲಿ ದುರಸ್ತಿಗೊಳಿಸಬೇಕೆಂದು ನಾಗರಿಕರು ಆಗ್ರಹಿಸಿದ್ದಾರೆ.




ಶೀಘ್ರ ರಸ್ತೆ ದುರಸಿಗೆ ನಾಗರಿಕರ ಆಗ್ರಹ

ಕಾಸರಗೋಡು ನಗರದಿಂದ ನೆಲ್ಲಿಕುಂಜೆ, ಬಂಗರಗುಡ್ಡೆ, ಕಸಬಾ ಕಡಪ್ಪುರ, ಕುರುಂಬಾ ಶ್ರೀಭಗವತೀ ಕ್ಷೇತ್ರ, ನೆಲ್ಲಿಕುಂಜೆ ಶ್ರೀ ಸುಬ್ರಹ್ಮಣ್ಯ ಸ್ವಾಮೀ ಕ್ಷೇತ್ರ ಮೊದಲಾದ ಕೇಂದ್ರಗಳಿಗೆ ತೆರಳುವ ಹೆಚ್ಚಿನ ಮಂದಿ ಆಶ್ರಯಿಸುವ ಈ ರಸ್ತೆ ಶೋಚನೀಯಾವಸ್ಥೆಯಲ್ಲಿದ್ದು, ಕೂಡಲೇ ಪರಿಹಾರ ಕಲ್ಪಿಸಬೇಕು ಎಂಬ ಆಗ್ರಹ ಸಾರ್ವಜನಿಕರಿಂದ ಕೇಳಿಬಂದಿದೆ.

ಕೈಕಂಬದಲ್ಲಿ ಕಾರಿನ ಮೇಲೆ ಬಿದ್ದ ಮರ



ಮಂಗಳೂರು-ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿ 169 ರ ಗುರುಪುರ-ಕೈಕಂಬದ ರೋಸಾ ಮಿಸ್ತಿಕಾ ಶಾಲೆಯ ಬಳಿ ಬೃಹತ್ ಮರವೊಂದು ಉರುಳಿ ಬಿದ್ದು ಕಾರು ಜಖಂಗೊಂಡು ಅದೃಷ್ಟವಶಾತ್ ಚಾಲಕ ಸಣ್ಣಪುಟ್ಟ ಗಾಯಗಳೊಂದಿಗೆ ಕೂದಲೆಳೆ ಅಂತರದಲ್ಲಿ ಪಾರಾದ ಘಟನೆ ಶನಿವಾರ ರಾತ್ರಿ ನಡೆದಿದೆ.

ವರ್ಷ ಕಳೆದರೂ ಇನ್ನೂ ದುರಸ್ತಿಯಾಗದ ಅಜ್ಜಿಬೆಟ್ಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕಂಪೌಂಡು | ಸಂಕಷ್ಟದಲ್ಲಿ ಮಕ್ಕಳು
ಶತಮಾನೋತ್ಸವ ಸಂಭ್ರಮ ಎದುರು ನೋಡುತ್ತಿರುವ ಶಾಲೆ ಮರೆತ ಶಿಕ್ಷಣ ಇಲಾಖೆ!

ಸಂಗಮ ವಿಶೇಷ

ಬಂಟ್ವಾಳ: ಶತಮಾನೋತ್ಸವದ ಹೊಸ್ತಿಲಲ್ಲಿರುವ ಬಂಟ್ವಾಳ ತಾಲೂಕಿನ ಕೇಂದ್ರಸ್ಥಾನದಲ್ಲಿರುವ ಬಿ.ಸಿ.ರೋಡಿನ ಅಜ್ಜಿಬೆಟ್ಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಂಪೌಂಡು ಗೋಡೆ ಕುಸಿದು ವರ್ಷಕಳೆದರೂ ಹೊಸ ಕಂಪೌಂಡು ನಿರ್ಮಾಣದ ಭಾಗ್ಯ ದೊರೆತಿಲ್ಲ ಜೊತೆಗೆ ಶೌಚಾಲಯ ಶಿಥಿಲಾವಸ್ಥೆಯಲ್ಲಿದ್ದು ಇದು ಶಿಕ್ಷಣ ಇಲಾಖೆಯ ಕಾರ್ಯ ವೈಖರಿಗೆ ಹಿಡಿದ ಕನ್ನಡಿಯಾಗಿದೆ.

ಒಂದೆಡೆ ಶೈಕ್ಷಣಿಕ ಗುಣಮಟ್ಟ, ತಂತ್ರಜ್ಞಾನ ಕುರಿತ ಬೋಧನೆ ಹಾಗೂ ವಿದ್ಯಾರ್ಥಿ ಸ್ನೇಹಿ ಚಟುವಟಿಕೆಗಳ ಮೂಲಕ ಈ ಶಾಲೆ ಗಮನ ಸೆಳೆಯುತ್ತಿದ್ದರೆ, ಇತ್ತ ಕಳೆದ ವರ್ಷದ ಮಳೆಗೆ ಶಾಲಾ ಕಂಪೌಂಡು ಕುಸಿದು ಬಿದ್ದರೆ, ಶಿಥಿಲಗೊಂಡ ಶೌಚಾಲಯ, ಭದ್ರತೆಯ ಕೊರತೆಯಿಂದ ವಿದ್ಯಾರ್ಥಿಗಳು ಆತಂಕದಲ್ಲಿರುವುದು ಬಿ.ಮೂಡ ಗ್ರಾಮದ ಅಜ್ಜಿಬೆಟ್ಟು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಾಸ್ತವ ಚಿತ್ರಣವಾಗಿದೆ.



ಈ ಶಾಲೆ ಶತಮಾನೋತ್ಸವ ಎದುರು ನೋಡುತ್ತಿದ್ದರೆ ಕಳೆದ ವರ್ಷ ಸುರಿದ ಬಿರುಸಿನ ಮಳೆಗೆ ಶಾಲೆಯ ಕಂಪೌಂಡು ಗೋಡೆ ಕುಸಿದು ಬಿದ್ದಿತ್ತು. ಆದರೆ ಒಂದು ವರ್ಷ ಕಳೆದರೂ ಹೊಸ ಕಂಪೌಂಡು ನಿರ್ಮಾಣದ ಕಾರ್ಯ ಮಾತ್ರ ಇನ್ನು ಆಗಿಲ್ಲ, ಪರಿಣಾಮವಾಗಿ ಶಾಲಾ ಆವರಣ ಸಂಪೂರ್ಣ ತೆರೆದ ಪ್ರದೇಶವಾಗಿ ಮಾರ್ಪಟ್ಟಿದೆ. ಶಾಲೆಯ ಮುಖ್ಯ ಪ್ರವೇಶ ದ್ವಾರದಲ್ಲಿ ಗೇಟ್ ಮಾತ್ರ ಉಳಿದಿದ್ದು ಆದರ ಎರಡೂ ಬದಿಗಳಲ್ಲಿ ರಕ್ಷಣಾ ಗೋಡೆ ಇಲ್ಲದಿರುವುದು ಶಾಲಾ ಆವರಣಕ್ಕೆ ಅನ್ಯರು ಸುಲಭವಾಗಿ ಪ್ರವೇಶಿಸಲು ಅವಕಾಶ ಕಲ್ಪಿಸಿದೆ. ಸಿಸಿ ಕ್ಯಾಮೆರಾ ವ್ಯವಸ್ಥೆಯೂ ಇಲ್ಲದ ಕಾರಣ ಶಾಲೆಯ ಭದ್ರತೆಯ ಬಗ್ಗೆ ಆತಂಕವನ್ನುಂಟು ಮಾಡಿದೆ.

"ತುರ್ತು ಕ್ರಮ ಕೈಗೊಳ್ಳಿ

ಶಾಲೆಯ ಆವರಣ ಗೋಡೆ ಕಳೆದ ವರ್ಷವೇ ಕುಸಿದು ಬಿದ್ದಿದ್ದು, ಈ ಬಗ್ಗೆ ಹಲವು ಬಾರಿ ಶಿಕ್ಷಣ ಇಲಾಖೆ ಗಮನಕ್ಕೆ ತರಲಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ ಕುಸಿದಿರುವ ಕಂಪೌಂಡಿನ ಪಕ್ಕದಲ್ಲೇ ಶೌಚಾಲಯವಿರುವುದರಿಂದ ಪ್ರತಿದಿನವೂ ಆತಂಕದ ನಡುವೆಯೇ ಮಕ್ಕಳ ಓಡಾಟ ನಡೆಯುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲಿಸಿ ತುರ್ತು ದುರಸ್ತಿ ಕಾಮಗಾರಿ ಕೈಗೊಳ್ಳಬೇಕಿದೆ.

- ಲಕ್ಷ್ಮೀ, ಮುಖ್ಯೋಪಾಧ್ಯಾಯರು, ಸ.ಹಿ.ಪ್ರಾ. ಶಾಲೆ, ಅಜ್ಜಿಬೆಟ್ಟು

"ಇತ್ತ ಕಡೆ ಗಮನಹರಿಸಿ

ನಮ್ಮೂರಿನ ಸರಕಾರಿ ಶಾಲೆ ಎಂಬ ಅಭಿಮಾನ ದಿಂದ ನಮ್ಮ ಮಕ್ಕಳನ್ನು ಅಜ್ಜಿಬೆಟ್ಟು ಶಾಲೆಗೆ ಕಳುಹಿಸುತ್ತಿದ್ದೇವೆ. ಶಾಲೆಯಲ್ಲಿ ಉತ್ತಮ ಶಿಕ್ಷಣ ಜೊತೆಗೆ ವಿವಿಧ ಚಟುವಟಿಕೆಗೆ ಆದ್ಯತೆ ನೀಡಲಾಗುತ್ತಿದೆ. ಆದರೆ ಶಾಲೆ ಹಿಂಭಾಗದ ಆವರಣ ಗೋಡೆ ಕುಸಿದಿದ್ದು, ಇದೀಗ ಸಂಪೂರ್ಣ ತೆರೆದ ಸ್ಥಿತಿ ಯಲ್ಲಿದೆ. ಮಕ್ಕಳ ಸುರಕ್ಷತೆಗೆ ಇಲಾಖೆ ತಕ್ಷಣ ಗಮನಹರಿಸಿ ಶಾಶ್ವತ ಆವರಣ ಗೋಡೆ ನಿರ್ಮಿಸಬೇಕು.

- ರಜನೀಶ್, ಸ್ಥಳೀಯರು

ಪುಟಾಣಿಗಳ ಪಾಲಿಗೆ ಅಪಾಯದ ದಾರಿ

ಕುಸಿದಿರುವ ಕಂಪೌಂಡಿನ ಸಮೀಪವೇ ಶಾಲೆಯ ಶೌಚಾಲಯವಿದ್ದು ಇದರ ಕಲ್ಲುಗಳು ನೇತಾಡುವ ಸ್ಥಿತಿಯಲ್ಲಿರುವುದರಿಂದ ಪುಟ್ಟ ಮಕ್ಕಳು ಶೌಚಾಲಯಕ್ಕೆ ತೆರಳುವಾಗ ಶಿಕ್ಷಕರು ಜೊತೆಯಲ್ಲಿಯೇ ತೆರಳಬೇಕಾದ ಅನಿವಾರ್ಯತೆ ಎದುರಾಗಿದೆ.

ದುರಸ್ತಿಗಾಗಿ ಕಾಯುತ್ತಿರುವ ಶೌಚಾಲಯ

ಶಾಲಾ ಶೌಚಾಲಯವು ನಾದುಸ್ಥಿತಿಯಲ್ಲಿದ್ದು ಮಳೆಗಾಲದಲ್ಲಿ ಮಕ್ಕಳು ಅಲ್ಲಿ ತೆರಳಲು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ.

ಎಲ್‌ಕೆಜಿ ಮತ್ತು ಯುಕೆಜಿ ವಿದ್ಯಾರ್ಥಿಗಳಿಗೆ ಶಾಲಾ ಕಟ್ಟಡದ ಸಮೀಪದಲ್ಲೇ ಪ್ರತ್ಯೇಕ ಶೌಚಾಲಯ ನಿರ್ಮಾಣದ ಅಗತ್ಯವಿದೆ ಎಂಬುದು ಮಕ್ಕಳ ಪೋಷಕರ ಅಭಿಪ್ರಾಯವಾಗಿದೆ. »ಪುಟ 6

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಸೋಮವಾರ 15, ಜೂನ್ 2026

ಸುತ್ತಮುತ್ತ

ಜೂ.16ರಿಂದ ಕುಂಪಲ ಶ್ರೀಕ್ಷೇತ್ರದಲ್ಲಿ ಬಿಂಬ ಪ್ರತಿಷ್ಠೆ, ಬ್ರಹ್ಮಕಲಶ

ಉಳ್ಳಾಲ: ಕುಂಪಲ ಶಿವಪುರದ ಶ್ರೀ ದುರ್ಗಾ ಪರಮೇಶ್ವರಿ ಕ್ಷೇತ್ರದಲ್ಲಿ ಜೂ.16ರಿಂದ ಜೂ.19ರ ವರೆಗೆ ಶ್ರೀ ದುರ್ಗಾದೇವಿ, ಶ್ರೀ ಅನಂತ ಪದ್ಮನಾಭ ಮತ್ತು ನವಗ್ರಹ ದೇವರ ಬಿಂಬ ಪ್ರತಿಷ್ಠೆ ಅಷ್ಟಬಂಧ ಬ್ರಹ್ಮ ಕಲಶಾಭಿಷೇಕ ನಡೆಯಲಿದೆ. ಜೂ.16ರಂದು ಸಂಜೆ 7ಕ್ಕೆ ವಾಸ್ತು ಹೋಮ,ಶಯನ ಪೂಜೆ, ಜೂ.17ರಂದು ಬೆಳಿಗ್ಗೆ 6.00ಗಂಟೆಯಿಂದ 208 ತೆಂಗಿನ ಕಾಯಿ ಗಣಪತಿ ಹೋಮ, ವಿಷ್ಣು ಸಹಸ್ರನಾಮ ಹೋಮ, ಪ್ರತಿಷ್ಠಾ ಹೋಮ ಬೆಳಿಗ್ಗೆ 7.52ರ ಮಿಥುನ ಲಘ್ನ ದಲ್ಲಿ ಅನಂತಪದ್ಮನಾಭ ದೇವರ ಬಿಂಬ ಪ್ರತಿಷ್ಠೆ ಸಂಜೆ 7ಕ್ಕೆ ಶ್ರೀ ಸತ್ಯನಾರಾಯಣ ಪೂಜೆ ನಡೆಯಲಿದೆ. ಜೂ.18ರಂದು ಬೆಳಿಗ್ಗೆ 10ಕ್ಕೆ ಶ್ರೀ ದುರ್ಗಾಪರಮೇಶ್ವರಿ ದೇವರಿಗೆ ಶತರುದ್ರಾಭಿಷೇಕ ವಿಶೇಷ ಪೂಜೆ. ಸಂಜೆ7.00ಗಂಟೆಗೆ ಶ್ರೀ ದುರ್ಗಾ ನಮಸ್ಕಾರ ಪೂಜೆ,ಲಲಿತ ಸಹಸ್ರನಾಮ ಪಾರಾಯಣ ನಡೆಯಲಿದೆ. ಜೂ.19ರಂದು ಬೆಳಿಗ್ಗೆ 6.00ರಿಂದ ಗಣಹೋಮ,ಕಲಶಹೋಮ ಬೆಳಿಗ್ಗೆ ಗಂಟೆ 8.02ರ ಮಿಥುನ ಲಘ್ನದ ಶುಭ ಮುಹೂರ್ತದಲ್ಲಿ ಶ್ರೀ ದುರ್ಗಾದೇವಿಯ ಅಷ್ಟಬಂಧ ಬಿಂಬ ಪ್ರತಿಷ್ಠೆ ಬೆಳಿಗ್ಗೆ ಗಂಟೆ 10.12ಕ್ಕೆ ಕರ್ಕಾಟಕ ಲಘ್ನದಲ್ಲಿ ನವಗ್ರಹ ಪ್ರತಿಷ್ಠೆ ಬ್ರಹ್ಮಕಲಶಾಭಿಷೇಕ ಮಹಾ ಚಂಡಿಕಾ ಯಾಗ ಪೂಜೆ ಮಂತ್ರಾಕ್ಷತೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ನರಹರಿ ಪರ್ವತದಲ್ಲಿ ಸಂಧ್ಯಾ ಭಜನೆ



ಬಂಟ್ವಾಳ: ನರಹರಿ ಪರ್ವತದಲ್ಲಿ ನಡೆಯುವ ಸಂಧ್ಯಾ ಭಜನಾ ಕಾರ್ಯಕ್ರಮಕ್ಕೆ ವೇದವ ಮತ್ತು ಆಶಾ ಪಾಣೆಮಂಗಳೂರು ಅವರು ದೀಪ ಬೆಳಗಿಸಿ ಚಾಲನೆ ನೀಡಿದರು. ಪಾಣೆಮಂಗಳೂರು ಸರಸ್ವತಿ ವಿದ್ಯಾದಾಯಿನಿ ಭಜನಾ ಮಂದಿರದ ನೇತೃತ್ವದಲ್ಲಿ ಸಂಧ್ಯಾ ಭಜನೆ ನಡೆಯಿತು. ದೇವಳದ ಆಡಳಿತ ಮೊಕ್ತೇಸರರಾದ ಡಾ. ಪ್ರಶಾಂತ್ ಮಾರ್ಲ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಆತ್ಮರಂಜನ್ ರೈ, ಮೊಕ್ತೆಸರುಗಳಾದ ಪ್ರತಿಭಾ ಎ. ರೈ ಪರಮೇಶ್ವರ ಮಯ್ಯ , ಮಾಧವ ಶೆಣೈ, ಎಂ.ಎನ್. ಕುಮಾರ್ ಹಾಗೂ ಓಣಿಬೈಲ್ ಶಂಕರ ಐತಾಳ್, ರಾಜೇಂದ್ರ, ಚಂದಪ್ಪ ಮೂಲ್ಯ, ಓಂ ಪ್ರಕಾಶ್, ಮ್ಯಾನೇಜರ್ ಆನಂದ್, ರವೀಂದ್ರ, ನರಸಿಂಹ, ವಿಜಯ್ ಮುಂತಾದವರು ಉಪಸ್ಥಿತರಿದ್ದರು.

ಸಿದ್ಧಕಟ್ಟೆ ಕಾಲೇಜಿನಲ್ಲಿ ವನಮಹೋತ್ಸವ

ಬಂಟ್ವಾಳ: ತಾಲೂಕಿನ ಸಿದ್ಧಕಟ್ಟೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಹಿರಿಯ ವಿದ್ಯಾರ್ಥಿ ಸಂಘ, ರಾಷ್ಟ್ರೀಯ ಸೇವಾ ಯೋಜನೆಯ ಘಟಕ ಮತ್ತು ವಿದ್ಯಾರ್ಥಿ ವೇದಿಕೆಯ ಸಹಯೋಗದೊಂದಿಗೆ ವನಮಹೋತ್ಸವವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ವಿವಿಧ ಜಾತಿಯ ಹಣ್ಣುಗಳು ಮತ್ತು ಕಾಡಿನ ಗಿಡಗಳನ್ನು ಕಾಲೇಜಿನ ಕ್ರೀಡಾಂಗಣದ ಸುತ್ತ ನೆಡಲಾಯಿತು. ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶಿವರಾಜ್ ಕುಮಾರ್ , ಕಾಲೇಜಿನ ಪ್ರಾಂಶುಪಾಲ ಪ್ರೊ. ಗಿರೀಶ ಭಟ್, ವಿದ್ಯಾರ್ಥಿ ಕ್ಷೇಮಪಾಲನಾಧಿಕಾರಿ ಪ್ರೊ. ಹರಿಪ್ರಸಾದ್ ಶೆಟ್ಟಿ, ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಡಾ. ಸುಮನ್ ಶೆಟ್ಟಿ ಮುಂತಾದವರಿದ್ದರು. ಗಿಡನಾಟಿಯ ಸಂದರ್ಭದಲ್ಲಿ ಕಾಲೇಜಿನ ಬೋಧಕ-ಬೋಧಕೇತರರು, ಹಿರಿಯ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ಚಂದ್ರ ಪೂಜಾರಿ, ಚೇತನ್, ಸಂಜಯ್, ಸುಷ್ಮಿತಾ, ವಿದ್ಯಾರ್ಥಿವೇದಿಕೆಯ ಅಧ್ಯಕ್ಷ ಯಶೋಧರ ಮತ್ತು ಪದಾಧಿಕಾರಿಗಳು, ರಾಷ್ಟ್ರೀಯ ಸೇವಾಯೋಜನೆಯ ಸ್ವಯಂಸೇವಕರು ಉಪಸ್ಥಿತರಿದ್ದರು.



ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಶುಕ್ರವಾರ ದ್ವಾದಶಿ ಪ್ರಯುಕ್ತ ಸಂಜೆ ದ್ವಾದಶಿ ಉತ್ಸವ ನಡೆಯಿತು. ಈ ಪ್ರಯುಕ್ತ ದ್ವಾದಶಿ ಮಂಟಪದಲ್ಲಿ ಕಟ್ಟೆಪೂಜೆ ನೆರವೇರಿತು.

ಬಂಟ್ವಾಳ ಬಂಟರ ಸಂಘದ ವಾರ್ಷಿಕೋತ್ಸವ | 'ಸಾಂಸ್ಕೃತಿಕ ವೈಭವದ ಸಂಭ್ರಮ, ವಿವಿಧ ಸ್ಪರ್ಧೆಗಳು

ಜೀವನದಲ್ಲಿ ನಂಬಿಕೆಯೇ ಬಂಡವಾಳ: ಬಾಲಕೃಷ್ಣ ರೈ

ಬಂಟ್ವಾಳ: ಬಂಟರ ಸಂಘದ ಬಂಟ್ವಾಳ ತಾಲೂಕಿನ ನೇತೃತ್ವದಲ್ಲಿ ಮಹಿಳಾ ವಿಭಾಗ, ಯುವ ವಿಭಾಗ ಹಾಗೂ ವಲಯ ಬಂಟರ ಸಂಘಗಳ ಸಹಯೋಗದೊಂದಿಗೆ ಸಂಘದ 14ನೇ ವಾರ್ಷಿಕೋತ್ಸವ ಹಾಗೂ ಬಂಟರ ವಿವಿಧ 'ಸಾಂಸ್ಕೃತಿಕ ವೈಭವ' ಭಾನುವಾರ ಬ್ರಹ್ಮರಕೊಟ್ಲುವಿನ ಬಂಟರ ಭವನದಲ್ಲಿ ಮೇಳೈಸಿತು.

ಪ್ರಗತಿಪರ ಕೃಷಿಕರಾದ ನಿರಂಜನ್ ಸೇಮಿತ ಕುಂದಬೆಟ್ಟು ಅವರು ಸಾಂಸ್ಕೃತಿಕ ವೈಭವವನ್ನು ಉದ್ಘಾಟಿಸಿ ಶುಭ ಹಾರೈಸಿದರು. ಬಂಟರ ಸಂಘದ ಬಂಟವಾಳ ತಾಲೂಕು ಅಧ್ಯಕ್ಷರಾದ ಜಗನ್ನಾಥ ಚೌಟ ಬದಿಗುಡ್ಡೆ ಅವರ ಅಧ್ಯಕ್ಷತೆ ವಹಿಸಿದ್ದರು. ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಧ್ಯಾಹ್ನ ನಡೆದ ಸಭಾಕಾರ್ಯಕ್ರಮವನ್ನು ಪ್ರಧಾನ ಅತಿಥಿಯಾಗಿದ್ದ ಮುಂಬೈ ಶ್ರೀಪ್ಯಾಕ್ ಕಂಟೈನರ್ ಪ್ರೈ.ಲಿ.ನ ಮ್ಯಾನೇಜಿಂಗ್ ಡೈರೆಕ್ಟರ್ ಬಾಲಕೃಷ್ಣ ಎಂ. ರೈ ಅವರು ಹಿಂಗಾರ ಅರಳಿಸುವ ಮೂಲಕ ಉದ್ಘಾಟಿಸಿದರು.



ಬಂಟ ಸಮುದಾಯಕ್ಕೆ ಹೆಮ್ಮೆ

ಬಳಿಕ ಮಾತನಾಡಿದ ಅವರು, ಜೀವನದಲ್ಲಿ ನಂಬಿಕೆಯೇ ಬಂಡವಾಳವಾಗಿದೆಯಲ್ಲದೆ, ನಿರ್ದಿಷ್ಟ ಗುರಿಯನ್ನು ಹೊಂದಿರಬೇಕು. ಇದನ್ನು ಪರಿಶ್ರಮದ ಮೂಲಕ ಗೆದ್ದು ನಾವು ಬದುಕನ್ನು ಕಟ್ಟಿಕೊಳ್ಳಬೇಕು. ತನ್ನ ಶ್ರಮದ ಫಲವಾಗಿ ಸಂಸ್ಥೆಗೆ ರಾಷ್ಟ್ರಮಟ್ಟದ ಪ್ರಶಸ್ತಿ ದೊರೆತಿದ್ದು, ಇದು ಬಂಟ್ವಾಳ ತಾಲೂಕಿನ ಬಂಟ ಸಮುದಾಯಕ್ಕೆ ಸಂದ ಹೆಮ್ಮೆಯಾಗಿದೆ ಎಂದರು.

ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

ಶಿಕ್ಷಣಕ್ಕೆ ಸಂಘದ ಮೂಲಕ ಹೆಚ್ಚಿನ ಒತ್ತು ನೀಡಬೇಕು. ಮುಂದಿನ ವರ್ಷದಿಂದ ನಮ್ಮ ಸಂಸ್ಥೆಯ ವತಿಯಿಂದ ಸಮುದಾಯದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವುದಾಗಿ ಪ್ರಕಟಿಸಿದ ಅವರು, ಸಮುದಾಯದ ಮುಂದಿನ ಪೀಳಿಗೆಯ ಬೆಳವಣಿಗೆಗೆ ಸಂಘದಿಂದ ಹೆಚ್ಚು ಹೆಚ್ಚು ಪ್ರೋತ್ಸಾಹಿಸುವ ಕಾರ್ಯ ಆಗಬೇಕು ಎಂದರು.

ಬಹುಮಾನ ವಿತರಣೆ

ಬಂಟರ ಕಲಾಪಂಥ ಸ್ಪರ್ಧೆಯಲ್ಲಿ ತಾಲೂಕಿನ ವಿವಿಧ ವಲಯ ಬಂಟರ ಸಂಘಗಳು ಭಾಗವಹಿಸಿ ತಮ್ಮ ಕಲೆಯನ್ನು ಪ್ರದರ್ಶಿಸಿತ್ತು. ಬಂಟರ ಸಂಘ ಇರಾ ವಲಯ ಪ್ರಥಮ ಸ್ಥಾನವನ್ನು ಪಡೆದಿದ್ದರೆ, ಕಲ್ಲಡ್ಕ ವಲಯದ್ವಿತೀಯ ಹಾಗೂ ಮಾಣಿ ವಲಯ ತೃತೀಯ ಬಹುಮಾನ ಪಡೆದುಕೊಂಡಿದೆ.

ಮಂಗಳೂರು ತಾಲೂಕು ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಸುರೇಂದ್ರ ಬಿ. ಕಂಬಳಿ ಅಡ್ಯಾರ್ ಗುತ್ತು ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಕಾರ್ಯದರ್ಶಿ ಸದಾನಂದ ಆಳ್ವ ಕಂಪ, ಜತೆ ಕಾರ್ಯದರ್ಶಿ ಶಿವಪ್ರಸಾದ್ ಶೆಟ್ಟಿ ಸಜಿಪ, ಮಹಿಳಾ ವಿಭಾಗದ ಅಧ್ಯಕ್ಷೆ ಸುಜಾತ ಪಿ.ರೈ ಕಲ್ಲಡ್ಕ, ಯುವ ವಿಭಾಗದ ಅಧ್ಯಕ್ಷ ಗೋಕುಲ್ ಭಂಡಾರಿ ಬಿ.ಜಂದಾರುಗುತ್ತು, ಕಲೆ, ಸಾಂಸ್ಕೃತಿಕ ವಿಭಾಗದ ಸಂಚಾಲಕ ಗಣೇಶ್ ಶೆಟ್ಟಿ ಗೋಳ್ತಮಜಲು ಹಾಗೂ ತಾಲೂಕಿನ 15 ವಲಯಗಳ ಬಂಟರ ಸಂಘದ ಅಧ್ಯಕ್ಷರುಗಳು ವೇದಿಕೆಯಲ್ಲಿದ್ದರು.

ಬಂಟರ ಸಂಘಗಳಿಂದ ಸ್ಪರ್ಧೆ

ಸಂಘದ ಮಹಿಳಾ ವಿಭಾಗದಿಂದ ಇಬ್ಬರಿಗೆ ಸಹಾಯಧನ ವಿತರಿಸಲಾಯಿತು. ವಲಯ ಬಂಟರ ಸಂಘಗಳಿಂದ 'ಬಂಟರೆ ಕಲಾಪಂಥ' ಸ್ಪರ್ಧೆಯಲ್ಲಿ ಮಹಿಳಾ ವಿಭಾಗದಿಂದ 'ಅಳಿಯಕಟು' ಕಿರು ಪ್ರಹಸನ, ಯುವ ವಿಭಾಗದಿಂದ 'ಗುತ್ತುದ ಇಲ್' ಕಿರುಪ್ರಹಸನ ನಡೆಯಿತು.

ವಿಜೇತ ವಲಯ ಬಂಟರ ಸಂಘಕ್ಕೆ ಬಹುಮಾನವನ್ನು ವಿತರಿಸಲಾಯಿತು. ಬಂಟರ ಸಂಘದ ಬಂಟವಾಳ ತಾಲೂಕು ಅಧ್ಯಕ್ಷರಾದ ಜಗನ್ನಾಥ ಚೌಟ ಬದಿಗುಡ್ಡೆಅವರು ಅಧ್ಯಕ್ಷತೆವಹಿಸಿ ಪ್ರಸ್ತಾವನೆಗೈದರು. ಸಂಘದ ಉಪಾಧ್ಯಕ್ಷ ಐತಪ್ಪ ಆಳ್ವ ಸುಜೀರುಗುತ್ತು ಸ್ವಾಗತಿಸಿದರು. ಕೋಶಾಧಿಕಾರಿ ಲೋಕೇಶ್ ಶೆಟ್ಟಿಕುಳ ವಂದಿಸಿದರು. ಮಾಣಿ ಗ್ರಾ.ಪಂ. ಮಾಜಿ ಅಧ್ಯಕ್ಷ ಬಾಲಕೃಷ್ಣಶೆಟ್ಟಿ ಕೊಡಾಜೆ ನಿರೂಪಿಸಿದರು.

ಮರೋಳಿಯಲ್ಲಿ ಮಾಸಿಕ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ

ಸೇವೆ, ತ್ಯಾಗದಿಂದ ಸದೃಢ ಸಮಾಜ ನಿರ್ಮಾಣ

ಮರೋಳಿ: ಸೇವೆ ಮತ್ತು ತ್ಯಾಗದ ಪರಿಶ್ರಮದೊಂದಿಗೆ ಸದೃಢ ಸಮಾಜ ನಿರ್ಮಾಣವಾಗುತ್ತದೆ ಎಂದು ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ವಿಶ್ವ ಹಿಂದೂ ಪರಿಷದ್, ಬಜರಂಗದಳ ಸೇವಾ ವಿಭಾಗ ಮರೋಳಿ ಖಂಡ ಸಮಿತಿ ಹಾಗೂ ಎಜೆ ವೈದ್ಯಕೀಯ ಮಹಾ ವಿದ್ಯಾಲಯ ಆಸ್ಪತ್ರೆ ಮತ್ತು ಎಜೆ ರಕ್ತ ಕೇಂದ್ರ ಮಂಗಳೂರು ಸಂಯುಕ್ತ ಆಶ್ರಯದಲ್ಲಿ 25ನೇ ವರ್ಷಾಚರಣೆ, ವಿಶ್ವ ರಕ್ತ ದಾನಿಗಳ ದಿನದ ಪ್ರಯುಕ್ತ ಮಾಸಿಕ ಉಚಿತ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರ ವನ್ನು ಭಾನುವಾರ ಮರೋಳಿಯ ವಜ್ರಕಾಯ ರಂಗಮಂದಿರದಲ್ಲಿ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭ ವಿಹಿಂಪ, ಭಜರಂಗದಳ ಹಿಂದು ಸಮಾಜ, ಗೋವುಗಳನ್ನು ರಕ್ಷಣೆಯ ಮೂಲಕ ನಿಸ್ವಾರ್ಥವಾಗಿ ಸೇವೆ ಮಾಡುತ್ತಾ ಬೆಳೆದು ನಿಂತಿದೆ. ಕಾರ್ಯಕರ್ತರ ತ್ಯಾಗ, ಪರಿಶ್ರಮ ಇದರ ಹಿಂದಿದೆ ಎಂದು ಶ್ಲಾಘಿಸಿದರು.

ಮರೋಳಿ ಸೂರ್ಯನಾರಾಯಣ ದೇವಸ್ಥಾನ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಗಣೇಶ್ ಶೆಟ್ಟಿ ಜಪ್ಪುಗುಡ್ಡೆ ಗುತ್ತು ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಶಾಸಕ ವೇದವ್ಯಾಸ ಕಾಮತ್, ವಿಶ್ವ ಹಿಂದೂ ಪರಿಷದ್ ಕರ್ನಾಟಕ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪುವೆಲ್,



ಸನ್ಮಾನ

ವಿಶ್ವ ರಕ್ತ ದಾನಿಗಳ ದಿನದ ಪ್ರಯುಕ್ತ ದ. ಕ.ದ ಎಲ್ಲಾ ರಕ್ತ ಕೇಂದ್ರಗಳ ಟೆಕ್ನಿಕಲ್ ಇನ್‌ಚಾರ್ಜ್ ಗಳಾದ ಕೆಎಂಸಿ ರಕ್ತ ಕೇಂದ್ರದ ಭವಾನಿ ಶಂಕರ್, ಎಜೆ ರಕ್ತ ಕೇಂದ್ರದ ಗೋಪಾಲಕೃಷ್ಣ, ವೆನ್‌ಲಾಕ್ ರಕ್ತ ಕೇಂದ್ರದ ಆಂಟೋನಿ, ಯೆನಪೋಯ ರಕ್ತ ಕೇಂದ್ರದ ಅರ್ಪಿತ, ರೆಡ್ ಕ್ರಾಸ್ ರಕ್ತ ಕೇಂದ್ರದ ನಾಗಭೂಷಣ, ಕೆ.ಎಸ್ ಹೆಗ್ಡೆ ರಕ್ತ ಕೇಂದ್ರದ ಅನಿಲ್, ಫಾದರ್ ಮುಲ್ಲರ್ ರಕ್ತ ಕೇಂದ್ರದ ಜೋಯಲ್ ಹಾಗೂ ಶ್ರೀನಿವಾಸ್ ಆಸ್ಪತ್ರೆ ರಕ್ತ ಕೇಂದ್ರದ ಸವಿತಾ ಅವರನ್ನು ಸನ್ಮಾನಿಸಲಾಯಿತು.

ಪ್ರಾಂತಸಹಸೇವಾ ಪ್ರಮುಖ್ ಗೋಪಾಲ್ ಕುತ್ತಾರ್, ವಿಹಿಂಪ ಮಂಗಳೂರು ಉಪಾಧ್ಯಕ್ಷ ರವಿ ಕಾಪಿಕಾಡ್, ವಿಹಿಂಪ ನಾಗುರಿ ಪ್ರಖಂಡದ ಅಧ್ಯಕ್ಷ ಜಯಂತ್ ಜೆ. ಕೋಟ್ಯಾನ್, ಎಜೆ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ರಿಸರ್ಚ್ ಸೆಂಟರ್‌ನ ವೈಸ್‌ಡೀನ್ ಡಾ. ಸುಶಿತ್, ಎಜೆ ಆಸ್ಪತ್ರೆಯ ರಕ್ತ ಕೇಂದ್ರ ಅಧಿಕಾರಿ ಡಾ. ಅರವಿಂದ್ ಪಿ., ಸಮಾಜ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಪ್ರವೀಣ್ ಎಸ್. ದರ್ಬೆ, ಪ್ರಮುಖರಾದ ಲೋಕೇಶ್ ಬೋಳಾರ್,ದೀಪಕ್ ಮರೋಳಿ, ವಿಠಲ್ ಶೆಣೈ, ವಿಜಯ ಭಂಡಾರಿ, ನರಸಿಂಹ ತಾತಾವು, ರಾಮ ಸನಿಲ್, ಪ್ರಕಾಶ್ ತಾತಾವು, ಜಗದೀಶ ಶೆಣೈ, ಕಿರಣ್ ಮರೋಳಿ, ಅರುಣ್ ಶೆಟ್ಟಿ ಮಾಲತಿ ಶೆಟ್ಟಿ ಅನಿಲ್ ಕೆ. ಕೆಂಬಾರ್, ಚಂದ್ರಹಾಸ್ ಕುಲಾಲ್, ಪ್ರವೀಣ್ ನಿಡ್ಡೆಲ್, ಲತಾ ದೇವಾಡಿಗ, ಸುಶ್ಮಿತಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ದೀಪಕ್ ಮರೋಳಿ ಸ್ವಾಗತಿಸಿದರು. ದೀಪಕ್ ಅಡ್ಯಾರ್ ನಿರೂಪಿಸಿದರು.

ಗುರುಪುರ ಬಂಡಸಾಲೆಯಲ್ಲಿ ಬಸ್ ತಂಗುದಾಣದ ಲೋಕಾರ್ಪಣೆ

ಯುವಕರ ಸಮಾಜಮುಖಿ ಕೆಲಸಕ್ಕೆ ಶ್ಲಾಘನೆ

ಕೈಕಂಬ: ಮಂಗಳೂರು-ಮೂಡಬಿದ್ರಿ ರಾಷ್ಟ್ರೀಯ ಹೆದ್ದಾರಿಯ ಗುರುಪುರ ಬಂಡಸಾಲೆಯಲ್ಲಿ 'ವಿ2 ಗೈಸ್' ಸಂಘಟನೆಯು ದಾನಿಗಳ ನೆರವಿನಿಂದ, ಸುಮಾರು 7 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ವಿಭಿನ್ನ ಶೈಲಿಯ 'ಬಸ್ಸು' ಮಾದರಿಯ ಪ್ರಯಾಣಿಕರ ತಂಗುದಾಣ ಭಾನುವಾರ ಲೋಕಾರ್ಪಣೆಗೊಂಡಿತು.

ಗುರುಪುರ ವಜ್ರದೇಹಿ ಮಠದ ಶ್ರೀ ರಾಜಶೇಖರಾನಂದ ಶ್ರೀಪಾದರು, 'ಬಸ್' ಮಾದರಿಯಲ್ಲಿ ನಿರ್ಮಿಸಲಾದ ತಂಗುದಾಣ ಉದ್ಘಾಟಿಸಿ ಮಾತನಾಡಿ, ಗುರುಪುರದ ಬಂಡಸಾಲೆಗೆ ಬ್ರಿಟಿಷ್ ಮತ್ತು ಪೋರ್ಚುಗೀಸರ ಆಳ್ವಿಕೆ ಕಾಲದ ಇತಿಹಾಸವಿದೆ. ಬಂಡಸಾಲೆಗೆ ಹತ್ತಿರದ ಫಲ್ಗುಣಿ ನದಿ ತಟದಿಂದ ಮಳಲಿಗೆ ಅಬ್ಬಕ್ಕ ರಾಣಿ ಆಡಳಿತಕ್ಕೆ ಸಂಬಂಧಿಸಿದ ವ್ಯಾಪಾರ-ವಹಿವಾಟು ನಡೆಯುತ್ತಿತ್ತು. ಇತಿಹಾಸ ಪ್ರಸಿದ್ಧ ಬಂಡಸಾಲೆಯಲ್ಲಿ ಇಂದು ಕಂಡು ಕೇಳರಿಯದ ಮತ್ತು ಬಸ್ ನಿಲ್ದಾಣಕ್ಕೆ ಅನ್ವರ್ಥದ 'ಬಸ್ ತಂಗುದಾಣ' ನಿರ್ಮಾಣವಾಗಿದೆ. ಇದರ ಹಿಂದೆ 'ವಿ2 ಗೈಸ್' ಶ್ರಮವಿದೆ ಎಂದರು.

ಮಂಗಳೂರು ಉತ್ತರ ಶಾಸಕ ಡಾ. ಭರತ್ ಶೆಟ್ಟಿ ಮಾತನಾಡಿ, ಇದೊಂದು ವಿನೂತನ ವಿನ್ಯಾಸದ ಬಸ್ ತಂಗುದಾಣ. ಇದರೊಳಗೆ ಕುಡಿಯುವ ನೀರಿನ ವ್ಯವಸ್ಥೆ, ಸಿಸಿ ಕ್ಯಾಮರಾ, ಬಸ್‌ನಂತೆ ಆಸನ, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಮತ್ತಿತರ ಅಗತ್ಯ ಸೇವೆಗಳು ಒಳಗೊಂಡಿವೆ. ಯುವಕರ ತಂಡವೊಂದರ ನೈಜ ಸಮಾಜಮುಖಿ ಕೆಲಸ ಇದಾಗಿದೆ. ಇಂತಹ ಯುವ ಶಕ್ತಿ ದೇಶಕ್ಕೆ ಆಸ್ತಿ ಎಂದರು.



- ವಜ್ರದೇಹಿ ಶ್ರೀ , ಶಾಸಕ ಡಾ. ಭರತ್ ಶೆಟ್ಟಿ ಸಹಿತ ಗಣ್ಯರಿಂದ ಲೋಕಾರ್ಪಣೆ
- 'ವಿ2 ಗೈಸ್' ಸಂಘಟನೆ, ದಾನಿಗಳ ನೆರವಿನಿಂದ ತಂಗುದಾಣ ನಿರ್ಮಾಣ
- ವಿನೂತನ ವಿನ್ಯಾಸದ 'ಬಸ್ಸು' ಮಾದರಿಯಲ್ಲಿ ನಿರ್ಮಾಣ
- ಇಲ್ಲಿದೆ ಕುಡಿಯುವ ನೀರಿನ ವ್ಯವಸ್ಥೆ, ಸಿಸಿ ಕ್ಯಾಮರಾ, ಬಸ್‌ನಂತೆ ಆಸನ, ಪ್ರಥಮ ಚಿಕಿತ್ಸೆ ಪೆಟ್ಟಿಗೆಗಳು
- ಯುವಕರ ತಂಡದ ಪರಿಶ್ರಮಕ್ಕೆ ಸಿಕ್ಕ ಪ್ರತಿಫಲ

ಸಮಾರಂಭದಲ್ಲಿ ಗುರುಪುರ ಕೆನರಾ ಬ್ಯಾಂಕ್ ಶಾಖೆಯ ಪ್ರಬಂಧಕ ಲೋಕನಾಥ, ಉದ್ಯಮಿ ನಿಟ್ಟೆಗುತ್ತು ರವಿರಾಜ ಶೆಟ್ಟಿ, ಬಿಜೆಪಿ ಪ್ರಮುಖರಾದ ರಾಜೇಶ್ ಕೊಟ್ಟಾರಿ, ದೇವಪ್ಪ ಪೂಜಾರಿ, ಸಚಿನ್ ಅಡಪ, ಸುನಿಲ್ ಗುರುಪುರ, ಬಜಪೆ ಪೊಲೀಸ್ ಠಾಣೆಯ ಎಎಸ್‌ಐ ಕಾಂತಿನಾಥ್, ಪ್ರಮುಖರಾದ ಜಯರಾಮ ಭಂಡಾರಿ ಗುರುಪುರ, ಉದ್ಯಮಿ ರೊನಾಲ್ಡ್ ಫೆರ್ನಾಂಡಿಸ್ ಪೆರ್ಮುದೆ ಮತ್ತಿತರು ಇದ್ದರು.

ವಿ2 ಗೈಸ್‌ನ ಭರತ್ ಪ್ರಾಸ್ತಾವಿಕ ಮಾತನ್ನಾಡಿದರು. ಬಸ್ ತಂಗುದಾಣ ನಿರ್ಮಿಸಲು ಸಹಕರಿಸಿದವರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ವಿಜೆ ಮಧುರಾಜ್ ಗುರುಪುರ ನಿರೂಪಿಸಿದರು.

ಸುಳ್ಯ ನ್ಯಾಯಾಲಯದ ಹೊಸ ಕಟ್ಟಡ ನಿರ್ಮಾಣಕ್ಕೆ ವಕೀಲರ ಸಂಘದಿಂದ ಮನವಿ



ಸುಳ್ಯ: ಬೆಳ್ತಂಗಡಿ ನ್ಯಾಯಾಲಯ ಕಾರ್ಯಕ್ರಮಕ್ಕೆ ಆಗಮಿಸಿದ ಕರ್ನಾಟಕ ಹೈಕೋರ್ಟ್ ಆಡಳಿತಾತ್ಮಕ ನ್ಯಾಯಾಧೀಶ ನರೇಂದ್ರ ಪ್ರಸಾದ್ ಅವರಿಗೆ ಸುಳ್ಯ ನ್ಯಾಯಾಲಯದ ಹೊಸ ಕಟ್ಟಡ ರಚನೆಗಾಗಿ ವಕೀಲರ ಸಂಘದಿಂದ ಮನವಿಗಳನ್ನು ಸಲ್ಲಿಸಲಾಯಿತು.

ಕಟ್ಟಡ ರಚನೆಗಾಗಿ ಈಗಾಗಲೇ ನೀಲ ನಕ್ಷೆ ತಯಾರಾಗಿದ್ದು ಹಲವು ಬಾರಿ ಮನವಿ ಸಲ್ಲಿಸಿದ್ದರೂ, ಸರಕಾರದಿಂದ ಹೊಸ ನ್ಯಾಯಾಲಯ ಕಟ್ಟಡಕ್ಕೆ ಹಣ ಮಂಜೂರಾತಿಯಾಗಿಲ್ಲ. 16 ಕೋಟಿ ಅಂದಾಜು ಪಟ್ಟಿ ತಯಾರಿಸಲಾಗಿದೆ. ಈ ಕುರಿತು ತಾವು ಸೂಕ್ತ ಕ್ರಮ ಕೈಗೊಂಡು ಸರಕಾರದಿಂದ ಹಣ ಮಂಜೂರಾತಿ ಮತ್ತು ಬಿಡುಗಡೆ ಮಾಡಿಸಬೇಕಾಗಿ ವಿನಂತಿಸಿದರು.

ಇನ್ನೊಂದು ಮನವಿಯಲ್ಲಿ ಕಡಬ ತಾಲೂಕಿನಲ್ಲಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ಇಟನರಿ ನ್ಯಾಯಾಲಯ ಆರಂಭಗೊಂಡಿದೆ. ಪ್ರಸ್ತುತ ಸುಳ್ಯ ತಾಲೂಕಿನ ಏಳು ಗ್ರಾಮಗಳ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಕಡಬ ಇಟನರಿ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿದೆ. ಕಡಬ ನ್ಯಾಯಾಲಯದ ಮೇಲ್ಮನವಿ ಪ್ರಕರಣಗಳ ವ್ಯಾಪ್ತಿಯನ್ನು ಸುಳ್ಯ ಹಿರಿಯ ವಿಭಾಗದ ನ್ಯಾಯಾಲಯಕ್ಕೆ ವಿಸ್ತರಿಸಿದಲ್ಲಿ ಗ್ರಾಮೀಣ ಕಕ್ಷಿದಾರರಿಗೆ ಹಾಗೂ ನ್ಯಾಯವಾದಿಗಳಿಗೆ ಅನುಕೂಲವಾಗುವುದು. ಆದ್ದರಿಂದ ಕಡಬ ಇಟನರಿ ನ್ಯಾಯಾಲಯದ ಮೇಲ್ಮನವಿ ಪ್ರಕರಣಗಳನ್ನು ಸುಳ್ಯ ಹಿರಿಯ ಶ್ರೇಣಿ ನ್ಯಾಯಾಲಯದ ವ್ಯಾಪ್ತಿಗೆ ವಿಸ್ತರಿಸಿ ಆದೇಶ ಮಾಡಬೇಕಾಗಿ ಮನವಿಮಾಡಿದರು.

ನಿಯೋಗದಲ್ಲಿ ಸುಳ್ಯ ವಕೀಲರ ಸಂಘದ ಅಧ್ಯಕ್ಷ ಸುಕುಮಾರ್ ಕೋಡ್ತುಗುಳಿ, ಮಾಜಿ ಅಧ್ಯಕ್ಷ ಭಾಸ್ಕರ್ ರಾವ್, ಮಾಜಿ ಪ್ರಧಾನ ಕಾರ್ಯದರ್ಶಿ ಹರೀಶ್ ಬೂಡುಪನ್ನೆ ಇದ್ದರು.

ಕಡಬದ ಅಂಗಡಿಮನೆ ಕಾಲನಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕುರಿತು ಮಾಹಿತಿ



ಕಡಬ: ನಗರಾಭಿವೃದ್ಧಿ ಇಲಾಖೆ ಹಾಗೂ ಸ್ವಚ್ಛ ಭಾರತ್ ಮಿಷನ್ (ನಗರ) ನ ವತಿಯಿಂದ ಕಡಬ ಪಟ್ಟಣ ಪಂಚಾಯತ್ ನೇತೃತ್ವದಲ್ಲಿ ಕಡಬ ಪೇಟೆಯ ಅಂಗಡಿ ಮನೆ ಕಾಲನಿಯಲ್ಲಿ ಘನತ್ಯಾಜ್ಯ ನಿರ್ವಹಣಾ ನಿಯಮಗಳ ಕುರಿತು ಮಾಹಿತಿ ಕಾರ್ಯಕ್ರಮ ಜರಗಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಪ. ಪಂ. ಮುಖ್ಯಾಧಿಕಾರಿ ಲೀಲಾವತಿ ಇ., ಪರಿಸರದ ಸ್ವಚ್ಛತೆ ಎನ್ನುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ನಮ್ಮ ಆರೋಗ್ಯ ರಕ್ಷಣೆಯ ಜೊತೆಗೆ ನಗರ ಮತ್ತು ನಮ್ಮ ಮನೆಯ ಪರಿಸರದ ಸೌಂದರ್ಯವನ್ನು ಕಾಪಾಡಿಕೊಳ್ಳಲು ನಾವು ಸ್ವಚ್ಛತೆಯ ಕುರಿತು ವಿಶೇಷ ಗಮನಹರಿಸಬೇಕು ಎಂದು ಹೇಳಿದರು.

ಕಮ್ಯೂನಿಟಿ ಮೊಬಿಲೈಸರ್ ಭಾರತಿ ಕೋಲ್ಪೆ ಮಾತನಾಡಿ, ತ್ಯಾಜ್ಯ ಸಂಗ್ರಹಣೆಯ ಹೊಸ ಪದ್ಧತಿಯಲ್ಲಿ 3 ಬಿನ್‌ಗಳ ಬದಲು 4 ಬಿನ್‌ಗಳನ್ನು ಬಳಸಬೇಕಿದೆ. ಹಸಿಕಸ (ತರಕಾರಿ ಮತ್ತು ಹಣ್ಣುಗಳ ಸಿಪ್ಪೆಗಳು, ಹೂವುಗಳು,ಟೀ, ಕಾಫಿ ಪುಡಿ ಇತ್ಯಾದಿ), ಒಣ ತ್ಯಾಜ್ಯ (ಪ್ಲಾಸ್ಟಿಕ್ ವಸ್ತುಗಳು, ಕಾಗದ ಮತ್ತು ರಟ್ಟಿನ ಬಾಕ್ಸ್‌ಗಳು, ಗಾಜಿನ ಬಾಟಲಿಗಳು, ಬಟ್ಟೆ ಮತ್ತು ರಬ್ಬರ್), ಸ್ಯಾನಿಟರಿ ಕಸ (ಬಳಸಿದ ಸ್ಯಾನಿಟರಿ ಟವಲ್‌ಗಳು, ಪ್ಯಾಡ್‌ಗಳು) ಹಾಗೂ ವಿಶೇಷ ಕಾಳಜಿ ಕಸ (ಬಣ್ಣದ ಡಬ್ಬ, ಕೀಟನಾಶಕ ಬಾಟಲಿಗಳು, ಬಲ್ಬುಗಳು, ಹಳೆಯ ಬ್ಯಾಟರಿ, ಔಷಧಿಗಳು) ಎಂದು ವಿಂಗಡಿಸಿ ತ್ಯಾಜ್ಯ ಸಂಗ್ರಹಿಸಲು ಬರುವ ಪೌರ ಕಾರ್ಮಿಕರಿಗೆ ನೀಡಬೇಕು. ಈ ಮೂಲಕ ನಮ್ಮ ಪರಿಸರ ಶುಚಿಯಾಗಿರಲು ಸಾಧ್ಯ ಎಂದರು. ಪ. ಪಂ. ಸದಸ್ಯರಾದ ಕೃಷ್ಣಪ್ಪ ನ್ಯಾಕ್, ಕುಸುಮ ಅಂಗಡಿಮನೆ, ಅಕ್ಷತಾ ಬಾಲ ಕೃಷ್ಣ ಸಿಬ್ಬಂದಿ ಕೀರ್ತನ್, ಕಮ್ಯೂನಿಟಿ ಮೊಬಿಲೈಸರ್ ಚೈತ್ರಾ, ಪೌರಕಾರ್ಮಿಕರು, ಅಂಗಡಿಮನೆ ನಿವಾಸಿಗಳು ಉಪಸ್ಥಿತರಿದ್ದರು.

ಪುಂಜಾಲಕಟ್ಟೆಯಲ್ಲಿ ಯಕ್ಷಗಾನ ಬಣ್ಣಗಾರಿಕೆ ತರಬೇತಿ ಶಿಬಿರಕ್ಕೆ ಚಾಲನೆ



ಬಂಟ್ವಾಳ: ಯಕ್ಷಧ್ರುವ ಪಟ್ಲ ಫೌಂಡೇಶನ್ ಇದರ ಪುಂಜಾಲಕಟ್ಟೆ ಘಟಕ ಹಾಗೂ ಶ್ರುತಿ ಆರ್ಟ್ಸ್ ಕಾವಳಕಟ್ಟೆ ಇದರ ಆಶ್ರಯದಲ್ಲಿ ಯಕ್ಷಗಾನ ಬಣ್ಣಗಾರಿಕೆ ತರಬೇತಿ ಶಿಬಿರಕ್ಕೆ ಭಾನುವಾರ ಪುಂಜಾಲಕಟ್ಟೆ ಶ್ರೀ ಮುರುಘೇಂದ್ರ ಮಿತ್ರ ಮಂಡಳಿಯ ಸಭಾಂಗಣದಲ್ಲಿ ಚಾಲನೆ ನೀಡಲಾಯಿತು.

ಪಟ್ಲ ಫೌಂಡೇಶನ್ ಪುಂಜಾಲಕಟ್ಟೆ ಘಟಕದ ಉಪಾಧ್ಯಕ್ಷ, ಹಿರಿಯ ಯಕ್ಷಗಾನ ಕಲಾವಿದ ದಿವಾಕರ ದಾಸ್ ಕಾವಳಕಟ್ಟೆ , ಶಿಬಿರವನ್ನು ಉದ್ಘಾಟಿಸಿ, ಶುಭ ಹಾರೈಸಿದರು.

ಘಟಕದ ಅಧ್ಯಕ್ಷ ಹರೀಂದ್ರ ಟಿ.ಪೈ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ಪುರುಷೋತ್ತಮ ಪೂಜಾರಿ ಬುಳೆಕ್ಕಿನ ಕೋಡಿ, ಸಂಚಾಲಕ ರಮೇಶ್ ಶೆಟ್ಟಿ ಮಜಲೋಡಿ, ಶ್ರೀ ಮುರುಘೇಂದ್ರ ಮಿತ್ರ ಮಂಡಳಿಯ ಅಧ್ಯಕ್ಷ ಚಂದ್ರಶೇಖರ್ ಶೆಟ್ಟಿಗಾರ್, ಮಹಿಳಾ ಘಟಕದ ಗೌರವಾಧ್ಯಕ್ಷೆ ಉಮಾ ಡಿ. ಗೌಡ, ಅಧ್ಯಕ್ಷೆ ಶಶಿಕಲಾ ಗೋಪಾಲ ಪೂಜಾರಿ, ಯಕ್ಷಗುರು ಸಾಯಿಸುಮಾ ನಾವಡ ಕಾರಿಂಜ, ಪದಾಧಿಕಾರಿಗಳಾದ ಶೋಭಾ ಶೆಟ್ಟಿ, ಚಂದ್ರಶೇಖರ ಶೆಟ್ಟಿ ವಿನೋದ್, ಸುರೇಶ ಶೆಟ್ಟಿ ಮಜಲೋಡಿ, ಅಜಿತ್ ಶೆಟ್ಟಿ ಕಾರಿಂಜ ಪ್ರ. ಕಾರ್ಯದರ್ಶಿ ಸತೀಶ್ ಆಚಾರ್ಯ ಬರ್ಕಳ ಮತ್ತಿತರರು ಉಪಸ್ಥಿತರಿದ್ದರು.

ಯಕ್ಷಗಾನ ಕಲಾವಿದರಾದ ದಿವಾಕರ ದಾಸ್, ಪ್ರಭಾಕರ ಶೆಟ್ಟಿ ತೆಂಕಕಾರಂದೂರು, ಶಶಿಧರ ಬಾಚ ಕೆರೆ, ಸಾಯಿಸುಮಾ ನಾವಡ ಅವರು ತರಬೇತಿ ನೀಡಿದರು. ವಿನಯಾ ಪ್ರಾರ್ಥಿಸಿದರು. ರತ್ನದೇವ್ ಪುಂಜಾಲಕಟ್ಟೆ ಸ್ವಾಗತಿಸಿ, ನಿರೂಪಿಸಿದರು.

ಪುತ್ತೂರಿನಲ್ಲಿ ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ವಾರ್ಷಿಕ ಪ್ರಶಸ್ತಿ ಪ್ರದಾನ, ಮಹಾಸಭೆ | ಹಿರಿಯರಿಗೆ ಗೌರವ

ನಿವೃತ್ತಿ ಕೇವಲ ಕೆಲಸದಿಂದ ಹೊರತು ಪ್ರವೃತ್ತಿಯಿಂದಲ್ಲ: ಶಿವಾನಂದ ಆಚಾರ್ಯ

ಪುತ್ತೂರು: ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ವಾರ್ಷಿಕ ಪ್ರಶಸ್ತಿ ಪ್ರದಾನ ಮತ್ತು ಸಂಘದ ಮಹಾಸಭೆಯು ಪುತ್ತೂರು ಬೈಪಾಸ್ ರಸ್ತೆಯ ಜೈನ ಭವನದಲ್ಲಿ ನಡೆಯಿತು. ಸಂಘದ ಸದಸ್ಯ ಎ.ವಿ.ನಾರಾಯಣ ಅವರು ಕಾರ್ಯಕ್ರಮ ಉದ್ಘಾಟಿಸಿದರು. ನಿವೃತ್ತ ಪ್ರಾಂಶುಪಾಲ ಬಿ.ವಿ. ಸೂರ್ಯನಾರಾಯಣಪ್ರಶಸ್ತಿಪುರಸ್ಕೃತಡಾ. ಯು.ಪಿ.ಶಿವಾನಂದ ಅವರ ಕುರಿತು ಅಭಿನಂದನಾ ಭಾಷಣ ಮಾಡಿದರು.

ಮುಖ್ಯ ಅತಿಥಿ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಶಿವಾನಂದ ಆಚಾರ್ಯ ಮಾತನಾಡಿ, ಇಲಾಖೆಯಲ್ಲಿ ನಿವೃತ್ತರಾಗುವುದು ಸಹಜ. ಯಾಕೆಂದರೆ ಯುವ ಸಮೂಹದ ಅವಕಾಶಕ್ಕಾಗಿ ನಿವೃತ್ತಿ ಅನಿವಾರ್ಯ. ಆದರೆ ಕೇವಲ ಕೆಲಸದಿಂದ ಹೊರತು ಪ್ರವೃತ್ತಿಗಲ್ಲ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಪುತ್ತೂರು ತಾಲೂಕು ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಮಾತನಾಡಿದರು. ಮಹಿಳಾ ಯಕ್ಷಗಾನ ಕ್ಷೇತ್ರದ ಸಾಧಕಿ ಪ್ರೇಮಾ ಕಿಶೋರ್ ಶುಭಹಾರೈಸಿದರು. ಸಂಘದ ಅಧ್ಯಕ್ಷ ಬಿ.ಐತ್ತಪ್ಪನಾಯ್ಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.



ಸ್ವರ್ಣ ಸಾಧನ ಪ್ರಶಸ್ತಿ, ಸಾಧಕರಿಗೆ ಸನ್ಮಾನ

ಸಾಮಾಜಿಕ ಮತ್ತು ಪತ್ರಿಕೋದ್ಯಮ ಸಾಧನೆಯನ್ನು ಪರಿಗಣಿಸಿ ಡಾ. ಯು.ಪಿ.ಶಿವಾನಂದ ಅವರಿಗೆ ಸ್ವರ್ಣ ಸಾಧನಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಧಕ ಪುತ್ತೂರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಉಮೇಶ್ ನಾಯಕ್, ಯಕ್ಷಗಾನ ಕ್ಷೇತ್ರದ ಸಾಧಕಿ ಪ್ರೇಮಾ ಕಿಶೋರ್ ಅವರಿಗೆ ಸಾಧಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಾಗಪ್ಪ ಗೌಡ ಬೊಮ್ಮೆಟ್ಟಿ ಪ್ರೊ. ವತ್ಸಲರಾಜ್ಞಿ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸಿದರು. ಪ್ರೊ. ಡಿ.ಎಸ್. ಭಟ್ ಗೌರವಿಸಿದರು.

ಕ್ರೀಡಾ ಸಾಧಕರಾದ ಪುತ್ತೂರು ತೆಂಕಿಲ ವಿವೇಕಾನಂದ ಶಾಲೆಯ ವಿದ್ಯಾರ್ಥಿನಿ ಕೀರ್ತಿ, ಉಪ್ಪಿನಂಗಡಿ ಇಂದ್ರಪ್ರಸ್ಥ ಶಾಲೆಯ ವಿದ್ಯಾರ್ಥಿನಿ ಶಮಿಕಾ, ವೈದ್ಯರತ್ನ ಸಾಹಿತ್ಯ ರತ್ನ ಪ್ರಶಸ್ತಿ ಪುರಸ್ಕೃತರಾದ ಕಾರ್ಯಕಾರಿ ಸಮಿತಿ ಸದಸ್ಯರಾಗಿರುವ ಐತ್ತಪ್ಪ ನಾಯ್ಕ್ ಗುಂಪೆ, ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಶನ್ ನಿಂದ ನಡೆದ ಕ್ರೀಡಾಕೂಟದಲ್ಲಿ ಬಹುಮಾನ ಪಡೆದ ಸಂಘದ ಸದಸ್ಯರಾದ ವಿಶ್ವೇಶ್ವ ಪಿ. ಮತ್ತು ವೇದಾವತಿ ಅವರನ್ನು ಗೌರವಿಸಲಾಯಿತು. ವೇದಾವತಿ, ತಿರುಮಲೇಶ್ವರ ಭಟ್ ಮತ್ತು ಸದಾಶಿವ ಅವರು ಸನ್ಮಾನಿತರ ಪರಿಚಯ ಮಾಡಿದರು. ಸಂಘದ ಶಾಶ್ವತ ನಿಧಿಗೆ ರೂ. 25 ಸಾವಿರದಂತೆ ದೇಣಿಗೆ ನೀಡಿದ ಸಂಘದ ಸದಸ್ಯರಾಗಿರುವ ನಿವೃತ್ತ ಉಪನ್ಯಾಸಕ ಶಾಮರಾವ್ ಎಸ್., ಸಮಾಜ ಕಲ್ಯಾಣ ಇಲಾಖೆಯ ನಿವೃತ್ತ ನೌಕರ ಭಾನುಮತಿ, ನಿವೃತ್ತ ಪ್ರಾಧ್ಯಾಪಕ ಸಾಹಿತಿ ಪ್ರೊ. ಹರಿನಾರಾಯಣ ಮಾಡಾವು ಅವರನ್ನು ಗೌರವಿಸಲಾಯಿತು.

90 ವರ್ಷ ಪ್ರಾಯ ದಾಟಿದ 12 ಜನ ಹಿರಿಯ ಸದಸ್ಯರಿಗೆ, 85 ವರ್ಷ ಪೂರ್ಣಗೊಂಡ 12 ಮಂದಿ ಸದಸ್ಯರಿಗೆ, 80 ವರ್ಷ ಪೂರ್ಣಗೊಂಡ 13 ಜನ ಸದಸ್ಯರಿಗೆ ಹಾಗೂ 75 ವರ್ಷ ಪೂರ್ಣಗೊಳಿಸಿದ 27 ಮಂದಿ ಸದಸ್ಯರನ್ನು ಗೌರವಿಸಲಾಯಿತು. ಮಹಮ್ಮದ್ ಆಲಿ, ಶಂಕರಿ, ಯಶೋಧ, ಶಶಿಕಲಾ, ಸುಶೀಲಾ ಕುಮಾರಿ ಸನ್ಮಾನ ಕಾರ್ಯಕ್ರಮ ನಿರ್ವಹಿಸಿದರು. ಸಂಘದ ಅಧ್ಯಕ್ಷ ಬಿ.ಐತ್ತಪ್ಪ ನಾಯ್ಕ್ ಅವರನ್ನೂ ಸನ್ಮಾನಿಸಲಾಯಿತು.

ಹಿರಿಯ ಸಾಹಿತಿ ಪ್ರೊ. ವಿ.ಬಿ.ಅರ್ತಿಕಜೆ, ಡಾ. ಪೀಟರ್ ವಿಲ್ಸನ್ ಪ್ರಭಾಕರ್, ನಿವೃತ್ತ ಉಪವಲಯ ಅರಣ್ಯಾಧಿಕಾರಿ ಕೃಷ್ಣಪ್ಪ ಕೆ., ಸುಂದರ ನಾಯ್ಕ್, ಪ್ರೊ. ವಿ.ಬಿ.ಭಟ್, ಸಂಘಟನಾ ಕಾರ್ಯದರ್ಶಿ ಜಗನ್ನಾಥ ರೈ, ಸಂಘದ ಉಪಾಧ್ಯಕ್ಷೆ ಪ್ರೊ. ವತ್ಸಲರಾಜ್ಞಿ, ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಹರಿಣಾಕ್ಷ, ಸರೋಜಿನಿ, ಎಮ್. ಎನ್.ಚೆಟ್ಟಿಯಾರ್ ಅತಿಥಿಗಳಿಗೆ ಪುಸ್ತಕ ಸ್ಮರಣಿಕೆ ನೀಡಿ ಗೌರವಿಸಿದರು. ಸಂಘದ ಮಾಜಿ ಅಧ್ಯಕ್ಷ ಕಾಂಚನ ಸುಂದರ ಭಟ್ ಉಪಸ್ಥಿತರಿದ್ದರು. ಪ್ರೊ. ದತ್ತಾತ್ರೆಯ ರಾವ್ ಪ್ರಾರ್ಥಿಸಿದರು. ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷ ಝೇವಿಯರ್ ಡಿಸೋಜ ಸ್ವಾಗತಿಸಿ, ಸಂಘಟನಾ ಕಾರ್ಯದರ್ಶಿ ಜಗನ್ನಾಥ ರೈ ವಂದಿಸಿದರು. ಕಾರ್ಯದರ್ಶಿ ತಿರುಮಲೇಶ್ವರ ಭಟ್ ಕಾರ್ಯಕ್ರಮ ನಿರ್ವಹಿಸಿದರು. ಸಮಾರಂಭದ ಕೊನೆಯಲ್ಲಿ ಅದೃಷ್ಟ ಚೀಟಿಯ ಡ್ರಾ ನಡೆಸಲಾಯಿತು. ಬಳಿಕ ಸಂಘದ ಮಹಾಸಭೆ ನಡೆಯಿತು.

ಸುತ್ತಮುತ್ತ

ಅಸ್ವಸ್ಥಗೊಂಡಿದ್ದ ವ್ಯಕ್ತಿಗೆ ಪೊಲೀಸ್ ಸಿಬ್ಬಂದಿ ನೆರವು

ಬಂಟ್ವಾಳ: ರಾತ್ರಿ ವೇಳೆ ತೀವ್ರ ಎದೆನೋವು ಹಾಗೂ ಹೊಟ್ಟೆನೋವು ಕಾಣಿಸಿಕೊಂಡು ಅಸ್ವಸ್ಥಗೊಂಡಿದ್ದ ವ್ಯಕ್ತಿಯನ್ನು ರಾತ್ರಿ ಗಸ್ತಿನಲ್ಲಿದ್ದ ಪೊಲೀಸ್ ಸಿಬ್ಬಂದಿ ನೆರವು ಒದಗಿಸಿ ಜೀವ ಉಳಿಸಿದ ಘಟನೆ ಬಿ.ಸಿ.ರೋಡಿನ ಗೂಡಿನ ಬಳಿಯಲ್ಲಿ ಗುರುವಾರ ರಾತ್ರಿ ನಡೆದಿದೆ. ಗೂಡಿನಬಳಿ ನಿವಾಸಿ ಅಶ್ರಫ್ ಅವರಿಗೆ ತೀವ್ರ ಎದೆನೋವು ಹಾಗೂ ಹೊಟ್ಟೆನೋವು ಕಾಣಿಸಿಕೊಂಡು ಅಸ್ವಸ್ಥತೆ ಉಂಟಾಗಿತ್ತು. ಈ ಸಂದರ್ಭ ಅವರ ಮನೆಯೊಳಗಿನಿಂದ ಜೋರಾಗಿ ಬಾಗಿಲು ಬಡಿಯುವ ಹಾಗೂ ಆಕ್ರಂದನದ ಶಬ್ದ ಕೇಳಿಬಂದ ಹಿನ್ನೆಲೆಯಲ್ಲಿ ಗಸ್ತು ತಿರುಗುತ್ತಿದ್ದ ಬಂಟ್ವಾಳ ನಗರ ಠಾಣೆಯ ನೈಟ್ ಬೀಟ್ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಧಾವಿಸಿದರು. ಸ್ಥಳಕ್ಕೆ ತಲುಪಿದಾಗ ಅಶ್ರಫ್ ಅವರಿಗೆ ಲಘು ಹೃದಯಾಘಾತ ಸಂಭವಿಸಿರುವುದು ಗಮನಕ್ಕೆ ಬಂದಿದ್ದು ಪರಿಸ್ಥಿತಿಯ ಗಂಭೀರತೆ ಅರಿತ ಬಂಟ್ವಾಳ ನಗರ ಠಾಣೆಯ ಕಾನ್ಸ್‌ಟೇಬಲ್ ವಿನೋದ್ ಹಾಗೂ ಗೃಹರಕ್ಷಕ ದಳದ ಸಿಬ್ಬಂದಿ ಜಯಗಣೇಶ್ ಕೂಡಲೇ ಪ್ರಥಮ ಚಿಕಿತ್ಸೆ ನೀಡಿ ಸಿಪಿಆರ್ ನೆರವು ಒದಗಿಸಿದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು.

ಕೆಮ್ಮ್ರಾಲ್ ಪಂಚಾಯತ್: ಕ್ಷಯ ತಪಾಸಣಾ ಶಿಬಿರ

ಕಿನ್ನಿಗೋಳಿ: ಕೆಮ್ರಾಲ್ ಅತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಕೆಮ್ರಾಲ್ ಗ್ರಾಮ ಪಂಚಾಯತ್ ಸಹಯೋಗದಲ್ಲಿ 'ಟಿಬಿ ಮುಕ್ತ ಭಾರತ್'' ಅಭಿಯಾನ ದಡಿಯಲ್ಲಿ ಉಚಿತ ಕ್ಷಯ ತಪಾಸಣಾ ಶಿಬಿರ ಕೆಮ್ರಾಲ್ ಪಂಚಾಯತ್ ಸಮುದಾಯ ಭವನದಲ್ಲಿ ನಡೆಯಿತು. ಪಂಚಾಯತ್ ಮಾಜಿ ಅಧ್ಯಕ್ಷ ಮಯ್ಯದಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅರುಣ್ ಪ್ರದೀಪ್ ಡಿಸೋಜ, ಪಂಚಾಯತ್ ಕಾರ್ಯದರ್ಶಿ ಕೇಶವ, ಚಿಕಿತ್ಸಾ ಮೇಲ್ವಿಚಾರಕ ಮುರುಳಿಧರ ಸ. ಆ. ಅಧಿಕಾರಿ, ಗಣೇಶ್ ಪ್ರಾ. ಆ. ಸುರಕ್ಷಾಧಿಕಾರಿ, ಮಾರ್ಗರೆಟ್ ಸುಧಾಕಿರಣ, ಎಕ್ಸರೇ ಟೆಕ್ನಿಷಿಯನ್ ರೇಷ್ಮಾ ನಿವೇದಿತಾ ಮತ್ತು ಸುಜಾತ, ಮುಲ್ಕಿ ಮತ್ತು ಮೂಡಬಿದ್ರೆ ಆಸ್ಪತ್ರೆ ಮತ್ತು ಆಶಾ ಕಾರ್ಯಕರ್ತರು ವೀಣಾ, ವಿದ್ಯಾ, ಪ್ರಮೀಳಾ, ಶೋಭಾ, ಅಮಿತಾ ಉಪಸ್ಥಿತರಿದ್ದರು. ಸುಮಾರು 66 ಫಲಾನುಭವಿಗಳು ಪ್ರಯೋಜನ ಪಡೆದುಕೊಂಡರು.

ಹತ್ತು ಹಲವು ಸಮಸ್ಯೆಗಳಿಂದ ಬಳಲುತ್ತಿರುವ ಉಪ್ಪಿನಂಗಡಿ ಗ್ರಾಮ ಪಂಚಾಯತ್ ತಕ್ಷಣ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಆಗ್ರಹ

ಉಪ್ಪಿನಂಗಡಿ ಪೇಟೆಯ ಸಮಸ್ಯೆ ನೀಗಿಸುವಲ್ಲಿ ಆಡಳಿತ ಮೌನ

ಪುತ್ತೂರು: ಪುತ್ತೂರು ತಾಲೂಕಿನ 2ನೇ ಪ್ರಮುಖ ಪಟ್ಟಣವಾಗಿರುವ ಉಪ್ಪಿನಂಗಡಿಯಲ್ಲಿ ಕಸ ವಿಲೇವಾರಿ ಅವ್ಯವಸ್ಥೆ, ಟ್ರಾಫಿಕ್ ಸಮಸ್ಯೆಗಳೂ ಸೇರಿದಂತೆ ಹಲವು ಸಮಸ್ಯೆಗಳಿಂದ ಬಳಲುತ್ತಿದ್ದರೂ ಉಪ್ಪಿನಂಗಡಿ ಗ್ರಾಮ ಪಂಚಾಯತ್ ಯಾವುದೇ ವಿಚಾರಕ್ಕೆ ಸ್ಪಂದಿಸದೆ ಮೌನ ವಹಿಸಿದೆ. ಸಾರ್ವಜನಿಕರ ಆರೋಗ್ಯ ಹಾಗೂ ಬದುಕಿನ ಹಿತದೃಷ್ಟಿಯಿಂದ ತಕ್ಷಣ ಈ ಸಮಸ್ಯೆಗಳಿಗೆ ಪರಿಹಾರ ನೀಡುವಲ್ಲಿ ಗ್ರಾ.ಪಂ. ಕ್ರಮ ಕೈಗೊಳ್ಳಬೇಕು ಎಂದು ಉಪ್ಪಿನಂಗಡಿ ವಾಣಿಜ್ಯ ಮತ್ತು ಕೈಗಾರಿಕಾ ಸಂಘ ಆಗ್ರಹಿಸಿದೆ. ಸಂಘದ ಅಧ್ಯಕ್ಷ ಪ್ರಶಾಂತ್ ಡಿಕೋಸ್ತ ಮತ್ತು ಕಾರ್ಯದರ್ಶಿ ಯೂನಿಕ್ ಅಬ್ದುಲ್ ರಹಿಮಾನ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಉಪ್ಪಿನಂಗಡಿ ಗ್ರಾ.ಪಂ. ರಾಜ್ಯದಲ್ಲಿ ಅತ್ಯಂತ ಹೆಚ್ಚು ಆದಾಯ ಇರುವ ಗ್ರಾ.ಪಂ.ಗಳಲ್ಲಿ ಒಂದಾಗಿದೆ. ಆದರೆ ಇಲ್ಲಿನ ಕಸವಿಲೇವಾರಿಯ ಅವ್ಯವಸ್ಥೆಯಿಂದ ಜನತೆಯ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದೆ. ಇಲ್ಲಿನ ಬಸ್ ನಿಲ್ದಾಣದ ಪರಿಸರ ಮತ್ತು ಅಂಗಡಿ ಮುಂಗಟ್ಟುಗಳ ಪಕ್ಕದಲ್ಲಿಯೇ ತ್ಯಾಜ್ಯ ಕೊಳೆತು ನಾರುತ್ತಿದೆ. ಈ ದುರ್ವಾಸನೆ ಒಂದು ಕಡೆಯಾದರೆ, ಮತ್ತೊಂದೆಡೆ ಸೊಳ್ಳೆ ಉತ್ಪಾದನೆಯ ತಾಣವಾಗಿ ಪರಿವರ್ತಿತವಾಗುತ್ತಿದೆ. ಇಲ್ಲಿನ ಸಂಗಮ ಸ್ಥಾನವನ್ನು ಅಪವಿತ್ರಗೊಳಿಸುವ ನಿಟ್ಟಿನಲ್ಲಿ ಕೊಳೆತ ತ್ಯಾಜ್ಯಗಳನ್ನು ನೇತ್ರಾವತಿ ನದಿಗೆ ಎಸೆಯಲಾಗುತ್ತಿದೆ. ನೇತ್ರಾವತಿ ನದಿ ಮಾಲಿನಗೊಳ್ಳುತ್ತಿದೆ. ಇದಕ್ಕೆ ತಕ್ಷಣ ವೈಜ್ಞಾನಿಕ ಕ್ರಮಗಳ ಮೂಲಕ ಗ್ರಾ.ಪಂ. ತಡೆ ಹಾಕಬೇಕು ಎಂದು ಅವರು ಒತ್ತಾಯಿಸಿದರು. ಹಿಂದೆ ತಾಲೂಕು ಕೇಂದ್ರವಾಗಿದ್ದ ಉಪ್ಪಿನಂಗಡಿ ಈಗ ತಾಲೂಕಿನ ಮುಖ್ಯಪಟ್ಟಣವಾಗಿದ್ದು, ಪ್ರಸ್ತುತ ಸದಾ ಕಾಲ ಟ್ರಾಫಿಕ್ ಸಮಸ್ಯೆ ಜನತೆಯನ್ನು ಕಾಡುತ್ತಿದೆ. ಉಪ್ಪಿನಂಗಡಿ ಬಸ್ ನಿಲ್ದಾಣದ ಬಳಿಯಲ್ಲಿ ಪುತ್ತೂರು ಎಪಿಎಂಸಿ ರೈತರ ಅನುಕೂಲಕ್ಕಾಗಿ ಕಟ್ಟಡವೊಂದನ್ನು ನಿರ್ಮಿಸಿ ಗ್ರಾ.ಪಂ.ಗೆ ಹಸ್ತಾಂತರ ಮಾಡಿತ್ತು. ಆದರೆ ಪ್ರಸ್ತುತ ಈ ಕಟ್ಟಡ ರೈತರ ಪಾಲಿಗೆ ದೊರೆಯದೆ ಇತರ ವ್ಯಾಪಾರಸ್ಥರ ಪಾಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಉಪ್ಪಿನಂಗಡಿ ವಾಣಿಜ್ಯ ಮತ್ತು ಕೈಗಾರಿಕಾ ಸಂಘದ ಉಪಾಧ್ಯಕ್ಷ ಶಬೀರ್ ಕೆಂಪಿ ಮತ್ತು ಸದಸ್ಯ ಇರ್ಷಾದ್ ಯು.ಟಿ. ಉಪಸ್ಥಿತರಿದ್ದರು.

ಉಪ್ಪಿನಂಗಡಿ, ಪುರುಷರಕಟ್ಟೆ, ಕೊಳ್ತಿಗೆ , ಕಬಕದ ಮುಖ್ಯ ರಸ್ತೆ ಇನ್ನು 'ಚತುಷ್ಪಥ'ವಾಗಿ ಮಾರ್ಪಾಡು

ಪಟ್ಟಣಗಳ ರಸ್ತೆಯ ಅಭಿವೃದ್ಧಿಗೆ 25 ಕೋ.ರೂ. ಮಂಜೂರು



ಪುತ್ತೂರು: ಪುತ್ತೂರು ತಾಲೂಕಿನ ಪ್ರಮುಖ ಪಟ್ಟಣಗಳು ಮತ್ತು ಪ್ರಮುಖ ರಸ್ತೆಗಳು ಹಾದು ಹೋಗುವ ಕೇಂದ್ರ ಸ್ಥಳಗಳ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಶಾಸಕ ಅಶೋಕ್ ರೈ ಅವರು ಸಲ್ಲಿಸಿರುವ ಪ್ರಸ್ತಾವನೆಗೆ ಸ್ಪಂದಿಸಿರುವ ಲೋಕೋಪಯೋಗಿ ಇಲಾಖೆ ರೂ. 25 ಕೋಟಿ ವಿಶೇಷ ಅನುದಾನ ಮಂಜೂರು ಮಾಡಿದೆ.

ಈ ಮೊತ್ತದಲ್ಲಿ ಕ್ಷೇತ್ರದ ಪ್ರಮುಖ 4 ಕಡೆಗಳಲ್ಲಿ ಚತುಷ್ಪಥ ರಸ್ತೆ ನಿರ್ಮಾಣವಾಗಲಿದೆ. ಉಪ್ಪಿನಂಗಡಿ, ಪುರುಷರಕಟ್ಟೆ, ಕೊಳ್ತಿಗೆ ಮತ್ತು ಕಬಕ ಪಟ್ಟಣಗಳನ್ನು ಇದರಲ್ಲಿ ಸೇರಿಸಲಾಗಿದ್ದು, ಈ ಎಲ್ಲಾ ಪಟ್ಟಣಗಳು ಚತುಷ್ಪಥ ರಸ್ತೆ ಹೊಂದಲಿವೆ.

ಉಪ್ಪಿನಂಗಡಿ ಮುಖ್ಯ ರಸ್ತೆ ಅಭಿವೃದ್ಧಿ

ಉಪ್ಪಿನಂಗಡಿ ಪೇಟೆಯ ಮುಖ್ಯ ರಸ್ತೆಯನ್ನು ಪೂರ್ತಿ ಚತುಷ್ಪಥ ಮಾಡಲು ಉದ್ದೇಶಿಸಲಾಗಿದೆ. ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಚತುಷ್ಪಥಗೊಂಡು ಉಪ್ಪಿನಂಗಡಿಯಲ್ಲಿ ಮೇಲ್ಸೇತುವೆ ಕೂಡ ನಿರ್ಮಾಣವಾಗಿದೆ. ಈ ಮೇಲ್ಸೇತುವೆಯ ಬುಡದಿಂದ ಆರಂಭಗೊಳ್ಳುವ ಉಪ್ಪಿನಂಗಡಿಪಟ್ಟಣದಮುಖ್ಯರಸ್ತೆಯನ್ನುನೇತ್ರಾವತಿ ಸೇತುವೆಯವರೆಗೆ ಚತುಷ್ಪಥಗೊಳಿಸಲಾಗುತ್ತದೆ.

ಸುಬ್ರಹ್ಮಣ್ಯ- ಮಂಜೇಶ್ವರ ರಾಜ್ಯ ಹೆದ್ದಾರಿಯಲ್ಲಿ ಮುಕ್ರಂಪಾಡಿ ಪುರುಷರಕಟ್ಟೆಯವರೆಗೆ ಚತುಷ್ಪಥ ನಿರ್ಮಾಣವಾಗಲಿದೆ. ನಿಂತಿಕಲ್ಲು- ನೆಟ್ಟಾರ್- ಕೊಳ್ತಿಗೆ- ಅಮ್ಚಿನಡ್ಕ ರಾಜ್ಯ ಹೆದ್ದಾರಿಯಲ್ಲಿ ಕೊಳ್ತಿಗೆ ಪೇಟೆಯ ಮಧ್ಯೆ 100 ಮೀಟರ್ ಚತುಷ್ಪಥ ನಿರ್ಮಾಣವಾಗಲಿದೆ. ಪುತ್ತೂರು ಹೊರವಲಯದ ಕಬಕ ಜಂಕ್ಷನ್‌ನಿಂದ ಆಳಿಕೆಮಜಲುವರೆಗೆ ಚತುಷ್ಪಥ ನಿರ್ಮಾಣವಾಗಲಿದೆ. ಹೋಬಳಿ ಮಟ್ಟದ ಪಟ್ಟಣಗಳು ಮತ್ತು ದೊಡ್ಡ ಗ್ರಾ.ಪಂ.ಗಳ ಕೇಂದ್ರಗಳು ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು ಜನ ಸಾಂದ್ರತೆ, ವಾಹನ ಸಾಂದ್ರತೆ ಮತ್ತು ವಾಣಿಜ್ಯ ವ್ಯವಹಾರಗಳು ವೃದ್ಧಿಯಾಗುತ್ತಿವೆ. ಇವುಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಪೇಟೆ ಭಾಗದಲ್ಲಿ ಚತುಷ್ಪಥ ಯೋಜನೆ ಜಾರಿಗೊಳಿಸುವುದು ಸರಕಾರದ ಉದ್ದೇಶ ಎನ್ನುತ್ತಾರೆ ಪುತ್ತೂರಿನ ಶಾಸಕರು.

ಉಪ್ಪಿನಂಗಡಿ, ಪುರುಷರಕಟ್ಟೆ, ಕೊಳ್ತಿಗೆ ಮತ್ತು ಕಬಕ ಈ ನಾಲ್ಕು ಕೇಂದ್ರಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಿಕೊಂಡು ಒಟ್ಟು 25 ಕೋಟಿ ವೆಚ್ಚದಲ್ಲಿ ಚತುಷ್ಪಥ ಯೋಜನೆ ಜಾರಿಗೊಳಿಸಲಾಗುತ್ತದೆ. ಮುಂದಿನ ಹಂತದಲ್ಲಿ ಪುತ್ತೂರು ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಕೇಂದ್ರಗಳನ್ನು ಆರಿಸಿಕೊಂಡು ಪೇಟೆ ಭಾಗದಲ್ಲಿ ಚತುಷ್ಪಥ ನಿರ್ಮಿಸಲಾಗುತ್ತದೆ.

ಇದಕ್ಕೂ ಹಂತ ಹಂತದಲ್ಲಿ ಅನುದಾನ ಬರಲಿದೆ ಎಂದು ಶಾಸಕರು ತಿಳಿಸಿದ್ದಾರೆ.

ಸಮಸ್ಯೆಗಳಿಗೆ ಪರಿಹಾರ

ಜನರ ನಿರೀಕ್ಷೆಗೂ ಮೀರಿ ಅಭಿವೃದ್ಧಿ ಕೆಲಸಗಳು ಆಗಬೇಕೆಂಬುದು ನನ್ನ ಕನಸು. ಮುಖ್ಯವಾಗಿ ಲೋಕೋಪಯೋಗಿ ರಸ್ತೆಗಳು ಅಭಿವೃದ್ಧಿಯಾಗಬೇಕು. ಉಪ್ಪಿನಂಗಡಿ ಪೇಟೆ, ಕೊಳ್ತಿಗೆ ಪೇಟೆ, ಕಬಕ ಪೇಟೆ ಮತ್ತು ಪುರುಷರಕಟ್ಟೆ ಪೇಟೆಗಳ ಸೌಂದರ್ಯ ಹೆಚ್ಚಾಗಲಿದೆ. ಜನದಟ್ಟಣೆ, ವಾಹನ ದಟ್ಟಣೆಗೂ ಪರಿಹಾರವಾಗಲಿದೆ.

● ಅಶೋಕ್ ರೈ, ಶಾಸಕ

ಅಭಿವೃದ್ಧಿ ವಿವರ

ಪುತ್ತೂರು- ಉಪ್ಪಿನಂಗಡಿ ರಾಜ್ಯ ಹೆದ್ದಾರಿಯಲ್ಲಿ ಕೋಡಿಂಬಾಡಿಯಿಂದ ವಿನಾಯಕ ನಗರದವರೆಗೆ ಚತುಷ್ಪಥ ಮತ್ತು ಉಪ್ಪಿನಂಗಡಿ ಪೇಟೆಯ ಮುಖ್ಯ ರಸ್ತೆಯ ಚತುಷ್ಪಥಕ್ಕೆ 5.5 ಕೋಟಿ. ಸುಬ್ರಹ್ಮಣ್ಯ- ಮಂಜೇಶ್ವರ ರಾಜ್ಯ ಹೆದ್ದಾರಿಯಲ್ಲಿ ಮುಕ್ರಂಪಾಡಿಯಿಂದ ಪುರುಷರಕಟ್ಟೆವರೆಗೆ ಚತುಷ್ಪಥ ನಿರ್ಮಿಸಲು 2 ಕೋಟಿ. ನಿಂತಿಕಲ್- ಅಮ್ಚಿನಡ್ಕ ರಾಜ್ಯ ಹೆದ್ದಾರಿಯಲ್ಲಿ ಕೊಳ್ತಿಗೆಯಿಂದ ಸಿದ್ದಮೂಲೆಯವರೆಗೆ ರಸ್ತೆ ಅಗಲೀಕರಣ ಮತ್ತು ಕೊಳ್ತಿಗೆ ಪೇಟೆ ಭಾಗದಲ್ಲಿ 100 ಮೀ. ಚತುಷ್ಪಥ ಯೋಜನೆಗೆ 7.5 ಕೋಟಿ. ಪುತ್ತೂರು- ವಿಟ್ಲ ರಸ್ತೆಯಲ್ಲಿ ಕಬಕದಿಂದ ಆಳಿಕೆಮಜಲ್‌ವರೆಗೆ ಚತುಷ್ಪಥ ನಿರ್ಮಿಸಲು 10 ಕೋಟಿ.

ಪೊಳಲಿ ಸರಕಾರಿ ಪ್ರೌಢಶಾಲೆಯಲ್ಲಿ ಯಕ್ಷ ನಾಟ್ಯ ತರಬೇತಿ ಪ್ರಾರಂಭೋತ್ಸವ



ಬಂಟ್ವಾಳ: ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್ ಮಂಗಳೂರು ಇದರ ವತಿಯಿಂದ ಪೊಳಲಿ ಸರಕಾರಿ ಪ್ರೌಢಶಾಲೆಯಲ್ಲಿ ಯಕ್ಷ ಶಿಕ್ಷಣದ ನಾಟ್ಯ ತರಬೇತಿ ಕಾರ್ಯಕ್ರಮದ ಪ್ರಾರಂಭೋತ್ಸವ ಶುಕ್ರವಾರ ಚಾಲನೆ ನೀಡಲಾಯಿತು. ಟ್ರಸ್ಟಿನ ಸಂಚಾಲಕ ವಾಸುದೇವ ಐತಾಳ್ ಉದ್ಘಾಟಿಸಿ, ಮಾತನಾಡಿ, ಯಕ್ಷಗಾನವನ್ನು ಅಭ್ಯಾಸ ಮಾಡುವುದರಿಂದ ಏಕಾಗ್ರತೆ, ವೇದಿಕೆಯಲ್ಲಿ ನಿರರ್ಗಳತೆಯಿಂದ ಮಾತನಾಡುವುದು, ನಮ್ಮ ಪರಂಪರೆ, ಸಂಸ್ಕೃತಿಯ ಅರಿವಾಗುತ್ತದೆ ಎಂದರು. ಪೊಳಲಿ- ಕೈಕಂಬ ಘಟಕದ ಸದಸ್ಯರಾದ ಲೋಕೇಶ್ ಭರಣಿ ಶುಭ ಹಾರೈಸಿದರು.

ಶಾಲಾ ಎಸ್ ಡಿಎಂಸಿ ಅಧ್ಯಕ್ಷ ವೆಂಕಟೇಶ ನಾವಡ ಅಧ್ಯಕ್ಷತೆ ವಹಿಸಿದ್ದರು. ಯಕ್ಷ ಗುರು ದಿನೇಶ್ ಬಂಗೇರ ವಿದ್ಯಾರ್ಥಿಗಳಿಗೆ ಪ್ರಾರಂಭಿಕ ನಾಟ್ಯ ಹೆಜ್ಜೆಯ ಅಭ್ಯಾಸ ಮಾಡಿಸಿದರು. ಮುಖ್ಯ ಶಿಕ್ಷಕ ಸುಬ್ರಾಯ ಪೈ ಸ್ವಾಗತಿಸಿ, ರಂಜಿತ ನಿರೂಪಿಸಿದರು.

ಬಲ್ಯ ಶಾಲೆಯ ಮುಖ್ಯ ಶಿಕ್ಷಕಿಯ ವರ್ಗಾವಣೆ: ಬೀಳ್ಕೊಡುಗೆ ಸಮಾರಂಭ



ಕಡಬ: ಕಡಬ ತಾಲೂಕಿನ ಬಲ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 14 ವರ್ಷಗಳಿಂದ ಪ್ರಭಾರ ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ, ಪ್ರಸ್ತುತ ಪೂರ್ಣಕಾಲಿಕ ಮುಖ್ಯ ಶಿಕ್ಷಕರಾಗಿ ಪದೋನ್ನತಿ ಹೊಂದಿ ಕೆಮ್ಮಾರ ಸರಕಾರಿ ಉನ್ನತ ಹಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆಗೊಂಡಿರುವ ಪುಷ್ಪ ಕೆ. ಕೊಲ್ಲಿಮಾರು ಅವರಿಗೆ ಶಾಲಾ ಸಭಾಂಗಣದಲ್ಲಿ ಅಭಿನಂದನೆ ಹಾಗೂ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಶಾಲಾ ಅಭಿವೃದ್ಧಿ ಸಮಿತಿ, ಶಿಕ್ಷಕ ವೃಂದ, ಪೋಷಕರು, ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ಪುಷ್ಪ ಕೆ. ಅವರನ್ನು ಫಲಪುಷ್ಪ ಸ್ಮರಣಿಕೆ, ಅಭಿನಂದನಾ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಹಿರಿಯ ವಿದ್ಯಾರ್ಥಿ ಪೂರ್ಣೇಶ್ ಗೌಡ ಬಾಬ್ಲುಬೆಟ್ಟು ಅಭಿನಂದನಾ ಭಾಷಣ ಮಾಡಿದರು.

ಪುಷ್ಪ ಅವರ ಪತಿ, ಎಲ್‌ಐಸಿ ಬಂಟ್ವಾಳ ಶಾಖೆಯ ಅಭಿವೃದ್ಧಿ ಅಧಿಕಾರಿ ನಾರಾಯಣ ಎನ್. ಕೊಲ್ಲಿಮಾರು ಅವರು ತಮ್ಮ ಶಾಲಾ ದಿನಗಳ ನೆನಪುಗಳನ್ನು ಹಂಚಿಕೊಂಡರು. ಸನ್ಮಾನ ಸ್ವೀಕರಿಸಿದ ಪುಷ್ಪ ಕೆ. ಅವರು ತಮ್ಮ ಸೇವಾ ಅವಧಿಯಲ್ಲಿ ಸಹಕರಿಸಿದ ಪೋಷಕರು, ಶಿಕ್ಷಕರು, ಹಿರಿಯ ವಿದ್ಯಾರ್ಥಿಗಳು, ಊರವರಿಗೆ ಕೃತಜ್ಞತೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಶಾಲೆಗೆ ಶಾಶ್ವತ ಬಳಕೆಗೆ ವೇದಿಕೆಯ ಟೀಪಾಯ್‌ನ್ನು ಕೊಡುಗೆಯಾಗಿ ನೀಡಿದ ಅವರು, ವಿದ್ಯಾರ್ಥಿಗಳಿಗೆ ಪೆನ್ನು ಹಾಗೂ ಪುಸ್ತಕಗಳನ್ನು ವಿತರಿಸಿದರು. ಅಲ್ಲದೆ ಪ್ರತಿವರ್ಷ ಪ್ರತಿ ತರಗತಿಯಲ್ಲಿ ಪ್ರಥಮ ಸ್ಥಾನ ಗಳಿಸುವ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡುವುದಾಗಿ ಘೋಷಿಸಿದರು.

ಪುಷ್ಪ ಕೆ. ದಂಪತಿಗಳನ್ನು ಬಲ್ಯ ಶ್ರೀ ಉಮಾಮಹೇಶ್ವರಿ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ರಾಮಚರಣ್ ರೈ ಹಾಗೂ ದೇರಾಜೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ವೀರಪ್ಪ ಇಟಗಿ ವಿಶೇಷವಾಗಿ ಗೌರವಿಸಿದರು. ನಿವೃತ್ತ ಮುಖ್ಯ ಶಿಕ್ಷಕಿ ರುಕ್ಮಿಣಿ ಸಾಂತಪ್ಪ ಗೌಡ ಪಿಜಕಳ, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜನಾರ್ದನ ಗೌಡ ಆರಿಗ, ಚಂದಪ್ಪ ಗೌಡ, ಎಸ್‌ಡಿಎಂಸಿ ಸದಸ್ಯ ವಿಲ್ಸನ್ ವಿ.ಟಿ., ಅಂಗನವಾಡಿ ಕಾರ್ಯಕರ್ತೆ ಅಮ್ಮಿಣಿ ಸೇರಿದಂತೆ ಹಲವರು ಶುಭ ಹಾರೈಸಿದರು. ಎಸ್‌ಡಿಎಂಸಿ ಅಧ್ಯಕ್ಷ ಗಣೇಶ್ ಭಟ್ ದೇವರಡ್ಕ ಅಧ್ಯಕ್ಷತೆ ವಹಿಸಿದ್ದರು. ಪ್ರಭಾರ ಮುಖ್ಯ ಶಿಕ್ಷಕಿ ಸುಮಲತಾ ಬಿ. ಸ್ವಾಗತಿಸಿ, ಶಿಕ್ಷಕಿ ಅಪೂರ್ಣ ಅಭಿನಂದನಾ ಪತ್ರ ವಾಚಿಸಿದರು. ನಸ್ಸೀಮಾ ನಿರೂಪಿಸಿ, ಮೀನಾಕ್ಷಿ ವಂದಿಸಿದರು. ಬಳಿಕ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ಎರಡು ದಿನಗಳ ವಿಶೇಷ ಕಾರ್ಯಾಗಾರ



ಕುಂದಾಪುರ: ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಮಕ್ಕಳ ಲಾಲನೆ- ಪಾಲನೆಯಲ್ಲಿ ಹಲವರು ನೀಡುವ ಸಲಹೆಗಳನ್ನು ವಿವೇಚನೆಯಿಂದ ಪರಿಗಣಿಸಿ, ಅವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವ ಸಲಹೆಗಳನ್ನು ಮಾತ್ರವೇ ಸ್ವೀಕರಿಸಿ ಮಕ್ಕಳನ್ನು ಮೌಲ್ಯವಂತರಾಗುವಂತೆ ನೋಡಿಕೊಳ್ಳಬೇಕು ಎಂದು ಶ್ರೀ ಸಿದ್ಧಿ ಶೈಕ್ಷಣಿಕ ಪ್ರತಿಷ್ಠಾನದ ಕಾರ್ಯದರ್ಶಿ ಹಾಗೂ ಶಾಲೆಯ ಪ್ರಾಂಶುಪಾಲ ಶರಣಕುಮಾರ ಹೇಳಿದರು.

ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯಲ್ಲಿ ಶೈಕ್ಷಣಿಕ ವರ್ಷದ ಪ್ರಾಥಮಿಕ ಹಾಗೂ ಪೂರ್ವ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳ ಪಾಲಕ/ಪೋಷಕರಿಗಾಗಿ ಆಯೋಜಿಸಲಾಗಿದ್ದ 2 ದಿನಗಳ ಓರಿಯೆಂಟೇಶನ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶಾಲೆಯ ಶೈಕ್ಷಣಿಕ ಸಾಧನೆಗಳು, ಐಸಿಎಸ್‌ಇ ಪಠ್ಯಕ್ರಮದ ವೈಶಿಷ್ಟ್ಯಗಳು, ಮೌಲ್ಯಮಾಪನ ಮತ್ತು ಪರೀಕ್ಷಾ ಪದ್ಧತಿ, ವಿದ್ಯಾರ್ಥಿಗಳ ಅಭ್ಯಾಸ ಕ್ರಮ, ಶಿಸ್ತು ಮತ್ತು ವರ್ತನೆ, ಸಮವಸ್ತ್ರ, ಸಮತೋಲಿತ ಆಹಾರ ಪದ್ಧತಿ, ಶಾಲೆಯಲ್ಲಿ ಒದಗಿಸಲಾಗುವ ಇತರ ಸೌಲಭ್ಯಗಳು, ಶಾಲಾ ಡೈರಿಯ ಅಗತ್ಯತೆ ಮತ್ತು ಅನುಕೂಲತೆಯ ಕುರಿತು ಶಿಕ್ಷಕಿ ರೂಪಾ ಜಿ., ಸ್ವಾತಿ, ದೀಪಾ ಹಾಗೂ ರೇಷ್ಮಾ ಅವರು ಮಾಹಿತಿ ಹಂಚಿಕೊಂಡರು.

ಶಾಲೆಯ ಆಡಳಿತಾಧಿಕಾರಿ ವೀಣಾ ರಶ್ಮಿ ಎಂ., ಶೈಕ್ಷಣಿಕ ಸಲಹೆಗಾರ ಸುಜಾತಾ ಸದಾರಾಮ್, ಉಪ ಪ್ರಾಂಶುಪಾಲ ರಾಮ ದೇವಾಡಿಗ, ಮುಖ್ಯೋಪಾಧ್ಯಾಯಿನಿ ಹೇಮಾಮಾಲಿನಿ ಇದ್ದರು. ಶಿಕ್ಷಕಿ ರೋಹಿಣಿ ಹಾಗೂ ಜ್ಯೋತಿ ಜಿ. ನಿರೂಪಿಸಿದರು.

ರಕ್ತದಾನ ಶಿಬಿರಗಳಲ್ಲಿ ಯುವ ಜನತೆ ಸಕ್ರಿಯವಾಗಿ ತೊಡಗಿಸಿ: ಲತಾಶ್ರೀ ಕರೆ



ಸುಳ್ಯ: ಜೇಸಿಐ ಸುಳ್ಯ ಪಯಸ್ವಿನಿ ಆ್ಯಂಬುಲೆನ್ಸ್ ಚಾಲಕ ಮಾಲಕರ ಸಂಘ ಸುಳ್ಯ ತಾಲೂಕು ಹಾಗೂ ಸರ್ಕಾರಿ ಆಸ್ಪತ್ರೆ ಸುಳ್ಯ ಇದರ ಜಂಟಿ ಆಶ್ರಯದಲ್ಲಿ ವೆನ್ಲಾಕ್ ಜಿಲ್ಲಾ ಆಸ್ಪತ್ರೆ ಮಂಗಳೂರು ಸಹಭಾಗಿತ್ವದಲ್ಲಿ ಜೆಸಿಐ ಸುಳ್ಯ ಪಯಸ್ವಿನಿ ಘಟಕದ 2ನೇ ಬೃಹತ್ ರಕ್ತದಾನ ಶಿಬಿರ ಹಾಗೂ ಆ್ಯಂಬುಲೆನ್ಸ್ ಚಾಲಕ ಮಾಲಕರ ಸಂಘದ 4ನೇ ಬೃಹತ್ ರಕ್ತದಾನ ಶಿಬಿರವು ಸುಳ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ಶನಿವಾರ ನಡೆಯಿತು.

ಜೇಸಿಐ ವಲಯ ತರಬೇತುದಾರರಾದ ಸುಳ್ಯದ ನೆಹರು ಮೆಮೋರಿಯಲ್ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಅನುರಾಧ ಕುರುಂಜಿ ಉದ್ಘಾಟಿಸಿ ಶುಭ ಹಾರೈಸಿದರು. ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ನವೀನ್ ಎನ್.ಎಸ್. ರಕ್ತದಾನದ ಬಗ್ಗೆ ಮಾಹಿತಿ ನೀಡಿದರು. ಜೇಸಿಐ ಸುಳ್ಯ ಪಯಸ್ವಿನಿಯ ಪೂರ್ವಾಧ್ಯಕ್ಷ ಅಶೋಕ್ ಚೂಂತಾರ್, ದಿನೇಶ್ ಮಡಪ್ಪಾಡಿ, ಆ್ಯಂಬುಲೆನ್ಸ್ ಚಾಲಕ ಮಾಲಕ ಸಂಘದ ಅಧ್ಯಕ್ಷ ಶರತ್ ಕುಮಾರ್ ಅರಂತೋಡು ಪೊಲೀಸ್ ಉಪನಿರೀಕ್ಷಕ ಸಂತೋಷ್ ಕುಮಾರ್ ಬಿ.ಪಿ. ಹಾಗೂ ಜೇಸಿಐ ಸುಳ್ಯ ಪಯಸ್ವಿನಿ ಅಧ್ಯಕ್ಷೆ ಲತಾಶ್ರೀ ಸುಪ್ರೀತ್ ಮೊಂಟಡ್ಕ ಉಪಸ್ಥಿತರಿದ್ದು ಜೀವ ಉಳಿಸುವಲ್ಲಿ ರಕ್ತದಾನದ ಪಾತ್ರದ ಕುರಿತು ಮಾತನಾಡಿ, ಸಮಾಜಮುಖಿ ಕಾರ್ಯಗಳಲ್ಲಿ ಯುವಜನತೆ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಹೇಳಿದರು.

ಸುಳ್ಯ ಸರಕಾರಿ ಆಸ್ಪತ್ರೆಯ ಡಾ. ಶಾಲಿನಿ, ಡಾ ಸೌಮ್ಯ, ಡಾ. ರಜನಿ, ಡಾ. ಶಿವಕುಮಾರ್ ರಕ್ತದಾನದ ಮಹತ್ವವನ್ನು ತಿಳಿಸಿದರು. ಶಿಬಿರದಲ್ಲಿ ಸಾರ್ವಜನಿಕರು, ಯುವಕರು ಹಾಗೂ ವಿವಿಧ ಸಂಘ-ಸಂಸ್ಥೆಗಳ ಸದಸ್ಯರು ಉತ್ಸಾಹದಿಂದ ಭಾಗವಹಿಸಿ ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ಮಂಗಳೂರಿನ ವೆನ್ಲಾಕ್ ಆಸ್ಪತ್ರೆಯ ವೈದ್ಯಾಧಿಕಾರಿಗಳ ತಂಡ ರಕ್ತದಾನ ಶಿಬಿರವನ್ನು ನಡೆಸಿಕೊಟ್ಟರು.

ಮಜಿ ಶಾಲೆಯಲ್ಲಿ ಬಾಲಕಾರ್ಮಿಕ ವಿರೋಧಿ ದಿನಾಚರಣೆ, ಪ್ರತಿಜ್ಞೆ ಸ್ವೀಕಾರ



ಬಂಟ್ವಾಳ: ವೀರಕಂಭ ಗ್ರಾಮದ ಮಜಿ ದಕ್ಷಿಣ ಕನ್ನಡ ಜಿ.ಪಂ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ನಡೆಯಿತು.

ಶಿಕ್ಷಕ ತೌಸೀಫ್ ಅಹ್ಮದ್ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಬಾಲ ಕಾರ್ಮಿಕ ವಿರೋಧಿ ವಿಷಯದ ಬಗ್ಗೆ ಪ್ರತಿಜ್ಞಾವಿಧಿಯನ್ನು ಬೋಧಿಸಲಾಯಿತು. ಶಾಲಾ ಮುಖ್ಯ ಶಿಕ್ಷಕಿ ಬೆನಡಿಕ್ಟ ಆಗ್ನೇಸ್ ಮಂಡೋನ್ಸ ಹಾಗೂ ಶಿಕ್ಷಕ ವೃಂದ, ಶಾಲಾ ನಾಯಕ ಮೊಹಮ್ಮದ್ ಹಾರೂನ್ ಫರ್ಹಾನ್, ಶಾಲಾ ಮಂತ್ರಿಮಂಡಲದ ಸದಸ್ಯರು, ಶಾಲಾ ವಿವಿಧ ಸಂಘಗಳ ವಿದ್ಯಾರ್ಥಿಗಳು ಹಾಜರಿದ್ದರು. ದೈಹಿಕ ಶಿಕ್ಷಣ ಶಿಕ್ಷಕ ಇಂದುಶೇಖರ್ ಸ್ವಾಗತಿಸಿ, ಶಿಕ್ಷಕಿ ಸಂಪ್ರಿಯ ವಂದಿಸಿದರು. ಹಿರಿಯ ಶಿಕ್ಷಕಿ ಸಂಗೀತ ಶರ್ಮ ಪಿ.ಜಿ. ಕಾರ್ಯಕ್ರಮ ನಿರೂಪಿಸಿದರು.

ಕೋರ್ಯಾರು ದೇವಸ್ಥಾನದಲ್ಲಿ ದೃಢಕಲಶ: ಧಾರ್ಮಿಕ ಕಾರ್ಯಕ್ರಮ



ಬಂಟ್ವಾಳ: ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ಪುನರ್ ನಿರ್ಮಾಣಗೊಂಡಿರುವ ಬಂಟ್ವಾಳ ತಾಲೂಕಿನ ಕುಕ್ಕಿಪಾಡಿ ಗ್ರಾಮದ ಸಿದ್ದಕಟ್ಟೆ ಸಮೀಪದ ಕೋರ್ಯಾರು ಶ್ರೀ ದುರ್ಗಾ ಮಹಾಮ್ಮಾಯಿ ದೇವಸ್ಥಾನದಲ್ಲಿ ದೃಢಕಲಶೋತ್ಸವ ಭಾನುವಾರ ನಡೆಯಿತು.

ವೇ.ಮೂ. ಬಾಲಕೃಷ್ಣ ಪಾಂಗಣ್ಣಾಯ ಅವರ ನೇತೃತ್ವದಲ್ಲಿ ಹಾಗೂ ವಿದ್ವಾನ್ ಪೂಂಜ ಪ್ರಕಾಶ ಆಚಾರ್ಯ ಅವರ ಪೌರೋಹಿತ್ಯದಲ್ಲಿ ಶ್ರೀ ದೇವಿಗೆ ಕಲಶಾಭಿಷೇಕ ಸಹಿತ ವಿವಿಧ ವೈದಿಕ ಕಾರ್ಯಗಳು ನೆರವೇರಿತು. ಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಮಧ್ಯಾಹ್ನ ಅನ್ನಸಂತರ್ಪಣೆ ನಡೆಯಿತು.

ಸಂಸದ ಕ್ಯಾ. ಬ್ರಿಜೇಶ್ ಚೌಟ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಂಸದರಿಗೆ ಮನವಿ ಸಲ್ಲಿಸಲಾಯಿತು.

, ದೇವಸ್ಥಾನದ ಆಡಳಿತ ಮಂಡಳಿ ಗುರಿಕಾರರಾದ ಗೋಪಾಲ ಗೌಡ ಕೋರ್ಯಾರು, ಎರಡನೇ ಗುರಿಕಾರ ಓಬಯ್ಯ ಗೌಡ, ಆಡಳಿತ ಮೊಕ್ತೇಸರ ಯಶೋಧರ ಗೌಡ ಕೋರ್ಯಾರು,ಆಡಳಿತ ಮಂಡಳಿ ಕಾರ್ಯದರ್ಶಿ ಲೋಕಯ್ಯ ಬಚ್ಚಿರಪಲ್ಕೆ, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷರಾದ ಪ್ರಭಾಕರ ಪ್ರಭು,ದುರ್ಗಾದಾಸ್ ಶೆಟ್ಟಿ ಕರೆಂಕಿಜೆ,ಅಧ್ಯಕ್ಷ ಗಂಗಾಧರ ಗೌಡ ಕುಕ್ಕೇಡಿ,ಕಾರ್ಯದರ್ಶಿ ಗಣೇಶ್ ಕಣಿಯೂರು, ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ ಹೇಮಚಂದ್ರ,

ಅಧ್ಯಕ್ಷ ಉಮೇಶ್ ಗೌಡ ಮಂಚಕಲ್, ಕಾರ್ಯದರ್ಶಿ ಸಂಜೀವ ಎಲ್ವೇಲು, ಆಡಳಿತ ಮಂಡಳಿ ಜತೆ ಕಾರ್ಯದರ್ಶಿ ಓಬಯ ಗೌಡ,ಸದಸ್ಯರಾದ ನಾರಾಯಣ ಗೌಡ, ಕರುಣಾ ಮಂಚಕಲ್ಲು, ಭಾಸ್ಕರ ಕೋರ್ಯಾರು, ಬಾಬು ಹುಂಟೇನಿ, ಗೋಪಾಲಗೌಡ ದೇವಸ, ಮೋಹನ ಕುಂಚಾಡಿ, ಮಹಿಳಾ ಸಮಿತಿ ಅಧ್ಯಕ್ಷೆ ಶೋಭಾ ಕಲ್ವನೆ,ಗೌರವಾಧ್ಯಕ್ಷರಾದ ಕುಸುಮ ಕೋರ್ಯಾರು , ಉಷಾ ಅಚ್ಯುತ ಕಿರಣ್, ತಾರಾ ಪೂಜಾರಿ ಹಾಗೂ ಸಿದ್ದಕಟ್ಟೆ ಹಾಲು ಉತ್ಪಾದಕ ಸಂಘದ ಅಧ್ಯಕ್ಷ ರತ್ನ ಕುಮಾರ್ ಚೌಟ, ಸಂಗಬೆಟ್ಟು ಗ್ರಾ.ಪಂ. ಮಾಜಿ ಅಧ್ಯಕ್ಷ ಸತೀಶ್ ಪೂಜಾರಿ ಅಲಕ್ಕೆ, ಸಿದ್ದಕಟ್ಟೆ ಪ್ರಾ.ಕೃ.ಸ.ಸಂಘದ ವೃತ್ತಿಪರ ನಿರ್ದೇಶಕ ನವೀನ ಹೆಗ್ಡೆ, ಪ್ರಮುಖರಾದ ದಾಮೋದರ ಪೂಜಾರಿ, ಕೃಷ್ಣ ಕೊಂಪದವು ಮತ್ತಿತರರು ಉಪಸ್ಥಿತರಿದ್ದರು.

34ನೇ ನೆಕ್ಕಿಲಾಡಿ ಪಂಚಾಯತ್ ಕಚೇರಿ ಬಳಿಯೇ ಹದಗೆಟ್ಟ ಮಾರ್ಗ

ಗದ್ದೆಯಂತಾದ ಗ್ರಾ.ಪಂ. ಸಂಪರ್ಕಿಸುವ ರಸ್ತೆ!



ಉಪ್ಪಿನಂಗಡಿ: ಪಂಚಾಯತ್ ಕಚೇರಿಯ ಬಳಿಯಲ್ಲಿಯೇ ಇರುವ ನಿತ್ಯ ಸಾವಿರಾರು ಮಂದಿ ಸಂಚರಿಸುವ ಈ ರಸ್ತೆ ಗದ್ದೆಯಂತಾಗಿದೆ. ಹೌದು, ಇದು 34ನೇ ನೆಕ್ಕಿಲಾಡಿ ಗ್ರಾಮ ಪಂಚಾಯತ್ ರಸ್ತೆಯ ದುಸ್ಥಿತಿಯಾಗಿದ್ದು ಆಡಳಿತ ಮಾತ್ರ ನಿರ್ಲಕ್ಷ್ಯ ವಹಿಸುತ್ತಿದೆ. ಇದರಿಂದ ಜನರು ನಡೆದಾಡಲೂ ಸಂಕಷ್ಟಪಡುವ ಸ್ಥಿತಿ ಉಂಟಾಗಿದೆ.

ಈ ವರ್ಷದ ಅಕ್ಟೋಬರ್ ತಿಂಗಳಿಗೆ 90 ವರ್ಷ ಪೂರೈಸಲಿರುವ ಕುಮಾರಧಾರಾ ಹಳೇ ಸೇತುವೆಯ ನೆಕ್ಕಿಲಾಡಿ ಭಾಗದ ಸಂಪರ್ಕ ರಸ್ತೆಯ ದುಸ್ಥಿತಿ ಕಂಡಾಗ ಜನರ ಸಮಸ್ಯೆಗಳ ಬಗ್ಗೆ ಸ್ಪಂದನವಿಲ್ಲದ ಅಧಿಕಾರಿಗಳ ಕೈಯಲ್ಲಿ ಆಡಳಿತವಿದ್ದರೆ ಯಾವ ಬಗೆಯ ಸಮಸ್ಯೆಗಳು ಕಾಡಬಹುದು ಎನ್ನುವುದಕ್ಕೆ ತಾಜಾ ಉದಾಹರಣೆ ಎನಿಸುತ್ತದೆ. ಈ ರಸ್ತೆಯ ಇಕ್ಕೆಲಗಳಲ್ಲಿ ಚರಂಡಿಯನ್ನು ನಿರ್ಮಿಸುವ ಹೊಣೆ ಪಂಚಾಯತ್ ಆಡಳಿತದ್ದಾಗಿತ್ತು. ಆದರೆ, ಈ ಬಗ್ಗೆ ಯಾವುದೇ ಪ್ರಕ್ರಿಯೆಗೆ ತೊಡಗದೆ ಅಲ್ಲಿನ ಪಂಚಾಯತ್ ಆಡಳಿತಾಧಿಕಾರಿಗಳು ದಿವ್ಯ ಮೌನ ವಹಿಸಿದ ಕಾರಣ ಜನತೆ ಕೆಸರು ತುಂಬಿದ ನಡೆದಾಡಲೂ ಸಾಧ್ಯವಾಗದ ರಸ್ತೆಯಲ್ಲಿ ಸಂಚರಿಸಬೇಕಾಗಿದೆ.

ಲಿಖಿತ ದೂರು ನೀಡಿದ್ದೇವೆ

ಕುಮಾರಧಾರಾ ಹಳೇ ಸೇತುವೆ ಪ್ರಸಕ್ತ ಪಾದಾಚಾರಿಗಳಿಗೆ, ದ್ವಿಚಕ್ರ ವಾಹನಗಳ ಸವಾರರಿಗೆ ಸುರಕ್ಷಿತ ಸಂಚಾರ ಮಾರ್ಗವಾಗಿದೆ. ಈ ರಸ್ತೆಯ ದುರಸ್ತಿಗೆ ಲಿಖಿತ ದೂರು ಸಲ್ಲಿಸಿದ್ದೇನೆ ಎಂದು ಸ್ಥಳೀಯ ಸಮಾಜ ಸೇವಕ ಸುದರ್ಶನ್ ಗಾಣಿಗ ಪ್ರತಿಕ್ರಿಯಿಸಿದ್ದಾರೆ.

ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಆತಂಕ

ನೆಟ್ಟಣ ರೈಲ್ವೆ ನಿಲ್ದಾಣದಲ್ಲಿ ರಾಶಿ ರಾಶಿ ಕಸ!

ಸುಬ್ರಹ್ಮಣ್ಯ: ದ.ಕ. ಜಿಲ್ಲೆಯ ಕಡಬ ತಾಲೂಕಿನ ಬಿಳಿನೆಲೆ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ ಸುಬ್ರಹ್ಮಣ್ಯ ರೋಡ್ ನೆಟ್ಟಣ ರೈಲು ನಿಲ್ದಾಣದ ಸುತ್ತಮುತ್ತಲಿನ ಪ್ರದೇಶದಲ್ಲಿ ಕಸ ಸಂಗ್ರಹವಾಗಿದ್ದು, ಪರಿಸರ ಮಾಲಿನ್ಯ ಹಾಗೂ ಸಾರ್ವಜನಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಆತಂಕವನ್ನು ಸಾರ್ವಜನಿಕರು ವ್ಯಕ್ತಪಡಿಸಿದ್ದಾರೆ.

ರಾಜ್ಯದ ಪ್ರಮುಖ ಧಾರ್ಮಿಕ ಹಾಗೂ ಪ್ರವಾಸಿ ತಾಣವಾದ ಶ್ರೀ ಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯಕ್ಕೆ ದೇಶದ ವಿವಿಧ ಭಾಗಗಳಿಂದ ಸಾವಿರಾರು ಭಕ್ತರು ರೈಲುಗಳ ಮೂಲಕ ಆಗಮಿಸುತ್ತಾರೆ. ಆದರೆ, ರೈಲು ನಿಲ್ದಾಣದ ಆವರಣ ಹಾಗೂ ಅದರ ಸುತ್ತಮುತ್ತ ಕಸದ ರಾಶಿಗಳು ಹೆಚ್ಚಾಗಿರುವುದು ಪ್ರಯಾಣಿಕರು ಹಾಗೂ ಸ್ಥಳೀಯರ ಅಸಮಾಧಾನಕ್ಕೆ ಕಾರಣವಾಗಿದೆ.



ಪ್ಲಾಸ್ಟಿಕ್ ತ್ಯಾಜ್ಯ

ರೈಲು ನಿಲ್ದಾಣದ ಕೆಲವು ಭಾಗಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ, ಆಹಾರದ ಅವಶೇಷಗಳು, ಬಾಟಲಿಗಳು ಹಾಗೂ ಇತರೆ ತ್ಯಾಜ್ಯಗಳು ಬಿದ್ದಿವೆ. ಮಳೆಗಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ಈ ಕಸದಿಂದ ದುರ್ವಾಸನೆ ಹರಡುತ್ತಿದ್ದು, ಸೊಳ್ಳೆಗಳು ಹಾಗೂ ಇತರ ಕೀಟಗಳ ಉತ್ಪತ್ತಿಗೆ ಕಾರಣವಾಗುತ್ತಿದೆ ಎಂದು ಸ್ಥಳೀಯ ಜನರು ದೂರಿದ್ದಾರೆ.

ದೂರು ಸಲ್ಲಿಕೆ

ಈ ಕುರಿತು ಗ್ರಾಮಸ್ಥರು ಬಿಳಿನೆಲೆ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ, ಕಡಬ ತಾ.ಪಂ. ಇಒ ಹಾಗೂ ದ.ಕ. ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅವರಿಗೆ ಲಿಖಿತ ದೂರು ಸಲ್ಲಿಸಿರುವುದಾಗಿ ಸಾರ್ವಜನಿಕರು ತಿಳಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಗಿದ್ದರೂ ಸಮಸ್ಯೆ ಪುನರಾವರ್ತನೆಯಾಗಿದೆ. ರೈಲ್ವೆ ಇಲಾಖೆ, ಗ್ರಾಮ ಪಂಚಾಯತ್ ಹಾಗೂ ಜಿಲ್ಲಾ ಆಡಳಿತವು ಈ ಸಮಸ್ಯೆ ಗಂಭೀರವಾಗಿ ಪರಿಗಣಿಸಿ ನಿಲ್ದಾಣದ ಸುತ್ತಮುತ್ತಲಿನ ಪ್ರದೇಶವನ್ನು ಸಂಪೂರ್ಣ ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಸುತ್ತಮುತ್ತ

ಆದರ್ಶ್ ಫ್ರೆಂಡ್ ಅಸೋಸಿಯೇಶನ್ ಅಧ್ಯಕ್ಷರಾಗಿ ಪ್ರಶಾಂತ್



ಮಂಗಳೂರು: ಚಿಲಿಂಬಿ ಆದರ್ಶನಗರದ ಆದರ್ಶ್ ಫ್ರೆಂಡ್ಸ್ ಅಸೋಸಿಯೇಶನ್‌ನ ನೂತನ ಅಧ್ಯಕ್ಷರಾಗಿ ಪ್ರಶಾಂತ್ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ವಿನೀತ್ ವಿ. ಸುವರ್ಣ, ಮಹಿಳಾ ಉಪಾಧ್ಯಕ್ಷೆಯಾಗಿ ಪ್ರತೀಕ್ಷಾ ಕಿಶೋರ್, ಕಾರ್ಯದರ್ಶಿಯಾಗಿ ಕಿಶೋರ್ ಕೋಟ್ಯಾನ್, ಜೊತೆ ಕಾರ್ಯದರ್ಶಿಯಾಗಿ ಪ್ರಥಮ್ ಎಸ್. ಪೂಜಾರಿ, ಕೋಶಾಧಿಕಾರಿಯಾಗಿ ಶೋಭಾ ಅಶೋಕ್, ಸಂಘಟನಾ ಕಾರ್ಯದರ್ಶಿಗಳಾಗಿ ಸೃಜನ್ ರಾಜೇಂದ್ರ, ಲಕ್ಷ್ಮಣ್, ಅಪರ್ಣ ವೈ ಅಮೀನ್ ಮತ್ತು ನಮೃತಾ ರಾಜೇಶ್, ಕ್ರೀಡಾ ಕಾರ್ಯದರ್ಶಿ ಗಳಾಗಿ ಸಂತೋಷ್, ನಿತಿನ್, ಯಶೋಧ ಮಹೇಶ್ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೂ.20ರಂದು ಕಂಪ್ಯೂಟರ್ ತರಬೇತಿ ಪ್ರಮಾಣಪತ್ರ ವಿತರಣೆ

ಶಿರ್ವ: ಉಡುಪಿ ಗ್ರಾಮೀಣ ಬಂಟರ ಸಂಘದ ಸಭಾಭವನ ನಿರ್ಮಾಣ ಮತ್ತು ಅಭಿವೃದ್ಧಿ ಸಮಿತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಒಂದು ತಿಂಗಳ ಡಿಜಿಟಲ್ ಸಾಕ್ಷರತಾ ಕಂಪ್ಯೂಟರ್ ತರಬೇತಿ ಕಾರ್ಯಕ್ರಮದ 21ನೇ ಬ್ಯಾಚ್ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ವಿತರಣಾ ಸಮಾರಂಭ ಜೂ.20ಕ್ಕೆ ಅಪರಾಹ್ನ 3.30ಕ್ಕೆ 'ಕೌಶಲ್ಯ ಅಭಿವೃದ್ಧಿ ಕೇಂದ್ರ' ಆಶಾ ಪ್ರಕಾಶ್ ಶೆಟ್ಟಿ ಕನ್ವೆನ್ಷನ್ ಸೆಂಟರ್ ಕುಂತಳನಗರ ಇಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ನಿಟ್ಟೆ ಎನ್‌ಎಂಎಎಂ ತಂತ್ರಜ್ಞಾನ ಸಂಸ್ಥೆಯ ಸಮಾಲೋಚನೆ,ಕಲ್ಯಾಣ ತರಬೇತಿ ಮತ್ತು ಉದ್ಯೋಗ ವಿಭಾಗದ ಮುಖ್ಯಸ್ಥ ಭರತ್ ಜಿ.ಕುಮಾರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸ್ ಉಡುಪಿ ಇದರ ವೈಸ್ ಪ್ರಿನ್ಸಿಪಾಲ್ ರವಿ ಕೊಟ್ಯಾನ್, ಬಂಟರ ಸಂಘದ ಅಧ್ಯಕ್ಷ ಡಾ.ಎಚ್.ಬಿ.ಶೆಟ್ಟಿ ಮಾಜಿ ಅಧ್ಯಕ್ಷ ಎ.ಶ್ರೀಧರ ಶೆಟ್ಟಿ, ಹೇಮಂತ್ ಶೆಟ್ಟಿ ಟ್ರಸ್ಟಿ ಜಗದೀಶ ಹೆಗ್ಡೆ ಭಾಗವಹಿಸುವರು. ಸಂಘದ ಕಾರ್ಯದರ್ಶಿ ಸಹಿತ ಪದಾಧಿಕಾರಿಗಳು ಉಪಸ್ಥಿತರಿರುವರು ಎಂದು ಪ್ರಕಟನೆ ತಿಳಿಸಿದೆ.

ರೋಟರಿಯಿಂದ ಕುಟುಂಬ ಸಮ್ಮಿಲನ

ಸುಬ್ರಹ್ಮಣ್ಯ: ರೋಟರಿ ಕ್ಲಬ್ ಸುಬ್ರಹ್ಮಣ್ಯ ವತಿಯಿಂದ ದೋಣಿಮಕ್ಕಿ ಸಭಾಂಗಣದಲ್ಲಿ ಕುಟುಂಬ ಸಮ್ಮಿಲನ ಕಾರ್ಯಕ್ರಮ ನಡೆಯಿತು. ರೋಟರಿ ಕ್ಲಬ್ ಅಧ್ಯಕ್ಷ ಜಯಪ್ರಕಾಶ್ ಆರ್. , ನಿಯೋಜಿತ ರೋಟರಿ ಸಹಾಯಕ ರಾಜ್ಯಪಾಲ ಅಬ್ದುಲ್ ರಝಾಕ್ ಕಬಾಕಾರ್, ರೋಟರಿ ಸಹಾಯಕ ರಾಜ್ಯಪಾಲ ಪ್ರೊ. ಬಾಲಕೃಷ್ಣಪೈ, ಜೋನಲ್ ಲೆಫ್ಟಿನೆಂಟ್ ವಿಜಯ ಕುಮಾರ್ ಅಮೈ, ನಿಯೋಜಿತ ಜೋನಲ್ ಲೆಫ್ಟಿನೆಂಟ್ ಚಂದ್ರಶೇಖರ ನಾಯರ್, ಸುಬ್ರಹ್ಮಣ್ಯ ಕ್ಲಬ್‌ನ ನಿಯೋಜಿತ ಅಧ್ಯಕ್ಷ ರೋಹಿತ್ ಬಿ.ಬಿ., ಕಾರ್ಯದರ್ಶಿ ಭವಾನಿ ಶಂಕರ ಪೈಲಾಜೆ, ನಿಯೋಜಿತ ಕಾರ್ಯದರ್ಶಿ ಪ್ರಶಾಂತ್ ಕೋಡಿಬೈಲ್, ಪೂರ್ವ ಎ.ಜಿ. ಆಸ್ಕರ್ ಆನಂದ್ ವೇದಿಕೆಯಲ್ಲಿದ್ದರು.

ಈ ಸಂದರ್ಭ ಸಿಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಸುಬ್ರಹ್ಮಣ್ಯದ ನಿಧಿ ಬಿ.ಡಿ. ಅವರನ್ನು ಸನ್ಮಾನಿಸಲಾಯಿತು.

ಮುಂಚಿಕಾಪು ಪ್ರದೇಶಕ್ಕೆ ಜಿ. ಕೃಷ್ಣಪ್ಪ ಭೇಟಿ



ಕಡಬ: ಸುಳ್ಯ ಕ್ಷೇತ್ರದ ಮರ್ದಾಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಮುಂಚಿಕಾಪು ಪ್ರದೇಶಕ್ಕೆ ಕಾಂಗ್ರೆಸ್‌ನ ಸುಳ್ಯವಿಧಾನಸಭಾ ಕ್ಷೇತ್ರದ ಉಸ್ತುವಾರಿ, ಕೆಪಿಸಿಸಿ ಸಂಯೋಜಕ ಜಿ. ಕೃಷ್ಣಪ್ಪ ರಾಮಕುಂಜ ಅವರು ಭೇಟಿ ನೀಡಿ ಜನರ ಸಮಸ್ಯೆ ಆಲಿಸಿದರು. ಆ ಭಾಗದಲ್ಲಿರುವ ಕುಡಿಯುವ ನೀರಿನ ಸಮಸ್ಯೆ, ಸ್ಮಶಾನದ ಅವ್ಯವಸ್ಥೆ, ಕಸ ವಿಲೇವಾರಿ ಘಟಕದ ಸಮಸ್ಯೆಗಳ ಬಗ್ಗೆ ಸ್ಥಳೀಯ ನಾಗರಿಕರು ಕೃಷ್ಣಪ್ಪ ಅವರಲ್ಲಿ ಅಹವಾಲು ಸಲ್ಲಿಸಿದರು. ಮೂಲಭೂತ ಸಮಸ್ಯೆಗಳನ್ನು ಖುದ್ದು ಪರಿಶೀಲನೆ ನಡೆಸಿದ ಕೃಷ್ಣಪ್ಪ ಅವರು ಸಂಬಂಧಪಟ್ಟ ಅಕಾರಿಗಳಿಗೆ ದೂರವಾಣಿ ಕರೆ ಮಾಡಿ ಕೂಡಲೇ ಸಮಸ್ಯೆಗಳನ್ನು ಪರಿಹರಿಸುವಂತೆ ಸೂಚಿಸಿದರು. ಜಿ.ಪಂ. ಮಾಜಿ ಸದಸ್ಯ ಪಿ.ಪಿ.ವರ್ಗೀಸ್, ಕಡಬ ಬ್ಲಾಕ್ ಕಾಂಗ್ರೆಸ್ ಎಸ್‌ಸಿ ಘಟಕದ ಅಧ್ಯಕ್ಷ ಗೋಪಿನಾಥ್, ಮುಖಂಡರಾದ ಹರೀಶ್, ನಾಗೇಶ್, ಶರತ್ ಮತ್ತಿತರರಿದ್ದರು.

ಕೊಡಗು ಗೌಡ ಸಮಾಜದಲ್ಲಿ 'ಗೌಡ ವಧು ವರರ ಸಮಾವೇಶ' | ಕೊಂಬಾರನ ಬಸಪ್ಪ ಸಲಹೆ

ಅಹಂ ಬಿಟ್ಟಾಗ ಮಾತ್ರ ಸುಖ ಸಂಸಾರ ಸಾಗಿಸಲು ಸಾಧ್ಯ

ಮಡಿಕೇರಿ: ಅಹಂ ಮತ್ತು ತಾನೇ ಶ್ರೇಷ್ಠ ಎಂಬ ಮನೋಭಾವದಿಂದ ಹೊರ ಬಂದಾಗ ಮಾತ್ರವೇ ಸುಖ ಸಂಸಾರ ನಡೆಸಲು ಸಾಧ್ಯ. ಇದನ್ನು ಗೌಡ ಸಮುದಾಯದ ಇಂದಿನ ಯುವ ಪೀಳಿಗೆ ಮನಗಾಣಬೇಕು, ಪೋಷಕರು ಕೂಡ ಈ ಕುರಿತು ಮಕ್ಕಳಿಗೆ ತಿಳಿ ಹೇಳಬೇಕು ಎಂದು ಮೈಸೂರು ಗೌಡ ಸಮಾಜದ ಅಧ್ಯಕ್ಷರು ಹಾಗೂ ನಿವೃತ್ತ ಪ್ರಾಂಶುಪಾಲ ಕೊಂಬಾರನ ಬಸಪ್ಪ ಕರೆ ನೀಡಿದ್ದಾರೆ.



'ದಾಂಪತ್ಯ' ಹೊಂದಾಣಿಕೆಯಾಗಿದೆ

ಕೊಡಗು ಗೌಡ ನಿವೃತ್ತ ನೌಕರರ ಸಂಘದ ವತಿಯಿಂದ ನಗರದ ಕೊಡಗು ಗೌಡ ಸಮಾಜದಲ್ಲಿ ನಡೆದ 10 ಕುಟುಂಬ 18 ಗೋತ್ರದ ಗೌಡ ಸಮುದಾಯದ ವಧು ವರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ದಾಂಪತ್ಯ ಎಂಬುವುದು ಪತಿ-ಪತ್ನಿ ನಡುವಿನ ಹೊಂದಾಣಿಕೆಯಾಗಿದೆ. ಹಿಂದಿನ ಕಾಲಘಟ್ಟದಲ್ಲಿ ಪೋಷಕರು ಗುರುತಿಸಿದ ವಧು ವರನ ನಡುವೆ ವಿವಾಹಗಳು ನಡೆಯುತ್ತಿತ್ತು. ಇಂತಹ ಮದುವೆಗಳಿಂದ ದಾಂಪತ್ಯ ಜೀವನವೂ ಸುಖಕರವಾಗಿರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳ ಪ್ರಭಾವ ಯುವ ಸಮುದಾಯದ ಮೇಲೆ ಗಾಢ ಪರಿಣಾಮ ಬೀರಿದ್ದು, ಸಂಸಾರದಲ್ಲಿ ಹೊಂದಾಣಿಕೆಯ ಕೊರತೆ ಎದುರಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಂಸ್ಕೃತಿ, ಆಚಾರ ವಿಚಾರ ಬೆಳೆಸಬೇಕು

ಸಂಸಾರ, ದಾಂಪತ್ಯ ಜೀವನದ ಬಗ್ಗೆ ಪೋಷಕರು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು. ನಮ್ಮ ಸಂಸ್ಕೃತಿ, ಆಚಾರ ವಿಚಾರ, ಭಾಷೆಯನ್ನು ಉಳಿಸಿ ಬೆಳೆಸಲು ಎಲ್ಲರೂ ಮುಂದಾಗಬೇಕು ಎಂದರು.

ಕೊಡಗು ದಕ್ಷಿಣ ಕನ್ನಡ ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ನಿವೃತ್ತ ಪೌರಾಯುಕ್ತೆ ಮೂಟೇರ ಪುಷ್ಪಾವತಿ ಮಾತನಾಡಿ, ಇಂದು ಮಹಾ ನಗರಗಳಲ್ಲಿ ಕೆಲಸದಲ್ಲಿರುವ ವಧು-ವರನ ಹುಡುಕಿ ಮದುವೆ ಸಂಬಂಧ ಬೆಸೆಯುವ ಮನಸ್ಥಿತಿ ಕಂಡು ಬರುತ್ತಿರುವುದು ದೊಡ್ಡ ದುರಂತವಾಗಿದೆ. ಹುಟ್ಟಿದ ಊರಲ್ಲಿ ಕೃಷಿ, ತೋಟಗಳನ್ನು ಮಾಡುತ್ತಿರುವ ಯುವ ಸಮುದಾಯಕ್ಕೆ ಹೆಣ್ಣು ನೀಡಲು ಹಿಂದೇಟು ಹಾಕಲಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಕೊಡಗು ಗೌಡ ನಿವೃತ್ತ ನೌಕರರ ಸಂಘದ ಜಿಲ್ಲಾಧ್ಯಕ್ಷ ನಿವೃತ್ತ ಎಸ್.ಪಿ. ಚೊಕ್ಕಾಡಿರ ಅಪ್ಪಯ್ಯ ಅವರು ಮಾತನಾಡಿ, ಪ್ರತಿ ವರ್ಷವೂ ಸಮಾವೇಶದಲ್ಲಿ ನೋಂದಣಿ ಸಂಖ್ಯೆ ಏರಿಕೆ ಕಾಣುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ವಧು-ವರರ ಸಮಾವೇಶದಲ್ಲಿ ಯುವಕ ಯುವತಿಯರೂ ಪಾಲ್ಗೊಳ್ಳಬೇಕು. ಇದರಿಂದ ಪರಸ್ಪರ ಪರಿಚಯವಾಗಿ ವಿವಾಹ ಸಂಬಂಧಗಳು ಮೂಡಲು ಸಾಧ್ಯ ಎಂದರು.

> **ಸ್ತ್ರೀ ಲಿಂಗ ಅನುಪಾತ ಕ್ಷೀಣಿಸುತ್ತಿದೆ**
>
> ಅಂಕಿ ಅಂಶಗಳಲ್ಲಿ ಸ್ತ್ರೀ ಲಿಂಗ ಅನುಪಾತವೂ ಕ್ಷೀಣಿಸು ತ್ತಿರುವುದು ಕಂಡು ಬರುತ್ತಿದೆ. ಇಂದು ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರ ಲಾಭದಾಯಕ ಆಗಿದ್ದು, ನಗರ ಪ್ರದೇಶದ ಆದಾಯಕ್ಕಿಂತಲೂ ಅಧಿಕ ಲಾಭ ಮತ್ತು ಸುಸ್ಥಿರ ಬದುಕು ಗ್ರಾಮೀಣ ಭಾಗಗಳಲ್ಲಿದೆ. ಕೃಷಿ ಗೌಡ ಸಮುದಾಯದ ಪರಂಪರೆ. ಮದುವೆ ಎನ್ನುವುದು ಭವಿಷ್ಯ ಮತ್ತು ಸಮುದಾಯದ ಬೆಳವಣಿಗೆಯ ಸಂಕೇತ ಎಂಬುವುದನ್ನು ಮರೆಯಬಾರದು.
>
> ● ಮೂಟೇರ ಪುಷ್ಪಾವತಿ

ನಿವೃತ್ತ ಪ್ರಾಂಶುಪಾಲ ಕೊಂಬಾರನ ಬಸಪ್ಪ ಹಾಗೂ ನಿವೃತ್ತ ಪೌರಾಯುಕ್ತೆ ಮೂಟೇರ ಪುಷ್ಪಾವತಿ ಅವರನ್ನು ಕೊಡಗು ಗೌಡ ನಿವೃತ್ತ ನೌಕರರ ಸಂಘದಿಂದ ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಉಪಾಧ್ಯಕ್ಷ ಶೆಟ್ಟಿಜನ ಗಣಪತಿ, ಕಾರ್ಯದರ್ಶಿ ಕುಂಜಿಲನ ರತ್ನ ಕುಮಾರಿ, ಖಜಾಂಚಿ ಕುಯ್ಯಮುಡಿ ಅಶ್ವಿನ್ ಕುಮಾರ್, ಸಹ ಕಾರ್ಯದರ್ಶಿ ಕಟ್ರತನ ಲಲಿತಾ ಅಯ್ಯಣ್ಣ, ನಿರ್ದೇಶಕರಾದ ಪುದಿಯನೆರವನ ರೇವತಿ ರಮೇಶ್, ಸೂದನ ರತ್ನಾವತಿ, ಕರ್ಣಯ್ಯನ ಬಸಪ್ಪ, ಕೆದಂಬಾಡಿ ಮುಕುಂದ, ತಳೂರು ಕಾಳಪ್ಪ, ಸೂರ್ತಲೆ ರಾಮಚಂದ್ರ, ಪೂಜಾರಿರ ಜಗದೀಶ್, ಕೊಡಗು ಗೌಡ ಸಮಾಜ ಅಧ್ಯಕ್ಷ ದಂಬೆಕೋಡಿ ಆನಂದ, ಕೊಡಗು ಗೌಡ ವಿದ್ಯಾ ಸಂಘದ ಅಂಬೇಕಲ್ ನವೀನ್, ಬೆಂಗಳೂರು ಕೊಡಗು ಗೌಡ ಸಮಾಜ ಅಧ್ಯಕ್ಷ ಅಯ್ಯೇಟಿ ಮೋಹನ್ ಕುಮಾರ್, ಕೋರನ ವಿಶ್ವನಾಥ್, ಕುದುಪಜೆ ಬೋಜಪ್ಪ, ಚೊಕ್ಕಾಡಿ ಪ್ರೇಮ ರಾಘವಯ್ಯ ಮತ್ತಿತರರಿದ್ದರು.

ಮಕ್ಕಳ ಬಾಲ್ಯದ ಆರಂಭಿಕ ಶಿಕ್ಷಣ ಯೋಗ್ಯ, ಗುಣಮಟ್ಟದ್ದಾಗಿರಬೇಕು: ನಾಗರಾಜ್ ಶೆಟ್ಟಿ



ಹೆಬ್ರಿ: ಪೋಷಕರ ಸಹಕಾರ ಬೆಂಬಲದಿಂದ ಈ ಶಿಕ್ಷಣ ಸಂಸ್ಥೆ 27 ವರ್ಷಗಳನ್ನು ಪೂರೈಸಿದೆ. ಎಲ್ಲಾ ಪೋಷಕರಿಗೂ ನಾನು ಋಣಿಯಾಗಿದ್ದೇನೆ. ಮಕ್ಕಳ ಬಾಲ್ಯದ ಆರಂಭಿಕ ಶಿಕ್ಷಣವು ಯೋಗ್ಯ ಮತ್ತು ಗುಣಮಟ್ಟದ್ದಾಗಿರಬೇಕು. ಅದುವೇ ಉನ್ನತ ಶಿಕ್ಷಣಕ್ಕೆ ಅದೇ ಬುನಾದಿ ಎಂದು ಎಸ್.ಆರ್ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಚ್. ನಾಗರಾಜ್ ಶೆಟ್ಟಿ ಅಭಿಪ್ರಾಯಪಟ್ಟರು.

ಅವರು ಎಸ್.ಆರ್ ಪಬ್ಲಿಕ್ ಸ್ಕೂಲ್ ನಲ್ಲಿ ನಡೆದ ನರ್ಸರಿ, ಎಲ್.ಕೆ.ಜಿ ಮತ್ತು ಯು.ಕೆ.ಜಿ ಮಕ್ಕಳ ತರಗತಿ ಆರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ಆರೋಗ್ಯದ ಬಗ್ಗೆ ಜಾಗೃತೆ ಅಗತ್ಯ

ವಿದ್ಯಾರ್ಥಿಗಳಿಗೆ ಇನ್ನೂ ಹೆಚ್ಚಿನ ಅತ್ಯಾಧುನಿಕ ರೀತಿಯ ಕ್ರೀಡಾ ಸೌಕರ್ಯದ ವ್ಯವಸ್ಥೆ ನಮ್ಮ ಸಂಸ್ಥೆಯಲ್ಲಿ ದೊರೆಯುವಂತಾಗುತ್ತದೆ. ಬಾಲ್ಯದಲ್ಲಿಯೇ ಮಕ್ಕಳು ಸ್ವಚ್ಛತೆ ಮತ್ತು ಆರೋಗ್ಯದ ಕುರಿತು ಜಾಗೃತಿ ವಹಿಸಬೇಕು. ಇದು ಪ್ರತಿಯೊಬ್ಬ ಪೋಷಕರ ಆದ್ಯ ಕರ್ತವ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಎಸ್.ಆರ್. ಸಮೂಹ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸಪ್ನಾ ಎನ್. ಶೆಟ್ಟಿ ಮಾತನಾಡಿದರು.

ಈ ಸಂದರ್ಭ ಎಸ್.ಆರ್. ಪಬ್ಲಿಕ್ ಸ್ಕೂಲಿನ ಪ್ರಾಂಶುಪಾಲೆ ಭಗವತಿ, ಉಪ ಪ್ರಾಂಶುಪಾಲ ದೀಪಕ್ ಎನ್., ಸಂಚಾಲಕಿ ಸುಜಾತ ಮತ್ತಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿಶೇಷ ಆಕರ್ಷಣೆಯಾಗಿ 1ನೇ ತರಗತಿಯ ವಿದ್ಯಾರ್ಥಿನಿ ಜಾನ್ವಿ ಶಾರದೆಯ ವೇಷಭೂಷಣದಲ್ಲಿ ಗಮನಸೆಳೆದಳು. ವಿದ್ಯಾರ್ಥಿಗಳಾದ ಸಂವೇದ್ ಭಟ್ ಸ್ವಾಗತಿಸಿ, ವಿರಾಜ್ ಪೈ ವಂದಿಸಿದರು. ಪ್ರಿಶಾ ಕಾರ್ಯಕ್ರಮ ನಿರೂಪಿಸಿದರು.

ಮೂಡುಬಿದಿರೆ ಬಾಬು ರಾಜೇಂದ್ರ ಪ್ರೌಢಶಾಲೆ: ಸಂಸ್ಥಾಪಕರ ದಿನಾಚರಣೆ



ಮೂಡುಬಿದಿರೆ: ಇಲ್ಲಿನ ಬಾಬು ರಾಜೇಂದ್ರ ಪ್ರೌಢಶಾಲೆಯಲ್ಲಿ ಸಂಸ್ಥಾಪಕರ ದಿನವನ್ನು ಆಚರಿಸಲಾಯಿತು. ಅದಾನಿ ಗ್ರೂಪ್ ನ ಕರ್ನಾಟಕದ ಅಧ್ಯಕ್ಷ ಕಿಶೋರ್ ಆಳ್ವ ಶಾಲೆಯ ಹಸ್ತ ಪತ್ರಿಕೆ 'ರಾಜೇಂದ್ರ'ವನ್ನು ಅನಾವರಣ ಗೊಳಿಸಿ ಮಾತನಾಡಿ, ಅವಿಭಜಿತ ದ.ಕ, ಉಡುಪಿ ಜಿಲ್ಲೆಯಲ್ಲಿ 5000 ದಷ್ಟು ಶಿಕ್ಷಣ ಸಂಸ್ಥೆಗಳಿವೆ. ಮೂಡುಬಿದಿರೆಯಲ್ಲಿಯೂ ಹಲವು ಶಾಲೆಗಳಿದ್ದು ಶಿಕ್ಷಣ ಕಾಶಿಯಾಗಿ ಬೆಳೆದಿದೆ. ನಾವಿಂದು ಸ್ಪರ್ಧಾತ್ಮಕ ಯುಗದಲ್ಲಿದ್ದು ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸಬೇಕಾಗಿದೆ. ಶಾಲಾಭಿವೃದ್ಧಿಗೆ ಸಹಕಾರ ನೀಡುವುದಾಗಿ ತಿಳಿಸಿದರು.

ಶಾಲಾ ಆಡಳಿತ ಮಂಡಳಿ ಅಧ್ಯಕ್ಷ, ಮಾಜಿ ಸಚಿವ ಕೆ. ಅಭಯಚಂದ್ರ ಜೈನ್ ಅಧ್ಯಕ್ಷತೆ ವಹಿಸಿ ಮಾತನಾಡಿ , ಮೂಡುಬಿದಿರೆಯ 2ನೇ ಪ್ರೌಢಶಾಲೆ ಇದಾಗಿದ್ದು ಇಲ್ಲಿಗೆ ಬೇರೆ ಜಿಲ್ಲೆಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಇಲ್ಲಿ ವಸತಿ ನಿಲಯಗಳು ಇರುವುದರಿಂದ ಇದು ಸಹಕಾರಿಯಾಗಿದೆ ಎಂದರು.

ಎಂಸಿಎಸ್ ಬ್ಯಾಂಕಿನ ವಿಶೇಷ ಕರ್ತವ್ಯಾಧಿಕಾರಿ ಚಂದ್ರಶೇಖರ ಎಂ. ಮಾತನಾಡಿದರು.

ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಶಿಕ್ಷಕಿ ಅಶ್ವಿನಿ ಮಾಹಿತಿ ನೀಡಿದರು. ಶಾಲಾ ಆಡಳಿತ ಮಂಡಳಿಯ ಉಪಾಧ್ಯಕ್ಷ ಪುಷ್ಪರಾಜ್ ಜೈನ್, ಸದಸ್ಯರಾದ ಬಾಹುಬಲಿ, ರಾಮ್ ಪ್ರಸಾದ್ ಭಟ್, ಪದ್ಮಜಾ, ಅಜಿತ್ ಕುಮಾರ್, ವೆಂಕಟೇಶ್ ಕಾಮತ್, ನಾಗರಾಜ್, ನಿವೃತ ಸಿಬಂದಿ ದಾಮೋದರ್ ಆಚಾರ್ ಭಾಗವಹಿಸಿದ್ದರು. ಶಿಕ್ಷಕರಾದ ಭರತ್, ಕಿರಣ್, ಅಣ್ಣು, ಸಂಜೀವ ಉಪಸ್ಥಿತರಿದ್ದರು. ಶಾಲಾ ಸಂಚಾಲಕ ರಮನಾಥ್ ಭಟ್ ಸ್ವಾಗತಿಸಿದರು. ಶಿಕ್ಷಕ ವೆಂಕಟ್ರಮಣ ಕೆರೆಗದ್ದೆ ನಿರೂಪಿಸಿದರು. ನಿವೃತ್ತ ಶಿಕ್ಷಕ ಬಾಹುಬಲಿ ವರದಿ ಮಂಡಿಸಿದರು. ಮುಖ್ಯ ಶಿಕ್ಷಕಿ ತೆರೆಜಾ ಕಡೋರ್ಜಾ ವಂದಿಸಿದರು.

ಮಗುವಿನ ಪ್ರತೀ ಬೆಳವಣಿಗೆಯಲ್ಲೂ ತಾಯಿಯ ಪಾತ್ರ ಮಹತ್ತರವಾದುದು



ಕುಂದಾಪುರ: ಪ್ರತಿಯೊಂದು ಮಗುವಿನ ಬೆಳವಣಿಗೆಯಲ್ಲಿ ತಾಯಿ ಪಾತ್ರ ಅತ್ಯಂತ ಪ್ರಮುಖವಾದುದು. ಮಗುವಿನ ಸಮಗ್ರ ವಿಕಾಸಕ್ಕೆ ಶಿಕ್ಷಣ ಸಂಸ್ಥೆ ಶೈಕ್ಷಣಿಕ ಮಾರ್ಗದರ್ಶನದೊಂದಿಗೆ ಸಮಾಜದಲ್ಲಿನ ಪ್ರತಿಯೊಬ್ಬ ಪೋಷಕರು ಹೊಣೆಗಾರಿಕೆ ಅರಿತು ಮಗುವಿನ ಮನೋವಿಕಾಸಕ್ಕೆ ಕಾರಣರಾಗಬೇಕು ಎಂದು ಬಾಂಡ್ಯಾ ಎಜುಕೇಶನಲ್ ಟ್ರಸ್ಟ್‌ನ ಜಂಟಿ ಕಾರ್ಯ ನಿರ್ವಾಹಕಿ ಅನುಪಮಾ ಎಸ್. ಶೆಟ್ಟಿ ಹೇಳಿದ್ದಾರೆ.

ವಕ್ವಾಡಿಯ ಬಾಂಡ್ಯ ಎಜುಕೇಶನಲ್ ಟ್ರಸ್ಟ್ ಅಂಗ ಸಂಸ್ಥೆಯಾದ ಗುರುಕುಲ ಪಬ್ಲಿಕ್ ಸ್ಕೂಲ್‌ನಲ್ಲಿ 2026- 27ನೇ ಸಾಲಿನ ಪೋಷಕ ಶಿಕ್ಷಕರ ಮೊದಲ ಸಭೆಯನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

> **ಮೌಲ್ಯಯುತ ಶಿಕ್ಷಣ ಅಗತ್ಯ**
>
> ಅಂಕಗಳೇ ಮುಖ್ಯವಾಗಿರದೆ ಮೌಲ್ಯಯುತ ಶಿಕ್ಷಣ ಇಂದು ಅತಿ ಅಗತ್ಯವಾದದ್ದು. ಸುದೃಢ ಸಮಾಜಕ್ಕೆ ಪ್ರತಿಯೊಬ್ಬ ಮಗುವಿನ ಕಾಣಿಕೆ ಮಹತ್ತರವಾದದು. ಮಕ್ಕಳ ಮನಸ್ಸಿನಲ್ಲಿ ಅಡಗಿದ ಸುಪ್ತ ಪ್ರತಿಭೆ ಗುರುತಿಸಿ ಮುನ್ನಡೆಸ ಬೇಕಾದದು ನಮ್ಮೆಲ್ಲರ ಗುರಿಯಾಗಬೇಕು.
>
> ● ಅನುಪಮಾ ಎಸ್. ಶೆಟ್ಟಿ

ಪ್ರಾಂಶುಪಾಲೆ ಡಾ. ರೂಪ ಶೆಣೈ ಸ್ವಾಗತಿಸಿ, ಈ ಶೈಕ್ಷಣಿಕ ವರ್ಷದ ಚಟುವಟಿಕೆ, ನಿಯಮ, ಬೋಧನಾ ವಿಧಾನ ವಿಷಯಗಳ ಬಗ್ಗೆ ತಿಳಿಸಿದರು. ಶಿಕ್ಷಕರಾದ ಪ್ರಿಯಾಂಕಾ ವೆಂಕಟೇಶ್ ಪ್ರಾರ್ಥಿಸಿ, ಆಶ್ರಿತಾ ನಿರೂಪಿಸಿದರು.

ಪರಿಸರದ ನಾಶಕ್ಕೆ ಮಾನವನ ಆಸೆ, ದುರಾಸೆಗಳೇ ಕಾರಣ: ಅನಿಲ್ ಪಂಡಿತ್



ಬಂಟ್ವಾಳ: ಸ್ವಚ್ಛ ಪರಿಸರ ನಮ್ಮ ಧ್ಯೇಯ, ಹಸಿರು ಬದುಕೆ ನಮ್ಮ ಶ್ರೇಯ, ಮಾನವನ ಆಸೆ ದುರಾಸೆಗಳ ಸರಮಾಲೆಯಿಂದ ಪರಿಸರ ನಾಶಪಡಿಸುತ್ತಾ ಸ್ವಾರ್ಥ ಜೀವನವನ್ನು ನಡೆಸುತ್ತಿದ್ದಾನೆ,ಪ್ರತಿಯೋರ್ವರು ತಮ್ಮ ಜನ್ಮದಿನಕ್ಕೆ ಗಿಡ ನೆಟ್ಟು ಬೆಳೆಸಿ ಜೀವನದಿದ್ದಕ್ಕೂ ಪೋಷಿಸುವುದರಿಂದ ಜೀವನಕ್ಕೂ ಒಂದು ಅರ್ಥ ಸಿಗುತ್ತದೆ. ಎಂದು ಸಂಸ್ಕಾರ ಭಾರತಿ ಜಿಲ್ಲಾ ಉಪಾಧ್ಯಕ್ಷರು, ಜ್ಯೋತಿಷ್ಯರಾದ ಅನಿಲ್ ಪಂಡಿತ್ ಹೇಳಿದ್ದಾರೆ.

ಶನಿವಾರ ವಾತ್ಸಲ್ಯಮಯಿ ಮಹಿಳಾ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಜವಾಹರ ಬಾಲ್ ಮಂಚ್ ಮಂಗಳೂರುದಕ್ಷಿಣಕನ್ನಡ ಇದರಸಂಯುಕ್ತ ಆಶ್ರಯದಲ್ಲಿ ವೀರಕಂಬ ಗ್ರಾಮದ ಮಜಿ ದ.ಕ.ಜಿ.ಪಂ.ಹಿ.ಪ್ರಾ. ಶಾಲೆಯಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ, ವನಮಹೋತ್ಸವ ಹಾಗೂ ಬಾಲಕಾರ್ಮಿಕ ವಿರೋಧಿ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಾತ್ಸಲ್ಯ ಮಹಿಳಾ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆಯ ಸಂಸ್ಥಾಪಕರು , ಜವಾಹರ ಬಾಲ್ ಮಂಚ್ ದಕ್ಷಿಣ ಕನ್ನಡ ಇದರ ಜಿಲ್ಲಾಧ್ಯಕ್ಷರಾದ ಶೈಲಜಾ ರಾಜೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇದಕ್ಕು ಮೊದಲು ಶಾಲಾ ಆವರಣದಲ್ಲಿ ಹಣ್ಣಿನ ಗಿಡವನ್ನು ನೆಟ್ಟು ಅದರ ಮಹತ್ವ ತಿಳಿಸಲಾಯಿತು. ವಿದ್ಯಾರ್ಥಿಗಳಿಗೆ ಸ್ವಚ್ಛ ಮತ್ತು ಸುಂದರ ಪರಿಸರದ ವಿಷಯದಲ್ಲಿ ಚಿತ್ರಕಲೆ ಮತ್ತು ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ವಾತ್ಸಲ್ಯ ಮಹಿಳಾ ಅಭಿವೃದ್ಧಿ -ಸಂಶೋಧನಾ ಸಂಸ್ಥೆ ಸದಸ್ಯೆ ಇಂದಿರಾ, ಮೊಹಮ್ಮದ್ ಹಾರೂನ್ ಫರ್ಹಾನ್, ಲಿಖಿತಾ, ಉಪಸ್ಥಿತರಿದ್ದರು. ಮುಖ್ಯ ಶಿಕ್ಷಕಿ ಬೆನಡಿಕ್ಟಾ ಆಗ್ನೇಸ್ ಮಂಡೋನ್ಸ ಸ್ವಾಗತಿಸಿ, ಶಿಕ್ಷಕಿ ಸಂಪ್ರಿಯ ವಂದಿಸಿ, ಹಿರಿಯ ಶಿಕ್ಷಕಿ ಸಂಗೀತ ಶರ್ಮ ಪಿ.ಜಿ. ನಿರೂಪಿಸಿದರು.

ಬಿಲ್ಲವ ಸಮಾಜ ಸೇವಾ ಸಂಘ: ಯುವವಾಹಿನಿ ಮುಲ್ಕಿ ಘಟಕದ ಪದಗ್ರಹಣ ಸಮಾರಂಭ



ಮುಲ್ಕಿ: ಯುವ ಸಮಾಜ ಶೈಕ್ಷಣಿಕ ಧಾರ್ಮಿಕ ಸಾಂಸ್ಕೃತಿಕ, ಸಂಘಟನಾತ್ಮಕವಾಗಿ ಬೆಳೆಯಲು ಯುವ ವಾಹಿನಿ ಬಹಳ ಪೂರಕ ಎಂದು ಮುಲ್ಕಿ ನ.ಪಂ. ಮಾಜಿ ಅಧ್ಯಕ್ಷ ಸತೀಶ್ ಅಂಚನ್ ಹೇಳಿದರು.

ಮುಲ್ಕಿ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಶನಿವಾರ ಯುವವಾಹಿನಿ ಮುಲ್ಕಿ ಘಟಕದ ಪದಗ್ರಹಣ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಯುವವಾಹಿನಿ ಕೇಂದ್ರ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು ಮಾತನಾಡಿ, ಯುವವಾಹಿನಿಯ ತತ್ವ ಆದರ್ಶಗಳು ಯುವ ಜನರನ್ನು ನಾಯಕತ್ವದ ಗುಣಗಳಿಂದ ಬೆಳೆಸುವ ಜೊತೆಗೆ ಸಮಾಜ ಮುಖಿಯಾಗಿ ಸಹಕಾರಿಯಾಗಿ ಬೆಳೆಸುತ್ತದೆ ಎಂದರು.

ಈ ಸಂದರ್ಭ ಸಂಸ್ಥೆಯ 24ನೇ ಅಧ್ಯಕ್ಷರಾಗಿ ಚರಿಷ್ಮಾ ಶ್ರೀನಿವಾಸ್ ಮತ್ತು ಅವರ ತಂಡವನ್ನು ಪದಗ್ರಹಣಗೊಳಿಸಲಾಯಿತು. ಯುವವಾಹಿನಿ ಕೇಂದ್ರ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಪಡ್ಪು ಪ್ರತಿಜ್ಞಾವಿಧಿ ಭೋಧಿಸಿದರು. ಈ ಸಂದರ್ಭ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಸಾಧಕ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಯುವವಾಹಿನಿ ಮೂಲ್ಕಿ ಘಟಕದ ಅಧ್ಯಕ್ಷ ವಿನಯ ಕುಮಾರ್ ಮಟ್ಟು ಅಧ್ಯಕ್ಷತೆ ವಹಿಸಿದ್ದರು.

ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಉಪಾಧ್ಯಕ್ಷೆ ಸೀತಾ ಗೋಪಾಲ್ ಕೋಟ್ಯಾನ್, ಯುವವಾಹಿನಿ ಕೇಂದ್ರ ಸಮಿತಿಯ ಸಂಘಟನಾ ಕಾರ್ಯದರ್ಶಿ ಸುಶಾಂತ್ ಕರ್ಕೇರಾ ಮೂಡಬಿದ್ರಿ, ಮೂಲ್ಕಿ ಘಟಕದ ಕಾರ್ಯದರ್ಶಿ ಪ್ರೇರಣಾ ಡಿ., ಕೋಶಾಧಿಕಾರಿ ಪ್ರಥ್ವಿಕ್ ಡಿ. ಕೋಟ್ಯಾನ್, ನಿಯೋಜಿತ ಅಧ್ಯಕ್ಷೆ ಚರಿಷ್ಮಾ ಶ್ರೀನಿವಾಸ್, ಕಾರ್ಯದರ್ಶಿ ವೇದಾ ಜಯಕುಮಾರ್ ಕುಬೆವೂರು ಹಾಗೂ ವಿವಿಧ ಪದಾಧಿಕಾರಿಗಳು ಇದ್ದರು. ವಿನಯ ಕುಮಾರ್ ಮಟ್ಟು ಸ್ವಾಗತಿಸಿದರು, ಸತೀಶ್ ಕಿಲ್ಪಾಡಿ ನಿರೂಪಿಸಿದರು. ವೇದಾ ಜಯಕುಮಾರ್ ವಂದಿಸಿದರು.



ಯಕ್ಷ ಧ್ರುವ ಪಟ್ಲ ಫೌಂಡೇಶನ್ ಆಶ್ರಯದಲ್ಲಿ ಸುಬ್ರಹ್ಮಣ್ಯದ ಎಸ್‌ಎಸ್‌ಪಿಯು ಕಾಲೇಜಿನ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿರುವ ಉಚಿತ ಯಕ್ಷ ಶಿಕ್ಷಣದ ಉದ್ಘಾಟನೆ ಶನಿವಾರ ನೆರವೇರಿತು. ಶಿಕ್ಷಕ ರಕ್ಷಕ ಸಂಘದ ಅಧ್ಯಕ್ಷ ರಾಮಕೃಷ್ಣ ಹೊಳ್ಳಾರು ಕಾರ್ಯಕ್ರಮ ಉದ್ಘಾಟಿಸಿದರು. ಮುಖ್ಯಗುರು ನಂದಾ ಹರೀಶ್ ಅಧ್ಯಕ್ಷತೆ ವಹಿಸಿದ್ದರು. ಯಕ್ಷ ಗುರು ಸುಂದರ ಗೌಡ, ಹಿರಿಯ ಸಹಶಿಕ್ಷಕ ಎಂ. ಕೃಷ್ಣಭಟ್, ಅಧ್ಯಾಪಕಿ ಚೇತಾಕ್ಷಿ, ದೈಹಿಕ ಶಿಕ್ಷಣ ಶಿಕ್ಷಕಿ ಸ್ಮಿತಾ, ಶಿಕ್ಷಕ ಸತೀಶ್ ಮತ್ತಿತರರಿದ್ದರು.



ಸಾಲಿಗ್ರಾಮ ಶ್ರೀ ಆಂಜನೇಯ ದೇವಸ್ಥಾನ ಸಮೀಪದಲ್ಲಿ ಅಪೋಲೋ ಫಾರ್ಮಸಿ ಆರಂಭಗೊಂಡಿದ್ದು ಇದನ್ನು ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಳ ಆಡಳಿತ ಮಂಡಳಿ ಸದಸ್ಯ ಕೆ. ತಾರಾನಾಥ ಹೊಳ್ಳ ಉದ್ಘಾಟಿಸಿದರು. ಸಂಸ್ಥೆ ಅಧಿಕಾರಿ ಸೆಂಥಿಲ್ ಕುಮಾರ, ಶರದ್, ಪ್ರಭು.ಇ, ಹಾಗೂ ಸಂದೀಪ್ ಶೆಟ್ಟಿ,ಮ್ಯಾನೇಜರ್ ವಿನಿತಾ.ಸಿ ಮತ್ತು ಸಾಲಿಗ್ರಾಮ ಎಸ್‌ಬಿಐ ಬ್ಯಾಂಕ್ ಪ್ರಕಾಶ್, ಅಪೋಲೋ ಸಿಬ್ಬಂದಿಗಳು, ಮೊದಲಾದವರು ಉಪಸ್ಥಿತರಿದ್ದರು.

ಸಂಪ್ಯ ಮೆಡ್ ಲ್ಯಾಂಡ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಏಕಕಾಲದಲ್ಲಿ ಆರೋಗ್ಯ ತಪಾಸಣಾ ಶಿಬಿರ

ಸಾಮಾಜಿಕ ಚಿಂತನೆಯ ಕಾರ್ಯಕ್ರಮ ಶ್ಲಾಘನೀಯ: ರಾಧಾಕೃಷ್ಣ ಆಳ್ವ

ಪುತ್ತೂರು: ಸಂಪ್ಯದ ಮೆಡ್ ಲ್ಯಾಂಡ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಫ್ಯಾಟಿ ಲಿವರ್ ಫೈಬ್ರೋ ಸ್ಕ್ಯಾನಿಂಗ್ ಶಿಬಿರ, ರಕ್ತದಾನ ಶಿಬಿರ, ಉಚಿತ ಬಂಜೆತನ ತಪಾಸಣಾ ಶಿಬಿರ, ರಕ್ತದಾನ ಶಿಬಿರ ಏಕಕಾಲದಲ್ಲಿ ಯಶಸ್ವಿಯಾಗಿ ಭಾನುವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೆಡ್‌ಲ್ಯಾಂಡ್ ಫೌಂಡೇಶನ್‌ನ ಸಂಸ್ಥಾಪಕರು ಹಾಗೂ ಮೆಡ್ ಲ್ಯಾಂಡ್ ಸ್ಪೆಷಾಲಿಟಿ ಆಸ್ಪತ್ರೆಯ ಚೆಯರ್ ಮ್ಯಾನ್ ಡಾ. ಅಶ್ರಫ್ ಎಸ್. ಕಮ್ಮಾಡಿ ವಹಿಸಿದ್ದರು.

ಪುತ್ತೂರಿನ ಅಭಿವೃದ್ಧಿಗೆ ದಿಕ್ಸೂಚಿ

ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಪುತ್ತೂರು ಬಂಟರ ಮಾತೃ ಸಂಘದ ಸಹ ಸಂಚಾಲಕ ಸಾಜ ರಾಧಾಕೃಷ್ಣ ಆಳ್ವ ಮಾತನಾಡಿ, ಆರೋಗ್ಯ ಕ್ಷೇತ್ರದಲ್ಲಿ ಪುತ್ತೂರಿನ ಅಭಿವೃದ್ಧಿಗೆ ಇದೊಂದು ದಿಕ್ಸೂಚಿ ಆಗಿದೆ. ಇಂತಹ ಆಸ್ಪತ್ರೆಯು ಬೇಡಿಕೆಯಾಗಿತ್ತು, ಕೇವಲವ್ಯವಹಾರಿಕದೃಷ್ಟಿಕೋನಇಟ್ಟುಕೊಳ್ಳದೆ ಇಂತಹ ಸಾಮಾಜಿಕ ಚಿಂತನೆಯ ಕಾರ್ಯಕ್ರಮಗಳು ನಿಜಕ್ಕೂ ಶ್ಲಾಘನೀಯ ಎಂದರು.



> **ಸನ್ಮಾನ**
>
> ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲ ಬಿ.ವಿ. ಸೂರ್ಯನಾರಾಯಣ , ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ವಿಜೇತೆಯಾಗಿ ರಾಜ್ಯಕ್ಕೆ ರ್‍ಯಾಂಕ್ ಪಡೆದ ಪುತ್ತೂರು ಪ್ರಸಾದ್ ನೇತ್ರಾಲಯದ ಕಣ್ಣಿನ ತಜ್ಞರಾಗಿರುವ ಡಾ.ವಿಷ್ಣುಪೂಜಾ ಅವರನ್ನು ಸನ್ಮಾನಿಸಲಾಯಿತು.

500 ಕ್ಕಿಂತಲೂ ಅಧಿಕ ಫಲಾನುಭವಿಗಳು

ಫ್ಯಾಟಿ ಲಿವರ್ ಫೈಬ್ರೋ ಸ್ಕ್ಯಾನಿಂಗ್ ಶಿಬಿರ, ರಕ್ತದಾನ ಶಿಬಿರ, ಉಚಿತ ಬಂಜೆತನ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರ ಏಕಕಾಲದಲ್ಲಿ ಬಹಳ ಯಶಸ್ವಿಯಾಗಿ ನಡೆಸಿ ಸುಮಾರು 500 ಕ್ಕಿಂತಲೂ ಅಧಿಕ ಮಂದಿ ಶಿಬಿರದ ಪ್ರಯೋಜನ ಪಡೆದುಕೊಂಡರು.

ವೇದಿಕೆಯಲ್ಲಿ ಮೆಡ್ ಲ್ಯಾಂಡ್ ಸ್ಪೆಷಲಿಟಿ ಆಸ್ಪತ್ರೆಯ ಮೆಡಿಕಲ್ ಸುಪರಿಂಡೆಂಟ್ ಡಾ.ವಿಶಾಲ್ ಯು.ಪಿ, ಎಲುಬುಮತ್ತುಕೀಲುತಜ್ಞರಾಗಿರುವಡಾ.ನಂದಕಿಶೋರ್ ಭಟ್, ದಕ್ಷಿಣ ಕನ್ನಡ ಜಿಲ್ಲಾ ಮುಸ್ಲಿಂ ಯುವಜನ ಪರಿಷತ್ ಕೋಶಾಧಿಕಾರಿ ಅಶ್ರಫ್ ಬಾವು ಪಡೀಲ್, ಸಿಝ್ಲರ್ ಗ್ರೂಪ್‌ನ ಪ್ರಸನ್ನಕುಮಾರ್ ಶೆಟ್ಟಿ ಪುತ್ತೂರು ತಾಲೂಕು ಕೃಷಿ ಉತ್ಪನ್ನ ಸಹಕಾರಿ ಮಂಡಳಿ ನಿರ್ದೇಶಕ ಅಶ್ರಫ್ ಕಲ್ಲೇಗ ಮೊದಲಾದವರು ಉಪಸ್ಥಿತರಿದ್ದರು. ಮೆಡ್ ಲ್ಯಾಂಡ್ ಆಸ್ಪತ್ರೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಅಬ್ದುಲ್ ರಜಾಕ್ ಸಾಲ್ಮರ ಸ್ವಾಗತಿಸಿ, ಆಸ್ಪತ್ರೆಯ ಪಿ.ಸಿ.ಸಿ. ಅಖಿಲ್ ವೈ. ವಂದಿಸಿ, ರಫೀಕ್ ಎಂ.ಎ. ಕಾರ್ಯಕ್ರಮ ನಿರೂಪಿಸಿದರು.

ಬಂಟ್ವಾಳ: ಆಮಂತ್ರಣ ಬಿಡುಗಡೆ



ಬಂಟ್ವಾಳ: ಯುವವಾಹಿನಿ ಬಂಟ್ವಾಳ ಘಟಕದ 2026-27ನೇ ಸಾಲಿನ ನೂತನ ಕಾರ್ಯಕಾರಿ ಸಮಿತಿಯ ಪದಗ್ರಹಣ ಸಮಾರಂಭವು ಜೂನ್ 21ರಂದು ಬಿ.ಸಿ.ರೋಡಿನ ಬ್ರಹ್ಮಶ್ರೀ ನಾರಾಯಣಗುರು ಸಭಾಭವನದಲ್ಲಿ ನಡೆಯಲಿದೆ. ಈ ಸಮಾರಂಭದ ಆಮಂತ್ರಣ ಪತ್ರವನ್ನು ಬಿ.ಸಿ.ರೋಡಿನ ನಾರಾಯಣಗುರು ಮಂದಿರದಲ್ಲಿ ಭಾನುವಾರ ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಘಟಕದ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು, ನಿಯೋಜಿತ ಅಧ್ಯಕ್ಷ ಕಿರಣ್ ರಾಜ್ ಪೂಂಜರೆಕೋಡಿ, ಮಾಜಿ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಹಾಗೂ ಮೊದಲಾದವರು ಉಪಸ್ಥಿತರಿದ್ದರು.

ಸುತ್ತಮುತ್ತ

ಧರ್ಮಸ್ಥಳ ವಿರುದ್ಧ ಪಿತೂರಿ: ಸಮಗ್ರ ತನಿಖೆಗೆ ಕೆ. ಶ್ರೀಕಾಂತ್ ಆಗ್ರಹ

ಕಾಸರಗೋಡು: ಧರ್ಮಸ್ಥಳ ಕ್ಷೇತ್ರದ ಪಾವಿತ್ರ್ಯತೆ ಮತ್ತು ವಿಶ್ವಾಸಾರ್ಹತೆಯನ್ನು ಕುಂದಿಸುವ ಉದ್ದೇಶದಿಂದ ನಡೆದಿರುವ ಷಡ್ಯಂತ್ರದ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಬಿಜೆಪಿ



ಕಲ್ಲಿಕೋಟೆ ವಲಯಾಧ್ಯಕ್ಷ, ವಕೀಲ ಕೆ.ಶ್ರೀಕಾಂತ್ ಆಗ್ರಹಿಸಿದ್ದಾರೆ. ಈ ಪ್ರಕರಣದಲ್ಲಿ ಬಹುಭಾಷಾ ನಟ ಪ್ರಕಾಶ್ ರಾಜ್ ಅವರ ಪಾತ್ರದ ಕುರಿತು ಸಮಗ್ರ ತನಿಖೆಯಾಗಬೇಕು ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ. ಹಿಂದು ನಂಬಿಕೆ ಹಾಗೂ ಧರ್ಮಸ್ಥಳ ಕ್ಷೇತ್ರದ ಮೇಲಿರುವ ಭಕ್ತಿಯನ್ನು ವ್ಯವಸ್ಥಿತವಾಗಿ ಧ್ವಂಸಗೊಳಿಸುವ ಸಂಚಿನ ಭಾಗವಾಗಿಯೇ ಈ ವಿವಾದವನ್ನು ಉದ್ದೇಶಪೂರ್ವಕವಾಗಿ ಸೃಷ್ಟಿಸಲಾಗಿದೆ. ಹಲವರನ್ನು ಅತ್ಯಾಚಾರ ನಡೆಸಿ ಕೊಲೆಗೈದು ಅವರ ಶವಗಳನ್ನು ತಾನು ಹೂತು ಹಾಕಿದ್ದೇನೆ ಎಂಬ ಚಿನ್ನಯ್ಯನ ಆರೋಪಗಳು ಸಂಪೂರ್ಣ ಆಧಾರರಹಿತ ಎಂಬುದು ಸಿದ್ದರಾಮಯ್ಯ ಸರಕಾರ ರಚಿಸಿದ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ಮನವರಿಕೆಯಾಗಿದ್ದರೂ ಆತನ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲು ಮುಂದಾಗದಿರುವುದು ದುರಂತವಾಗಿದೆ ಎಂದು ಕೆ.ಶ್ರೀಕಾಂತ್ ತಿಳಿಸಿದ್ದಾರೆ. ಧರ್ಮಸ್ಥಳ ವಿವಾದಕ್ಕೆ ಸಂಬಂಧಿಸಿದ ಈ ಸಂಚಿನಲ್ಲಿ ಮನಾಫ್ ಸೇರಿದಂತೆ ಕೇರಳದ ಕೆಲವು ವ್ಯಕ್ತಿಗಳ ಪಾತ್ರದ ಬಗ್ಗೆಯೂ ಸೂಕ್ತ ತನಿಖೆಯಾಗಬೇಕು. ಈ ಕುರಿತು ಸಮಗ್ರ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಕರ್ನಾಟಕ ಸರಕಾರವು ಮುಂದಾಗಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಕಾಸರಗೋಡು ಆಸ್ಟರ್ ಮಿಮ್ಸ್ ಹಾಸ್ಪಿಟಲ್‌ನಿಂದ ವಿನೂತನ ಯೋಜನೆ

ಕಾಸರಗೋಡು: ಆಸ್ಪತ್ರೆಗಳಿಗೆ ನೇರವಾಗಿ ಆಗಮಿಸಲು ತೊಂದರೆಯಾಗುವ ರೋಗಿಗಳಿಗೆ ಮನೆಯಲ್ಲೇ ಆಸ್ಪತ್ರೆ ಮಾದರಿಯ ಚಿಕಿತ್ಸೆ ಒದಗಿಸುವ ವಿನೂತನ ಯೋಜನೆಯನ್ನು ಕಾಸರಗೋಡು ಆಸ್ಟರ್ ಮಿಮ್ಸ್ ಹಾಸ್ಪಿಟಲ್ ಆರಂಭಿಸಿದೆ.

ಈ ನಿಟ್ಟಿನಲ್ಲಿ ಆಸ್ಟರ್ ಮಿಮ್ಸ್ ಕಾಸರಗೋಡು ವತಿಯಿಂದ ಹಮ್ಮಿಕೊಳ್ಳಲಾದ ಆಸ್ಟರ್ ಹೋಮ್ ಯೋಜನೆಯ ಉದ್ಘಾಟನೆ ಮತ್ತು ಹೋಮ್ ಕೇರ್ ಯೂನಿಟ್‌ನ ಉದ್ಘಾಟನೆಯನ್ನು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ನೆರವೇರಿಸಿದರು. ಆಸ್ಪತ್ರೆಯ ಮುಖ್ಯ ನಿರ್ವಹಣಾ ಅಧಿಕಾರಿ ಸುಧೀರ್ ಬಾಸುರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮೊದಲ ಹಂತದಲ್ಲಿ ಆಸ್ಪತ್ರೆಯ 10 ಕಿಲೋ ಮೀಟರ್ ಸುತ್ತಳತೆಯ ಪ್ರದೇಶಗಳಲ್ಲಿ ಈ ಸೇವೆ ಲಭ್ಯವಾಗಲಿದೆ. ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಹೋಮ್ ಕೇರ್ ಟೀಮ್ ಕಾರ್ಯನಿರ್ವಹಿಸಲಿದೆ. ಚೀಫ್ ಮೆಡಿಕಲ್ ಸೂಪರಿಂಟೆಂಡೆಂಟ್ ಮತ್ತು ತುರ್ತು ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಸಾಜಿದ್ ಸಲಾಹುದ್ದೀನ್, ಅನೆಸ್ತೇಷಿಯಾ ವಿಭಾಗದ ಮುಖ್ಯಸ್ಥ ಡಾ.ಅಮೀನ್ ಗುಲ್ಷನ್, ಜೆರಿಯಾಟ್ರಿಕ್ ಮೆಡಿಸಿನ್ ಕನ್ಸಲ್ಟೆಂಟ್ ಡಾ. ಶಹನಾದ್ ಪಿ.ಎಂ.ಎ., ಆಸ್ಟರ್ ವಾಲಂಟಿಯರ್ಸ್ ಮೆನೇಜರ್ ಹಸೀಮ್ ಮತ್ತಿತರರಿದ್ದರು.

ಕುಂಬಳೆ: ಆಶಾ ಕಾರ್ಯಕರ್ತೆಯರ ನೇಮಕಾತಿ

ಕುಂಬಳೆ: ಕುಂಬಳೆ ಗ್ರಾಮ ಪಂಚಾಯತ್ ವ್ಯಾಪ್ತಿಯ 4, 5 ಮತ್ತು 12ನೇ ವಾರ್ಡ್‌ಗಳಲ್ಲಿ ಆಶಾ ಕಾರ್ಯಕರ್ತೆಯರ ಆಯ್ಕೆಗೆ ಕೆಲವು ಅರ್ಹತೆಗಳನ್ನು ಹೊಂದಿರುವ ಮಹಿಳೆಯರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 10ನೇ ತರಗತಿ ಶಿಕ್ಷಣದಲ್ಲಿ ಉತ್ತೀರ್ಣರಾಗಿರಬೇಕು. ವಿವಾಹಿತ ಮಹಿಳೆಯರು ಮಾತ್ರ ಅರ್ಹರು. 25 ರಿಂದ 45 ವರ್ಷ ವಯಸ್ಸಿನವರಾಗಿರಬೇಕು. ಸಂಬಂಧಪಟ್ಟ ವಾರ್ಡ್‌ಗಳಲ್ಲಿ ವಾಸಿಸುತ್ತಿರಬೇಕು. ಕೆಲಸದ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಅರ್ಹ ಅಭ್ಯರ್ಥಿಗಳು ಜೂ.22ರಂದು ಬೆಳಗ್ಗೆ 10.30ಕ್ಕೆ ಕುಂಬಳೆ ಗ್ರಾ.ಪಂ.ನ ಸಮ್ಮೇಳನ ಸಭಾಂಗಣದಲ್ಲಿ ನಡೆಯುವ ಸಂದರ್ಶನಕ್ಕೆ ಮೂಲ ದಾಖಲೆಗಳೊಂದಿಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 04998 213033, 9496049717 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಅರ್ಜಿ ಆಹ್ವಾನ

ಕಾಸರಗೋಡು: ಕೆಲ್ಟ್ರಾನ್ ಸಂಸ್ಥೆಯು ನಡೆಸುವ ಮಾಧ್ಯಮ ಕೋರ್ಸ್‌ಗಳ ಹೊಸ ಬ್ಯಾಚ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ಲಸ್ ಟು ಮತ್ತು ಪದವಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಮಾಧ್ಯಮ ಸಂಸ್ಥೆಗಳಲ್ಲಿ ತರಬೇತಿಯ ಜೊತೆಗೆ ವಿದ್ಯಾರ್ಥಿಗಳು ಷರತ್ತುಗಳಿಗೆ ಒಳಪಟ್ಟು ಇಂಟರ್ನ್‌ಶಿಪ್ ಮತ್ತು ಉದ್ಯೋಗ ಬೆಂಬಲವನ್ನು ಸಹ ಪಡೆಯಬಹುದು. ಅರ್ಜಿಗಳನ್ನು ಕೋಝಿಕ್ಕೋಡ್, ಪಾಲಕ್ಕಾಡ್ ಮತ್ತು ತಿರುವನಂತಪುರ ಜಿಲ್ಲೆಗಳಲ್ಲಿರುವ ಕೆಲ್ಟ್ರಾನ್ ಕೇಂದ್ರಗಳಿಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ 9544958182 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಆಹಾರ ಸುರಕ್ಷಾ ದಿನ

ಪೆರ್ಲ: ಇಲ್ಲಿನ ನಾಲಂದ ಕಾಲೇಜಿನ ಎನ್.ಎಸ್.ಎಸ್ ಘಟಕದ ವತಿಯಿಂದ ವಿಶ್ವ ಆಹಾರ ಸುರಕ್ಷಾ ದಿನವನ್ನು ಆಚರಿಸಲಾಯಿತು. ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಿಕೆ ಶಿಲ್ಪ ಪಿ. ಅವರು ಪೌಷ್ಠಿಕ ಆಹಾರದ ಮಹತ್ವ ಹಾಗೂ ಆಹಾರ ಸುರಕ್ಷತೆಯ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಉತ್ತಮ ಆರೋಗ್ಯಕ್ಕಾಗಿ ಸುರಕ್ಷಿತ ಮತ್ತು ಸಮತೋಲಿತ ಆಹಾರ ಸೇವನೆಯ ಮಹತ್ವವನ್ನು ವಿವರಿಸಿದರು. ಎನ್.ಎಸ್.ಎಸ್ ಸ್ವಯಂಸೇವಕಿ ತುಳಸಿ ಸ್ವಾಗತಿಸಿ, ಶ್ರದ್ಧಾ ವಂದಿಸಿದರು. ಶ್ರೀಲಕ್ಷ್ಮಿ ಕಾರ್ಯಕ್ರಮ ನಿರೂಪಿಸಿದರು.

ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್‌ಗೆ ಕುಂಬ್ಡಾಜೆ ಜನಪರ ಸಮಿತಿ ಸದಸ್ಯರಿಂದ ಮನವಿ ಸಲ್ಲಿಕೆ

ಕರುವಲ್ತಡ್ಕ - ನಾರಂಪಾಡಿ - ನೆಕ್ರಂಪಾರೆ ರಸ್ತೆ ಅಭಿವೃದ್ಧಿಗೊಳಿಸಿ

ಕಾಸರಗೋಡು: ವಾಹನ ದಟ್ಟಣೆ ಇರುವ ಹಾಗೂ ಮೂರು ಗ್ರಾಮ ಪಂಚಾಯತ್‌ಗಳ ಮೂಲಕ ಹಾದು ಹೋಗುವ ಪ್ರಧಾನ ಸಂಪರ್ಕ ರಸ್ತೆಯಾದ ಕರುವಲ್ತಡ್ಕ – ನಾರಂಪಾಡಿ – ನೆಕ್ರಂಪಾರೆ ಲೋಕೋಪಯೋಗಿ ಇಲಾಖೆಯ ರಸ್ತೆಯನ್ನು ಅಗಲಗೊಳಿಸಿ ಆಧುನಿಕ ರೀತಿಯಲ್ಲಿ ಡಾಮರೀಕರಣ ನಡೆಸಬೇಕು. ಅಲ್ಲದೆ ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಅಗತ್ಯದ ಕ್ರಮ ಕೈಗೊಳ್ಳಬೇಕು ಎಂದು ಕಾಸರಗೋಡು ಶಾಸಕ ಕಲ್ಲಟ್ರ ಮಾಹಿನ್ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿದ ಕುಂಬ್ಡಾಜೆ ಜನಪರ (ಜನಕೀಯ) ಸಮಿತಿ ಸದಸ್ಯರು ಮನವಿ ಸಲ್ಲಿಸಿ ಪ್ರಚಲಿತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿದರು.



ಸಚಿವರ ಗಮನಕ್ಕೆ ತರಲು ಮನವಿ

ಈ ಬಗ್ಗೆ ತುರ್ತು ಕ್ರಮ ಕೈಗೊಂಡು ಮುಂದಿನ ಬಜೆಟ್‌ನಲ್ಲಿಯೇ ಅಗತ್ಯದ ಅನುದಾನವನ್ನು ಮೀಸಲಿಡುವಂತೆ ಹಾಗೂ ಅದಕ್ಕಾಗಿ ಯೋಜನೆಗಳ ರೂಪರೇಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಲು ಬೇಕಾದ ಆದೇಶವನ್ನು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ನೀಡುವಂತೆ ಶಾಸಕರಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ನಿವೃತ್ತ ಅಧಿಕಾರಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರನ್ನೊಳಗೊಂಡ ಕುಂಬ್ಡಾಜೆ ಪಂಚಾಯತ್‌ನ ಜನಕೀಯ ಸಮಿತಿಯ ಸದಸ್ಯರು ವಿನಂತಿಸಿದರು. ಸುಮಾರು 50 ವರ್ಷಗಳಿಗಿಂತಲೂ ಹಿಂದೆಯೇ ಇದ್ದ ಪ್ರಸ್ತುತ ರಸ್ತೆಯ ಇಕ್ಕೆಲಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು, ಹೈಯರ್ ಸೆಕೆಂಡರಿ ಶಾಲೆ, ಆರೋಗ್ಯ ಕೇಂದ್ರ, ಪಂಚಾಯತ್ ಕಚೇರಿ, ಗ್ರಾಮ ಕಚೇರಿ ಹಾಗೂ ವಿವಿಧ ಧರ್ಮಗಳ ಅತ್ಯಂತ ಪ್ರಧಾನ ಆರಾಧನಾಲಯಗಳಿವೆ. ಸಾರ್ವಜನಿಕರ ಪ್ರಯಾಣಕ್ಕೆ ಇದು ಬಹಳ ಮುಖ್ಯವಾದ ರಸ್ತೆ ಎಂದೂ ಶಾಸಕರ ಗಮನ ಸೆಳೆಯಲಾಯಿತು.

ಸಮಸ್ಯೆ ಬಗೆಹರಿಸಲು ತುರ್ತು ಕ್ರಮ

ಜನಕೀಯ ಸಮಿತಿಯ ಮನವಿಗೆ ಬಹಳ ಕಾಳಜಿಯಿಂದ ಸ್ಪಂದಿಸಿದ ಶಾಸಕ ಶಾಸಕ ಕಲ್ಲಟ್ರ ಮಾಹಿನ್ ಅವರು, ಜನರ ಸಮಸ್ಯೆಗಳ ಪರಿಹಾರಕ್ಕೆ ಸದಾ ಜೊತೆಯಲ್ಲಿರುವುದಾಗಿ ಮತ್ತು ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ತುರ್ತು ಮಧ್ಯಪ್ರವೇಶ ಮಾಡುವುದಾಗಿ ಈ ಸಂದರ್ಭ ನಿಯೋಗಕ್ಕೆ ಭರವಸೆ ನೀಡಿದರು.

ಇದಲ್ಲದೆ ಪೊಡಿಪ್ಪಳ್ಳ – ಕುಂಬ್ಡಾಜೆ – ಬೇಂಜ – ನಾಟೆಕಲ್ಲು ರಸ್ತೆಯ ಹೆಚ್ಚಿನ ಅಭಿವೃದ್ಧಿ ಸಾಧ್ಯವಾಗಲು ಕಳೆದ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನದ ಪ್ರಕಾರ ಟೆಂಡರ್ ಪ್ರಕ್ರಿಯೆ ಮುಗಿದ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಸಂಬಂಧಿಸಿದವರಿಗೆ ಅಗತ್ಯವಾದ ನಿರ್ದೇಶನವನ್ನು ನೀಡುವಂತೆಯೂ ಶಾಸಕರನ್ನು ಕೋರಲಾಯಿತು. ಮಾತ್ರವಲ್ಲದೆ ಪ್ರಸ್ತುತ ಕಾಮಗಾರಿಯನ್ನು ಮಳೆಗಾಲ ಕಳೆದ ಕೂಡಲೇ ಪೂರ್ತಿಗೊಳಿಸಿ ರಸ್ತೆಯ ಹೆಚ್ಚಿನ ಅಭಿವೃದ್ಧಿ ಸಾಧ್ಯವಾಗುವಂತೆ ಜಿಲ್ಲಾ ಪಂಚಾಯತ್ ಆ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸುವಂತೆಯೂ ಕಾಸರಗೋಡು ಶಾಸಕರನ್ನು ಜನಕೀಯ ಸಮಿತಿಯು ಒತ್ತಾಯಿಸಿತು.

ಕುಂಬ್ಡಾಜೆ ಜನಕೀಯ ಸಮಿತಿಯ ಮುಂದಾಳುಗಳಾದ ವಕೀಲ ಪ್ರಸನ್ನಕುಮಾರ್, ಉದ್ಯಮಿ ಫಾರೂಖ್ ಕುಂಬ್ಡಾಜೆ, ಸಾಮಾಜಿಕ ಮುಂದಾಳು ಹಾಗೂ ಗ್ರಾಮ ಪಂಚಾಯತ್ ಮಾಜಿ ಸದಸ್ಯ ಹರೀಶ್ ಗೋಸಾಡ, ನಿವೃತ್ತ ಡೆಪ್ಯೂಟಿ ತಹಶೀಲ್ದಾರ್ ನಾರಾಯಣ ಗೋಸಾಡ, ಬ್ಲಾಕ್ ಪಂಚಾಯತ್ ಮಾಜಿ ಸದಸ್ಯ ಲತೀಫ್ ಸಿ.ಕೆ. ನಾರಂಪಾಡಿ, ಪಂಚಾಯತ್ ಮಾಜಿ ಸದಸ್ಯ ಅಬ್ದುಲ್ ರಜಾಕ್ ಟಿ.ಎಂ. ಮರಿಕ್ಕಾನ, ಲೋಕೋಪಯೋಗಿ ಇಲಾಖೆಯ ನಿವೃತ್ತ ಕಿರಿಯ ಅಧೀಕ್ಷಕ ಶಂಕರ ಪಾಟಾಳಿ ಮುಂತಾದವರು ನಿಯೋಗದಲ್ಲಿ ಪಾಲ್ಗೊಂಡಿದ್ದರು.

ಹೊಸಂಗಡಿ ಇನ್ಫೆಂಟ್ ಚರ್ಚ್‌ನಲ್ಲಿ ಆರೋಗ್ಯ ತಪಾಸಣೆ ಶಿಬಿರ ಉದ್ಘಾಟನೆ



ಮಂಜೇಶ್ವರ: ಆರೋಗ್ಯವೇ ಭಾಗ್ಯ ಎಂಬ ಧ್ಯೇಯದೊಂದಿಗೆ ಹೊಸಂಗಡಿ ಇನ್ಫೆಂಟ್ ಜೀಸಸ್ ಸೈರೊ ಮಲಬಾರ್ ಚರ್ಚ್‌ನ ಆಶ್ರಯದಲ್ಲಿ ರಿಯಲ್ ಲ್ಯಾಬ್ ಹೊಸಂಗಡಿ ಇದರ ನೇತೃತ್ವದಲ್ಲಿ ಉಚಿತ ವೈದ್ಯಕೀಯ ಶಿಬಿರವು ಭಾನುವಾರ ಚರ್ಚ್‌ನಲ್ಲಿ ಜರಗಿತು.

ಇಂದಿನ ಆಧುನಿಕ ಜೀವನಶೈಲಿಯಲ್ಲಿ ಮಧುಮೇಹ ಸೇರಿದಂತೆ ಹಲವು ಆರೋಗ್ಯ ಸಮಸ್ಯೆಗಳಿಂದಾಗಿ ದೇಹ ರಕ್ಷಣೆ ಮತ್ತು ಸೂಕ್ತ ಚಿಕಿತ್ಸೆ ಅತ್ಯಂತ ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು ಆರೋಗ್ಯಕರ ಜೀವನ ನಡೆಸಲು ಚರ್ಚ್ ಆಡಳಿತ ಮಂಡಳಿ ವೈದ್ಯಕೀಯ ಶಿಬಿರ ಹಮ್ಮಿಕೊಳ್ಳುವ ಮೂಲಕ ಜಾಗೃತಿ ಮೂಡಿಸಿರುವುದು ಶ್ಲಾಘನೀಯವಾಗಿದೆ ಎಂದು ರಿಯಲ್ ಲ್ಯಾಬ್‌ನ ವೈದ್ಯ ಸಚಿನ್ ವರ್ಗೀಸ್ ಶಿಬಿರದ ಉದ್ಘಾಟನೆ ನೆರವೇರಿಸಿ ನುಡಿದರು.

ಚರ್ಚ್‌ನ ಧರ್ಮಗುರು ವಂ.ಫಾ. ಲೂಯಿಸ್ ಮರಿಯಾದಾಸ್ ಶಿಬಿರದ ಅಧ್ಯಕ್ಷತೆ ವಹಿಸಿ, ಹೊಸಂಗಡಿ ರಿಯಲ್ ಲ್ಯಾಬ್‌ನಲ್ಲಿ ಲಭ್ಯವಿರುವ ಹಲವಾರು ತಪಾಸಣೆ ಮತ್ತು ತಜ್ಞ ವೈದ್ಯರ ಸೌಲಭ್ಯಗಳನ್ನು ಸದು ಪಯೋಗಪಡಿಸಿಕೊಳ್ಳಬೇಕು. ಆರೋಗ್ಯಪೂರ್ಣ ಜೀವನ ನಡೆಸಲು ಪ್ರತಿಯೊಬ್ಬರು ಶಿಸ್ತುಬದ್ಧತೆ ರೂಪಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ರಿಯಲ್ ಲ್ಯಾಬ್‌ನ ಸ್ಥಾಪಕಿ ಜಯಶರ್ಮಿಳಾ ಉಪ್ಪಳ, ವೈದ್ಯ ಡಾ.ಸಚಿನ್, ಸಜಿ ವರ್ಗೀಸ್ ಇದ್ದರು. ಬಳಿಕ ನುರಿತ ವೈದ್ಯರುಗಳಿಂದ ಸಾರ್ವಜನಿಕರಿಗೆ ವಿವಿಧ ಆರೋಗ್ಯ ತಪಾಸಣೆ ನೆರವೇರಿತು. ಇನ್ನು ಮುಂದಿನ ದಿನಗಳಲ್ಲಿ ಚರ್ಚ್‌ನಲ್ಲಿ ಸಾರ್ವಜನಿಕರಿಗೆ ಉಚಿತವಾಗಿ ಕಿವಿ, ಕಣ್ಣು, ಹಲ್ಲು, ಹೃದ್ರೋಗ ಶಿಬಿರಗಳನ್ನು ಏರ್ಪಡಿಸಲು ನಿರ್ಧರಿಸಲಾಗಿದೆ. ಈ ಬಗ್ಗೆ ಮಾಹಿತಿ ಸಾರ್ವಜನಿಕರಿಗೆ ಮುಂದೆ ತಿಳಿಸಲಾಗುವುದುದೆಂದು ಚರ್ಚ್‌ನ ಆಡಳಿತ ಮಂಡಳಿಯು ಈ ಸಂದರ್ಭ ತಿಳಿಸಿದೆ.

ವಿದ್ಯಾರ್ಥಿಗಳು ಜ್ಞಾನಾರ್ಜನೆಗೆ ಆಧುನಿಕ ತಂತ್ರಜ್ಞಾನಗಳನ್ನು ಸದ್ಬಳಸಿ: ಅಶ್ವಿನಿ ಕರೆ



ಕಾಸರಗೋಡು: ವಿದ್ಯಾರ್ಥಿಗಳು ಸ್ಮಾರ್ಟ್ ಫೋನ್‌ಗಳು ಸೇರಿದಂತೆ ಆಧುನಿಕ ತಂತ್ರಜ್ಞಾನಗಳನ್ನು ಮನರಂಜನೆಗಾಗಿ ಮಾತ್ರವಲ್ಲದೆ ಜ್ಞಾನ ಸಂಪಾದನೆಗೂ ಬಳಸಬೇಕು. ತಂತ್ರಜ್ಞಾನ ದುರುಪಯೋಗವಾಗದಂತೆ ಪೋಷಕರು ಗಮನಹರಿಸಬೇಕು ಎಂದು ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಕರೆ ನೀಡಿದ್ದಾರೆ.

ಕೂಡ್ಲು ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆಯಲ್ಲಿ ಭಾನುವಾರ ಸಂಜೆ ಮಧೂರು ಪಂಚಾಯತ್ ಎಸ್‌ಸಿ – ಎಸ್‌ಟಿ ಮೋರ್ಚಾ ಸಮಿತಿ ಆಯೋಜಿಸಿದ್ದ ಎಸ್‌ಸಿ – ಎಸ್‌ಟಿ ವಿಭಾಗಗಳ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ವಿತರಿಸಲಾಯಿತು. ಭಾರತ ಸರಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯದ ಬಿರ್ಸಾ ಮುಂಡಾ ಅನ್‌ಸಂಗ್ ಹೀರೋ ಪ್ರಶಸ್ತಿ ಪಡೆದ ಬಿಜೆಪಿ ಕಾಸರಗೋಡು ಜಿಲ್ಲಾ ಕಾರ್ಯದರ್ಶಿ ಸಂಜೀವ ಪುಳಿಕ್ಕೂರು ಅವರನ್ನು ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ ಹಾಗೂ ಮಧೂರು ಪಂಚಾಯತ್ ಸಮಿತಿಯ ಪರವಾಗಿ ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಸನ್ಮಾನಿಸಿದರು.

ಎಸ್ – ಎಸ್‌ಟಿ ಮೋರ್ಚಾದ ಮಧೂರು ಪಂಚಾಯತ್ ಸಮಿತಿ ಅಧ್ಯಕ್ಷ ಮೋಹನನ್ ಕಾಳ್ಯಂಗಾಡು ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ರಾಜ್ಯ ಸಮಿತಿ ಸದಸ್ಯ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯ ರಾಮಪ್ಪ ಮಂಜೇಶ್ವರ, ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್, ಪಂಚಾಯತ್ ಉಪಾಧ್ಯಕ್ಷ ಭಾನುಪ್ರಕಾಶ್, ಸಂಜೀವ ಪುಳಿಕ್ಕೂರು, ಸುಕುಮಾರ ಕುದ್ರೆಪ್ಪಾಡಿ, ಮಧೂರು ಪಂಚಾಯತ್ ವಲಯ ಸಮಿತಿ ಅಧ್ಯಕ್ಷ ಮಾಧವ ಮಾಸ್ತರ್, ಮಹೇಶ್ ಮಧೂರು, ಎಸ್‌ಟಿ ಮೋರ್ಚಾ ಮಾಜಿ ಜಿಲ್ಲಾಧ್ಯಕ್ಷ ಹರೀಶ್ ಕೊಲ್ಲಂಗಾನ, ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀಧರ ಕೂಡ್ಲು, ಕಾಸರಗೋಡು ಮಂಡಲ ಉಪಾಧ್ಯಕ್ಷ ರಮೇಶ್ ವಿವೇಕಾನಂದನಗರ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಕೆ.ಗೋಪಾಲಕೃಷ್ಣ, ಬ್ಲಾಕ್ ಪಂಚಾಯತ್ ಸದಸ್ಯೆ ಲೀಲಾ, ಮಧೂರು ಗ್ರಾಮ ಪಂಚಾಯತ್ ಸದಸ್ಯರಾದ ನವನೀತ ರೈ, ಚಂದ್ರ ಬಿ., ಬಿಜೆಪಿ ಜಿಲ್ಲಾ ಸಮಿತಿ ಸದಸ್ಯ ಸುರೇಶ್ ಕಾಳ್ಯಂಗಾಡು ಹಾಗೂ ಇತರರು ಮಾತನಾಡಿದರು.

ಸನಾತನ ಸಂಸ್ಕೃತಿಯ ವಿರೂಪಕ್ಕೆ ಯತ್ನ ನಡೆಯುತ್ತಿದೆ: ಸತ್ಯನ್ ಕಳವಳ



ಕಾಸರಗೋಡು: ಪ್ರತಿ ಮಗುವೂ ತನ್ನತನವನ್ನು ರಕ್ಷಿಸಿಕೊಳ್ಳಲು, ದೇಶವನ್ನು ಪ್ರೀತಿಸಲು ಹಾಗೂ ದೇಶಕ್ಕಾಗಿ ಅರ್ಪಿಸಲು ಬದ್ಧತೆಯನ್ನು ಹೊಂದುವಂತಾಗಬೇಕು ಎಂದು ಬಾಲಗೋಕುಲ ಕೇರಳ ರಾಜ್ಯಾಧ್ಯಕ್ಷ ಎಂ.ಸತ್ಯನ್ ಮಾಸ್ಟರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಬಾಲಗೋಕುಲ ವತಿಯಿಂದ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಕಾಞಂಗಾಡು ಗೋಕುಲ ಜಿಲ್ಲಾ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮುಖ್ಯ ಭಾಷಣ ಮಾಡಿದರು.

ಜೀವನವು ಭಾಷೆ, ದೇಶ ಮತ್ತು ಸಂಸ್ಕೃತಿಗೆ ಬದ್ಧತೆ ಹಾಗೂ ಸಮರ್ಪಣೆಯಾಗಿರಬೇಕು. ಆಗ ಮಾತ್ರ ವ್ಯಕ್ತಿ ಮತ್ತು ರಾಷ್ಟ್ರವು ಸ್ವಾವಲಂಬಿ ಆಗುತ್ತದೆ. ನಮ್ಮ ಸನಾತನ ಸಂಸ್ಕೃತಿಯನ್ನು ವಿರೂಪಗೊಳಿಸಲು ಮತ್ತು ಅಪಪ್ರಚಾರ ನಡೆಸಲು ವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ಯೋಜಿತ ಪ್ರಯತ್ನ ನಡೆಯುತ್ತಿದೆ ಎಂದವರು ಎಚ್ಚರಿಸಿದರು.

ಇಂತಹ ಷಡ್ಯಂತ್ರಗಳನ್ನು ಪ್ರಬಲವಾಗಿ ಎದುರಿಸುವ ಜ್ಞಾನ ಯುವ ಪೀಳಿಗೆಯಲ್ಲಿ ಮೂಡಿಸಬೇಕು. ಅಲ್ಲದೇ ತಂತ್ರಜ್ಞಾನದ ಬಳಕೆಯ ಬಗ್ಗೆಯೂ ಜಾಗೃತಿ ಮೂಡಿಸಬೇಕಿದೆ. ಮಾದಕ ವ್ಯಸನ, ಆನ್‌ಲೈನ್ ಆಟಗಳ ವ್ಯಸನ, ಪ್ರೇಮ ವೈಫಲ್ಯ ಹಾಗೂ ಆತ್ಮಹತ್ಯೆ ಪ್ರವೃತ್ತಿಗಳು ಜೀವನಶೈಲಿಯ ಭಾಗವಾಗಿದ್ದು ಇದು ಆತಂಕಕಾರಿ. ಇಂತಹ ಸವಾಲುಗಳನ್ನು ಎದುರಿಸಲು ಬಾಲ ಗೋಕುಲಗಳಲ್ಲಿ ಶಿಕ್ಷಣವನ್ನು ನೀಡಬೇಕು ಎಂದವರು ತಿಳಿಸಿದರು.

> ಭಾರತ ವಿಶ್ವದಲ್ಲಿಯೇ ಪ್ರಬಲ ರಾಷ್ಟ್ರವಾಗಬೇಕು. ಈ ನಿಟ್ಟಿನಲ್ಲಿ ಯುವಜನಾಂಗ ದೇಶದ ಬೆಳವಣಿಗೆಗೆ ಸಾಥ್ ನೀಡಬೇಕು.
> ● ಎಂ.ಸತ್ಯನ್ ಮಾಸ್ಟರ್, ಬಾಲಗೋಕುಲ ಕೇರಳ ರಾಜ್ಯಾಧ್ಯಕ್ಷ

ಸಮ್ಮೇಳನವನ್ನು ಚಲನಚಿತ್ರ ಧಾರಾವಾಹಿ ತಾರೆ ಕಲಾಭವನ್ ನಂದನ ದೀಪ ಬೆಳಗಿಸಿ ಉದ್ಘಾಟಿಸಿದರು. ಬಾಲಗೋಕುಲ ಕಂದಾಯ ಜಿಲ್ಲಾ ಕೋಶಾಧಿಕಾರಿ ಕೆ.ರಾಧಾಕೃಷ್ಣನ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಕಂದಾಯ ಜಿಲ್ಲಾ ಕಾರ್ಯದರ್ಶಿ ಎನ್.ಟಿ. ವಿದ್ಯಾಧರನ್, ಉಪಾಧ್ಯಕ್ಷ ಎಂ. ಜಯರಾಮನ್, ಗೋಕುಲ ಜಿಲ್ಲಾ ಸಹ ಭಗಿನಿ ಪ್ರಮುಖ್ ಎನ್.ಪ್ರಾರ್ಥನಾ, ಪಿ.ಸುರೇಶ್, ಪಿ.ರಾಮಚಂದ್ರನ್, ಪಿ.ಬಿ.ಕಿರಣ್ ಮತ್ತಿತರರು ಮಾತನಾಡಿದರು.

ಡಾ. ಕಯ್ಯಾರ ಕಿಂಞಣ್ಣ ರೈ ಜನ್ಮದಿನ: ಕವನ ವಾಚನ, ಸಾಂಸ್ಕೃತಿಕ ಕಾರ್ಯಕ್ರಮ



ಕಾಸರಗೋಡು: ನಾಡೋಜ ಕವಿ ಡಾ.ಕಯ್ಯಾರ ಕಿಂಞಣ್ಣ ರೈಯವರ 111ನೇ ಜನ್ಮ ದಿನದ ಗೌರವ ನಮನ ಕಾರ್ಯಕ್ರಮವನ್ನು ಡಾ.ವಾಣಿಶ್ರೀ ಕಾಸರಗೋಡು ನೇತೃತ್ವದ ಗಡಿನಾಡ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂಸ್ಥೆ ಕಾಸರಗೋಡು ಇದರ ವತಿಯಿಂದ ನೆಲ್ಲಿಕಟ್ಟೆ ಚೂರಿಪ್ಪಳ್ಳ ಶ್ರೀ ಗಿರಿ ಸದನ ಪ್ರಕೃತಿ ಆಯುರ್ವೇದ ಚಿಕಿತ್ಸಾಲಯದ ಶಿವದುರ್ಗಾ ವೇದಿಕೆಯಲ್ಲಿ ವಿಶಿಷ್ಟ ಹಾಗೂ ಅರ್ಥಪೂರ್ಣವಾಗಿ ಆಯೋಜಿಸಲಾಯಿತು.

ಇದೇ ಸಂದರ್ಭದಲ್ಲಿ ಸಂಸ್ಥೆಯ 223ನೇ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಸಂಸ್ಥೆಯ ಕೋಶಾಧಿಕಾರಿ ಡಾ.ವೆಂಕಟಗಿರೀಶ್ ಅವರು ಕಯ್ಯಾರ ಕಿಂಞಣ್ಣ ರೈಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಕಿಂಞಣ್ಣ ರೈಯವರ ಜೀವನ, ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವ ಅದಮ್ಯ ಕೊಡುಗೆಗಳನ್ನು ಸ್ಮರಿಸಿದರು.

ಸಂಸ್ಥೆಯ ಉಪಾಧ್ಯಕ್ಷ ಅಚ್ಯುತ ಭಟ್ ಅವರು ಕವಿಯ ಕವನಗಳನ್ನು ವಾಚಿಸಿದರು. ಸ್ಥಳೀಯ ಕಲಾವಿದರಾದ ಸುಚಿತ್ರಾ, ಭವಿತ್, ಅಹಿಷ್, ಹರ್ಷಿತ್, ಶಿವರಾಮ್, ಕಣ್ಣನ್, ಲಕ್ಷ್ಮೀಶ್ ಮುಂತಾದವರು ಕವಿಯ ಸಾಹಿತ್ಯ ರಚನೆಗಳ ಗಾಯನ ಮತ್ತು ನೃತ್ಯ ಪ್ರದರ್ಶನವನ್ನು ನೀಡಿದರು. ವೇದಿಕೆಯಲ್ಲಿ ಕಲಾವಿದರನ್ನು ಪುಸ್ತಕ ಹಾಗೂ ನೆನಪಿನ ಕಾಣಿಕೆಗಳನ್ನಿತ್ತು ಗೌರವಿಸಲಾಯಿತು. ಸಂಸ್ಥೆಯ ಸ್ಥಾಪಕಾಧ್ಯಕ್ಷೆ ಡಾ.ವಾಣಿಶ್ರೀ ಕಾಸರಗೋಡು ಕಾರ್ಯಕ್ರಮ ನಿರೂಪಿಸಿದರು.

ಶ್ರೀ ಪುಷ್ಪಕ ಸೇವಾ ಸಂಘದಿಂದ ಸಾಧಕ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ



ಕಾಸರಗೋಡು: ಶ್ರೀ ಪುಷ್ಪಕ ಬ್ರಾಹ್ಮಣ ಸೇವಾ ಸಂಘದ ಕಾಸರಗೋಡು ಪ್ರಾದೇಶಿಕ ಸಭಾದ ವಾರ್ಷಿಕ ಮಹಾಸಭೆಯು ಮಧೂರು ಪರಕ್ಕಿಲ ಶ್ರೀ ಮಹಾದೇವ ಕ್ಷೇತ್ರದ ಅಂಗಣದಲ್ಲಿ ಜರಗಿತು.

ಪ್ರಾದೇಶಿಕ ಸಭಾದ ಅಧ್ಯಕ್ಷ ಪದ್ಮನಾಭನ್ ಅವರು ಅಧ್ಯಕ್ಷತೆ ವಹಿಸಿದ್ದರು.

ಇದೇ ಸಂದರ್ಭ ವಾರ್ಷಿಕ ವರದಿ ಮತ್ತು ಲೆಕ್ಕಪತ್ರ ಮಂಡಿಸಿ ಚರ್ಚೆಯ ಬಳಿಕ ಅಂಗೀಕರಿಸಲಾಯಿತು. ವಿವಿಧ ಪರೀಕ್ಷೆಗಳಲ್ಲಿ ಉನ್ನತ ಮಟ್ಟದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿ ಗಳಿಗೆ ಸ್ಮರಣಿಕೆ ಮತ್ತು ನಗದು ಬಹುಮಾನ ವಿತರಿಸಲಾಯಿತು.

ಉಪಸಮಿತಿ ಅಧ್ಯಕ್ಷ ಕೃಷ್ಣಪ್ರಸಾದ್ ಉಪಸ್ಥಿತರಿದ್ದರು. ಕಾರ್ಯದರ್ಶಿ ಪಿ.ರಾಜೀವ್ ಸ್ವಾಗತಿಸಿ, ವಿಷಯ ಮಂಡಿಸಿದರು.

ಚುನಾವಣಾಧಿಕಾರಿ ಸೋಮನಾಥನ್ ಮತ್ತು ವೀಕ್ಷಕ ಸನೋಜ್ ಮೇಲ್ವಿಚಾರಣೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ರಕ್ಷಾಧಿಕಾರಿಯಾಗಿ ಯು. ಬಾಲಕೃಷ್ಣ ಅಧ್ಯಕ್ಷರಾಗಿ ಪದ್ಮನಾಭನ್, ಉಪಾಧ್ಯಕ್ಷರಾಗಿ ರಾಜೀವ್, ಕಾರ್ಯದರ್ಶಿಯಾಗಿ ಕೇಶವನ್, ಜೊತೆ ಕಾರ್ಯದರ್ಶಿಯಾಗಿ ಶ್ರಾವಣ್, ಕೋಶಾಧಿಕಾರಿಯಾಗಿ ರಾಧಿಕಾ, ಲೆಕ್ಕಪರಿಶೋಧಕರಾಗಿ ವೇಣುಗೋಪಾಲನ್ ಆಯ್ಕೆಯಾದರು. ಮುಂಬರುವ ರಾಷ್ಟ್ರೀಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು. ವೇಣು ಗೋಪಾಲನ್ ವಂದಿಸಿದರು.

ಇಂದು ಕಾಸರಗೋಡು ಜಿ.ಪಂ.ನ 'ಮಿಕಾವ್' ಯೋಜನೆ ಉದ್ಘಾಟನೆ

ಕಾಸರಗೋಡು: ಜಿಲ್ಲಾ ಪಂಚಾಯತ್ ಆಯೋಜಿಸಿರುವ ಮಿಕಾವ್ 2026 ಎಂಬ ಯೋಜನೆಯನ್ನು ಜೂ.15ರಂದು ಬೆಳಗ್ಗೆ 11 ಗಂಟೆಗೆ ರಾಜ್ಯ ಸ್ಥಳೀಯಾಡಳಿತ ಇಲಾಖೆ ಸಚಿವ ಕೆ.ಎಂ.ಶಾಜಿ ಉದ್ಘಾಟಿಸಲಿದ್ದಾರೆ. ಕಾಸರಗೋಡು ನಗರಸಭೆಯ ಸಮ್ಮೇಳನ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ 2025–26ನೇ ಶೈಕ್ಷಣಿಕ ವರ್ಷದಲ್ಲಿ ಎಸ್‌ಎಸ್‌ಎಲ್‌ಸಿ, ಪ್ಲಸ್ ಟು, ವಿಎಚ್‌ಎಸ್‌ಸಿ ಪರೀಕ್ಷೆಗಳಲ್ಲಿ ಶೇಕಡಾ 100ರಷ್ಟು ಸಾಧನೆಗೈದ ಶಾಲೆಗಳು ಮತ್ತು ಪ್ಲಸ್ ಟು ಪರೀಕ್ಷೆಗಳಲ್ಲಿ ಪೂರ್ಣ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳನ್ನು ರಾಜ್ಯದ ಅತ್ಯುತ್ತಮ ವಿದ್ಯಾರ್ಥಿ ಪೊಲೀಸ್ ಕೆಡೆಟ್‌ಗಳಾಗಿ ಆಯ್ಕೆ ಮಾಡಲಾಗುತ್ತದೆ.

ಜಿಲ್ಲಾ ಎಸ್‌ಪಿಸಿ ಸದಸ್ಯರನ್ನೂ ಸನ್ಮಾನಿಸಲಾಗುವುದು. ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಜಿಲ್ಲೆಯ ಶಾಸಕ ಕಲ್ಲಟ್ರ ಮಾಹಿನ್, ಎ.ಕೆ.ಎಂ.ಅಶ್ರಫ್, ಕೆ.ನೀಲಕಂಠನ್, ಗೋವಿಂದನ್ ಪಳ್ಳಿಕಾಪಿಲ್, ಸಂದೀಪ್ ವಾರಿಯರ್, ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್, ಜಿಲ್ಲಾ ಪೊಲೀಸ್ ಮುಖ್ಯಸ್ಥ ಬಿ.ಪಿ.ವಿಜಯ್ ಭರತ್ ರೆಡ್ಡಿ ಮುಂತಾದವರು ಪಾಲ್ಗೊಳ್ಳುವರು ಎಂದು ಜಿ.ಪಂ. ತಿಳಿಸಿದೆ.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ದೃಢಕಲಶ | ಸೇವೆ ಸಲ್ಲಿಸಿದ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಕೆ

ಬ್ರಹ್ಮಕಲಶೋತ್ಸವ ಕಾರ್ಯಕ್ರಮ ಊರಿನ ಐಕ್ಯತೆಯ ಪ್ರತೀಕ: ವಸಂತ ಪೈ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವವು ಇತ್ತೀಚೆಗೆ ವಿಜೃಂಭಣೆಯಿಂದ ಜರಗಿದ್ದು, ಇದರ ಅಂಗವಾಗಿ ದೃಢಕಲಶದಂದು ಅಪರಾಹ್ನ ಕಾರ್ಯಕರ್ತರ ಅಭಿನಂದನಾ ಸಭೆ ನಡೆಯಿತು.

ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಬಿ.ವಸಂತ ಪೈ ಬದಿಯಡ್ಕ ಅಧ್ಯಕ್ಷತೆ ವಹಿಸಿ ಮಾತನಾಡಿ, ಪೆರಡಾಲದ ಆರಾಧ್ಯ ದೇವರಾದ ಶ್ರೀ ಉದನೇಶ್ವರ ದೇವರ ಸನ್ನಿಧಿಯಲ್ಲಿ ಇತ್ತೀಚೆಗಷ್ಟೇ ಜರಗಿದ ಮಹಾ ಬ್ರಹ್ಮಕಲಶೋತ್ಸವ ಮತ್ತು ಧಾರ್ಮಿಕ ಸಾಂಸ್ಕೃತಿಕ ಉತ್ಸವಗಳು ಕೇವಲ ಒಂದು ಕಾರ್ಯಕ್ರಮವಾಗಿರಲಿಲ್ಲ, ಅದೊಂದು ಭಕ್ತಿ ಸಾಗರವಾಗಿತ್ತು. ಅಲ್ಲದೇ ನಮ್ಮೂರಿನ ಐಕ್ಯತೆಯ ಪ್ರತೀಕವಾಗಿತ್ತು. ಇಂದು ಈ ಇಡೀ ಮಹೋತ್ಸವವನ್ನು ಅತ್ಯಂತ ವೈಭವದಿಂದ,



ಯಾವುದೇ ಅಡೆತಡೆಗಳಿಲ್ಲದೆ ಯಶಸ್ವಿಗೊಳಿಸಿದ ಕಾರ್ಯಕರ್ತರು ನಮ್ಮ ನಿಜವಾದ ನಾಯಕರು. ಯಾವಾಗ ಭಕ್ತಿ ಮತ್ತು ಸೇವಾ ಮನೋಭಾವ ಒಂದಾಗುತ್ತದೆಯೋ ಅಲ್ಲಿ ದೈವ ಸಂಕಲ್ಪಗಳು ಸಾಕಾರಗೊಳ್ಳುತ್ತವೆ ಎಂದು ನುಡಿದರು.

ಆಡಳಿತ ಮೊಕ್ತೇಸರ ವೆಂಕಟ್ರಮಣ ಭಟ್ ಚಂಬಲ್ತಿಮಾರು, ಬ್ರಹ್ಮಕಲಶೋತ್ಸವ ಸಮಿತಿ ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು, ಗೌರವಾಧ್ಯಕ್ಷ ಜಯದೇವ ಖಂಡಿಗೆ, ಮೊಕ್ತೇಸರ ಸೀತಾರಾಮ ನವಕಾನ, ಕೋಶಾಧಿಕಾರಿ ಸೂರ್ಯನಾರಾಯಣ ಬಿ., ಶಿವಶಕ್ತಿ ಪೆರಡಾಲದ ಅಧ್ಯಕ್ಷ, ಬ್ರಹ್ಮಕಲಶೋತ್ಸವ ಸಮಿತಿಯ ಜೊತೆ ಕಾರ್ಯದರ್ಶಿ ಭಾಸ್ಕರ ಪಂಜಿತ್ತಡ್ಕ, ಲೆಕ್ಕಪರಿಶೋಧಕ

> ಪೆರಡಾಲ ಬ್ರಹ್ಮಕಲಶದಲ್ಲಿ ಇತಿಹಾಸದಲ್ಲೇ ಅತ್ಯಂತ ಶಿಸ್ತುಬದ್ಧವಾಗಿ ಕಾರ್ಯಕ್ರಮ ಸಂಘಟಿಸಿದ ಸ್ವಯಂಸೇವಕರ ಶ್ರಮದಾನ, ತಾಳಿಗೆ ಸಾಷ್ಟಾಂಗ ನಮಸ್ಕಾರಗಳು. ಹಗಲಿರುಳು ಎನ್ನದೆ ದೇವಸ್ಥಾನದ ಸೇವೆಯಲ್ಲಿ ತೊಡಗಿಸಿಕೊಂಡ ಭಕ್ತರ ಕಾರ್ಯ ಅನುಕರಣೀಯ.
> ● ನಿರಂಜನ ರೈ ಪೆರಡಾಲ

ಕುಞ್ಞಣ್ಣ , ಉಪಾಧ್ಯಕ್ಷ ಜಗನ್ನಾಥ ರೈ ಕೊರೆಕ್ಕಾನ, ಲೆಕ್ಕಪರಿಶೋಧಕ ಸತೀಶ್‌ಕುಮಾರ್ ಪುದ್ಯೋಡು, ಉಪಾಧ್ಯಕ್ಷ, ಮಾಜಿ ಮೊಕ್ತೇಸರ ಪಿ.ಜಿ.ಚಂದ್ರಹಾಸ ರೈ ಪೆರಡಾಲಗುತ್ತು, ಪ್ರೊ.ಎ.ಶ್ರೀನಾಥ್ ಕಾಸರಗೋಡು, ಜೊತೆ ಕಾರ್ಯದರ್ಶಿ ಗಣೇಶಪ್ರಸಾದ ಕಡಪ್ಪು, ಶಿವಶಕ್ತಿ ಪೆರಡಾಲದ ಸದಸ್ಯರು ಉಪಸ್ಥಿತರಿದ್ದರು.

ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ ಪ್ರಾಸ್ತಾವಿಕ ನುಡಿಗಳನ್ನಾಡಿ, ಭಕ್ತರ, ಕಾರ್ಯಕರ್ತರ ಸೇವೆಯನ್ನು ಸ್ಮರಿಸಿದರು. ಮಾತೃ ಸಮಿತಿ ಅಧ್ಯಕ್ಷೆ ವಿನಯಾ ಜೆ.ರೈ, ನಾಟಿವೈದ್ಯ ಶ್ರೀರಾಮ ಪಟ್ಟಾಜೆ ಅಭಿಪ್ರಾಯ ವ್ಯಕ್ತಪಡಿಸಿದರು. ಡಾ.ಶ್ರೀಶಕುಮಾರ ಪಂಜಿತ್ತಡ್ಕ ನಿರೂಪಿಸಿದರು. ಜೊತೆ ಕಾರ್ಯದರ್ಶಿ ಉದಯಶಂಕರ ಪಿ.ಎಸ್. ವಂದಿಸಿದರು.

ಸುತ್ತಮುತ್ತ

ಮಲ್ಯರಮಠ ಶ್ರೀ ದೇವಳ: ಅಖಂಡ ಭಜನೆ



ಕುಂದಾಪುರ: ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಪುರುಷೋತ್ತಮ ಮಾಸದ ಅಂಗವಾಗಿ ನಡೆಯುತ್ತಿರುವ ಮಾಸಾವಧಿ ಅಖಂಡ ಭಜನಾ ಮಹೋತ್ಸವದ ಸಂದರ್ಭ ದೇವರ ಪ್ರೀತ್ಯರ್ಥ ಸಮಾಜ ಅಭಿವೃದ್ಧಿ ಹಾಗೂ ಲೋಕ ಕಲ್ಯಾಣಾರ್ಥ ಪುರುಷೋತ್ತಮ ವ್ರತ ಭಾನುವಾರ ನಡೆಯಿತು. ಬೆಳಿಗ್ಗೆ ದೇವತಾ ಪ್ರಾರ್ಥನೆಯೊಂದಿಗೆ ಪುರುಷೋತ್ತಮ ವ್ರತದ ಧಾರ್ಮಿಕ ವಿಧಿವಿಧಾನಗಳು ಆರಂಭಗೊಂಡು, ಯಮುನಾ ಪೂಜನ, ಕಲಶ ಪೂರಣ, ಕಲಶ ಪೂಜೆ, ಮಧ್ಯಾಹ್ನ ದೇವರಿಗೆ ಮಹಾಪೂಜೆ, 33 ನಮಸ್ಕಾರ, ತೀರ್ಥ ಪ್ರಸಾದ ವಿತರಣೆ ಮಹಾಸಮಾರಾಧನೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು. ದೇವಳದ ಪ್ರಧಾನ ಅರ್ಚಕ ಎಸ್.ವೆಂಕಟರಮಣ ಆಚಾರ್ಯ, ತಾಂತ್ರಿಕ ಜಿ.ವಸಂತ ಭಟ್ ನೇತೃತ್ವ ಪುರೋಹಿತರಿಂದ ಪುರುಷೋತ್ತಮ ವ್ರತದ ಧಾರ್ಮಿಕ ವಿಧಿವಿಧಾನಗಳು ಸಂಪನ್ನಗೊಂಡಿತು.

ಅರ್ಜಿ ಆಹ್ವಾನ

ಉಡುಪಿ: ಮೂಡಬಿದಿರೆಯ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಇಲ್ಲಿ ಪ್ರಸಕ್ತ ಸಾಲಿನ ಜು. 1 ರಿಂದ ಪ್ರಾರಂಭವಾಗುವ 6 ತಿಂಗಳ ಅವಧಿಯ ರೆಗ್ಯುಲರ್ ಮತ್ತು ದೂರಶಿಕ್ಷಣ 'ಡಿಪ್ಲೊಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್ ಕೋರ್ಸ್' ಪ್ರವೇಶಾತಿಗಾಗಿ ಹತ್ತನೇ ತರಗತಿ ಉತ್ತೀರ್ಣರಾದ ಸಾಮಾನ್ಯ ಹಾಗೂ ಪ.ಜಾತಿ/ಪ.ಪಂಗಡದ ಅಭ್ಯರ್ಥಿಗಳಿಂದ ಮತ್ತು ಎಲ್ಲಾ ವಿವಿಧ ಸಹಕಾರ ಸಂಘ/ಬ್ಯಾಂಕ್‌ಗಳ ಉದ್ಯೋಗಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಲು ಕೊನೆಯ ದಿನ ಜೂ.30. ಮಾಹಿತಿಗಾಗಿ ದೂ.ಸಂ: 08258-236561, 7022429440, 8971361396 ಅನ್ನು ಸಂಪರ್ಕಿಸ ಬಹುದಾಗಿದೆ ಎಂದು ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ಪ್ರಾಂಶುಪಾಲರ ಕಚೇರಿ ಪ್ರಕಟಣೆ ತಿಳಿಸಿದೆ.

'ಯಶೋ ಮಾಧ್ಯಮ-2026' ಪ್ರಶಸ್ತಿಗೆ ಸುಬ್ರಮಣ್ಯ ಕುರ್ಯ ಆಯ್ಕೆ

ಉಡುಪಿ: ರಾಜಾಜಿನಗರದ ಸ್ಪಂದನ ಸೇವಾ ಸಂಸ್ಥೆ ವತಿಯಿಂದ ಪ್ರತಿ ವರ್ಷದಂತೆ ಉಡುಪಿ ಜಿಲ್ಲೆಯ ಒಬ್ಬ ಪತ್ರಕರ್ತರಿಗೆ ನೀಡುವ 'ಯಶೋ ಮಾಧ್ಯಮ' ಪ್ರಶಸ್ತಿಯನ್ನು ಈ ಬಾರಿ ಉಡುಪಿ ಜಿಲ್ಲಾ ಪತ್ರಕರ್ತರ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಮಣ್ಯ ಜಿ. ಕುರ್ಯ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸ್ಪಂದನಾ ಸೇವಾ ಸಂಸ್ಥೆಯ ಖಜಾಂಚಿ ರಜನಿ.ವಿ. ಪೈ ಹೇಳಿದರು.
ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜೂ.15ರಂದು ಬೆಳಿಗ್ಗೆ 10 ಗಂಟೆಗೆ ಉಡುಪಿ ಜಿಲ್ಲೆಯ ಕಲ್ಯಾಣಪುರದ ಹಿಂದೂ ಹಿ.ಪ್ರಾ.ಶಾಲಾ ಮಕ್ಕಳಿಗೆ ಉಚಿತ ಪುಸ್ತಕ ವಿತರಣಾ ಸಮಾರಂಭದಲ್ಲಿ 'ಯಶೋ ಮಾಧ್ಯಮ-2026'ಪ್ರಶಸ್ತಿಯನ್ನು ವಿತರಿಸಲಾಗುವುದು ಎಂದು ಹೇಳಿದರು.
ಕರ್ನಾಟಕ ರಾಜ್ಯ ಸರ್ಕಾರದ ಮಾಜಿ ಸಚಿವರಾದ ಪ್ರಮೋದ್ ಮಧ್ವರಾಜ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಹರಿರಾಮ್ ಶಂಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ಪತ್ರಕರ್ತರಾದ ಜನಾರ್ದನ್ ಕೊಡವೂರು, ಕಲ್ಯಾಣಪುರದ ಶ್ರೀ ವೆಂಕಟರಮಣ ದೇವಸ್ಥಾನದ ಆಡಳಿತ ಮೊಕ್ತೇಸರರಾದ ರಾಮರಾಯ್ ಕಿಣಿ, ಹಿಂದೂ ಹಿ. ಪ್ರಾ.ಶಾಲೆಯ ಆಡಳಿತಾಧಿಕಾರಿ ಸುಬ್ರಮಣ್ಯ ಕಾರಂತ್, ಉದ್ಯಾನವನ ವಿನ್ಯಾಸಗಾರರಾದ ಲೋಕೇಶ್ ಪೂಜಾರಿ, ಮಣಿಪಾಲ ಕಾಲೇಜ್ ಆಫ್ ನರ್ಸಿಂಗ್ ನ ಸಹಾಯಕ ಪ್ರಾಧ್ಯಾಪಕರಾದ ಡಾ.ಮರಿಯಾ ಪಾಯಸ್, ರಜನಿ ವಿ.ಪೈ, ಸಂತೋಷ್ ಕಾಮತ್ ಉಪಸ್ಥಿತರಿರುವರು.

ಮೊದಲನೇ ಪುಟದಿಂದ

ಶಿಕ್ಷಣ ಇಲಾಖೆ!

ಮುನ್ನಡೆಯುತ್ತಿರುವ ಶಾಲೆ :
ಮೂಲಸೌಕರ್ಯ ಸಮಸ್ಯೆಗಳ ನಡುವೆಯೂ ಶಾಲೆ ಶೈಕ್ಷಣಿಕ ಕ್ಷೇತ್ರದಲ್ಲಿ ಮಾದರಿಯಾಗುವತ್ತ ಹೆಜ್ಜೆ ಇಡುತ್ತಿದೆ. ಶಾಲಾಭಿವೃದ್ಧಿ ಸಮಿತಿಯ ಪ್ರಯತ್ನದಿಂದ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಆರಂಭಿಸಲಾಗಿದ್ದು, ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಾಗಿದೆ. ದಾನಿಗಳ ಸಹಕಾರದಿಂದ ಕಂಪ್ಯೂಟರ್‌ಗಳನ್ನು ಒದಗಿಸಲಾಗಿದ್ದು, ಈವರೆಗೆ ಹಿರಿಯ ತರಗತಿಯ ವಿದ್ಯಾರ್ಥಿಗಳಿಗೆ ಮಾತ್ರ ನೀಡಲಾಗುತ್ತಿದ್ದ ಕಂಪ್ಯೂಟರ್ ಶಿಕ್ಷಣವನ್ನು ಈ ಶೈಕ್ಷಣಿಕ ವರ್ಷದಿಂದ ಒಂದನೇ ತರಗತಿಯಿಂದಲೇ ಆರಂಭಿಸಲು ಯೋಜಿಸಲಾಗಿದೆ. ಪ್ರೊಜೆಕ್ಟರ್ ಮೂಲಕ ದೃಶ್ಯಾಧರಿತ ಬೋಧನೆ ನಡೆಸಲಾಗುತ್ತಿದ್ದು, ಮಕ್ಕಳ ಕಲಿಕೆಯಲ್ಲಿ ಹೊಸ ಆಸಕ್ತಿ ಮೂಡಿಸಿದೆ.

ಇಲಾಖೆಯ ನಿರ್ಲಕ್ಷ್ಯ
ಶಾಲಾ ಕಂಪೌಂಡಿನ ದುಸ್ಥಿತಿ ಕುರಿತು ಕಳೆದ ವರ್ಷವೇ ಶಾಲಾ ಎಸ್ ಡಿಎಂಸಿ ಸಮಿತಿ ಶಿಕ್ಷಣ ಇಲಾಖೆಯ ಗಮನಕ್ಕೆ ತರಲಾಗಿದ್ದರೂ ಇದುವರೆಗೆ ಯಾವುದೇ ದುರಸ್ತಿ ಕಾಮಗಾರಿ ಆರಂಭಿಸಿಲ್ಲ, ಇದೀಗ ಮಳೆಗಾಲ ಶುರುವಾಗಿದ್ದು ಉಳಿದಿರುವ ಗೋಡೆಯೂ ಕುಸಿಯುವ ಭೀತಿ ಎದುರಾಗಿದೆ. ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಶ್ರಮಿಸುತ್ತಿರುವ ಶಾಲೆಗೆ ಮೂಲಭೂತ ಸೌಕರ್ಯಗಳ ಕೊರತೆ ಅಡ್ಡಿಯಾಗದಂತೆ ಸರಕಾರ,ಶಿಕ್ಷಣ ಇಲಾಖೆ ಎಚ್ಚರ ವಹಿಸುವ ಅಗತ್ಯವು ಇದೆ. ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಶಾಲಾ ಕಂಪೌಂಡು ಪುನರ್ ನಿರ್ಮಾಣ, ಶೌಚಾಲಯ ದುರಸ್ತಿ ಹಾಗೂ ಭದ್ರತಾ ವ್ಯವಸ್ಥೆ ಕಲ್ಪಿಸುವ ಕುರಿತು ಇಲಾಖೆ ಗಮನಹರಿಸುಂತೆ ಮಕ್ಕಳ ಪೋಷಕರ ಆಗ್ರಹವಾಗಿದೆ.

ಅಂಬಲಪಾಡಿ ಮೇಲ್ಸೇತುವೆ ಮಂಗಳೂರು-ಕುಂದಾಪುರ ಮಾರ್ಗದ ಒಂದು ಪಾರ್ಶ್ವ ಸಾರ್ವಜನಿಕ ಸಂಚಾರಕ್ಕೆ ಮುಕ್ತ

12 ದಿನದೊಳಗೆ ಸಂಪೂರ್ಣ ಕಾಮಗಾರಿ ಮುಕ್ತಾಯ: ಕೋಟ

ಉಡುಪಿ: ರಾಷ್ಟ್ರೀಯ ಹೆದ್ದಾರಿ 66ರ ಅಂಬಲಪಾಡಿಯಲ್ಲಿ ಹಲವು ವರ್ಷಗಳಿಂದ ಸಾರ್ವಜನಿಕರು ಮತ್ತು ಸ್ಥಳೀಯರು ಎದುರಿಸುತ್ತಿದ್ದ ವಾಹನ ದಟ್ಟಣೆಯ ನರಕಯಾತನೆಗೆ ಕೊನೆಗೂ ಭಾಗಶಃ ಮುಕ್ತಿ ಸಿಕ್ಕಿದೆ. ಬಹುನಿರೀಕ್ಷಿತ ಅಂಬಲಪಾಡಿ ಮೇಲ್ಸೇತುವೆಯ ಮಂಗಳೂರು-ಕುಂದಾಪುರ ಮಾರ್ಗದ ಒಂದು ಪಾರ್ಶ್ವವನ್ನು ಸಾರ್ವಜನಿಕ ಸಂಚಾರಕ್ಕಾಗಿ ಮುಕ್ತಗೊಳಿಸಲಾಗಿದ್ದು, ಉಡುಪಿ-ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಉಡುಪಿ ಶಾಸಕ ಯಶಪಾಲ್ ಸುವರ್ಣ ಚಾಲನೆ ನೀಡಿದರು.

ಹೆದ್ದಾರಿ ಪ್ರಾಧಿಕಾರಕ್ಕೆ ಗಡುವು ನೀಡಲಾಗಿದೆ
ವಾಹನ ಸಂಚಾರಕ್ಕೆ ಚಾಲನೆ ನೀಡಿ ಮಾತನಾಡಿದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು, ಸಾರ್ವಜನಿಕರ ಸಂಚಾರದ ಒತ್ತಡವನ್ನು ಕಡಿಮೆ ಮಾಡುವ ತುರ್ತು ಉದ್ದೇಶದಿಂದ ಸಣ್ಣಪುಟ್ಟ ಕೆಲಸಗಳು ಬಾಕಿ ಇರುವಾಗಲೇ ಒಂದು ಬದಿಯ ರಸ್ತೆಯನ್ನು ತೆರೆಯಲಾಗಿದೆ. ಇದರಿಂದ ಸರ್ವಿಸ್ ರಸ್ತೆಯ ಮೇಲಿನ ಟ್ರಾಫಿಕ್ ಕಿರಿಕಿರಿ



ತಪ್ಪಲಿದೆ. ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಯುದ್ಧೋಪಾದಿಯಲ್ಲಿ ಮುಗಿಸಲು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಗಡುವು ನೀಡಲಾಗಿದ್ದು, ಇನ್ನು 12 ದಿನಗಳೊಳಗೆ ಇಡೀ ಫ್ಲೈಓವರ್ ಪೂರ್ಣಗೊಳ್ಳಲಿದೆ. ನಾಳೆಯಿಂದಲೇ ಹೆದ್ದಾರಿಯ ಇನ್ನೊಂದು ಪಾರ್ಶ್ವವನ್ನೂ ತೆರೆಯಲು ಯೋಜನೆ ರೂಪಿಸಲಾಗಿದ್ದು, ಮುಂದಿನ ಎರಡು ದಿನಗಳಲ್ಲಿ ಹದಗೆಟ್ಟಿರುವ ಸರ್ವಿಸ್ ರಸ್ತೆ ಹಾಗೂ ಅಂಡರ್ ಪಾಸ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದರು.

ಉಡುಪಿ ನಗರಕ್ಕೆ ಹೊಸ ರೂಪ
ಬಳಿಕ ಮಾತನಾಡಿದ ಶಾಸಕ ಯಶಪಾಲ್ ಸುವರ್ಣ, ಅಂಬಲಪಾಡಿ ಮೇಲ್ಸೇತುವೆ ಯೋಜನೆಯು ಉಡುಪಿ ನಗರದ ಸೌಂದರ್ಯ ಮತ್ತು ಸಂಚಾರ ವ್ಯವಸ್ಥೆಗೆ ಹೊಸ ಕಳೆಯನ್ನು ನೀಡುವ ಮಹತ್ವದ ಮೈಲಿಗಲ್ಲಾಗಿದೆ. ವರ್ಷಗಳಿಂದ ಸಾರ್ವಜನಿಕರು ಅನುಭವಿಸುತ್ತಿದ್ದ ಟ್ರಾಫಿಕ್ ಸಮಸ್ಯೆಗೆ ಇದು ಶಾಶ್ವತ ಪರಿಹಾರ ನೀಡಲಿದ್ದು, ಒಂದು ಭಾಗ ಮುಕ್ತಗೊಂಡಿರುವುದು ಸಾರ್ವಜನಿಕರಿಗೆ ದೊಡ್ಡ ನಿರಾಳತೆ ತಂದಿದೆ. ಇನ್ನುಳಿದ ಕಾಮಗಾರಿಗಳನ್ನು ತಕ್ಷಣವೇ ಮುಗಿಸಿ ಇಡೀ ಯೋಜನೆಯನ್ನು ಪೂರ್ಣ ಪ್ರಮಾಣದಲ್ಲಿ ಸಾರ್ವಜನಿಕರ ಸೇವೆಗೆ ಸಮರ್ಪಿಸಲು ಶ್ರಮಿಸುವುದಾಗಿ ಅವರು ವಿಶ್ವಾಸವನ್ನು ವ್ಯಕ್ತಪಡಿಸಿದರು.

> **ತಡೆಗೋಡೆ ಶೀಘ್ರ ಪೂರ್ಣ**
> ಕಟಪಾಡಿ ಭಾಗದಲ್ಲೂ ಕುಂದಾಪುರಕ್ಕೆ ತೆರಳುವ ರಸ್ತೆಯ ಒಂದು ಬದಿಯನ್ನು ಮುಕ್ತಗೊಳಿಸಲಾಗಿದ್ದು, ಮಣ್ಣು ಕುಸಿತ ತಡೆಯಲು ಪ್ರಗತಿಯಲ್ಲಿರುವ ತಡೆಗೋಡೆ ನಿರ್ಮಾಣವನ್ನು ಶೀಘ್ರ ಮುಗಿಸಲಾಗುವುದು, ಹೆದ್ದಾರಿ ದೂರುಗಳಿಗಾಗಿ ಜಿಲ್ಲಾಧಿಕಾರಿ ನೇತೃತ್ವದ ವಿಶೇಷ ತಂಡವನ್ನು ಸಾರ್ವಜನಿಕರು ಸಂಪರ್ಕಿಸಬಹುದು.
> ● ಕೋಟ ಶ್ರೀನಿವಾಸ್ ಪೂಜಾರಿ

ಕ್ರಮ ಕೈಗೊಳ್ಳಲಾಗುತ್ತಿದೆ
ಕಟಪಾಡಿ ರಾಷ್ಟ್ರೀಯ ಹೆದ್ದಾರಿಯ ಅಂಡರ್‌ಪಾಸ್ ಕಾಮಗಾರಿಯನ್ನು ಅತ್ಯಂತ ವೇಗವಾಗಿ ನಡೆಸಲಾಗುತ್ತಿದ್ದು, ಸಾರ್ವಜನಿಕರ ಅನುಕೂಲಕ್ಕಾಗಿ ಈಗಾಗಲೇ ಒಂದು ಬದಿಯಲ್ಲಿ ವಾಹನ ಸಂಚಾರಕ್ಕೆ ಮುಕ್ತ ಅವಕಾಶ ಕಲ್ಪಿಸಿಕೊಡಲಾಗಿದೆ. ಆದರೆ, ಇನ್ನೊಂದು ಬದಿಯ ಕೆಲಸ ಪ್ರಗತಿಯಲ್ಲಿರುವಾಗ ಮಣ್ಣು ಕುಸಿಯುವ ಭೀತಿ ಎದುರಾಗಿರುವುದರಿಂದ, ಸುರಕ್ಷತೆಯ ದೃಷ್ಟಿಯಿಂದ ತಕ್ಷಣವೇ ಅಲ್ಲಿ ಭದ್ರವಾದ ತಡೆಗೋಡೆ (ವಾಲ್) ನಿರ್ಮಿಸುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಒಟ್ಟಾರೆಯಾಗಿ ಇಡೀ ಯೋಜನೆ ಯುದ್ಧೋಪಾದಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಶ್ರೀ ಗುರುನರಸಿಂಹ ದೇವಸ್ಥಾನದಲ್ಲಿ ಸಹಸ್ರ ಪ್ರದಕ್ಷಿಣ ನಮಸ್ಕಾರ ಸಂಪನ್ನ



ಕೋಟ: ಅಧಿಕ ಜ್ಯೇಷ್ಠ ಮಾಸದ ಪ್ರಯುಕ್ತ ಲೋಕಕಲ್ಯಾಣಾರ್ಥಕ್ಕಾಗಿ ಸಾಲಿಗ್ರಾಮದ ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತದ ಸಹಕಾರದಲ್ಲಿ ಬ್ರಾಹ್ಮಣ ಮಹಾಸಭಾ ಸಾಲಿಗ್ರಾಮ ವಲಯದ ವತಿಯಿಂದ ಶ್ರೀ ಗುರುನರಸಿಂಹ ದೇವಸ್ಥಾನದಲ್ಲಿ ಕಳೆದ ನಾಲ್ಕು ಶನಿವಾರ ಹಮ್ಮಿಕೊಂಡಿದ್ದ 'ಸಹಸ್ರ ಪ್ರದಕ್ಷಿಣ ನಮಸ್ಕಾರ' ಸಂಪನ್ನಗೊಂಡಿತು.

ಭಕ್ತರಿಗೆ ಪ್ರಸಾದ ವಿತರಣೆ
ಇತ್ತೀಚೆಗೆ ನಡೆದ ಸಮಾರೋಪ ಸಮಾರಂಭದಲ್ಲಿ ಶ್ರೀ ದೇವಳದ ಆಡಳಿತ ಸಮಿತಿಯ ಅಧ್ಯಕ್ಷ ಎನ್. ಪ್ರಕಾಶ್ ಕಾರಂತ್ ಸಹಸ್ರ ಪ್ರದಕ್ಷಿಣ ನಮಸ್ಕಾರದಲ್ಲಿ ಪಾಲ್ಗೊಂಡ ಎಲ್ಲಾ ಸದ್ಭಕ್ತರಿಗೆ ಪ್ರಸಾದ ವಿತರಿಸಿದರು.
ಬ್ರಹ್ಮಾವರ ತಾಲೂಕು ಬ್ರಾಹ್ಮಣ ಮಹಾಸಭಾದ ಹಿಂದಿನ ಅಧ್ಯಕ್ಷ ಚಾಂತಾರು ಅಶೋಕ್ ಭಟ್, ಬ್ರಾಹ್ಮಣ ಮಹಾಸಭಾ ಸಾಲಿಗ್ರಾಮ ವಲಯದ ಹಿಂದಿನ ಅಧ್ಯಕ್ಷ ಪಿ. ಗಂಗಾಧರ ಹೇರ್ಳೆ, ಗೌರವಾಧ್ಯಕ್ಷ ಎಂ. ಶಿವರಾಮ ಉಡುಪ, ಶ್ರೀ ಗುರು ನರಸಿಂಹ ದೇವಸ್ಥಾನದ ಆಡಳಿತ ಮಂಡಳಿಯ ಉಪಾಧ್ಯಕ್ಷ ಸಿ. ಚಂದ್ರಶೇಖರ ಉಪಾಧ್ಯ, ಸದಸ್ಯ ಕೆ ತಾರಾನಾಥ ಹೊಳ್ಳ, ಪ್ರಧಾನ ಅರ್ಚಕ ಪಿ ಜನಾರ್ದನ ಅಡಿಗ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
ದೇವಳದ ಸಿಬ್ಬಂದಿಗಳು,ಸಭಾದ ಹೆಚ್ಚಿನ ಗ್ರಾಮ ಪ್ರತಿನಿಧಿಗಳು, ಸಾಲಿಗ್ರಾಮ ವಿಪ್ರ ಮಹಿಳಾ ವಲಯದ ಪದಾಧಿಕಾರಿಗಳು, ಸದಸ್ಯರು, ನೂರಾರು ಭಕ್ತಾದಿಗಳು ಶ್ರದ್ಧಾ ಭಕ್ತಿಯಿಂದ ಸಹಸ್ರ ಪ್ರದಕ್ಷಿಣ ನಮಸ್ಕಾರದಲ್ಲಿ ಪಾಲ್ಗೊಂಡಿದ್ದರು.
ಕಾರ್ಯಕ್ರದಲ್ಲಿ ಸಭಾದ ಅಧ್ಯಕ್ಷ ಜಿ.ಪಟ್ಟಾಭಿರಾಮ ಸೋಮಯಾಜಿ ಸ್ವಾಗತಿಸಿದರು. ಸಭಾದ ಕಾರ್ಯದರ್ಶಿ ಕೆ. ರಾಜಾರಾಮ ಐತಾಳ ವಂದಿಸಿ, ಕಾರ್ಯಕ್ರಮ ನಿರೂಪಿಸಿದರು.

ಮಕ್ಕಳಿಗೆ ಪರಿಸರ ಪ್ರಜ್ಞೆ ಜಾಗೃತಗೊಳಿಸುವ ಕಾರ್ಯ ಶ್ಲಾಘನೀಯ: ಜಗದೀಶ್ ನಾವಡ



ಕೋಟ: ಮಕ್ಕಳಲ್ಲಿ ಪರಿಸರ ಪ್ರಜ್ಞೆ ಜಾಗೃತಗೊಳಿಸುವ ಕಾರ್ಯ ನಿಜಕ್ಕೂ ಅರ್ಥಪೂರ್ಣ ಕಾರ್ಯ ಎಂದು ಪಂಚವರ್ಣ ನಿರಂತರ ಪರಿಸರಸ್ನೇಹಿ ಅಭಿಯಾನವನ್ನು ಶಿಕ್ಷಣ ತಜ್ಞ ಕೋಟ ವಿವೇಕ ವಿದ್ಯಾಸಂಸ್ಥೆ ಪ್ರಾಂಶುಪಾಲ ಕೆ.ಜಗದೀಶ ನಾವಡರು ಶ್ಲಾಘಿಸಿದರು.
ಭಾನುವಾರ ಕೋಟದ ಹಂದಟ್ಟು ಪರಿಸರದಲ್ಲಿ ಕೋಟ ಪಂಚವರ್ಣ ಯುವಕಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣಮಹಿಳಾ ಮಂಡಲ ಇವರ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ವೇತ್ರಿ ಅನ್ನಪೂರ್ಣ ನರ್ಸರಿ ಇವರ ಸಹ ಯೋಗ ದೊಂದಿಗೆ 305ನೇ ವಾರದ 'ಪರಿಸರಸ್ನೇಹಿ ಹಸಿರು ಹೆಜ್ಜೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.
ಅಭಿಯಾನದಲ್ಲಿದ್ದ ಮಕ್ಕಳಿಗೆ ಪೋಷಕರಿಗೆ ಪಂಚವರ್ಣದ ಸದಸ್ಯ ಮಹೇಶ್ ಬೆಳಗಾವಿ ಪ್ರತಿಜ್ಞಾ ವಿಧಿ ಭೋದಿಸಿದರು.
ಪಂಚವರ್ಣ ಯುವಕ ಮಂಡಲ ಅಧ್ಯಕ್ಷ ಕೆ.ಮನೋಹರ್ ಪೂಜಾರಿ, ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ, ಪಂಚವರ್ಣ ಮಹಿಳಾಮಂಡಲ ಅಧ್ಯಕ್ಷೆಲಲಿತಾ ಪೂಜಾರಿ, ಹಂದಟ್ಟು ಮಹಿಳಾ ಬಳಗದ ಅಧ್ಯಕ್ಷೆ ಯಶೋಧ ಹಂದಟ್ಟು, ಕೋಟತಟ್ಟು ಪಂ. ಮಾಜಿ ಸದಸ್ಯ ಪ್ರಕಾಶ್ ಹಂದಟ್ಟು, ಗ್ರಾಮದ ಪ್ರಮುಖರಾದ ಆನಂದ್ ಪೂಜಾರಿ, ಶಕೀಲ ಎನ್.ಪೂಜಾರಿ, ಕಲಾವತಿ ಅಶೋಕ್ , ಪ್ರಭಾಕರ್ ಮಣೂರು ಉಪಸ್ಥಿತರಿದ್ದರು.

> **ಮಾದರಿಯಾಗಲಿ**
> ಇಂದು ಗಿಡ ಮರಗಳ ಬಗ್ಗೆ ಅರಿವು ಕ್ಷೀಣಿಸಿದೆ. ಈ ದಿಸೆ ಯಲ್ಲಿ ಪೋಷಕರು ಅದರ ಬಗ್ಗೆ ಜಾಗೃತಗೊಳಿಸಬೇಕು. ಪಂಚವರ್ಣ ಸಂಘಟನೆಯ ನಿತ್ಯ ನಿರಂತರವಾಗಿ ಪರಿಸರ ಬಗೆಗಿನ ಕಾಳಜಿ ಮಾದರಿಯಾಗಲಿ.
> ● ಜಗದೀಶ ನಾವಡ

ಡಾ.ಬಿ.ಬಿ. ಹೆಗ್ಡೆ ಕಾಲೇಜಿನಲ್ಲಿ 'ಜೀವನ ಕೌಶಲ್ಯ-ವ್ಯಕ್ತಿತ್ವ ವಿಕಾಸ' ಕಾರ್ಯಾಗಾರ



ಕುಂದಾಪುರ: ಕುಂದಾಪುರದ ಡಾ. ಬಿ. ಬಿ. ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ಗಣಕ ವಿಜ್ಞಾನ ವಿಭಾಗದ ಆಶ್ರಯದಲ್ಲಿ 'ಜೀವನ ಕೌಶಲ್ಯ ಮತ್ತು ವ್ಯಕ್ತಿತ್ವ ವಿಕಾಸ' ಕುರಿತ ಕಾರ್ಯಾಗಾರ ಕಾಲೇಜಿನ ಮೂಕಾಂಬಿಕಾ ಸಭಾಂಗಣದಲ್ಲಿ ನಡೆಯಿತು.

ಜೀವನ ಕೌಶಲ್ಯಗಳ ಮಹತ್ವ
ಸಂಪನ್ಮೂಲ ವ್ಯಕ್ತಿ ಎಂ.ಎಸ್.ಡಿ.ಸಿ ಮಣಿಪಾಲದ ಐ.ಟಿ. ಕೌಶಲ್ಯ ತರಬೇತುದಾರೆ ಸಾವಿತ್ರಿ ಪ್ರಭು ಅವರು ಜೀವನ ಕೌಶಲ್ಯಗಳ ಮಹತ್ವ ಕುರಿತು ತಿಳಿಸಿ, ತಾಂತ್ರಿಕ ಕೌಶಲ್ಯಗಳೊಂದಿಗೆ ಜೀವನ ಕೌಶಲ್ಯಗಳನ್ನು ವರ್ಧಿಸಿಕೊಳ್ಳುವುದು ವರ್ತಮಾನದ ಆವಶ್ಯಕತೆ ಇದೆ ಎಂದು ಹೇಳಿದರು.
ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ. ಉಮೇಶ ಶೆಟ್ಟಿ, ಉಪ ಪ್ರಾಂಶುಪಾಲ ಡಾ.ಚೇತನ ಶೆಟ್ಟಿ ಕೋವಾಡಿ, ವಿಭಾಗದ ಮುಖ್ಯಸ್ಥ ಮಹೇಶ ಕುಮಾರ್ ಹಾಗೂ ವಿಭಾಗದ ಪ್ರಾಧ್ಯಾಪಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.
ವಿದ್ಯಾರ್ಥಿನಿ ಯಕ್ಷಿತಾ ಸ್ವಾಗತಿಸಿ, ನಿರೂಪಿಸಿದರು. ತ್ರಿಷಾ ವಂದಿಸಿದರು.

> **ನಿರಂತರ ಆಯೋಜನೆ**
> ವಿದ್ಯಾರ್ಥಿಗಳ ಉದ್ಯೋಗಾರ್ಹತೆ ಮತ್ತು ವೈಯಕ್ತಿಕ ಬೆಳವಣಿಗೆಗಾಗಿ ಇಂತಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಂಸ್ಥೆ ನಿರಂತರವಾಗಿ ಆಯೋಜಿಸಿಕೊಂಡು ಬರುತ್ತಿದೆ.
> ● ಸಾವಿತ್ರಿ ಪ್ರಭು

ಪಟ್ಲ ರೂರಲ್ ಎಜ್ಯುಕೇಶನ್ ಸೊಸೈಟಿಯ ಸುವರ್ಣ ಸಂಭ್ರಮ ಕಾರ್ಯಕ್ರಮಕ್ಕೆ ಚಾಲನೆ



ಶಿರ್ವ: ರೂರಲ್ ಎಜ್ಯುಕೇಶನ್ ಸೊಸೈಟಿ ಪಟ್ಲ ಇದರ 50ನೇ ವರ್ಷದ 'ಸುವರ್ಣ ಸಂಭ್ರಮ' ಕಾರ್ಯಕ್ರಮಗಳಿಗೆ ಹಾಗೂ ವನಮಹೋತ್ಸವ ಕಾರ್ಯಕ್ರಮಕ್ಕೆ ಸೊಸೈಟಿಯ ನೂತನ ಅಧ್ಯಕ್ಷ ಪೆರ್ಣಂಕಿಲ ಶ್ರೀಶ ನಾಯಕ್ ದೀಪ ಪ್ರಜ್ವಲನದ ಮೂಲಕ ಚಾಲನೆಯೊಂದಿಗೆ ವರ್ಷವಿಡೀ ನಡೆಯಲಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿ ಯೋಜನೆಗಳ ಯಶಸ್ಸಿಗೆ ಸರ್ವರ ಸಹಕಾರವನ್ನು ಕೋರಿದರು.
ಅತಿಥಿಯಾಗಿದ್ದ ಕರ್ನಾಟಕ ಪ್ರಾಂತ ಪರ್ಯಾವರಣ ಗತಿವಿಧಿ ಸಹ ಸಂಯೋಜಕರಾದ ಪಿ.ಚಂದ್ರಹಾಸ ಸುವರ್ಣ ಕಾರ್ಯಕ್ರಮಕ್ಕೆ ಶುಭ ಹಾರೈಸಿ, ವನ್ಯ ಪರಿಸರ, ಜೀವಜಲ, ಮಣ್ಣಿನ ಸಂರಕ್ಷಣೆ ಕುರಿತು ಬೆಳಕು ಚೆಲ್ಲಿ ಶಾಲಾ ಆವರಣದಲ್ಲಿ ಗಿಡ ನೆಟ್ಟು ಸಂಭ್ರಮಿಸಿದರು. ಹಿರಿಯಡ್ಕ ಪೆರ್ಡೂರು ವಿಭಾಗದ ಆರ್‌ಎಫ್‌ಒ ಅನುಷಾ ಭಟ್ ಭಾಗವಹಿಸಿ ಪರಿಸರ ಸಂರಕ್ಷಣೆ ಮತ್ತು ಅದರ ಮಹತ್ವದ ಬಗ್ಗೆ ಮಾಹಿತಿ ನೀಡಿದರು.
ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಜಯರಾಜ್ ಶೆಟ್ಟಿ ಉಪಸ್ಥಿತರಿದ್ದರು. ಸೊಸೈಟಿಯ ನಿಕಟಪೂರ್ವ ಅಧ್ಯಕ್ಷ ನಾರಾಯಣ ಶೆಣೈ ಸ್ವಾಗತಿಸಿ, ಮುಖ್ಯೋಪಾಧ್ಯಾಯ ಶಾಂತಪ್ಪಮೂಲಂಗಿ ವಂದಿಸಿದರು. ಶಾಲಾ ಮಾತಾಜಿಯವರಾದ ವರ್ಣಶ್ರೀ, ವಿಜೇತಾ ನಿರೂಪಿಸಿದರು.

ವನಮಹೋತ್ಸವ
ಬಳಿಕ ಪಟ್ಲ ಗುಡ್‌ಮರ್ನಿಂಗ್ ಇವರ ಸಹಕಾರದೊಂದಿಗೆ ಶಾಲಾ ಇಕೋ ಕ್ಲಬ್ ಆಶ್ರಯದಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ಕೇತನ್ ಬಿ. ಮಾರ್ಗದರ್ಶನದಲ್ಲಿ ಉಪಯುಕ್ತ ಸಸಿಗಳ ನೆಡಲಾಯಿತು. ರಾಜವರ್ಮ ಅರಿಗ ಸಹಿತ ಮಣಿಪಾಲ ರೋಟರಿ ಅಧ್ಯಕ್ಷರು, ಪದಾಧಿಕಾರಿಗಳು ಮತ್ತಿತರರಿದ್ದರು.

ಅಡುಗೆ ಸಿಬ್ಬಂದಿ, ರಾತ್ರಿ ಕಾವಲುಗಾರರಿಗೆ ಪುನಃಶ್ಚೇತನ ತರಬೇತಿ ಕಾರ್ಯಾಗಾರ



- ಕುಂದಾಪುರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆದ ಕಾರ್ಯಕ್ರಮ
- ಅಡುಗೆ ಸಿಬ್ಬಂದಿಗಳ ಕರ್ತವ್ಯ, ಜವಾಬ್ದಾರಿಯ ಮಾಹಿತಿ

ಕುಂದಾಪುರ: ಕುಂದಾಪುರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕುಂದಾಪುರ ತಾಲೂಕಿನ ಅಡುಗೆ ಸಿಬ್ಬಂದಿಗಳು, ರಾತ್ರಿ ಕಾವಲುಗಾರರಿಗೆ ಪುನಶ್ಚೇತನ ತರಬೇತಿ ಕಾರ್ಯಾಗಾರ ಕುಂದಾಪುರದ ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯದಲ್ಲಿ ಶನಿವಾರ ನಡೆಯಿತು.
ಕಾರ್ಯಾಗಾರದ ಉದ್ಘಾಟನೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹಾಕಪ್ಪ ಆರ್. ಲಮಾಣಿ ಉದ್ಘಾಟಿಸಿ ಅಡುಗೆ ಸಿಬ್ಬಂದಿಗಳ ಕರ್ತವ್ಯ, ಜವಾಬ್ದಾರಿ ಕುರಿತು ಮಾತನಾಡಿದರು.
ಸಂಪನ್ಮೂಲ ವ್ಯಕ್ತಿಗಳಾಗಿದ್ದ ಉಡುಪಿ ಡಯಟ್‌ನ ನಿವೃತ್ತ ಕಚೇರಿ ಅಧೀಕ್ಷಕ ಸಂಜೀವ , ನಿವೃತ್ತ ಅಡುಗೆಯವರಾದ ವೆಂಕಟರಮಣ ಗಾಣಿಗ, ಕುಂದಾಪುರ ಅಗ್ನಿಶಾಮಕದಳ ಅಸಿಸ್ಟೆಂಟ್ ಫೈರ್ ಆಫೀಸರ್ ಖಾಜಾ ಹುಸೇನ್ ಲಾಲಾ ಸಾಹೇಬ್, ತಾಲೂಕು ಆರೋಗ್ಯ ಅಧಿಕಾರಿ ಡಾ. ಪ್ರೇಮಾನಂದ ಕೆ., ತಾಲೂಕ ಆರೋಗ್ಯ ಶಿಕ್ಷಣಾಧಿಕಾರಿ ಭಾಗ್ಯಲಕ್ಷ್ಮೀ ಅವರು ತರಬೇತಿಯನ್ನು ನೀಡಿದರು.
ಕಾರ್ಯಗಾರದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ಉಪನಿರ್ದೇಶಕ ಟಿ. ರಮೇಶ್ ಕುಲಾಲ್ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿ ಆಶಾದೇವಿ ನಾಯಕ್, ನಿಲಯ ಮೇಲ್ವಿಚಾರಕರು, ಅಡುಗೆ ಸಿಬ್ಬಂದಿಗಳು ಉಪಸ್ಥಿತರಿದ್ದರು.
ನಿಲಯ ಮೇಲ್ವಿಚಾರಕ ಶೇಖರ್ ಗೌಡ ನಿರೂಪಿಸಿದರು. ಆಶಾಲತಾ ವಂದಿಸಿದರು.

ವಿದ್ಯುತ್ ಕಂಬದಲ್ಲಿದ್ದ ಗಿಡ ಬಳ್ಳಿಗಳ ತೆರವಿಗೆ ಶ್ರಮದಾನ ಕಾರ್ಯಕ್ರಮ



ಕಾರ್ಕಳ: ರಾಜ್ಯ ಅತ್ಯುತ್ತಮ ಯುವ ಮಂಡಲ ಪ್ರಶಸ್ತಿ ಪುರಸ್ಕೃತ ಯುವಕ ಮಂಡಲ ಸಾಣೂರು ಇದರ ನೇತೃತ್ವದಲ್ಲಿ ಹಾಗೂ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಕಾರ್ಯ ಮತ್ತು ಪಾಲನಾ ಉಪ ವಿಭಾಗ ನಿಟ್ಟೆ ಇವರ ಸಹಕಾರದಲ್ಲಿ ಸಾಣೂರು ರಿಕ್ಷಾ ನಿಲ್ದಾಣದಿಂದ ಗಾಡಿದ ಕೊಟ್ಯದವರೆಗೆ ರಸ್ತೆ ಬದಿಯ ವಿದ್ಯುತ್ ಕಂಬ ಹಾಗೂ ತಂತಿಗಳಿಗೆ ತಾಗಿಕೊಂಡ ಮರ-ಗಿಡ-ಬಳ್ಳಿಗಳನ್ನು ಕಡಿದು ತೆರವುಗೊಳಿಸಿ ವಿದ್ಯುತ್ ಪ್ರಸರಣಕ್ಕೆ ಅನುವು ಮಾಡಿಕೊಡುವ ಶ್ರಮದಾನ ಕಾರ್ಯಕ್ರಮ ನಡೆಯಿತು.
ಮಂಡಲದ ಅಧ್ಯಕ್ಷ ಗುರುಪ್ರಸಾದ್ ಶೆಟ್ಟಿ , ಮಾಜಿ ಅಧ್ಯಕ್ಷ ಜಗದೀಶ್ ಕುಮಾರ್, ಕಾರ್ಯದರ್ಶಿ ರಾಜೇಶ್, ಉಪಾಧ್ಯಕ್ಷ ಮೋಹನ್ ಶೆಟ್ಟಿ, ಸಾಂಸ್ಕೃತಿಕ ಕಾರ್ಯದರ್ಶಿ ಮುರಳೀಧರ್ ಸುವರ್ಣ, ಕ್ರೀಡಾಕಾರ್ಯದರ್ಶಿ ವಿದ್ಯಾನಂದ, ಜೊತೆ ಕಾರ್ಯದರ್ಶಿಯಾದ ಪ್ರಶಾಂತ್ ಆಚಾರ್ಯ ಹಾಗೂ ಪ್ರಮಿತ್ ಸುವರ್ಣ ಸದಸ್ಯರಾದ ಪ್ರಕಾಶ್ ರಾವ್ ರಮೇಶ್, ಸುದರ್ಶನ್ ನಾಯ್ಕ್, ಪ್ರಭಾಕರ್ ಶೆಟ್ಟಿ ದಿನೇಶ್ ಮಡಿವಾಳ್, ಜಯನ್ ಶೆಟ್ಟಿ, ಸೀತಾರಾಮ್ ಜಯಶೆಟ್ಟಿಗಾರ್, ವಿಕ್ಕಿ ಶೆಟ್ಟಿ ಪ್ರಸನ್ನ ಆಚಾರ್ಯ,ಜೀವನ್ ರಾವ್, ಹರೀಶ್ ರಾವ್, ಸುನಿಲ್ ಕುಲಾಲ್, ಮಾ.ಆರ್ಯನ್, ಅಲೋಫ್ ಭಾಗವಹಿಸಿದ್ದರು.
ಸೋಮಯ್ಯ ಸುವರ್ಣ ಶಾಖಾಧಿಕಾರಿಗಳು ಮೆಸ್ಕಾಂ ಸಾಣೂರು ಶಾಖೆ ಪವರ್ ಮ್ಯಾನ್ ಗಳು ಇದ್ದರು.

ಹಿರಿಯ ಪತ್ರಕರ್ತ ಎಸ್.ಜನಾರ್ದನ ಮರವಂತೆಗೆ ಸಾರ್ವಜನಿಕ ಶ್ರದ್ಧಾಂಜಲಿ ಸಭೆ

ಪಂಚಾಯತ್ ರಾಜ್ ವ್ಯವಸ್ಥೆಗೆ ದೊಡ್ಡ ಶಕ್ತಿಯಾಗಿದ್ದರು: ಸಂಸದ ಕೋಟ

ಕುಂದಾಪುರ: ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅತ್ಯಂತ ಅರ್ಥವತ್ತಾಗಿ ಕೆಲಸ ಮಾಡಿದ ಕೆಲವೇ ಕೆಲವು ವ್ಯಕ್ತಿಗಳಲ್ಲಿ ಎಸ್.ಜನಾರ್ದನ್ ಮರವಂತೆ ಅವರು ಒಬ್ಬರು. ಮರವಂತೆಯನ್ನೇ ತನ್ನ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡು ರಾಜ್ಯ, ರಾಷ್ಟ್ರಕ್ಕೆ ಒಂದು ಮಾದರಿ ಗ್ರಾ.ಪಂ. ಆಗಿ ಮುಂದಿಟ್ಟವರು. ಪಂಚಾಯತ್ ರಾಜ್ ವ್ಯವಸ್ಥೆಗೆ ದೊಡ್ಡ ಶಕ್ತಿಯಾಗಿದ್ದರು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದ್ದಾರೆ
ಕುಂದಾಪುರ ತಾಲೂಕು ಪಂಚಾಯತ್‌ರಾಜ್ ಒಕ್ಕೂಟ, ಜನಪ್ರತಿನಿಧಿ ಪ್ರಕಾಶನ ಕುಂದಾಪುರ, ಸದ್ಭಾವನಾ ವೇದಿಕೆ, ಕುಂದಾಪುರ, ನಮ್ಮ ಭೂಮಿ ಹಟ್ಟಿಯಂಗಡಿ ಇವರ ಆಶ್ರಯದಲ್ಲಿ ಕುಂದಾಪುರದ ಸರಕಾರಿ ಪ.ಪೂ.ಕಾಲೇಜಿನ ಲಕ್ಷ್ಮೀ ನರಸಿಂಹ ಕಲಾ



ಮಂದಿರದಲ್ಲಿ ಭಾನುವಾರ ನಡೆದ ಪಂಚಾಯತ್ ರಾಜ್ ತಜ್ಞ, ಹಿರಿಯ ಪತ್ರಕರ್ತ ಎಸ್.ಜನಾರ್ದನ ಮರವಂತೆ ಅವರಿಗೆ ಸಾರ್ವಜನಿಕ ಶ್ರದ್ಧಾಂಜಲಿ ಸಭೆಯಲ್ಲಿ ನುಡಿ ನಮನ ಸಲ್ಲಿಸಿದರು.
ಪಂಚಾಯತ್ ರಾಜ್ ತಜ್ಞ, ಹಿರಿಯ ನ್ಯಾಯವಾದಿ ಟಿ.ಬಿ. ಶೆಟ್ಟಿ ಮಾತನಾಡಿದರು. ಮಾಜಿ ಸಭಾಪತಿ ಕೆ.ಪ್ರತಾಪಚಂದ್ರ ಶೆಟ್ಟಿ, ಮಾಜಿ ಸಂಸದ ಜಯಪ್ರಕಾಶ್ ಹೆಗ್ಡೆ, ಕುಂದಾಪುರ ತಾಲೂಕು ಪಂಚಾಯತ್ ರಾಜ್ ಒಕ್ಕೂಟ ಅಧ್ಯಕ್ಷ ಉದಯ ಕುಮಾರ್ ಶೆಟ್ಟಿ, ಹಿರಿಯ ನ್ಯಾಯವಾದಿ, ಸಾಹಿತಿ ಎ.ಎಸ್.ಎನ್. ಹೆಬ್ಬಾರ್ ಅವರು ಅಗಲಿದ ಜನಾರ್ದನ್ ಮರವಂತೆ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.
ಪತ್ರಕರ್ತ ಶಶಿಧರ ಹೆಮ್ಮಾಡಿ, ಸದ್ಭಾವನಾ ವೇದಿಕೆಯ ಯಾಕೂಬ್ ಖಾದರ್ ಗುಲ್ವಾಡಿ, ಕಲಾಕ್ಷೇತ್ರದ ಅಧ್ಯಕ್ಷ ಬಿ.ಕಿಶೋರ್ ಕುಮಾರ್, ಕಾರ್ಮಿಕ ಮುಖಂಡರಾದ ಎಚ್.ನರಸಿಂಹ, ಹಿರಿಯ ಲೇಖಕಿ ಡಾ. ಪಾರ್ವತಿ ಜಿ.ಐತಾಳ್, ಸಹಕಾರಿ ಧುರೀಣ ಎಸ್. ಪ್ರಕಾಶ್ಚಂದ್ರ ಶೆಟ್ಟಿ, ಪಂಚಾಯತ್ ರಾಜ್ ತಜ್ಞ ವಿಲ್ಪ್ರೇಡ್ ಡಿಸೋಜ, ಸಚ್ಚಿದಾನಂದ ಎಂ.ಎಲ್., ಡಾ.ಅತುಲ್ ಕುಮಾರ್ ಶೆಟ್ಟಿ ಚಿತ್ತೂರು, ನಮ್ಮ ಭೂಮಿ ಸಂಸ್ಥೆ ಸುರೇಶ, ಪ್ರಾಧ್ಯಾಪಕ ರಾಮಾಂಜಿ, ಮೋಹನಚಂದ್ರ ಉಪ್ಪುಂದ, ಜತೀಂದ್ರ ಮರವಂತೆ ಅವರು ನುಡಿನಮನವನ್ನು ಸಲ್ಲಿಸಿದರು.
ಸುಬ್ರಹ್ಮಣ್ಯ ಪಡುಕೋಣೆ ನಿರೂಪಿಸಿದರು.

> **ದೊಡ್ಡ ನಷ್ಟವಾಗಿದೆ.**
> ಜನಾರ್ದನ ಮರವಂತೆ ಅವರ ನಿಧನ ಪಂಚಾಯತ್‌ರಾಜ್ ವ್ಯವಸ್ಥೆಗೆ ದೊಡ್ಡ ನಷ್ಟವಾಗಿದೆ. ಅವರ ಚಿಂತನೆಗಳು, ನಿಲುವು, ಯೋಜನೆಗಳು ಸದಾ ನೆನಪಿನಲ್ಲಿ ಉಳಿಯುವಂತೆ ಕಾರ್ಯಯೋಜನೆ ರೂಪಿಸೋಣ
> ● ಕೋಟ ಶ್ರೀನಿವಾಸ ಪೂಜಾರಿ

> **ಜ್ಞಾನಶಕ್ತಿ ಹೊಂದಿದ್ದರು**
> ಪಂಚಾಯತ್ ವ್ಯವಸ್ಥೆಯ ಕರ್ನಾಟಕ ಮಾತ್ರವಲ್ಲ ಇತರ ರಾಜ್ಯಗಳ ಪಂಚಾಯತ್ ರಾಜ್ ಕಾಯಿದೆಯನ್ನು ಅಧ್ಯಯನ ಮಾಡಿ, ಆಳವಾದ ಅನುಭವ ಹೊಂದಿರುವ ವ್ಯಕ್ತಿ ಜನಾರ್ದನ್ ಮರವಂತೆ ಆಗಿದ್ದರು. ಅವರಲ್ಲಿರುವ ಅನುಭವ ಯಾವ ಅಧಿಕಾರಿಗೂ ಇಲ್ಲ, ಅಪಾರ ಜ್ಞಾನಶಕ್ತಿ ಹೊಂದಿದ್ದರು, ನೂರಾರು ಕಾಯ್ದೆಗಳ ಮಾಹಿತಿ ಹೊಂದಿ ದ್ದರು. ರಮೇಶ ಕುಮಾರ್ ಸಮಿತಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ಸ್ಥಾನ ತುಂಬಲು ಯಾವ ಕಾಲಕ್ಕೂ ಸಾಧ್ಯವಿಲ್ಲ.
> ● ಟಿ.ಬಿ. ಶೆಟ್ಟಿ, ಹಿರಿಯ ನ್ಯಾಯವಾದಿ